ಕಸ್ತೂರಿ


ಪುಸ್ತಕ ವಿಭಾಗ
ಅತಿರಿಕ್ತ

ಮಾರ್ಚ್ 1988 · ರೂ. 3-00



ಅತಿಮಾನಕ

ಮನಗಾಣಿಕ್ಕೊಂದು ಮರುವಸತಿ



ಕೈ ಕೆಸರಾಗದೆ ಬಾಯಿ ಮೊಸರು



ಇದು ಅತಿಶಯೋಕ್ತಿಯೇನಲ್ಲ. ಟಾಟಾರವರ ಓಕೆ ಪಶು ಆಹಾರವನ್ನು ಉಪಯೋಗಿಸುತ್ತಿರುವವರ ಅನುಭವದ ಉಕ್ತಿ.

ಪಶು ಆಹಾರವನ್ನು ಕೊಳ್ಳುವಾಗ ಟಾಟಾರವರ ಓಕೆ ಎಂದು ಖಾತ್ರಿ ಮಾಡಿಕೊಂಡು ಕೊಳ್ಳಿರಿ.

ಟಾಟಾರವರ ಓಕೆ ಒಂದು ಪರಿಪೂರ್ಣ ಪಶು ಆಹಾರ.

ಉತ್ಪಾದಕರು:

ಟಾಟಾ ಆಯಿಲ್ ಮಿಲ್ಸ್ ಕಂ. ಲಿ.

ಕಸ್ತೂರಿ

ಕನ್ನಡ ಡೈಜೆಸ್ಟ್



ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಆರ್.ಎ. ಉಪಾಧ್ಯ

ಸಹ ಸಂಪಾದಕ:
ಮಾಧವ ನಾ. ಮಹಿಷಿ

ಸಹಾಯಕ ಸಂಪಾದಕ:
ಎಸ್.ಕೆ. ಶಾಮಸುಂದರ

ಮುಖಪುಟ:
ಭರತನಾಟ್ಯ
ವರ್ಣ ಪಾರದರ್ಶಿಕೆ: 'ಶ್ರೀ'

ಬೆಳಕಿಂಡಿ

● ಜೀವನ ನಮಗೆ ತಲೆಭಾರವಾಗಿ ಪರಿಣಮಿಸುವುದಕ್ಕೆ ಕಾರಣ ಅದನ್ನು ನಾವು ದುರುಪಯೋಗಪಡಿಸಿಕೊಂಡಿರುವುದೇ ಆಗಿದೆ.

- ಜೀನ್ ಜೇಕಸ್ ರೂಸ್ಸೊ

● ಅರ್ಧಸತ್ಯವೆಂಬುದು ಹೆಚ್ಚು ಸಲ ಪೂರ್ಣ ಅಸತ್ಯವನ್ನೇ ಬಿಂಬಿಸುತ್ತದೆ.

- ರಿಚರ್ಡ್ ವ್ಹೇಟ್ಲಿ

● ಹಣ ಎಲ್ಲಿಗೆ ಹೋಯಿತು ಎನ್ನುವುದಕ್ಕಿಂತ ಹೇಗೆ ಹೋಯಿತು ಎನ್ನುವುದೇ ಮುಖ್ಯ.

- ರೋಜರ್ ಬಾಬ್‌ಸನ್

● ನಾವೆಷ್ಟು ಧೈರ್ಯಶಾಲಿಗಳಾಗಿದ್ದೇವೆ ಎನ್ನುವುದು ನಾವು ಅಲ್ಪಸಂಖ್ಯಾತರಾದ ಪ್ರಸಂಗದಲ್ಲಿ ಪ್ರಕಟಗೊಳ್ಳುತ್ತದೆ. ಹಾಗೆಯೆ ನಾವೆಷ್ಟು ತಾಳ್ಮೆಯುಳ್ಳವರಾಗಿದ್ದೇವೆ ಎನ್ನುವುದು ನಾವು ಬಹುಸಂಖ್ಯಾತರಾದ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ.

- ರಾಲ್ಫ್ ಸಾಕ್‌ಮನ್

● ಸೌಂದರ್ಯ ದೃಷ್ಟಿಯನ್ನು ಕುಕ್ಕಿದರೆ ಪ್ರತಿಭೆ ಹೃದಯವನ್ನೇ ಗೆಲ್ಲುತ್ತದೆ.

- ಅಲೆಕ್ಸಾಂಡರ್ ಪೋಪ್

● ಅಭಿಮಾನಿ ಕನ್ಯತ್ವಕ್ಕಿಂತ ವಿನೀತ ವೈವಾಹಿಕ ಜೀವನವೇ ಲೇಸು.

- ಆಗಸ್ಟಿನ್ ಆಫ್ ಹಿಪ್ಪೊ

ಹೊಸ ಚಂದಾ ದರಗಳು:

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

KASTURI, MARCH 1988

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

• ಪುಸ್ತಕ ವಿಭಾಗ •



ತುಂಬಾ ಥ್ಯಾಂಕ್ಸ್

ಜನವರಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಕಿರುಗಾವಲು ರಮೇಶರು "ಗಾಯ ವಾಸಿಯಾಗುವುದು ಹೇಗೆ" ಲೇಖನದಲ್ಲಿ ಹಲವಾರು ಮಾಹಿತಿಗಳೊಂದಿಗೆ ಸರಳವಾಗಿ ಸಾಮಾನ್ಯರಿಗೆ ತಿಳಿಯುವಂತೆ ವಿವರಣೆ ನೀಡಿದ್ದಾರೆ. ರಕ್ತಸ್ರಾವದ ಸಮಯದಲ್ಲಿ ಭೀತಿ ಇದ್ದ ಜನಗಳಿಗೆ ಈ ಲೇಖನ ಸ್ವಲ್ಪ ಮಟ್ಟಿಗಾದರೂ ತಿಳುವಳಿಕೆ ಕೊಡುವುದರಲ್ಲಿ ಸಹಾಯಕವಾಗಿದೆ. ಇದೇ ಸಂಚಿಕೆಯಲ್ಲಿ ವಿಶ್ವಾಮಿತ್ರರ ಕುರಿತು ಓದಿ ತಿಳಿದು ಗೌರವ ಭಾವನೆ ಮೂಡಿತು. ಇಂತಹ ವಿಚಾರ ಧಾರೆಯನ್ನು ತಿಳಿಸಿದ ಕಸ್ತೂರಿಗೆ ತುಂಬಾ ಥ್ಯಾಂಕ್ಸ್.

ಬೆಂಗಳೂರು. ಎಂ.ಎ. ತಿಮ್ಮಯ್ಯ

ಒಳ್ಳೆಯ ಕಥೆ

ಜನವರಿ ಕಸ್ತೂರಿಯಲ್ಲಿ ಪ್ರಕಟವಾದ 'ಜುಲ್ಯಾನ್' ಸ್ಪಾನಿಶ್ ಕಥೆ ಚೆನ್ನಾಗಿದೆ. ಹುಚ್ಚರಿಗೆ ಬೇಕಾದ ಆತ್ಮೀಯತೆ, ಪ್ರೀತಿಗಳ ಹೊಳೆಯನ್ನು ಹರಿಸಿದ ಮಾರಿಯಾ ಓದುಗರ ನೆನಪಲ್ಲಿ ಉಳಿಯುತ್ತಾಳೆ. ಪ್ರೀತಿ ಎಂತಹ ರೋಗವನ್ನು ನಿವಾರಿಸಬಲ್ಲದು ಎನ್ನುವುದಕ್ಕೆ ಕ್ರಿಸ್‌ಮಸನ್ನು ಆಸ್ಪತ್ರೆಯಲ್ಲಿಯೇ ಕಳೆಯಲು ತವಕಪಟ್ಟ ಜುಲ್ಯಾನ್ ಉತ್ತಮ ಉದಾಹರಣೆ.

ಸಿದ್ದಾಪುರ. ವನಿತಾ ಕಾಮತ್.

ಜನವರಿ 88ರ ಕಸ್ತೂರಿಯಲ್ಲಿ ಪ್ರಕಟವಾದ ಸ್ಪಾನಿಶ್ ಕಥೆ "ಜುಲ್ಯಾನ್" ತುಂಬ ಚೆನ್ನಾಗಿತ್ತು. ನಮ್ಮಲ್ಲಿಯೂ ಸಿಸ್ಟರ್ ಡಾಕ್ಟರ್‌ಗಳು ಅದಕ್ಕಿಂತ ಹೆಚ್ಚಾಗಿ ಸೇವಾ ಸಂಸ್ಥೆಗಳು ರೋಗಿಗಳ ನೆರವಿಗೆ ನಿಂತಲ್ಲಿ ಅನೇಕ ಸಂಸಾರಗಳು ನೆಮ್ಮದಿಯಿಂದ ಬಾಳಬಹುದು. ನಮ್ಮ ಸುತ್ತಲಿನ ಅನೇಕರು ಹುಚ್ಚರಾಗಲು ನಾವುಗಳು ಅಪರೋಕ್ಷವಾಗಿ ಕಾರಣರಾಗಿರುತ್ತೇವಲ್ಲವೆ?

ಬೆಂಗಳೂರು. ನ.ಕೃ. ಮೂರ್ತಿ

ಇದನ್ನೂ ಹೇಳಿದ್ದರೆ.

ಜನವರಿ ಸಂಚಿಕೆಯಲ್ಲಿ ಕಸ್ತೂರಿ (ಪುಟ-6) ವಿಶ್ವಾಮಿತ್ರನ ಬಗ್ಗೆ ಪ್ರಕಟಿಸಿದ ಬರಹ ಓದಿದೆ. ಆತನ ಮಹಾನ್ ಕಾರ್ಯಗಳ ಬಗ್ಗೆ ಆತ ಅತಿಮಾನವ ಎಂಬಂತೆ ಬರೆದಿದ್ದೀರೇ ಹೊರತು ಆತನಲ್ಲಿದ್ದ ಅಮಾನುಷ ಗುಣಗಳ ಬಗ್ಗೆ ಅರ್ಥಾತ್ ದುರ್ಗುಣಗಳ ಬಗ್ಗೆ ಏನೂ ಬರೆದಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ನಾವು ತಿಳಿಯುವಾಗ ಆತನಲ್ಲಿನ ಉತ್ತಮ ಗುಣಗಳೊಂದಿಗೆ ಆತನಲ್ಲಡಗಿದ ದುರ್ಗುಣಗಳ ಬಗ್ಗೆಯೂ ನಾವು ಅರಿಯುವುದು ಅವಶ್ಯವೆನಿಸುತ್ತದೆ.

ವೀರಾಜಪೇಟೆ. ವಿ.ಡಿ. ಶ್ರೀಕಾಂತರಾವ.

ಹೀಗೇಕೆ?

1988 ಜನವರಿ ಕಸ್ತೂರಿಯ ಪುಟಗಳನ್ನು ತಿರುವುತ್ತಿದ್ದಂತೆ ಮರೆತು ಬೇರೆ ಕನ್ನಡ ಮಾಸ ಪತ್ರಿಕವನ್ನೋ ಓದುತ್ತಿದ್ದೇವೆ ಎಂಬ ಭ್ರಮೆಯಾಗತೊಡಗಿತು. 'ಕಸ್ತೂರಿ' ಕಸ್ತೂರಿಯಂತೆಯೇ ಇದ್ದು ತನ್ನ ಸುವಾಸನೆ ಬೀರುತ್ತಿರಲಿ, ಜ್ಞಾನಕ್ಕೊಂದು ಬೆಳಕಿಂಡಿಯಾಗಿರಲಿ, ಅದು ಬೇರೆ ಪತ್ರಿಕೆಗಳ ಅನುಕರಣೆ ಮಾಡುವ ಅವಶ್ಯಕತೆ ಇಲ್ಲ. ಕಸ್ತೂರಿಗೆ ತನ್ನದೇ ಆದ ಉತ್ತಮ ಅಭಿರುಚಿಯ ಓದುಗರ ಬಳಗ ಇದೆ. ಕೀಳು ಅಭಿರುಚಿಯ ಮುಖ ಚಿತ್ರಗಳನ್ನು ಹಾಕಿ ಕಸ್ತೂರಿಯನ್ನು ಮನೆಗೆ ತಾರದಂತೆ ಮಾಡಬೇಡಿ.

ಹುಬ್ಬಳ್ಳಿ ರತ್ನಾ ಜೋಶಿ.

ಹಳೆಯದು ಚಿನ್ನ

ಕ್ರಿಸ್ತಶಕದ ಆರಂಭದ ಕಾಲದಲ್ಲಿ ರಚಿತವಾದ ಉತ್ಕೃಷ್ಟ ಪ್ರೇಮ ಕಾವ್ಯವಾದ "ತರಂಗವತಿ" ಯನ್ನು ಸಂಗ್ರಹಿಸಿಕೊಟ್ಟು ಹಳೆಯದು ಚಿನ್ನ ಎಂಬ ಮಾತನ್ನು ಸಾಬೀತುಗೊಳಿಸಿದ ವೈರಸ್ ಶಿರಾಲಿಯವರಿಗೂ ಪ್ರಕಟಿಸಿದ ಕಸ್ತೂರಿಗೂ ಅಭಿನಂದನೆಗಳು.

ಅಬ್ಬಿನ ಹೊಳೆ — ಗೋವಿಂದ ವೇಲಂಗಿ.

ಒಳ್ಳೆಯ ಕ್ರಮ

ಹಿಂದೆ, ಮಾರ್ಚ್ 1976ರ ಕಸ್ತೂರಿಯಲ್ಲಿ, ಹಿಟ್ಲರನ ಬಲಗೈ ಬಂಟ ರುಡಾಲ್ಫ್ ಹೆಸ್‌ನ ಬಗೆಗಿನ ಲೇಖನವನ್ನು ಓದಿ ಮೆಚ್ಚಿಕೊಂಡಿದ್ದೆ. ನಂತರವೂ ಒಂದೆರಡು ಸಲ ಆ ಲೇಖನವನ್ನು ಓದಿದ್ದೇನೆ. 'ರುಡಾಲ್ಫ್ ಹೆಸ್‌ನ ಅಂತ್ಯ ಹೇಗೆ'? ಎಂಬ ಜಿಜ್ಞಾಸೆಗೆ ಫೆಬ್ರವರಿ 88ರ ಸಂಚಿಕೆಯಲ್ಲಿ ತಾವು ಉತ್ತರ ನೀಡಿದ್ದೀರಿ. ಈ ರೀತಿ ಹಳೆಯ ಕಸ್ತೂರಿಗಳಲ್ಲಿ ಅನೇಕ ಲೇಖನಗಳ ಬಗ್ಗೆ, ಮುಂದುವರಿಸಿದಂತೆ ತಾವು ಮಾಹಿತಿ ಸಂಗ್ರಹಿಸಿ ಓದುಗರ ನೆನಪಿನ ತೀಕ್ಷ್ಣತೆಗೆ ಟಾನಿಕ್ ನೀಡಬಹುದು. ಏಕೆಂದರೆ ಕಸ್ತೂರಿಯ ಲೇಖನಗಳು, ಮರು ಓದಿನಲ್ಲೂ ಮತ್ತೆ ಮತ್ತೆ ಖುಷಿ ಕೊಡುತ್ತವೆ. ಅಲ್ಲದೆ ನಮ್ಮ ಜ್ಞಾಪಕಶಕ್ತಿಯ ಮಸೆತಕ್ಕೂ ಇಂಥ ಓದು ಪೂರಕವೆಂದು ನನ್ನ ಅಭಿಪ್ರಾಯ.

ಚನ್ನರಾಯಪಟ್ಟಣ. — ಎ. ಗುರುಪ್ರಸಾದ.

ನನ್ನ ಅನುಮಾನಗಳು

88ನೇ ಜನವರಿ ಕಸ್ತೂರಿ ಸಂಚಿಕೆಯಲ್ಲಿ ಮಾನ್ಯ ಪಾ.ವೆಂ ರವರು 'ಪದಾರ್ಥ ಚಿಂತಾಮಣಿ'ಯಲ್ಲಿ ಹಗಲಿಗೆ ಅನ್ವಯಿಸುವ ಪದಗಳು ಸೂರ್ಯನಿಗೂ ಕಾಲಕ್ಕೂ ಅನ್ವಯಿಸುವ ಬಗ್ಗೆ ದ್ರಾವಿಡ ಭಾಷೆಯ ಪ್ರಕಾರಗಳಲ್ಲಿರುವ ಬೇರೆ ಬೇರೆ ಶಬ್ದಗಳನ್ನು ಹೆಕ್ಕಿ ಸಮರ್ಥಿಸಿದ್ದಾರೆ.

ಇಲ್ಲಿ 'ಕಾಲ' ಎನ್ನುವ ಶಬ್ದದ ಬಗ್ಗೆ ನನ್ನ ದೃಷ್ಟಿ ಸ್ವಲ್ಪ ಬದಲಾಗಿದೆ. 'ಕಾಲ' ಯಾವುದೇ ಭಾಷೆಯ ಧಾತುವಿನದಾದರೂ ಅದು ರಾತ್ರಿಗೆ ಅನ್ವಯಿಸುವ ಶಬ್ದವೆಂದು ನಾನು ಅನುಮಾನಿಸುತ್ತೇನೆ. ಅದಕ್ಕೆ ಸಮರ್ಥನೆಯಾಗಿ ಕಾಲ, ಕಾಳ, ಕಾಡ ಈ ಮೂರು ಶಬ್ದಗಳಲ್ಲಿ 'ಲ' ಕಾರ 'ಳ' ಕಾರವಾಗಿ 'ಳ' ಕಾರ 'ಡ' ಕಾರವ ಅಪಭ್ರಂಶವಿದ್ದರೂ ಇದರ ಮೂಲ ಸಂಸ್ಕೃತ ಎಂದು ಭಾವಿಸಿ, ಸಂಸ್ಕೃತಜನ್ಯವಾದ ಕಾಲ=ಕಾಡ, ಕಾಳ, ಈ ಶಬ್ದಗಳು. ಕತ್ತಲನ್ನು ಸಂಕೇತಿಸುವ ಕಪ್ಪನ್ನು ಸೂಚ್ಯವಾಗಿ ತಿಳಿಸುತ್ತವೆ. ಉದಾ: ಕಾಲವಾದರು (ಮೃತರಾದವರ ಬಗ್ಗೆ), ಕಾಲನವರು (ಯಮನವರು?), ಕಾಳಿ (ಕಪ್ಪಾದವಳು, ಒಬ್ಬ ದೇವತೆ) ಕಾಳಾಮುಖ (ಒಂದು ಪಂಥ) ಕಾಳಿಕೆ, ಕಳಂಕ, ಕಾಡಿಗೆ (ಹಿಂದಿಯಲ್ಲಿ ಕಾಜಲ್) ಇವೆಲ್ಲವೂ ಕತ್ತಲನ್ನು, ಕಪ್ಪನ್ನು ಸಂಕೇತಿಸುವುದರಿಂದ ಕಾಲ ಎನ್ನುವದು ರಾತ್ರಿಗೆ, ಹೊತ್ತು ಎನ್ನುವುದನ್ನು ಹಗಲಿಗೆ ಅನ್ವರ್ಥಗೊಳಿಸಬಹುದೆ?

ಆಳಗಂಜಿ. — ಎ.ಡಿ. ನಂಜುಂಡ ಸ್ವಾಮಿ.

ಪಾವೆಂ ಉತ್ತರ

ಶ್ರೀ ನಂಜುಂಡಸ್ವಾಮಿಯವರ ಚಿಕಿತ್ಸಕ ಬುದ್ಧಿಗೆ ಅಭಿನಂದನೆಗಳು. ಆದರೆ ಸಂಸ್ಕೃತದಲ್ಲಿ ಅನೇಕಾರ್ಥವುಳ್ಳ "ಕಾಲ" ಶಬ್ದ ಎಲ್ಲ ಅರ್ಥಗಳಲ್ಲಿ ಒಂದೇ ಮೂಲದಿಂದ ಸ್ವೀಕೃತವಿರಲಿಕ್ಕಿಲ್ಲ. ಕಿಟೆಲ್ಲರು ಕಪ್ಪು ಎಂಬರ್ಥದಲ್ಲಿ ಸಂಸ್ಕೃತದಲ್ಲಿರುವ ಕಾಲ ಶಬ್ದ ಬಹುಶಃ ದ್ರಾವಿಡವೆಂದು ತರ್ಕಿಸಿದ್ದಾರೆ. ಪ್ರಾದೇಶಿಕವಾಗಿ "ಕತ್ತಲಾಯಿತು" ಎನ್ನುವುದಕ್ಕೆ "ಕಪ್ಪಾಯಿತು" ಎನ್ನುವುದೂ ರೂಢಿಯಲ್ಲಿದೆ. "ಸಮಯ" ಎಂಬರ್ಥದಲ್ಲಿ ಮಾತ್ರ ಕಾಲ ದ್ರಾವಿಡಕ್ಕಾಗಲಿ ಕಪ್ಪು, ರಾತ್ರಿ ಎಂಬುದಕ್ಕಾಗಲಿ ಸಂಬಂಧಿಸಿಲ್ಲವೆಂದೇ ತೋರುತ್ತದೆ. ಸಂಸ್ಕೃತದ "ಕಲ್" (ಎಣಿಸು, ಲೆಕ್ಕಮಾಡು) ಧಾತುವಿಗೆ ಅದನ್ನು ಮೋನಿಯರ್ ವಿಲಿಯಮ್ಸ್ ಜೋಡಿಸಿದ್ದಾನೆ. ನಿರ್ದಿಷ್ಟ ಸಮಯ ಎಂಬರ್ಥದಲ್ಲಿ ಅಥರ್ವ ವೇದದಲ್ಲೆ "ಕಾಲ" ಶಬ್ದ ಕಾಣಿಸುತ್ತದೆ. ಕ್ಲಪ್ ಕಲ್ಪ, ಕಲನ, ಕಲಾ (=ತುಣುಕು, ಖಂಡ) ಇತ್ಯಾದಿಗಳಿಗೆ ಕಾಲ ಸಂಬಂಧಿಸಿದೆಯೆಂದೇ ನನ್ನ ತರ್ಕ, "ಕಾಲ" ಶಬ್ದ ಅದನ್ನು ಗಣಿಸಲಾಗುತ್ತದೆ ಎಂಬ ಕಲ್ಪನೆಯಿಂದಲೇ ಉದ್ಭವಿಸಿದಂತಿದೆ. ಹರಿಗಡಿಯದ ಕಾಲಧಾರೆಯನ್ನು ಗಣಿಸುವುದೆಂದರೆ ಅದನ್ನು ಖಂಡ ಖಂಡವಾಗಿ ಮಾಡುವುದಲ್ಲವೆ? "ಕಾಲ" ರಾತ್ರಿಗೆ ಸಂಬಂಧಿಸಿಲ್ಲವೆನ್ನುವುದಕ್ಕೆ "ಸಕಾಲ" ಎಂಬ ಪದಕ್ಕೆ ಬೆಳಗ್ಗೆ ಎಂಬರ್ಥ ಹಿರುವುದು ಬಲವಾದ ಸಾಕ್ಷಿ.

ಪಾ.ವೆಂ.

ಕಸ್ತೂರಿ

ವರ್ಷ: ೩೨ ಮಾರ್ಚ್ ೧೯೮೮ ಸಂಚಿಕೆ: ೭

ವೃದ್ಧೆಯ ಆಶೀರ್ವಾದ

ನೆಪೋಲಿಯನ್ ಬಾಲ್ಯದಿಂದಲೂ ಸಾಹಸ ಪ್ರಿಯನಾಗಿದ್ದ. ಇನ್ನೂ ಹದಿಹರೆಯದಲ್ಲಿರುವಾಗಲೇ ಅವನಿಗೆ ಆಲ್ಪ್ಸ್ ಪರ್ವತವನ್ನೇರಬೇಕೆಂಬ ಹಂಬಲ. ಯಾರ ಸಹಾಯವನ್ನೂ ಯಾಚಿಸದೆ ಸ್ವತಃ ದಾರಿಯನ್ನರಸುತ್ತ ಹೊರಟ. ಪರ್ವತದ ತಪ್ಪಲಿಗೆ ಹೋಗಿ ತಲಪಿದಾಗ ಅಲ್ಲಿ ವೃದ್ಧೆಯೋರ್ವಳು ವಾಸಿಸುತ್ತಿದ್ದುದನ್ನು ಕಂಡ. ಅವಳ ಬಳಿಗೆ ಹೋಗಿ ಪರ್ವತವೇರುವ ದಾರಿಯನ್ನು ವಿಚಾರಿಸಿದಾಗ ಆಕೆ,

"ಎಲೈ ಮೂರ್ಖ, ನಿನ್ನಂತಹ ಎಷ್ಟು ಮಂದಿ ಈ ದುರ್ಗಮ ಪರ್ವತವನ್ನೇರಲು ಯತ್ನಿಸಿ ಪ್ರಾಣ ಕಳೆದುಕೊಂಡಿದ್ದಾರೆ ಗೊತ್ತೇ? ನೀನಿನ್ನೂ ಚಿಕ್ಕವ. ಸಾಕಷ್ಟು ಕಾಲ ಬದುಕಬೇಕಾದವನು. ವ್ಯರ್ಥ ಸಾಯಬೇಡ. ಹಿಂತಿರುಗಿ ಮನೆಗೆ ಹೋಗಿ ಸುಖವಾಗಿರು!" ಎಂದು ಉಪದೇಶಿಸಿದಳು.

ನೆಪೋಲಿಯನ್ ಆಕೆಯ ಮಾತುಗಳನ್ನಾಲಿಸಿ ಒಂದಿಷ್ಟೂ ವಿಚಲಿತನಾಗದೆ ಆಕೆಗಿತ್ತ ಉತ್ತರ ಮಾರ್ಮಿಕವಾಗಿತ್ತು.

"ಅಮ್ಮಾ, ನೀವು ಕಷ್ಟಗಳನ್ನು ತಿಳಿಸಿ ನನಗೆ ತುಂಬ ಉಪಕಾರ ಮಾಡಿದಿರಿ. ಇದರಿಂದ ನನ್ನ ಉತ್ಸಾಹ ಇನ್ನಷ್ಟು ಹೆಚ್ಚಾಗಿದೆ. ಇನ್ನೂ ಹೆಚ್ಚಿನ ಜಾಗರೂಕತೆಯಿಂದ ಈ ಕಾರ್ಯ ಮಾಡಲು ನನಗೆ ಪ್ರೋತ್ಸಾಹ ದೊರಕಿದಂತಾಗಿದೆ. ನಿಮ್ಮ ಆಶೀರ್ವಾದದಿಂದ ನಾನು ಒಂದಲ್ಲ ಒಂದು ದಿನ ಈ ಪರ್ವತವನ್ನು ಖಂಡಿತ ಹತ್ತುತ್ತೇನೆ".

ವೃದ್ಧೆ ಆಶ್ಚರ್ಯದಿಂದ ಅಪ್ರತಿಭಳಾದಳು! ಅಪಾಯಕ್ಕೆ ಒಂದಿಷ್ಟೂ ಅಂಜದೆ ಅಳುಕದೆ ತಲೆಯೊಡ್ಡುವವನು ಅಸಾಮಾನ್ಯನೇ ಆಗಿರಬೇಕೆಂದು ಯೋಚಿಸಿ ಆಕೆ ಆಶೀರ್ವದಿಸಿದಳು.

"ಮಗೂ, ಸಾಹಸಿ ವ್ಯಕ್ತಿಗೆ ಪ್ರಪಂಚದಲ್ಲಿ ಅಸಂಭವವಾದುದೇನೂ ಇಲ್ಲ! ದೇವರು ನಿನಗೆ ಒಳ್ಳೆಯದು ಮಾಡಲಿ".

ನೆಪೋಲಿಯನ್ ಆಲ್ಪ್ಸ್ ಪರ್ವತ ಹತ್ತಿದ!

ಅವನು ಜೀವನದುದ್ದಕ್ಕೂ ಆ ವೃದ್ಧೆಯ ಈ ವಾಕ್ಯವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಿದ್ದ.

"ಸಾಹಸಿ ವ್ಯಕ್ತಿಗೆ ಪ್ರಪಂಚದಲ್ಲಿ ಅಸಂಭವವಾದುದೇನೂ ಇಲ್ಲ!" ●

ಮಾ.ಭ. ಪೆರ್ಲ

ಭರತನಾಟ್ಯ

ಸಹಸ್ರಾರು ವರ್ಷಗಳ ಹಿಂದೆ 'ಭಾಷೆ'ಗಳು ಹುಟ್ಟುವ ಮೊದಲು ಮನುಷ್ಯ ಕುಣಿತ, ಅಂಗ ಚಲನೆಗಳು, ಕೂಗುಗಳ ಮೂಲಕ ತನ್ನ ಇಂಗಿತವನ್ನು ಹಾಗೂ ಭಾವವನ್ನು ತೋರಿಸಿಕೊಡುತ್ತಿದ್ದ. ನಾಗರಿಕತೆ ಬೆಳೆದಂತೆ ಭಾಷೆ ಹಾಗೂ ಲಿಪಿಗಳು ಹುಟ್ಟಿಕೊಂಡಿದ್ದರಿಂದ ಅವನ ಭಾವಾಭಿವ್ಯಕ್ತಿಯ ಮಾಧ್ಯಮಗಳು ನಿರ್ದಿಷ್ಟ ಚೌಕಟ್ಟಿನೊಳಗೆ ಸೇರಿ ಶಾಸ್ತ್ರಗಳೆನಿಸಿದವು. ಈ ಚೌಕಟ್ಟಿನ ವ್ಯಾಪ್ತಿಯೊಳಗೆ ಅವುಗಳನ್ನು ಪ್ರದರ್ಶಿಸುವುದು 'ಶಾಸ್ತ್ರಬದ್ಧ ಕಲೆ' ಎನಿಸಿತು. ಕುಣಿತ ನಾಟ್ಯವಾಯಿತು. ಕೂಗು ಸಂಗೀತವೆನಿಸಿತು. ಭಾರತದಲ್ಲಿ ದೇವದೇವತೆಗಳಿಂದಲೇ ಈ ಕಲೆಗಳ ಸೃಷ್ಟಿಯಾಯಿತೆಂಬುದು ನಂಬಿಕೆ. ಪರಶಿವನೇ ನೃತ್ಯದ ಮೂಲ ಪುರುಷನೆಂದು ಪುರಾಣಗಳು ನಿರೂಪಿಸುತ್ತವೆ. ಆದ್ದರಿಂದ ಅದಕ್ಕೆ ಪಂಚಮವೇದವೆಂಬ ಉನ್ನತ ಸ್ಥಾನ.

ಭಾರತದಲ್ಲಿ ಕ್ರಿಸ್ತಪೂರ್ವ ನಾಲ್ಕನೇ ಶತಮಾನದಿಂದ ಒಂದನೇ ಶತಮಾನದೊಳಗಿನ ಅವಧಿಯಲ್ಲಿ ನೃತ್ಯಕಲೆಗೆ ಈಗಿನ ಶಾಸ್ತ್ರೀಯ ಸ್ವರೂಪ ಬಂತೆಂಬುದು ವಿದ್ವಾಂಸರ ಅಭಿಮತ. ಭರತಮುನಿ ರಚಿಸಿದ ನಾಟ್ಯಶಾಸ್ತ್ರವೇ ಅದರ ಮೂಲ ಗ್ರಂಥ. ಈ ನಾಟ್ಯಶಾಸ್ತ್ರದ ಪ್ರಯೋಗಭಾಗವೇ ಭರತನಾಟ್ಯ. ಭಾರತೀಯ ನೃತ್ಯ ಸಂಪ್ರದಾಯಗಳಲ್ಲಿ ಅದು ಶಾಸ್ತ್ರದಿಂದ ನೇರವಾಗಿ ನಿಷ್ಪನ್ನವಾದ ನೃತ್ಯವೆಂಬುದು ಅದರಲ್ಲಿ ಪರಿಣಿತರಾದವರ ವಿಶ್ವಾಸ. ನೃತ್ತ, ನೃತ್ಯ, ನಾಟ್ಯಗಳು ಭರತನಾಟ್ಯದ ಮೂರು ಮುಖಗಳು. ನೃತ್ತವು ತಾಲಬದ್ಧವಾದ ಶುದ್ಧ ಕುಣಿತ. ನೃತ್ತದ ಜೊತೆಗೆ ಸಂಗೀತ, ಅಭಿನಯಗಳನ್ನು ಜೋಡಿಸಿಕೊಂಡ ಭಾವಪ್ರಧಾನವಾದ ಕುಣಿತವೇ ನೃತ್ಯ. ನೃತ್ತ ಹಾಗೂ ನೃತ್ಯಗಳ ಜೊತೆಗೆ ವೇಷಭೂಷಣಗಳ ಪರಿಕರಗಳನ್ನೂ ಸೇರಿಸಿಕೊಂಡ ರಸಪ್ರಧಾನ ಅಭಿನಯ ನಾಟ್ಯ. ಇವುಗಳ ಉದ್ಧತವಾದ ಹಾಗೂ ರಭಸದ ನಿರೂಪಣೆ ತಾಂಡವ. ಮಧುರ ಹಾಗೂ ಸೌಮ್ಯವಾದ ನಿರೂಪಣೆ ಲಾಸ್ಯ.

ನಾಟ್ಯವು ದೇವರಿಗೆ ಸಮರ್ಪಿಸುವ ಶೋಡಷೋಪಚಾರಗಳಲ್ಲಿ ಒಂದು. ಆದ್ದರಿಂದ ದಕ್ಷಿಣ ಭಾರತದ ದೇವಾಲಯಗಳಲ್ಲಿ ಈ ಕಲೆ ಸುಮಾರು ಹದಿನೈದು ಶತಮಾನಗಳಿಂದ ಉಳಿದು ಬೆಳೆದು ಬಂತು. ಅದನ್ನು ಉಳಿಸಿ ಬೆಳೆಸಿದವರು ದೇವದಾಸಿಯರು. ಇಂದು ಪ್ರಚಲಿತವಿರುವ ಭರತನಾಟ್ಯಕ್ಕೆ 'ದಾಸಿ ಅಟ್ಟಂ', 'ದಾಸಿ ಕುಣಿತ' ಎಂದೇ ಹೆಸರಿತ್ತು. ವಿಶೇಷ ಗೌರವಕ್ಕೆ ಪಾತ್ರರಾಗಿದ್ದ ಈ ದೇವದಾಸಿಯರಿಗೆ ಸಮಾಜದಲ್ಲಿ ಅಗ್ರ ತಾಂಬೂಲ ಪಡೆಯುವ ಅರ್ಹತೆಯೂ ಇತ್ತು. ಕಾಲಕ್ರಮೇಣ ಅದು ವೇಶ್ಯೆಯರ ಕಲೆ ಎಂದು ಉಚ್ಚ ಕುಲದವರೆನ್ನುವವರು ಪರಿಗಣಿಸಿದ್ದರಿಂದ ಪರಿತ್ಯಕ್ತವಾಗತೊಡಗಿತು. ಆದರೆ ಈ ಶತಮಾನದ ಪೂರ್ವಭಾಗದಲ್ಲಿ ಆನಂದ ಕುಮಾರಸ್ವಾಮಿ, ಇ. ರಾಮಸ್ವಾಮಿಯವರಂಥ ಸುಶಿಕ್ಷಿತ ಕಲಾ ಪ್ರೇಮಿಗಳ ಪರಿಶ್ರಮದಿಂದ ಭರತನಾಟ್ಯಕ್ಕೆ ಮೊದಲಿದ್ದ ಗೌರವ ಪ್ರಾಪ್ತವಾಗಿದೆ. ಅದರ ಉಪಾಸನೆ ಮಾಡಿ ಸಿದ್ಧಿ ಪಡೆಯುತ್ತಿರುವ ಕಲಾವಿದರ ಸಂಖ್ಯೆ ದಿನವೂ ಬೆಳೆಯುತ್ತಿದೆ. ಇಂದು ಭಾರತೀಯ ಪ್ರದರ್ಶನ ಕಲೆಗಳಲ್ಲಿ ಅತ್ಯಂತ ಜನಪ್ರಿಯವಾದದ್ದು ಭರತನಾಟ್ಯ. ವಿದೇಶಿಯರೂ ಅದಕ್ಕೆ ಈಗ ಮಾರು ಹೋಗುತ್ತಿದ್ದಾರೆ. ಅಂಥ ಜನಪ್ರಿಯತೆ ತಂದುಕೊಟ್ಟ, ಮೀನಾಕ್ಷಿ ಸುಂದರಮ್ ಪಿಳ್ಳೆ, ಬಾಲ ಸರಸ್ವತಿ, ರುಕ್ಮಿಣಿದೇವಿ ಅರುಂಡೇಲ್, ರಾಮಗೋಪಾಲ್ ಹಾಗೂ ಕರ್ನಾಟಕದವರೇ ಆದ ನಂಜನಗೂಡು ರಾಜಮ್ಮ, ಚಂದ್ರಕಾಂತಮ್ಮ, ಬೆಂಗಳೂರು ನಾಗರತ್ನಮ್ಮ, ಜಟ್ಟಿ ತಾಯಮ್ಮ, ವೆಂಕಟಲಕ್ಷ್ಮಮ್ಮ ಮುಂತಾದವರನ್ನು ಸ್ಮರಿಸಿದಷ್ಟೂ ಕಡಿಮೆ. ●

ಅತಿವಾಹಕಗಳು

ಐ. ಶ್ರೀರಾಮ.

ಜಗತ್ತಿನ ಹಲವೆಡೆಗಳಲ್ಲಿ ಒಂದು ಅತ್ಯಂತ ಕುತೂಹಲಕಾರಿಯಾದ ಸಂಶೋಧನೆಯು ನಡೆಯುತ್ತಿದೆ. ಬೇರೆ ಬೇರೆ ಉಷ್ಣತೆಯಲ್ಲಿ ಅತಿವಾಹಕ (ಸೂಪರ್ ಕಂಡಕ್ಟರ್)ಗಳಾಗಿ ವರ್ತಿಸುವ ವಸ್ತುಗಳನ್ನು ಕಂಡು ಹಿಡಿಯುವುದೇ ಈ ಸಂಶೋಧನೆಯ ಉದ್ದೇಶ. ಸಂಶೋಧನೆಯು ಯಶಸ್ವಿಯಾದರೆ ಅದು ಇನ್ನೊಂದು ಕೈಗಾರಿಕಾ ಕ್ರಾಂತಿಗೆ ನಾಂದಿಯಾಗುವುದು ಖಂಡಿತ. ಕಳೆದ ಹಲವು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಸಂಶೋಧನೆಯನ್ನು ನಡೆಸಿದ ವಿಜ್ಞಾನಿಗಳಿಗೆ ನೋಬೆಲ್ ಬಹುಮಾನಗಳು ದೊರಕಿವೆ. ಈ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದ ಪಶ್ಚಿಮ ಜರ್ಮನಿಯ ಬೆಡ್‌ನೋರ್ಸ್ ಮತ್ತು ಸ್ವಿಜರ್ಲಂಡಿನ ಅಲೆಕ್ಸ್-ಮುಲ್ಲರ್ ಎಂಬ ವಿಜ್ಞಾನಿಗಳಿಗೆ ಈ ವರ್ಷದ ಭೌತಶಾಸ್ತ್ರದ ನೋಬೆಲ್ ಬಹುಮಾನವನ್ನು ಕೊಡಲಾಗಿದೆ. ಅತಿವಾಹಕಗಳ ತಯಾರಿಕೆಗೆ ಬೇಕಾದ ಕೆಲವು ಅಮೂಲ್ಯವಾದ ಕಚ್ಚಾ ವಸ್ತುಗಳು ಭಾರತದಲ್ಲಿ ದೊರಕುವುದು ಮತ್ತು ನಮ್ಮ ವಿಜ್ಞಾನಿಗಳೂ ಈ ಸಂಶೋಧನೆಯಲ್ಲಿ ಸಾಕಷ್ಟು ಮುಂದುವರಿದಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ.

1911ರಲ್ಲಿ ಅತಿವಾಹಕವನ್ನು ಕಂಡುಹಿಡಿದ ಹಾಲೆಂಡಿನ ಕೆಮರ್ಲಿಂಗ್ ಜಾನ್ಸ್, ಇದೇ ಶತಮಾನದ ಉತ್ತರಾರ್ಧದಲ್ಲಿ ಅದು ಕೈಗಾರಿಕಾ ರಂಗದಲ್ಲಿ ಕ್ರಾಂತಿಕಾರಿಯಾದ ಬದಲಾವಣೆಗಳನ್ನು ತರಬಲ್ಲದೆಂದು ಎಣಿಸಿರಲಾರ. ಆತನು, -269° ಸೆಂಟಿಗ್ರೇಡ್ ಉಷ್ಣತೆಯಲ್ಲಿ ಪಾದರಸವು ಇದ್ದಕ್ಕಿದ್ದಂತೆ ತನ್ನ ಪ್ರತಿರೋಧ (ವಿದ್ಯುತ್ಪ್ರವಾಹಕ್ಕೆ ಒಡ್ಡುವ ತಡೆ)ವನ್ನು ಕಳೆದುಕೊಂಡದ್ದನ್ನು ಗಮನಿಸಿದ. ಪ್ರತಿರೋಧರಹಿತವಾದ ವಸ್ತುಗಳನ್ನು ಅತಿವಾಹಕಗಳೆನ್ನುತ್ತಾರೆ. ಕಾಲಕ್ರಮೇಣ, ಇನ್ನೂ ಕೆಲವು ಲೋಹಗಳು, ಮಿಶ್ರ ಲೋಹಗಳು ಮತ್ತು ಯೌಗಿಕ (Compound)ಗಳು ಕಡಿಮೆ ಉಷ್ಣತೆಯಲ್ಲಿ ಇರಿಸಿದರೆ ಅತಿವಾಹಕಗಳಾಗುವುವೆಂದು ತಿಳಿದು ಬಂತು. ಆದರೆ ಉಷ್ಣತೆಯನ್ನು ಇಷ್ಟು ಕಡಿಮೆ ಮಾಡಲು ಅಪಾರವಾದ ವೆಚ್ಚವು ತಗಲುತ್ತದೆ.

ಪ್ರತಿ ಅತಿವಾಹಕವನ್ನೂ ಒಂದು ನಿರ್ದಿಷ್ಟ ಉಷ್ಣತೆಯಿಂದ ಕಡಿಮೆ ಉಷ್ಣತೆಯಲ್ಲಿ ಇಟ್ಟರೆ ಮಾತ್ರವೇ ಅದು ಅತಿವಾಹಕವಾಗಿ ವರ್ತಿಸುವುದು. ಆ ಉಷ್ಣತೆಯನ್ನು ಆ ಅತಿವಾಹಕದ ವಿಷಮ ಉಷ್ಣತೆ (Critical Temperature) ಎನ್ನುತ್ತಾರೆ. ನಿಯೋಬಿಯಂ ಮತ್ತು ಜರ್ಮೇನಿಯಂಗಳನ್ನು ಒಳಗೊಂಡ ಯೌಗಿಕದ ವಿಷಮ ಉಷ್ಣತೆಯು -250° ಸೆಂಟಿಗ್ರೇಡ್ ಎಂದು ತಿಳಿದು ಬಂದಿದೆ. ಇತ್ತೀಚೆಗೆ ನಡೆದ

ಸಂಶೋಧನೆಗಳ ಪ್ರಕಾರ "ಲಾಂತಾನಂ-ಬೇರಿಯಂ ಕಾಪರ್ ಆಕ್ಸೈಡ್" -238° ಸೆಂಟಿಗ್ರೇಡ್ ಉಷ್ಣತೆಯಲ್ಲಿ ಮತ್ತು "ಯಿಟ್ರಿಯಂ-ಬೇರಿಯಂ ಕಾಪರ್ ಆಕ್ಸೈಡ್" -179° ಸೆಂಟಿಗ್ರೇಡ್ ಉಷ್ಣತೆಯಲ್ಲಿ ಅತಿವಾಹಕಗಳಾಗುವುವೆಂದು ವರದಿಯಾಗಿದೆ. ಜಗತ್ತಿನ ಹಲವೆಡೆಗಳಲ್ಲಿ ಇನ್ನೂ ಹೆಚ್ಚಿನ ವಿಷಮ ಉಷ್ಣತೆಯ ಅತಿವಾಹಕಗಳನ್ನು ಕಂಡುಹಿಡಿದಿರುವರೆಂಬ ವರದಿಗಳು ಬರುತ್ತಲೇ ಇವೆ. -269° ಸೆಂಟಿಗ್ರೇಡ್ ಉಷ್ಣತೆಯವರೆಗೆ ತಣಿಸಲು ದ್ರವೀಕೃತ ಹೀಲಿಯಂ ಅನಿಲವನ್ನೊಳಗೊಂಡ ಪ್ರಶೀತಕ (Refrigerator)ವನ್ನು ಉಪಯೋಗಿಸಬೇಕಾಗುತ್ತದೆ. ಆದರೆ ಹೀಲಿಯಂ ತುಂಬಾ ಬೆಲೆಬಾಳುವ ಅನಿಲ. ಹೀಲಿಯಂಗಿಂತ ಅಗ್ಗವಾದ ದ್ರವೀಕೃತ ನೈಟ್ರೋಜನ್ನನ್ನು ಉಪಯೋಗಿಸಿ -196° ಸೆಂಟಿಗ್ರೇಡ್ ಉಷ್ಣತೆಯವರೆಗೆ ತಣಿಸಬಹುದು. ಆದುದರಿಂದ -196° ಸೆಂಟಿಗ್ರೇಡಿಗಿಂತ ಹೆಚ್ಚಿನ ವಿಷಮ ಉಷ್ಣತೆಯ ಅತಿವಾಹಕಗಳ ನಿರ್ವಹಣೆಗೆ ವೆಚ್ಚವು ಕಡಿಮೆ. ಇದರಿಂದಾಗಿ ಇಂತಹ ಅತಿವಾಹಕಗಳನ್ನು ಕಂಡುಹಿಡಿದೊಡನೆ ಈ ವಿಷಯದಲ್ಲಿ ವಿಜ್ಞಾನಿಗಳ ಆಸಕ್ತಿಯು ಇನ್ನಷ್ಟು ಕೆರಳಿತು. ಆದರೂ ಅತಿವಾಹಕಗಳು ದಿನನಿತ್ಯದ ಬಳಕೆಗೆ ಬರುವಂತಾಗಬೇಕಾದರೆ ಹೆಚ್ಚು ಕಡಿಮೆ ವಾತಾವರಣದ ಉಷ್ಣತೆಯಲ್ಲಿಯೇ ಅತಿವಾಹಕತ್ವದ ಗುಣವನ್ನು ಪ್ರದರ್ಶಿಸುವ ವಸ್ತುಗಳನ್ನು ಕಂಡುಹಿಡಿಯಬೇಕು. ಅದಕ್ಕಾಗಿ ವಿಜ್ಞಾನಿಗಳು ಹಗಲಿರುಳು ಶ್ರಮಿಸುತ್ತಿದ್ದಾರೆ.

ಅತಿವಾಹಕ ಎಂದರೇನು?

ತಾಮ್ರ, ಅಲ್ಯುಮಿನಿಯಂ ಅಥವಾ ಇನ್ನು ಯಾವುದಾದರೂ ಲೋಹದಿಂದ ಮಾಡಿದ ತಂತಿಗಳ ಮೂಲಕ ವಿದ್ಯುತ್ಪ್ರವಾಹಕ್ಕೆ ಒಂದು ನಿರ್ದಿಷ್ಟ ಪ್ರಮಾಣದ ಪ್ರತಿರೋಧವನ್ನು ಒಡ್ಡುತ್ತದೆ. ಪ್ರತಿರೋಧದ ಪ್ರಮಾಣವು ಲೋಹವನ್ನು ಮತ್ತು ತಂತಿಯ ಅಳತೆಯನ್ನು ಹೊಂದಿಕೊಂಡಿದೆ. ವಿದ್ಯುತ್ಪ್ರವಾಹವು ಹರಿಯುವಾಗ ಈ ಪ್ರತಿರೋಧದಿಂದಾಗಿ ಉಷ್ಣವು ಉಂಟಾಗುವುದರಿಂದ ಅನವಶ್ಯಕವಾಗಿ ವಿದ್ಯುಚ್ಛಕ್ತಿಯು ವ್ಯಯವಾಗುತ್ತದೆ. (ಉಂಟಾಗುವ ಉಷ್ಣದ ಪ್ರಮಾಣವು 'ವಿದ್ಯುತ್ಪ್ರವಾಹ^2 X ತಂತಿಯ ಪ್ರತಿರೋಧ'ವನ್ನು ಅವಲಂಬಿಸಿಕೊಂಡಿರುವುದು). ಮಾತ್ರವಲ್ಲ, ಉಷ್ಣವು ಅತ್ಯಧಿಕ ಪ್ರಮಾಣವನ್ನು ಹೊಂದಿದರೆ ತಂತಿಯೇ ಕರಗಿ ಹೋಗಬಹುದು. (ಒಂದು ಚದರ ಸೆಂಟಿಮೀಟರಿನಷ್ಟು ಅಡ್ಡ ಛೇದವಿರುವ ತಾಮ್ರದ ತಂತಿಯ ಮೂಲಕ ಸಾಧಾರಣ ಒಂದು ಸಾವಿರ ಆ್ಯಂಪಿಯರಿಗಿಂತ ಹೆಚ್ಚು ವಿದ್ಯುತ್ಪ್ರವಾಹವು ಹರಿದರೆ ತಂತಿಯು ಕರಗಿ ಹೋಗಬಹುದು). ಅತಿವಾಹಕಗಳಲ್ಲಿ ಪ್ರತಿರೋಧವಿಲ್ಲದುದರಿಂದ ಎಷ್ಟು ವಿದ್ಯುತ್ಪ್ರವಾಹವು ಹರಿದರೂ ಉಷ್ಣವು ಉಂಟಾಗುವುದಿಲ್ಲ. ಆದುದರಿಂದ ಸಾಧಾರಣವಾದ ತಂತಿಗಳ ಮೂಲಕ ಹರಿಯಬಲ್ಲ ವಿದ್ಯುತ್ಪ್ರವಾಹದ ಎಷ್ಟೋ ಹೆಚ್ಚುಪಾಲು ವಿದ್ಯುತ್ಪ್ರವಾಹವು ಸೂಪರ್ ಕಂಡಕ್ಟರ್‌ಗಳಿಂದ ಮಾಡಿದ ತಂತಿಗಳ ಮೂಲಕ ಹರಿಯಬಲ್ಲದು. ಇದುವೇ ಅತಿವಾಹಕಗಳ ಯಶಸ್ಸಿನ ರಹಸ್ಯ!

ತಂತಿಯು ಪ್ರತಿರೋಧರಹಿತವಾಗಿದ್ದರೆ ಎಷ್ಟು ವಿದ್ಯುತ್ಪ್ರವಾಹವನ್ನೂ ಹರಿಸಬಹುದಲ್ಲ? ಆದರೆ ಅದಕ್ಕೂ ಒಂದು ಮಿತಿ ಇದೆ. ತಂತಿಯ ಮೂಲಕ ಹರಿಯುವ ವಿದ್ಯುತ್ಪ್ರವಾಹವು ಒಂದು ನಿರ್ದಿಷ್ಟ ಮಿತಿಯನ್ನು ಮೀರಿದರೆ, ಆ ವಿದ್ಯುತ್ಪ್ರವಾಹದಿಂದಾಗಿ ತಂತಿಯ ಸುತ್ತುಮುತ್ತ ಉಂಟಾಗುವ ಕಾಂತೀಯ ಕ್ಷೇತ್ರವು ಅತಿವಾಹಕತ್ವದ ಗುಣವನ್ನು ನಾಶಪಡಿಸುತ್ತದೆ. ಕೆಲವು ಅತಿವಾಹಕಗಳು ತಮ್ಮ ಗುಣವನ್ನು ಕಳೆದುಕೊಳ್ಳದೆ ಸಾಧಾರಣ ಹತ್ತು ಟೆಸ್ಲಾ (ಭೂಮಿಯ ಕಾಂತೀಯ ಕ್ಷೇತ್ರದ ಸಾಧಾರಣ ಎರಡು ಲಕ್ಷ ಪಾಲು)ದಷ್ಟು ತೀವ್ರತೆಯ ಕಾಂತೀಯ ಕ್ಷೇತ್ರವನ್ನು ಉಂಟುಮಾಡಲು

> ★ *ಭಾರತದಲ್ಲಿ ಈಗ ಅತಿವಾಹಕತೆ ಕುರಿತ ವಿಶೇಷ ಸಂಶೋಧನೆ ನಡೆಸುತ್ತಿರುವ ಸಂಸ್ಥೆಗಳು ಇವು: ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್; ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮದರಾಸು; ಬಾಬಾ ಅಣು ಸಂಶೋಧನಾ ಕೇಂದ್ರ, ಮುಂಬೈ ಹಾಗೂ ದೆಹಲಿಯ ರಾಷ್ಟ್ರೀಯ ಭೌತವಿಜ್ಞಾನ ಪ್ರಯೋಗಾಲಯ.*

ಸಾಕಾಗುವಷ್ಟು ವಿದ್ಯುತ್ಪ್ರವಾಹವನ್ನು ಒಯ್ಯ ಬಲ್ಲವು.

ಯಾವ ಯಾವ ಉಪಯೋಗಕ್ಕೆಲ್ಲಾ ಅತಿವಾಹಕಗಳನ್ನು ಬಳಸಬಹುದೆಂಬುದು ಅವುಗಳ ತಯಾರಿಕೆ ಮತ್ತು ನಿರ್ವಹಣೆಗೆ ಎಷ್ಟು ಖರ್ಚು ತಗಲುವುದೆಂಬುದನ್ನು ಹೊಂದಿಕೊಂಡಿದೆ. ಅತಿವಾಹಕಗಳು ಪ್ರತಿರೋಧರಹಿತವಾಗಿರುವುದರಿಂದ, ವಿದ್ಯುಚ್ಛಕ್ತಿಯ ಪಾರಗಮನ (Transmission)ಕ್ಕೆ ಅತಿವಾಹಕಗಳಿಂದ ಮಾಡಿದ ತಂತಿಗಳು ಯೋಗ್ಯವಾಗಿವೆ. ಅತಿವಾಹಕಗಳ ಮೂಲಕ ಅತ್ಯಧಿಕ ಪ್ರಮಾಣದ ವಿದ್ಯುತ್ಪ್ರವಾಹವು ಹರಿಯುವಾಗ ತಂತಿಯ ಸುತ್ತುಮುತ್ತು ಪ್ರಬಲವಾದ ಕಾಂತೀಯ ಕ್ಷೇತ್ರದ ಉತ್ಪತ್ತಿಯಾಗುತ್ತದೆ. ಇದನ್ನು 'ತೇಲಾಡುವ ರೈಲುಗಾಡಿ'ಗಳಲ್ಲಿ ಮ್ಯಾಗ್ನೆಟೊ ಹೈಡ್ರೊ ಡೈನಮಿಕ್ ವಿಧಾನದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಮತ್ತು ಅಣು ವಿಜ್ಞಾನದಲ್ಲಿ ಬಳಸಬಹುದು. ಅತಿವಾಹಕಗಳ ಬಳೆಗಳನ್ನು ವಿದ್ಯುಚ್ಛಕ್ತಿಯನ್ನು ಶೇಖರಿಸಿ ಇಡಲು ಉಪಯೋಗಿಸಬಹುದು. ಅತಿವಾಹಕಗಳಿಂದ ಮಾಡಿದ ಜೋಸೆಫ್‌ಸನ್ ಸೇರಿಕೆಗಳು (Josephson Junctions) ಕಂಪ್ಯೂಟರ್‌ಗಳಲ್ಲಿ, ವೈದ್ಯಕೀಯ ಅನ್ವೇಷಣೆಗಳಲ್ಲಿ ಮತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಉಪಯುಕ್ತವಾಗಿವೆ. ಇವಲ್ಲದೆ ಇನ್ನೂ ಎಷ್ಟೋ ಉದ್ಯಮಗಳಲ್ಲಿ ಅತಿವಾಹಕಗಳನ್ನು ಉಪಯೋಗಿಸಬಹುದು.

ಸೂಪರ್ ಕಂಡಕ್ಟರುಗಳ ತಂತಿಗಳನ್ನು ವಿದ್ಯುಚ್ಛಕ್ತಿಯ ಪಾರಗಮನಕ್ಕೆ ಬಳಸಿದರೆ ವಿದ್ಯುಚ್ಛಕ್ತಿಯ ಉತ್ಪಾದನೆಯಲ್ಲಿ ಮತ್ತು ಬಳಕೆಯಲ್ಲಿ ಗಣನೀಯವಾದ ಬದಲಾವಣೆಗಳಾಗಲು ಸಾಧ್ಯವಿದೆ: 1) ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿದ್ಯುಜ್ಜನಕ ಕೇಂದ್ರಗಳಿಂದ, ಅದನ್ನು ಉಪಯೋಗಿಸುವ ಕಾರ್ಖಾನೆ ಅಥವಾ ಮನೆಗಳವರೆಗೆ, ವಿದ್ಯುಚ್ಛಕ್ತಿಯನ್ನು ಸಾಧಾರಣವಾದ ತಂತಿಗಳ ಮೂಲಕ ಒಯ್ಯುವಾಗ ಈ ತಂತಿಗಳ ಪ್ರತಿರೋಧದಿಂದಾಗಿ, ಸಾಧಾರಣ ಶೇಕಡಾ 20ರಷ್ಟು ವಿದ್ಯುಚ್ಛಕ್ತಿಯು ತಂತಿಗಳಲ್ಲಿಯೇ ವ್ಯಯವಾಗುತ್ತದೆ. ಸಾಧಾರಣವಾದ ತಂತಿಗಳನ್ನು ಉಪಯೋಗಿಸುವುದರ ಬದಲಾಗಿ ಅತಿವಾಹಕಗಳಿಂದ ಮಾಡಿದ ತಂತಿಗಳನ್ನು ಉಪಯೋಗಿಸಿದರೆ ಇಷ್ಟು ವಿದ್ಯುಚ್ಛಕ್ತಿಯನ್ನು ಉಳಿಸಿಕೊಳ್ಳಬಹುದು. 2) ದೂರ ದೂರದ ಘಟ್ಟಗಳಲ್ಲಿ ಹಲವಾರು ಜಲಪಾತಗಳಿದ್ದರೂ, ಎಲ್ಲಾ ಜಲಪಾತಗಳಿಂದಲೂ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಿಲ್ಲ. ಯಾಕೆಂದರೆ, ಅಷ್ಟು ದೂರ ವಿದ್ಯುಚ್ಛಕ್ತಿಯನ್ನು ಸಾಧಾರಣವಾದ ತಂತಿಗಳ ಮೂಲಕ ಒಯ್ಯುವಾಗ ಉತ್ಪಾದಿಸಿದ ವಿದ್ಯುಚ್ಛಕ್ತಿಯ ಹೆಚ್ಚಿನ ಅಂಶವೂ ತಂತಿಗಳ ಪ್ರತಿರೋಧದಲ್ಲಿಯೇ ವ್ಯಯವಾಗುವುದು. ಅತಿವಾಹಕಗಳನ್ನು ಉಪಯೋಗಿಸಿದರೆ ಈ ನಷ್ಟವನ್ನು ತಡೆಗಟ್ಟಬಹುದಾದುದರಿಂದ ದೂರ ದೂರದ ಜಲಪಾತಗಳಿಂದಲೂ ವಿದ್ಯುಚ್ಛಕ್ತಿಯನ್ನು ಪಡೆಯಬಹುದು. ವಿದ್ಯುಚ್ಛಕ್ತಿಯ ಅಭಾವದಿಂದ ಪೀಡಿತರಾಗಿ ಬಳಲುತ್ತಿರುವ ಇಂದಿನ ಜನತೆಗೆ ಇದು ಆಧುನಿಕ ವಿಜ್ಞಾನದ ಒಂದು ಅಪೂರ್ವ ಕೊಡುಗೆಯಾಗಬಹುದು. 3) ಕಲ್ಲಿದ್ದಲನ್ನು ಉಪಯೋಗಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿದ್ಯುಜ್ಜನಕ ಕೇಂದ್ರ (Thermal Power Station)ಗಳನ್ನು ಕಲ್ಲಿದ್ದಲಿನ ಗಣಿಗಳ ಹತ್ತಿರವೇ ಸ್ಥಾಪಿಸಬೇಕಾಗುತ್ತದೆ. ಇಲ್ಲದಿದ್ದರೆ ಕಲ್ಲಿದ್ದಲಿನ ಗಣಿಗಳಿಂದ ಈ ವಿದ್ಯುಜ್ಜನಕ ಕೇಂದ್ರಗಳವರೆಗೆ ಕಲ್ಲಿದ್ದಲನ್ನು ಸಾಗಿಸಲು ತುಂಬಾ ಖರ್ಚಾಗುತ್ತದೆ. ವಿದ್ಯುಜ್ಜನಕ ಕೇಂದ್ರವು ಕಲ್ಲಿದ್ದಲಿನ ಗಣಿಗಳ ಸಮೀಪವಿದ್ದರೆ, ಗಣಿಗಳಿಂದ ದೂರಕ್ಕೆ ವಿದ್ಯುಚ್ಛಕ್ತಿಯನ್ನು ಸಾಧಾರಣವಾದ ತಂತಿಗಳ ಮೂಲಕ ಒಯ್ಯುವಾಗ ಅದರಲ್ಲಿ ಅಧಿಕಾಂಶವು ತಂತಿ




ಡಾ॥ ಸಿ.ಎನ್.ಆರ್. ರಾವ್

ಯಲ್ಲಿ ವ್ಯಯವಾಗುತ್ತದೆ. ಅತಿವಾಹಕಗಳಿಂದ ಮಾಡಿದ ತಂತಿಗಳ ಮೂಲಕ, ಯಾವ ನಷ್ಟವೂ ಇಲ್ಲದೆ ವಿದ್ಯುಚ್ಛಕ್ತಿಯನ್ನು ಒಯ್ಯ ಬಹುದಾದುದರಿಂದ, ಗಣಿಗಳ ಬಳಿಯ ವಿದ್ಯು ಜ್ಜನಕ ಕೇಂದ್ರಗಳಿಂದ ದೂರ ದೂರದ ಊರು ಗಳಿಗೂ ಅತಿವಾಹಕಗಳ ತಂತಿಗಳನ್ನು ಉಪ ಯೋಗಿಸಿ ವಿದ್ಯುಚ್ಛಕ್ತಿಯನ್ನು ಒಯ್ಯಬಹುದು.

ಸೂಪರ್ ಕಂಡಕ್ಟರುಗಳನ್ನು ಉಪಯೋಗಿಸಿ ಉಂಟುಮಾಡಬಲ್ಲ ಪ್ರಬಲವಾದ ಕಾಂತೀಯ ಕ್ಷೇತ್ರವು ರೈಲುಗಾಡಿಗಳನ್ನು ನೆಲಮಟ್ಟದಿಂದ ಮೇಲಕ್ಕೆ ಎತ್ತಿ ಮುಂದಕ್ಕೆ ಚಲಿಸುವಂತೆ ಮಾಡ ಬಲ್ಲದು. ಇದನ್ನು ★ ಮ್ಯಾಗ್ನೆಟಿಕ್ ಲೆವಿ ಟೇಶನ್ ಎನ್ನುತ್ತಾರೆ. ಇಂತಹ 'ತೇಲಾಡುವ ರೈಲು ಗಾಡಿ'ಯು ಜಪಾನಿನ ಪ್ರಾಯೋಗಿಕ ರೈಲು ಹಳಿಗಳ ಮೇಲೆ ಗಂಟೆಗೆ 500 ಕಿಲೋ ಮೀಟರಿಗಿಂತ ಹೆಚ್ಚು ವೇಗವಾಗಿ ಓಡಿರುವು ದಾಗಿ ವರದಿಯಾಗಿದೆ. ಪ್ರಬಲವಾದ ಕಾಂತೀಯ ಕ್ಷೇತ್ರವನ್ನು ಮ್ಯಾಗ್ನೆಟೊ ಹೈಡ್ರೂ ಡೈನಮಿಕ್ ಎಂಬ ವಿಧಾನದಲ್ಲಿ ವಿದ್ಯುಚ್ಛಕ್ತಿ ಯನ್ನು ಉತ್ಪಾದಿಸಲೂ ಉಪಯೋಗಿಸ ಬಹುದು. ಈ ವಿಧಾನದಲ್ಲಿ, ಕಾಂತೀಯ ಕ್ಷೇತ್ರದ ಮೂಲಕ, ಬಿಸಿಯಾದ ಐಯಾನೀಕೃತ ಅನಿಲವು (Ionised gas) ಹರಿಯುವಾಗ ಅನಿಲದ ಧನ ಮತ್ತು ಋಣ ಐಯಾನುಗಳು ಕಾಂತೀಯ ಕ್ಷೇತ್ರದ ಪ್ರಭಾವದಿಂದಾಗಿ ಬೇರೆ ಬೇರೆ ವಿದ್ಯುಧ್ರುವ (Electrode)ಗಳತ್ತ ಹರಿದು ವಿದ್ಯುಚ್ಛಕ್ತಿಯು ಉತ್ಪಾದಿಸಲ್ಪಡು ತ್ತದೆ. ಸಾಧಾರಣವಾದ ವಿದ್ಯುತ್ಕಾಂತ (Electromagnet)ವನ್ನು ಉಪಯೋಗಿಸಿ ಈ ರೀತಿಯಾಗಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಹೆಚ್ಚು ವೆಚ್ಚವು ತಗಲುವುದರಿಂದ ಈ ವಿಧಾನವು ಹೆಚ್ಚು ಜನಪ್ರಿಯವಾಗಲಿಲ್ಲ. ಆದರೆ ಅತಿವಾಹಕಗಳನ್ನು ಉಪಯೋಗಿಸಿ ಉಂಟುಮಾಡಬಲ್ಲ ಪ್ರಬಲವಾದ ಕಾಂತೀಯ ಕ್ಷೇತ್ರವನ್ನು ಬಳಸಿದರೆ ಈ ವಿಧಾನವೂ ಲಾಭ ದಾಯಕವಾಗಬಹುದು. ಶಕ್ತಿಯುತವಾದ ಕಾಂತೀಯ ಕ್ಷೇತ್ರವನ್ನು ಉಪಯೋಗಿಸಿ ಚಿಕ್ಕ ವಾದ ಮತ್ತು ಅತ್ಯಧಿಕ ಸಾಮರ್ಥ್ಯವುಳ್ಳ ಮೋಟಾರುಗಳನ್ನೂ, ವಿದ್ಯುಜ್ಜನಕಗಳನ್ನೂ ತಯಾರಿಸಬಹುದು. ಅಣು ವಿಜ್ಞಾನ ದಲ್ಲಿಯೂ ಶಕ್ತಿಯುತವಾದ ಕಾಂತೀಯ ಕ್ಷೇತ್ರದ ಹಲವಾರು ಉಪಯೋಗಗಳಿವೆ.

ಅತಿವಾಹಕಗಳಲ್ಲಿ ಪ್ರತಿರೋಧವಿಲ್ಲದುದ ರಿಂದ ಇದರಿಂದ ಮಾಡಿದ ಬಳೆಗೆ ಒಮ್ಮೆ ವಿದ್ಯು ತ ವಾಹವನ್ನು ಒದಗಿಸಿಬಿಟ್ಟರೆ ಹಲವಾರು ವರ್ಷಗಳವರೆಗೆ ಅದರಲ್ಲಿ ವಿದ್ಯುತ್ಪ್ರವಾಹವು ಹರಿಯುತ್ತಲೇ ಇರುವುದು. ಆದುದರಿಂದ ಇದು ವಿದ್ಯುಚ್ಛಕ್ತಿಯನ್ನು ಶೇಖರಿಸಿ ಇಡಲು ಒಂದು ಅತ್ಯುತ್ತಮವಾದ ವಿಧಾನ. ಸೌರ ವಿದ್ಯು

(★ ನೋಡಿ: 'ತೇಲಾಡುವ ರೈಲುಗಾಡಿಗಳು' ಕಸ್ತೂರಿ, ಡಿಸೆಂಬರ್ ೮೨)



ಚ್ಛಕ್ತಿಯನ್ನು ಬಿಸಿಲು ಇರುವಾಗ ಮಾತ್ರ ಉತ್ಪಾದಿಸಲು ಸಾಧ್ಯ. ಬಿಸಿಲು ಇಲ್ಲದಿರುವಾಗ ಈ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಅದನ್ನು ಬ್ಯಾಟರಿಗಳಲ್ಲಿ ಶೇಖರಿಸಿ ಇಡಬೇಕಾಗುತ್ತದೆ. ಇದಕ್ಕೆ ತುಂಬಾ ಖರ್ಚು ತಗಲುತ್ತದೆ. ಇಂಥ ಬಳೆಗಳಿಗೆ ಬ್ಯಾಟರಿಗಳಿಗಿಂತ ಬಹಳ ಹೆಚ್ಚು ವಿದ್ಯುಚ್ಛಕ್ತಿಯನ್ನು ಶೇಖರಿಸಿ ಇಡುವ ಸಾಮರ್ಥ್ಯವಿದೆ. ಆದುದರಿಂದ ಬಿಸಿಲಿರುವಾಗ ಉತ್ಪಾದಿಸಿದ ವಿದ್ಯುಚ್ಛಕ್ತಿಯನ್ನು ಅತಿವಾಹಕ ಬಳೆಗಳಲ್ಲಿ ಶೇಖರಿಸಿ ಇಟ್ಟು, ಬೇಕಾದಾಗ ಉಪಯೋಗಿಸಿದರೆ ಸೌರ ವಿದ್ಯುಚ್ಛಕ್ತಿಗೆ ತಗಲುವ ಖರ್ಚು ಕಡಿಮೆಯಾಗಿ ಸೌರ ವಿದ್ಯುಚ್ಛಕ್ತಿಯು ಹೆಚ್ಚು ಜನಪ್ರಿಯವಾಗಲು ಸಾಧ್ಯವಿದೆ. ಇದರಿಂದಾಗಿ ಮರುಭೂಮಿಗಳ ಉರಿಬಿಸಿಲಿನಿಂದ ಅಪಾರವಾದ ವಿದ್ಯುಚ್ಛಕ್ತಿಯು ಲಭ್ಯವಾಗಬಹುದು. ವಿದ್ಯುಜ್ಜನಕ ಕೇಂದ್ರಗಳಲ್ಲಿಯೂ ಸೂಪರ್ ಕಂಡಕ್ಟರುಗಳಿಗೆ ಮಹತ್ವಪೂರ್ಣವಾದ ಪಾತ್ರವಿದೆ. ವಿದ್ಯುಚ್ಛಕ್ತಿಯ ಅವಶ್ಯಕತೆಯು ಯಾವಾಗಲೂ ಒಂದೇ ರೀತಿಯಾಗಿರುವುದಿಲ್ಲ. ದಿವಸದಲ್ಲಿ ಕೆಲವು ಗಂಟೆಗಳ ಕಾಲ ಮಾತ್ರವೇ ಹೆಚ್ಚಿನ ವಿದ್ಯುಚ್ಛಕ್ತಿಯ ಅವಶ್ಯಕತೆ ಇದ್ದರೂ, ಈ ಅವಶ್ಯಕತೆಕನುಗುಣವಾಗಿ ಹೆಚ್ಚಿನ ಸಾಮರ್ಥ್ಯದ ವಿದ್ಯುಜ್ಜನಕಗಳನ್ನು ಸ್ಥಾಪಿಸಲಾಗುತ್ತದೆ. ಆದರೆ, ಅವಶ್ಯಕತೆಯು ಕಡಿಮೆ ಇರುವಾಗ ಸೂಪರ್ ಕಂಡಕ್ಟರುಗಳ ಬಳೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಶೇಖರಿಸಿ ಇಟ್ಟು ಅದನ್ನು ಅವಶ್ಯಕತೆಯು ಹೆಚ್ಚಿಗೆ ಇರುವಾಗ ಉಪಯೋಗಿಸುವಂತಿದ್ದರೆ ಕಡಿಮೆ ಸಾಮರ್ಥ್ಯದ ವಿದ್ಯುಜ್ಜನಕಗಳು ಸಾಕಾಗಬಹುದು. ಮಾತ್ರವಲ್ಲ, ವಿದ್ಯುಜ್ಜನಕಗಳು ಯಾವಾಗಲೂ ಒಂದೇ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ಸಾಧ್ಯವಾಗುವುದರಿಂದ ಅವುಗಳ ದಕ್ಷತೆಯು ಹೆಚ್ಚುವುದು. ವಿದ್ಯುಚ್ಛಕ್ತಿಯನ್ನು ಶೇಖರಿಸಿ ಇಡುವ ಇಂತಹ ಒಂದು ವ್ಯವಸ್ಥೆಯು ಅಮೆರಿಕದ ವಿದ್ಯುಜ್ಜನಕ ಕೇಂದ್ರವೊಂದರಲ್ಲಿ ಬಳಕೆಯಲ್ಲಿದೆ ಎಂದು ವರದಿಯಾಗಿದೆ.

ಎರಡು ಅತಿವಾಹಕಗಳನ್ನು ಜೋಡಿಸಿದಾಗ ಉಂಟಾಗುವ ಸೇರಿಕೆಗಳು (ಜೋಸೆಫ್‌ಸನ್ ಜಂಕ್ಷನ್ನುಗಳು) ಕೆಲವು ವಿಶಿಷ್ಟವಾದ ಗುಣಗಳನ್ನು ಹೊಂದಿವೆ. ಇವುಗಳ ಸ್ವಿಚ್ಚಿಂಗ್ ಸ್ಪೀಡ್ (ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಬದಲಾಗುವ ಶೀಘ್ರತೆ) ಅತ್ಯಧಿಕವಾಗಿರುವುದು ಮತ್ತು ಈ ಸೇರಿಕೆಗಳಲ್ಲಿ ವಿದ್ಯುಚ್ಛಕ್ತಿಯ ವ್ಯಯವು ಬಹಳ ಕಡಿಮೆ. ಆದುದರಿಂದ ಇವುಗಳನ್ನು ಉಪಯೋಗಿಸಿ ಕಂಪ್ಯೂಟರುಗಳು ಕೆಲಸ ಮಾಡುವ ಶೀಘ್ರತೆಯನ್ನು ಹೆಚ್ಚಿಸಬಹುದು. ಜೋಸೆಫ್‌ಸನ್ ಜಂಕ್ಷನ್ನುಗಳನ್ನು ಉಪಯೋಗಿಸಿ ಅತಿ ಕ್ಷೀಣವಾದ ಕಾಂತೀಯ ಕ್ಷೇತ್ರಗಳನ್ನೂ ಪತ್ತೆಹಚ್ಚಬಲ್ಲ ಉಪಕರಣಗಳನ್ನು ತಯಾರಿಸುತ್ತಾರೆ. ಈ ಉಪಕರಣಗಳನ್ನು ಕೆಲವು ರೋಗಗಳನ್ನು ಪತ್ತೆಹಚ್ಚಲು ಮತ್ತು ಕೆಲವು ವೈಜ್ಞಾನಿಕ ಸಂಶೋಧನೆಗಳಲ್ಲಿ ಉಪಯೋಗಿಸಲಾಗುತ್ತದೆ. ಆದರೆ ನಿಯಂತ್ರಿತ ಗುಣಮಟ್ಟದ ಜೋಸೆಫ್‌ಸನ್ ಜಂಕ್ಷನ್ನುಗಳನ್ನು ತಯಾರಿಸಲು ಕಷ್ಟಸಾಧ್ಯವಾದುದರಿಂದ ಈ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಯು ಕಂಡುಬರಲಿಲ್ಲ.

ಕಲ್ಪನೆಗೆ ಅತೀತವಾದ ಈ ವೈಜ್ಞಾನಿಕ ಸಾಧನೆಯು ಅಷ್ಟು ಸುಲಭ ಸಾಧ್ಯವಲ್ಲ; ಹಲವಾರು ಕಂಟಕಗಳನ್ನು ಎದುರಿಸಬೇಕಾಗುತ್ತದೆ: 1) ಈಗ ಗೊತ್ತಿರುವ ಹೆಚ್ಚಿನ ಉಷ್ಣತೆಯಲ್ಲಿ ಅತಿವಾಹಕಗಳಾಗುವ ವಸ್ತುಗಳನ್ನು ತಯಾರಿಸಲು ಬೇಕಾದ ಕಚ್ಚಾ ಸಾಮಗ್ರಿಗಳು ತುಂಬಾ ಬೆಲೆಬಾಳುವ ವಸ್ತುಗಳು. 2) ಅತಿವಾಹಕಗಳನ್ನು ಸಾಕಷ್ಟು ಕಡಿಮೆ ಉಷ್ಣತೆಯಲ್ಲಿರಿಸಲು ಪ್ರಶೀತನಕ್ಕೆ ತುಂಬಾ ವೆಚ್ಚವು ತಗಲುತ್ತದೆ. ವಿಷಮ ಉಷ್ಣತೆಯು ಕಡಿಮೆಯಾದಷ್ಟೂ ವೆಚ್ಚವು ಹೆಚ್ಚು. 3) ಈಗ ಗೊತ್ತಿರುವ ಹೆಚ್ಚಿನ ಉಷ್ಣತೆಯ ಅತಿವಾಹಕಗಳು ಪೆಡಸಾದ ಸೆರಾಮಿಕ್ (Brittle Ceramic)ನ ರೂಪದಲ್ಲಿರುವುದರಿಂದ ಇವುಗಳಿಂದ ತಂತಿಗಳನ್ನು ತಯಾರಿಸುವುದು ಕಷ್ಟಸಾಧ್ಯ.

ಈಗ ನಡೆಯುತ್ತಿರುವ ಸಂಶೋಧನೆಗಳು ಯಶಸ್ವಿಯಾಗಿ ಹೆಚ್ಚು ಕಡಿಮೆ ಸಾಮಾನ್ಯವಾದ ಉಷ್ಣತೆಯಲ್ಲಿಯೇ ಅತಿವಾಹಕತ್ವದ ಗುಣವನ್ನು ಪ್ರದರ್ಶಿಸುವ ವಸ್ತುಗಳನ್ನು ಕಂಡುಹಿಡಿದರೆ ಅದು ಮಾನವ ಕುಲದ ಅಭ್ಯುದಯಕ್ಕೆ ವಿಜ್ಞಾನಿಗಳ ಚಿರಸ್ಮರಣೀಯವಾದ ಕೊಡುಗೆಯಾಗಬಹುದು. ●

ಅತಿವಾಹಕ..

ಗಂಟೆಗೆ ಐನೂರು ಕಿಲೋಮೀಟರ್‌ಗಳಿಗೂ ಹೆಚ್ಚು ವೇಗದಲ್ಲಿ ಓಡುವ ರೈಲು: ಈ ರೈಲಿನಲ್ಲಿ ಕುಳಿತರೆ ವಿಮಾನದಲ್ಲಿ ಕುಳಿತಷ್ಟೇ ಆರಾಮ. ಮನೆಗೆ ನಿರಂತರ ವಿದ್ಯುತ್ ಪೂರೈಕೆ; ಇಡೀ ದಿನ ರಾತ್ರಿ ವಿದ್ಯುತ್ ಬಳಸಿದರೂ ವಿದ್ಯುತ್ ಬಿಲ್ ಕೈ ಬೆರಳೆಣಿಕೆಯಷ್ಟು. ಅಸ್ವಾಸ್ಥ್ಯವಾದಾಗ ಮನೆಗೆ ಬಂದ ವೈದ್ಯ 'ಸ್ಟೆತಸ್ಕೋಪ್' ಬದಲು 'ಬಾಡಿ ಸ್ಕ್ಯಾನರ್' ಬಳಸಿ ಪರೀಕ್ಷೆ ಮಾಡುತ್ತಾನೆ. ನಿಮ್ಮ ಇಡೀ ವ್ಯವಹಾರ ನೋಡಿಕೊಳ್ಳುತ್ತಿದ್ದ ಪುಟ್ಟ ಕಚೇರಿ ಬದಲು, ಜೇಬಿನಲ್ಲೇ ಇಟ್ಟುಕೊಳ್ಳಬಹುದಾದ ಪುಟಾಣಿ ಕಂಪ್ಯೂಟರ್!

–ಇದು ನಿಜಕ್ಕೂ ಈಗ ಕನಸಿನ ರಾಜ್ಯವೇ! ಆದರೆ ಅತಿವಾಹಕತೆ ಬಗ್ಗೆ ವಿಜ್ಞಾನಿಗಳು –ಮುಖ್ಯವಾಗಿ ಭಾರತೀಯ ವಿಜ್ಞಾನಿಗಳು– ನಡೆಸುತ್ತಿರುವ ಸಂಶೋಧನೆಗಳು ನಿಮ್ಮ ಜೀವಮಾನದಲ್ಲೇ ಈ ಕನಸಿನ ರಾಜ್ಯವನ್ನು ನನಸಾಗಿ ಮಾಡುವಂತಿದೆ.




...ಏನಿದು?

● ಎಂ.ಎಸ್.ಎಸ್.

ಹೌದು. ಅತಿವಾಹಕತೆ ಈ ಶತಮಾನದ ಅಪ್ರತಿಮ ವೈಜ್ಞಾನಿಕ ಆವಿಷ್ಕಾರ. ಟ್ರಾನ್ಸಿಸ್ಟರ್ ಗಳನ್ನು ಕಂಡು ಹಿಡಿದಾಗ ಅವರ ವಿವಿಧೋದ್ದೇಶ ಬಳಕೆ ಹೇಗೆ ಈ ಶತಮಾನದಲ್ಲಿ ಪ್ರಥಮ ತಾಂತ್ರಿಕ ಕ್ರಾಂತಿ ಉಂಟುಮಾಡಿತೋ ಅಂಥದೇ ಕ್ರಾಂತಿಯನ್ನು ಈ ಅತಿವಾಹಕತೆ ಸದ್ಯದಲ್ಲೇ ತರಲಿದೆ.

ಅತಿವಾಹಕತೆ, ಏನಿದು?

ಈ ಪ್ರಶ್ನೆ ಸಹಜ. ಇದಕ್ಕೆ ತುಂಬ ಸರಳವಾಗಿ ಉತ್ತರಿಸಬಹುದಾದರೆ ಹೀಗೆ ಹೇಳಬಹುದು: ಯಾವುದೇ ಒಂದು ಮಾಧ್ಯಮದ ಮೂಲಕ ವಿದ್ಯುತ್ ಹರಿಯುವಾಗ, ಆ ಮಾಧ್ಯಮ ಸ್ವಲ್ಪ ಮಟ್ಟಿಗಾದರೂ ಪ್ರತಿರೋಧ ವ್ಯಕ್ತಪಡಿಸುತ್ತದೆ. ವಿದ್ಯುತ್ ಪ್ರವಾಹಕ್ಕೆ ಅವಕಾಶವೇ ಕೊಡದ ವಸ್ತುಗಳು 'ವಿದ್ಯುತ್ ನಿರೋಧಕಗಳು' (insulators) ಸ್ವಲ್ಪ ಪ್ರತಿರೋಧ ವ್ಯಕ್ತಪಡಿಸುವ ವಸ್ತುಗಳು



ಅತಿವಾಹಕತೆ ಕುರಿತ ಸಂಶೋಧನೆಗೆ ಭಾರತದಲ್ಲಿ ಎಷ್ಟು ಪ್ರಾಮುಖ್ಯ ನೀಡಲಾಗುತ್ತಿದೆ ಎಂದರೆ, ಪ್ರಧಾನಿ ರಾಜೀವ್‌ಗಾಂಧಿ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಂಡಳಿಯನ್ನೇ ಇದಕ್ಕಾಗಿ ರಚಿಸಲಾಗಿದೆ. ಈ ಮಂಡಳಿಗೆ ಸಂಪುಟ ಸ್ಥಾನ-ಮಾನವಿದ್ದು, ವಿಜ್ಞಾನ-ತಂತ್ರಜ್ಞಾನ ಕುರಿತ ಎಲ್ಲ ಇಲಾಖೆಗಳ ಕಾರ್ಯದರ್ಶಿಗಳು, ಯುಜಿಸಿ ಅಧ್ಯಕ್ಷರು ಇದರಲ್ಲಿದ್ದಾರೆ.

ಈ ಮಂಡಳಿಗೆ ಭಾರತದ ಖ್ಯಾತ ವಿಜ್ಞಾನಿ ಡಾ|| ಎಂ.ಜಿ.ಕೆ. ಮೆನನ್ ಸಮನ್ವಯಕಾರರಾಗಿದ್ದಾರೆ. ವಿವಿಧ ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧನೆಗಳು ಪುನರಾವರ್ತನೆಯಾಗದಂತೆ, ಅನಗತ್ಯ ಬೌದ್ಧಿಕ-ಆರ್ಥಿಕ ವ್ಯಯ ತಡೆಯುವ ಹೊಣೆ ಇವರದು.

'ಉತ್ತಮ ಸಂವಹನಕಾರಿಗಳು' (good conductors) ಅತಿವಾಹಕ ಸ್ಥಿತಿಯಲ್ಲಿರುವ ವಸ್ತುಗಳು ವಿದ್ಯುತ್ತನ್ನು ಕಿಂಚಿತ್ತೂ ಪ್ರತಿರೋಧವಿಲ್ಲದೆ, ಸಂಪೂರ್ಣ ಮುಕ್ತವಾಗಿ ಹರಿಯಲು ಬಿಡುತ್ತವೆ.

ಈಗಿನ 'ಉತ್ತಮ ಸಂವಹನಕಾರಿಗಳು' ಸಹ ವಿದ್ಯುತ್ ಪ್ರವಾಹಕ್ಕೆ ಸ್ವಲ್ಪ ಪ್ರತಿರೋಧ ತಳೆದಿರುವುದರಿಂದ ವಿದ್ಯುತ್, ಶಾಖದ ರೂಪದಲ್ಲಿ ಅಪವ್ಯಯವಾಗುತ್ತಿದೆ. ಅಷ್ಟೇ ಅಲ್ಲ; ವಿದ್ಯುತ್ ಸಂವಹನ ಸಾಗಣೆಯಲ್ಲಿ ವಿಳಂಬ ಕೂಡ ಆಗುತ್ತಿದೆ.

ಉದಾಹರಣೆಗೆ: ನೀವು ಯಾವುದೋ ಬಾರಿ ಆಸಕ್ತಿಯ ಫುಟ್‌ಬಾಲ್ ಮ್ಯಾಚ್‌ಗೆ ಹೋಗುತ್ತೀರಿ. ಅಲ್ಲಿ ಜನವೋ ಜನ. ಮ್ಯಾಚ್ ಮುಗಿದ ಮೇಲೆ ಆದಷ್ಟು ಬೇಗ ಮನೆಗೆ ಹೋಗಬೇಕು (ಹೆಂಡತಿಗೆ ಸಿನಿಮಾಗೆ ಕರೆದುಕೊಂಡು ಹೋಗುವುದಾಗಿ ಹೇಳಿರುತ್ತೀರಿ!) ಆದರೆ ಸ್ಟೇಡಿಯಂ ಹೊರಗೆ ಹೋಗುವುದೇ ಮಹಾ ಸಾಹಸವಾಗಿಬಿಡುತ್ತದೆ. ಆ ಜನಜಂಗುಳಿ, ನೂಕಾಟ ನುಗ್ಗಾಟಗಳಲ್ಲಿ ನೀವು ಹೊರಬರುವುದೇ ತಡವಾಗಿಬಿಡುತ್ತದೆ. ಹೊರಗೆ ಬಂದ ಮೇಲೆ ಆಟೋ-ಬಸ್ ಹಿಡಿಯುವ ಸಾಹಸ. ಆ ವೇಳೆಗೆ 'ಸಾಕಪ್ಪಾ, ಸಾಕು' ಎನ್ನುವಷ್ಟು ಸುಸ್ತಾಗಿರುತ್ತದೆ. 'ಮನೆಗೆ ಹೋಗಿ ಮಲಗಿದರೆ ಸಾಕು' ಎಂದುಕೊಳ್ಳುತ್ತೀರಿ.

ಅದೇ – ಇನ್ನೊಂದು ವ್ಯವಸ್ಥೆ: ಮ್ಯಾಚ್ ಮುಗಿದ ಕೂಡಲೇ ಎಲ್ಲರೂ ಕ್ರಮಬದ್ಧವಾಗಿ ಇಬ್ಬಿಬ್ಬರಂತೆ ಸಾಲಾಗಿ ಹೊರಬರುವುದು. ನೂಕು-ನುಗ್ಗಲಿಲ್ಲ. ಪಕ್ಕದವನ ಜೊತೆ ಮ್ಯಾಚಿನ ವಿಷಯ ಮಾತಾಡಿಕೊಂಡು ಹೊರ ಬಂದದ್ದೇ ನಿಮಗೆ ಗೊತ್ತಾಗುವುದಿಲ್ಲ! ಆರಾಮವಾಗಿ ಮನೆಗೆ ಹೋಗಿ ಹೆಂಡತಿಗೆ ಕೊಟ್ಟ ಮಾತನ್ನೂ ಉಳಿಸಿಕೊಳ್ಳಬಹುದು!

ಈ ಎರಡನೇ ವ್ಯವಸ್ಥೆಯೇ ವಿದ್ಯುತ್ ಸಂವಹನ ಕ್ಷೇತ್ರದಲ್ಲಿ 'ಅತಿವಾಹಕತೆ'. ವಿದ್ಯುತ್ತಿನ ಅಪವ್ಯಯವಿಲ್ಲ. ವಿಳಂಬವೂ ಇಲ್ಲ.

ಆದರೆ ಈ ರೀತಿ ವಿದ್ಯುತ್ತನ್ನು ಸಾಗಿಸಲು ಸಂಬಂಧಪಟ್ಟ ಸಾಮಗ್ರಿ 'ಅತಿವಾಹಕ'ವಾಗಿರಬೇಕು. ಅದೇ ಈಗಿನ ಸಮಸ್ಯೆ. ಇದುವರೆಗೆ ಈಗಿನ ವ್ಯವಸ್ಥೆಯಲ್ಲಿ ವಿದ್ಯುತ್ತನ್ನು ಸಾಗಿಸುತ್ತಿರುವುದರಿಂದ, ಜಗತ್ತಿನಲ್ಲಿ ಇದುವರೆಗೆ ಉತ್ಪಾದಿಸಲ್ಪಟ್ಟ ವಿದ್ಯುತ್ತಿನಲ್ಲಿ ಶೇಕಡಾ 50 ರಷ್ಟು ಅಪವ್ಯಯವಾಗಿದೆಯಂತೆ! ಅದಕ್ಕೇ ಈ ಸಂಶೋಧನೆಗೆ ಇಷ್ಟು ಮಹತ್ವ!

ಸಾಧಿಸುವುದು ಹೇಗೆ?

ಹಾಗಾದರೆ ವಿದ್ಯುತ್ತನ್ನು ಈ ರೀತಿ ಸಾಗಿಸುವಂತೆ ಒಂದು ವಸ್ತುವನ್ನು ಮಾಡುವುದು ಹೇಗೆ?

ಈ ಬಗ್ಗೆ ಸಂಶೋಧನೆ ಆರಂಭವಾದದ್ದು ಈ ಶತಮಾನದ ಆದಿಯಲ್ಲಿ. 1911ರಲ್ಲಿ ಡಚ್ ಭೌತ ವಿಜ್ಞಾನಿ ಕ್ಯಾಮರ್‌ಲಿಂಗ್ ಓನ್ಸ್, ಪಾದರಸವನ್ನು -273 ಡಿಗ್ರಿ ಸೆಂಟಿಗ್ರೇಡ್‌ಗೆ ಹತ್ತಿರ ಕೊಂಡೊಯ್ದಾಗ ಅದು ವಿದ್ಯುತ್ತನ್ನು ಪ್ರತಿರೋಧವಿಲ್ಲದೆ ಸಾಗಿಸಿದ್ದು ಕಂಡು ಬಂದಿತು.

ಎಂದರೆ, ಹೀಲಿಯಂ ಅನಿಲ ದ್ರವವಾಗುವ ಉಷ್ಣಾಂಶದಲ್ಲೇ ಈ ಸಂಶೋಧನೆ ನಡೆಯಬೇಕು ಎಂದಾಯಿತು. ದ್ರವರೂಪಿ ಹೀಲಿಯಂನಲ್ಲಿ ಲೋಹಗಳನ್ನು ಅದ್ದಿದಾಗ ಅವು 'ಅತಿವಾಹಕ'ಗಳಾಗಿದ್ದು ಕಂಡುಬಂದಿತು. ಈ ಲೋಹಗಳೂ ದುಬಾರಿ. ದ್ರವರೂಪಿ ಹೀಲಿಯಂ ಅಂತೂ ಬಡ ವಿಜ್ಞಾನಿಗೆ ಕನಸಿನ 'ಅಮೃತ'ವೇ! ಹೀಗಾಗಿ ಈ ಬಗ್ಗೆ ಆಗ ವಿಜ್ಞಾನಿಗಳ ಆಸಕ್ತಿ ಕುಂದಿದ್ದು ಸಹಜ.

ಆದರೆ ಕೆಲವು ದಶಕಗಳಲ್ಲೇ, ಅತಿವಾಹಕತೆ ಸಾಧಿಸಲು ಲೋಹವನ್ನು ದ್ರವರೂಪಿ ಹೀಲಿಯಂನಲ್ಲೇ ಅದ್ದಬೇಕಾಗಿಲ್ಲ; ದ್ರವರೂಪಿ ನೈಟ್ರೋಜನ್ ಆದರೂ ಸಾಕು ಎಂದು ಪತ್ತೆಯಾಯಿತು. ಇದರಿಂದ ವೆಚ್ಚ ಎಷ್ಟು ಕುಗ್ಗಿತೆಂದರೆ— ಈಗಿನ ದರಗಳಲ್ಲಿ ಬಿಟಿಎಸ್ ಬಸ್‌ಗೆ ಕೊಡುವ ದರದಲ್ಲೇ ಟ್ಯಾಕ್ಸಿಯಲ್ಲಿ ಓಡಾಡುವಷ್ಟು— ತಗ್ಗಿಬಿಟ್ಟಿತು!

ಮುಂದಿನ ಕ್ರಮ ಅತಿವಾಹಕತೆಗೆ ಅಗತ್ಯವಾದ ಉಷ್ಣಾಂಶವನ್ನು ಹೆಚ್ಚಿಸುವಂಥದು. ಏಕೆಂದರೆ -273 ಡಿಗ್ರಿ ಸೆಂಟಿಗ್ರೇಡ್ ನಮ್ಮಂಥವರ ಊಹೆಗೂ ನಿಲುಕುವಂಥದಲ್ಲ. ಕೇವಲ ಪ್ರಯೋಗಾಲಯಗಳಲ್ಲಿ, ಅದೂ ಅತಿ ಕಷ್ಟಪಟ್ಟು, ಭಾರಿ ವೆಚ್ಚದಲ್ಲಿ ಈ ಕತ್ತರಿಸುವ ಕನಿಷ್ಠ ಉಷ್ಣಾಂಶ ಸಾಧಿಸುವುದು ಕೇವಲ ವೈಜ್ಞಾನಿಕ ಖಯಾಲಿಯಾಗುತ್ತದಷ್ಟೆ. ಈ ಸಂಶೋಧನೆಯ ಫಲವನ್ನು ನಮ್ಮ ಬಳಿಗೆ ತರಬೇಕಾದರೆ, ನಮ್ಮ ದಿನನಿತ್ಯದ ಉಷ್ಣಾಂಶಕ್ಕೆ ಹತ್ತಿರವಾದ ಉಷ್ಣಾಂಶದಲ್ಲೇ ಅದನ್ನು ಸಾಧಿಸಬೇಕು. ಇದು ವಿಜ್ಞಾನಿಗಳ ಮುಂದಿನ ಪ್ರಶ್ನೆಯಾಯಿತು.

ಜ್ಯೂರಿಕ್‌ನ ವಿಜ್ಞಾನ ವಿಜ್ಞಾನಿ ಕಾರ್ಲ್ ಅಲೆಕ್ಸ್ ಮುಲ್ಲರ್ 1977ರಲ್ಲಿ -250 ಡಿ.ಸೆ. ಉಷ್ಣಾಂಶದಲ್ಲಿ ಒಂದು ನಿರ್ದಿಷ್ಟ ವಸ್ತು ಅತಿವಾಹಕವಾಯಿತೆಂದು ಪ್ರಕಟಿಸಿದ. ಅವನು ಪ್ರಕಟಿಸಿದ ಆ ನಿರ್ದಿಷ್ಟ ವಸ್ತು ಪಿಂಗಾಣಿಯಾಗಿತ್ತು! ಇದುವರೆಗೆ ಪಿಂಗಾಣಿ (ceramics) ವಿದ್ಯುತ್ ಪ್ರವಾಹ ತಡೆಯುವ ವಸ್ತು ಎಂದು ಪರಿಗಣಿಸಿ ಇನ್ಸುಲೇಟರ್‌ಗಳ ತಯಾರಿಕೆಗಾಗಿ ಅದನ್ನು ಬಳಸಲಾಗುತ್ತಿತ್ತು. ಈಗ ಅದೇ ವಸ್ತು ಅತಿವಾಹಕವಾಗಬಲ್ಲದೆಂದರೆ? ವಿಜ್ಞಾನಿಗಳು ನಕ್ಕುಬಿಟ್ಟರು. ಜಪಾನ್-ಚೀನಿ ವಿಜ್ಞಾನಿಗಳು ನಗಲಿಲ್ಲ. ಅದನ್ನು ಗಂಭೀರವಾಗಿ ಪರಿಗಣಿಸಿ ತಮ್ಮ ಪ್ರಯೋಗಾಲಯಗಳಲ್ಲಿ ಸಂಶೋಧನೆ ಆರಂಭಿಸಿದರು. ಏಕೆಂದರೆ ಚೀನ-ಜಪಾನ್-ಭಾರತದ ಭೌಗೋಳಿಕ ಪ್ರದೇಶದಲ್ಲಿ ಯಥೇಚ್ಛವಾಗಿ ದೊರೆಯುವ ಸರಕು ಸಿರಾಮಿಕ್. ಬೆಳ್ಳಿ-ತಾಮ್ರದಂಥ ದುಬಾರಿಯ ಮಾಧ್ಯಮಕ್ಕಿಂತ ಮನೆ ಹಿತ್ತಲಲ್ಲಿ ಬಿದ್ದಿರುವ ಈ ಕಚ್ಚಾವಸ್ತು ಅತಿವಾಹಕವಾಗುವುದಾದರೆ ನಿಜಕ್ಕೂ ಬಡವ ನಿಧಿಯನ್ನೇ ಎಡವಿದಂತೆ. ಎಂದೇ ಭಾರತೀಯ ವಿಜ್ಞಾನಿಗಳ ಇಡೀ ಗಮನ ಅತಿವಾಹಕತೆ ಕಡೆ ಹೊರಳಿತು.

ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡಲು ಸಿದ್ಧವಾಗುತ್ತಿದ್ದ ತಂತ್ರಜ್ಞಾನಾಸಕ್ತ ಪ್ರಧಾನಿ ರಾಜೀವ್‌ಗಾಂಧಿ ಅವರಿಗೆ, ಆ ನಿಟ್ಟಿನಲ್ಲಿ ಅತಿವಾಹಕತೆಗಿಂತ ಒಳ್ಳೆ ಹೆಜ್ಜೆ ಬೇರೊಂದಿಲ್ಲ ಎನಿಸಿದ್ದರೆ ಆಶ್ಚರ್ಯವೇನಿಲ್ಲ. ಅವರ ನೇತೃತ್ವದ ವಿಶೇಷಾಧಿಕಾರದ ಮಂಡಳಿಯೊಂದು ರಚಿತವಾಗಿ ಅತಿವಾಹಕತೆ ಕುರಿತ ಸಂಶೋಧನೆಗಳಿಗೆ ಉತ್ತೇಜನ ನೀಡುತ್ತಿದೆ.

ಈಗ ಭಾರತದ ವಿಜ್ಞಾನಿಗಳ ಮುಂದಿರುವ ಪ್ರಶ್ನೆ ಎರಡು: ಮೊದಲನೆಯದಾಗಿ, ಸಾಮಾನ್ಯ ಕೋಣೆಯ ಉಷ್ಣಾಂಶದಲ್ಲೇ ಒಂದು ವಸ್ತುವನ್ನು ಅತಿವಾಹಕವಾಗುವಂತೆ ಮಾಡುವುದು ಹೇಗೆ? ಎರಡನೆಯದಾಗಿ, ಬಿಡಿ ಚೂರುಚೂರಾಗಿರುವ ಸಿರಾಮಿಕ್ ಅನ್ನು ಬಳಸುವ ತಂತಿಗಳನ್ನಾಗಿ ಮಾಡುವುದು ಹೇಗೆ? ಈ ಪ್ರಶ್ನೆಗಳಿಗೆ ಈ ದಶಕದಲ್ಲೇ ಅವರು ಉತ್ತರ ಕಂಡುಕೊಳ್ಳುವ ಸಂಭವವಿದೆ. ●

> ★ **1913 ರಿಂದ 1987ರ ಸೆಪ್ಟೆಂಬರ್‌ವರೆಗೆ 'ಅತಿವಾಹಕತೆ' ಕುರಿತ ಸಂಶೋಧನೆಗಳಿಗಾಗಿ** ಒಂಬತ್ತು ಮಂದಿ ವಿಜ್ಞಾನಿಗಳಿಗೆ ನೊಬೆಲ್ ಪ್ರಶಸ್ತಿ ದೊರೆತಿದೆ. ಕಳೆದ ವರ್ಷ ಅತಿವಾಹಕ ಸಂಶೋಧನೆಗಾಗಿ ನೀಡಲಾದ ನೊಬೆಲ್ ಪ್ರಶಸ್ತಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ|| ಸಿ.ಎನ್.ಆರ್. ರಾವ್ ಅವರಿಗೇ ಲಭಿಸಬೇಕಿತ್ತು, ಸ್ವಲ್ಪದರಲ್ಲಿ ತಪ್ಪಿತು ಎಂಬುದು ವಿಜ್ಞಾನ ವಲಯಗಳಲ್ಲಿ ಕೇಳಿಬರುತ್ತಿರುವ ಮಾತು.

ದೇವರ ಸೇವಕ

"ನಾನು ಖುದಾಯಿ ಖಿದಮತಗಾರ. ದೇವರ ಸೇವೆಯ (ಖಿದಮ್ಮತ್) ಅವಶ್ಯಕತೆಯಿಲ್ಲದ್ದರಿಂದ ದೇವರ ಸೃಷ್ಟಿಯಾದ ಜೀವಿಗಳ ಸೇವೆಯೇ ಆತನ ಸೇವೆಯಾಗಿದೆ. ಆದ್ದರಿಂದ ನಾನು ಮಾನವರ ಸೇವೆಯನ್ನು ಯಾವ ಸ್ವಾರ್ಥವೂ ಇಲ್ಲದೆ, ಯಾವ ಆಶೆಯೂ ಇಲ್ಲದೆ ಕೇವಲ ದೇವರ ಪ್ರೀತ್ಯರ್ಥ ಮಾಡುತ್ತೇನೆ."

"ನಾನು ಹಿಂಸೆಯನ್ನು ಮಾಡುವುದಿಲ್ಲ. ಯಾವ ಬಗೆಯ ಸೇಡನ್ನು ತೀರಿಸಿಕೊಳ್ಳುವುದಿಲ್ಲ. ನನ್ನ ಮೇಲೆ ಯಾರೇ ಆಗಲಿ ಅತ್ಯಾಚಾರ ಮಾಡಿದರೂ ನಾನು ಅವರನ್ನು ಕ್ಷಮಿಸುತ್ತೇನೆ. ನಾನು ಪಕ್ಷ ಪಂಗಡಗಳ ಹೋರಾಟದಲ್ಲಿ, ಯಾದವೀ ಯುದ್ಧಗಳಲ್ಲಿ ಭಾಗವಹಿಸುವುದಿಲ್ಲ. ಪ್ರತಿಯೊಬ್ಬ ಫಖ್ತೂನನನ್ನು ನನ್ನ ಬಂಧುವೆಂದು ತಿಳಿಯುತ್ತೇನೆ. ತಪ್ಪುರೂಢಿ ಪದ್ಧತಿಗಳನ್ನು ತ್ಯಜಿಸುತ್ತೇನೆ. ಸರಳ ಜೀವನ ನಡೆಸಿ ನ್ಯಾಯವಾದ ಕೆಲಸಗಳನ್ನು ಮಾಡುತ್ತೇನೆ."

1929ರಲ್ಲಿ ಖಾನ್ ಅಬ್ದುಲ್ ಗಫಾರಖಾನ್ ಸ್ಥಾಪಿಸಿದ ಖುದಾಯಿ ಖಿದಮತಗಾರ್ ಸಂಘಟನೆಯನ್ನು ಸೇರುವ ಪ್ರತಿಯೊಬ್ಬ ಫಖ್ತೂನ್‌ಪಠಾಣನೂ ಈ ಎರಡೂ ಪ್ರತಿಜ್ಞೆಗಳನ್ನು ಕೈಕೊಂಡು ಅವುಗಳಿಗೆ ಬದ್ಧನಾಗಿ ಉಳಿಯಬೇಕಾಗಿತ್ತು. ಇತರರಿಂದ ಪ್ರತ್ಯೇಕವಾಗಿ ಎದ್ದು ಕಾಣುವಂತೆ ಇವರೆಲ್ಲ ಕೆಂಪಂಗಿಯನ್ನು ತೊಡತ್ತಿದ್ದರು. ಅಂತೆಯೇ ಇವರ ಧುರೀಣ ಗಫಾರ ಖಾನರನ್ನು ಜನರು ಸಾಮಾನ್ಯವಾಗಿ 'ಕೆಂಪಂಗಿ ಧುರೀಣ'ನೆಂದೂ ಗುರುತಿಸುತ್ತಿದ್ದರು.

ಅಹಿಂಸೆಯನ್ನು, ಪ್ರತೀಕಾರ ಭಾವನೆಯ ತ್ಯಾಗವನ್ನು ತಮ್ಮ ಜೀವನಧರ್ಮವೆಂಬಂತೆ ಸ್ವೀಕರಿಸಿದ ಕೆಂಪಂಗಿಯ ಸ್ವಯಂಸೇವಕರ ಈ ಪ್ರತಿಜ್ಞೆಗಳಿಗೆ ಮಹತ್ವ ಪ್ರಾಪ್ತವಾಗುವುದು ಅವುಗಳನ್ನು ಸ್ವೀಕರಿಸಿದವರು ಪಠಾಣರು ಎಂಬ ಕಾರಣಕ್ಕಾಗಿ. ಹಿಂದುಕುಶ್ ಪರ್ವತವನ್ನಾವರಿಸಿರುವ ವಾಯುವ್ಯ ಗಡಿನಾಡು ಪ್ರಾಂತದಲ್ಲೂ ನೆರೆಯ ಅಫಗಾನಿಸ್ತಾನದಲ್ಲೂ ವಾಸವಾಗಿರುವ ಪಠಾಣ ಜನಾಂಗದ ಜೀವನದಲ್ಲಿ ಹಿಂಸೆ ಪ್ರತೀಕಾರಗಳು ಹಾಸು ಹೊಕ್ಕಾಗಿ ಬೆರೆತು ಅಳವಾಗಿ ಬೇರೂರಿಬಿಟ್ಟಿವೆ. ವೃದ್ಧರಿಗೆ ಊರುಗೋಲು ಎಷ್ಟು ಸ್ವಾಭಾವಿಕವೋ ಪಠಾಣರಿಗೆ ಬಂದೂಕು ಅಷ್ಟೇ ಸ್ವಾಭಾವಿಕ.


ಈ ಜನಾಂಗದ ನಾಯಕನಾಗಿ ಆಮೂಲಾಗ್ರ ಹೃದಯ ಪರಿವರ್ತನಕ್ಕೆ ಕಾರಣನಾದ ವ್ಯಕ್ತಿಯೇ ಗಫಾರಖಾನರು. ಫಖ್ತೂನರು ಅವರನ್ನು ಬಾದಶಾಖಾನರೆಂದು ಮಮತೆಯಿಂದ ಕರೆದರೆ ಭಾರತವಿಡೀ ಅವರನ್ನು ಗಡಿನಾಡ ಗಾಂಧಿ ಎಂದು ಗುರುತಿಸಿತು. ಕಾಂಗ್ರೆಸ್ಸು ಮಹಾತ್ಮಾಜಿಯ ಹಿರಿತನದಲ್ಲಿ ಸ್ವಾತಂತ್ರ್ಯಾಂದೋಲನದಲ್ಲಿ ತೊಡಗಿದ್ದಾಗ ಗಫಾರಖಾನರೂ ಅದರಲ್ಲಿ ಧುಮುಕಿ ಮಂಚೂಣಿಯಲ್ಲಿದ್ದರಾದರೂ ಅವರು ತಮ್ಮೆಲ್ಲ ತತ್ವಾನುಷ್ಠಾನಕ್ಕೆ ತಮ್ಮ ಪ್ರಾಂತವನ್ನು ಫಖ್ತೂನ ಜನಾಂಗವನ್ನು



ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು.

ಬಾದಶಾಖಾನ ಹಿಂದು ಮುಸಲ್ಮಾನರು ಎರಡು ಪ್ರತ್ಯೇಕ ರಾಷ್ಟ್ರಗಳೆಂಬ ವಾದವನ್ನು ಸ್ಪಷ್ಟವಾಗಿ ನಿರಾಕರಿಸಿದರು. ಅವರ ನಿಷ್ಠೆಗೆ ವ್ಯತಿರಿಕ್ತವಾಗಿ ರಾಷ್ಟ್ರ ವಿಭಜನೆಯಾದಾಗ ಅವರಲ್ಲಿಯ ಸಾತ್ವಿಕ ಸಂತಾಪ ಸಿಡಿದೆದ್ದು "ನಮ್ಮನ್ನೆಲ್ಲ ತೋಳಗಳ ಬಾಯಿಗೆ ಬಲಿ ಕೊಟ್ಟಿರಿ" ಎಂದು ಅವರು ಕಾಂಗ್ರೆಸ್ ಧುರೀಣರನ್ನು ದೂರಿದರಾದರೂ ಭಾರತದೊಂದಿಗಿನ ಭಾವನಾತ್ಮಕ ಸಂಬಂಧಕ್ಕೆನಿತೂ ಚ್ಯುತಿ ಬರಲಿಲ್ಲ. ಅವರ ಪ್ರಾಂತ ಪಾಕಿಸ್ತಾನದ ಭಾಗವಾದ ನಂತರ ಆ ಮುಂಚೆ ಪಾಕಿಸ್ತಾನದ ನಿರ್ಮಾಣವನ್ನೇ ವಿರೊಧಿಸಿದ್ದ ಅವರು ಆ ದೇಶವನ್ನೇ ತೊರೆಯಬಹುದಿತ್ತು. ಆದರೆ ಅವರ ವಿವೇಕ ಅದನ್ನೊಪ್ಪಲಿಲ್ಲ. ಅವರು ಪಾಕಿಸ್ತಾನದ ನಾಗರೀಕನಾಗಿ ಅಲ್ಲಿಯೇ ಉಳಿಯಲು ನಿರ್ಧರಿಸಿದರು. ಆದರೆ ಪಾಕಿಸ್ತಾನ ನಿಷ್ಠೆ ಮತ್ತು ಭಾರತ ವಿರೋಧಗಳೆರಡು ಒಂದೇ ನಾಣ್ಯದ ಎರಡು ಮುಖಗಳೆಂದು ಅವರು ಒಪ್ಪಲಿಲ್ಲ. ಆದ್ದರಿಂದ ಪಾಕಿಸ್ತಾನದ ನಾಯಕರು ಅವರನ್ನು ನಂಬಲಿಲ್ಲ. ದೇಶ ಸ್ವಾತಂತ್ರ್ಯವಾದ ನಂತರವೂ ಈ ಸ್ವಾತಂತ್ರ್ಯ ಯೋಧ 15 ವರುಷ ಪಾಕಿಸ್ತಾನದ ಸೆರೆಮನೆಗಳಲ್ಲಿ ಕಳೆಯಬೇಕಾಯಿತು. ಅದಕ್ಕೆ ಮುಂಚೆ 15 ವರುಷ ಅವರು ಬ್ರಿಟಿಷರ ಸೆರೆ ಮನೆಗಳಲ್ಲಿ ಅತಿಥಿಯಾಗಿದ್ದರು. ಪಾಕಿಸ್ತಾನದ ಆಳುವ ವರ್ಗಕ್ಕೆ ಬೇಡವಾಗಿ ಅನೇಕ ವರ್ಷಗಳನ್ನು ಅವರು ಅಫಘಾನಿಸ್ತಾನದ ಜಲಾಲಾಬಾದಿನಲ್ಲಿ ಕಳೆಯಬೇಕಾಯಿತು. ಆದರೆ ಎಲ್ಲೆಲ್ಲೂ ಅವರು ಗೌರವಾನ್ವಿತ ಹಿರಿಯರಾಗಿ ಬಾಳಿದರು. ಆದರೆ ಅವರ ಆದರ್ಶಗಳಿಗೆ ಸರಿದೊರೆಯಾಗಿ ನಿಲ್ಲಲು ಭಾರತ ಪಾಕಿಸ್ತಾನಗಳೆರಡಕ್ಕೂ ಸಾಧ್ಯವಾಗಲಿಲ್ಲ. ಗಾಂಧೀಜಿಯ ಕನಸು ಅವರ ಐಹಿಕ ಶರೀರದೊಂದಿಗೆಯೇ ಭೂತಕಾಲದಲ್ಲಿ ಲೀನವಾಗಿ ಹೋದಂತೆ ಗಾಂಧೀಯುಗದೊಂದಿಗೆ ಕೊಂಡಿಯಾಗಿ ಉಳಿದುಕೊಂಡು ಬಂದಿದ್ದ ಗಡಿನಾಡ ಗಾಂಧಿಗೆ ಅವರ ಅನಾರೋಗ್ಯದ ಸಂದರ್ಭದಲ್ಲಿ ತುರ್ತಾಗಿ ನೀಡಿ ರಾಷ್ಟ್ರ ನೀಡಬಹುದಾದ ಅತ್ಯುಚ್ಚ ಗೌರವವಾದ 'ಭಾರತ ರತ್ನ'ವನ್ನು ಸಲ್ಲಿಸಿ ನಮ್ಮ ಪಾಲಿನ ಕರ್ತವ್ಯವನ್ನು ಪೂರೈಸಿದಂತಾಗಿದೆ. ಆದರೆ ಅಹಿಂಸೆಯ ಅಪರಾವತಾರವಾಗಿದ್ದ ಮನುಕುಲದ ವಿನಮ್ರ ಸೇವಕನಾಗಿದ್ದ ಆ ಮಹಾತ್ಮನ ಋಣದಿಂದ ಈ ಉಪಖಂಡ ಇಷ್ಟೊಂದು ಸುಲಭದಲ್ಲಿ ಮುಕ್ತವಾಗಲಾರದು. ಅವರು ಪಖ್ತೂನ ಸಮಾಜವನ್ನು ಕಣ್ಣೆದುರಿಸಿಕೊಂಡು ಕಂಡ ಕನಸು ವ್ಯಾಪಕ ಅರ್ಥದಲ್ಲಿ ಜಗತ್ತಿಗೇ ಅನ್ವಯವಾಗುತ್ತದೆ. ನಾಳೆ ಜಗತ್ತಿಗೆ ಅನ್ವಯಿಸಬೇಕಾದ್ದನ್ನು ಇಂದು ಭಾರತ-ಪಾಕಿಸ್ತಾಗಳಿಗೆ ಕಲಿಸಲು ಸಾಧ್ಯವಾದರೆ ಸ್ವರ್ಗದಲ್ಲಿ ಗಡಿನಾಡ ಗಾಂಧಿಯ ಮುಖದಲ್ಲಿ ಮಂದಸ್ಮಿತ ಅರಳೀತು. ●

■ ಎಂ.ಟಿ.ವಿ. ಆಚಾರ್ಯ



ಭಾರತೀಯ ಚಿತ್ರಕಲೆಯ ಪರಂಪರೆ

ಚಿತ್ರಿಸುವುದು ಮಾನವನ ಸಹಜ ಪ್ರವೃತ್ತಿ. ಭಾಷೆ ಮತ್ತು ಲಿಪಿಗೂ ಚಿತ್ರಕಲೆಯೇ ಮೂಲ. ಮಾನವನು ಶಿಲಾಯುಗದ ಕಾಲದಿಂದಲೆ ಕಲೆ ಹಾಗು ಭಾಷೆಯನ್ನು ಕೈಗೂಡಿಸಿಕೊಳ್ಳುತ್ತ ಮುನ್ನಡೆದಿದ್ದಾನೆ. ತನ್ನ ಅನುಭವಗಳನ್ನು ಗುಹೆಯ ಗೋಡೆಗಳ ಮೇಲೆ ಕೆತ್ತಿ ಚಿತ್ರಿಸಿದ್ದಾನೆ. ಭಾವನೆಗಳಿಗೆ ಮೂರ್ತ ರೂಪ ನೀಡಿದ್ದಾನೆ.

ಮಾನವ ಸಂಘ ಜೀವಿಯಾದನಂತರ ಬುದ್ಧಿಯ ವಿಕಾಸದಿಂದ ತನ್ನ ಸಾಮಾಜಿಕ ಜೀವನದ ಸುಭದ್ರತೆ ಮತ್ತು ಶಾಂತಿಗಾಗಿ ಅನುಭವದಿಂದ ಜನಿಸಿದ ಅನೇಕ ರೂಢಮೂಲ ನೀತಿ ಸಂಪ್ರದಾಯಗಳನ್ನು ಅನುಸರಿಸುತ್ತಾ ನಾಗರಿಕತೆಯನ್ನು ಸಂಪಾದಿಸಿದ.

ಕಲೆ ಹಾಗೂ ಸಂಸ್ಕೃತಿಗಳು ಹಲವಾರು ವರ್ಷಗಳ ಅನುಭವದ ಸಾರ ಸಂಗ್ರಹ. ಜೀವನಾನುಭವದ ಕುಲುಮೆಯಿಂದ ಸತ್ಯಾನ್ವೇಷಣೆಯ ವೈಚಾರಿಕ ಜ್ಞಾನದಿಂದ ಉಂಟಾದ ಪರಿಪಾಕವೇ ಅದು. ಕಲೆಯಲ್ಲಿ ವ್ಯಕ್ತವಾಗತಕ್ಕ ಅಂಶವೂ ಈ ಅನುಭವದ ಸಾರವೇ.

ಪ್ರಕೃತಿಯ ಮಡಿಲಲ್ಲಿ ಹುಟ್ಟಿದ ಕಲಾವಿದ ತನ್ನ ವಿಮರ್ಶೆ ಹಾಗೂ ಭಾವನಾತ್ಮಕ ವಿವೇಚನೆಯಿಂದ ಸೃಷ್ಟಿಯ ಮೂಲವನ್ನು ಕೆದಕುತ್ತಾನೆ. ಈ ಬ್ರಹ್ಮಾಂಡದ ಶಿಸ್ತುಬದ್ಧ ಚಲನೆ, ರಚನೆಗಳನ್ನು ಶೋಧಿಸುತ್ತಾನೆ. ಸೃಷ್ಟಿಯ ಅದ್ಭುತದ ಮುಂದೆ ಮಾನವ ಬುದ್ಧಿಯ ಸಂಕುಚಿತತನವನ್ನೂ ಅರಿಯುತ್ತಾನೆ. ತಾನು ಈ ಸೃಷ್ಟಿಯ ಹಾಗೂ ಸಮಾಜದ ಒಂದು ಅಂಗ ಮಾತ್ರ. ಸಮಾಜದ ಹಿತವೇ ತನ್ನ ಹಿತ ಎಂಬ ತಿಳಿವಳಿಕೆಯಿಂದ, ಮನಸ್ಸಿನ ಭಾವನಾತ್ಮಕ ಪರಿಪಕ್ವತೆಯಿಂದ ಸಾಮಾಜಿಕ ಹಿತಕ್ಕಾಗಿ ಆತನ ಹೃದಯದಿಂದ ಹೊರ ಹೊಮ್ಮಿದ ಕ್ರಿಯಾತ್ಮಕ ಅಭಿವ್ಯಕ್ತಿ ನಿರೂಪಣೆಯೇ ಶ್ರೇಷ್ಠ ಕಲೆಯಾಗಿ ಪರಿಣಮಿಸುತ್ತದೆ.

ಜ್ಞಾನಾನುಭವದ ಕುಲುಮೆಯಿಂದ ಕಲಾಕೃತಿಗಳನ್ನು ರಚಿಸಿ, ತನ್ನ ಭಾವನಾನಂದವನ್ನು ಇತರರೊಡನೆ ಹಂಚಿಕೊಂಡಾಗ ಮಾತ್ರ ಕಲಾವಿದನಿಗೆ ಆತ್ಮತೃಪ್ತಿ. ಭಾರತೀಯ ಚಿತ್ರಕಲೆಗೆ ವಿಶಿಷ್ಟ ಪರಂಪರೆಯಿದೆ. ಮೊದಮೊದಲು ರಾಜಾಶ್ರಯ, ಶ್ರೀಮಂತರ ಸೌಧಗಳು ಹಾಗೂ ಧರ್ಮಾಸಕ್ತರ ಮಠಗಳಲ್ಲಿ ಅಲಂಕಾರಕ್ಕಾಗಿ ಭಿತ್ತಿ ಚಿತ್ರಗಳು ಪ್ರಧಾನವಾಗಿ ರಚಿಸಲ್ಪಟ್ಟವು. ಸದಭಿರುಚಿ ಹಾಗೂ ಶ್ರೀಮಂತಿಕೆಯ ಪ್ರಭಾವದಿಂದ ಜಾನಪದ ಕಲೆ, ಚಿತ್ರಕಲೆ, ಶಿಲ್ಪಕಲೆ, ಲೋಹ ಕಲೆಗಳೂ ಅಭಿವೃದ್ಧಿಗೊಂಡವು. ಇದರಿಂದ ವೃತ್ತಿನಿರತ ಕಲಾವಿದರ ಸೃಷ್ಟಿಯಾಯಿತು.

ಚಿತ್ರಕಲೆಯೂ ಒಂದು ಅಧ್ಯಯನಯೋಗ್ಯ ಶಾಸ್ತ್ರವಾಯಿತು. ಶಾಸ್ತ್ರ ಗ್ರಂಥಗಳ ರಚನೆಯಾಯಿತು. 'ಚಿತ್ರ ಲಕ್ಷಣ'ವೆಂಬ ಬೌದ್ಧ ಗ್ರಂಥ ಚಿತ್ರಕಲೆಯ ಸಂಪ್ರದಾಯ ವಿಧಿ



ಮುಗ್ಧ ಪ್ರೇಮಿಗಳು

ವಿಧಾನಗಳನ್ನು ನಿರೂಪಿಸಿತು. ಕ್ರಿಸ್ತಶಕ ಮೂರನೆಯ ಶತಮಾನದಲ್ಲಿ ರಚಿತವಾದ ವಾತ್ಸ್ಯಾಯನ ಕಾಮಸೂತ್ರದಲ್ಲಿ ಚಿತ್ರಕಲೆಯ ಷಡಂಗಗಳು ವಿವರಿಸಲ್ಪಟ್ಟಿವೆ. ರೂಪಭೇದ, ಪ್ರಮಾಣ, ಭಾವ, ಲಾವಣ್ಯ, ಯೋಜನೆ ಸಾದೃಶ್ಯ ಹಾಗೂ ವರ್ಣಿಕಾಭಂಗ ಇವೇ ಆ ಷಡಂಗಗಳು. ಕ್ರಿಸ್ತಶಕ ಐದನೆಯ ಶತಮಾನದಲ್ಲಿ ರಚಿಸಲ್ಪಟ್ಟ 'ವಿಷ್ಣು ಧರ್ಮೋತ್ತರಂ' ಎಂಬ ಗ್ರಂಥದಲ್ಲಿ ಭಿತ್ತಿ ಚಿತ್ರಗಳ ರಚನಾ ಕ್ರಮ, ತಂತ್ರಗಳೆಲ್ಲವನ್ನೂ ವಿವರಿಸಲಾಗಿದೆ. ರಾಜ, ದೇವತೆ, ಋಷಿ, ಬ್ರಾಹ್ಮಣ ಹಾಗೂ ಪ್ರಕೃತಿಯ ಚಿತ್ರ ರಚನಾ ಕ್ರಮಗಳನ್ನೂ ಅದರಲ್ಲಿ ವಿವರಿಸಲಾಗಿದೆ.

ಚೀನೀಯರ ಕಲೆಯೂ ಭಾರತದಿಂದಲೇ ಪ್ರಭಾವಿತವಾಗಿ ಷಡಂಗಗಳ ಆಧಾರ ಹೊಂದಿತ್ತೆಂದು ಆರನೆಯ ಶತಮಾನದ ಸೀಹೋ ಅಭಿಪ್ರಾಯಪಟ್ಟಿದ್ದಾನೆ. ಭಾರತೀಯ ಧರ್ಮ ಪ್ರಚಾರಕ ಕಶ್ಯಪಮಾತುಂಗನು ಚೀನೀ ಸಮ್ರಾಟನ ಇಚ್ಛೆಯಂತೆ ಭಾರತೀಯ ಕಲಾಕೃತಿಗಳೊಡನೆ ಚೀನ ದೇಶಕ್ಕೆ ಪ್ರಯಾಣ

ಮಾಡಿದ ಉಲ್ಲೇಖವಿದೆ.

ವಿಶ್ವಕರ್ಮನು ದೇವತೆಗಳ ಶಿಲ್ಪಿ ಎಂಬುದು ಪುರಾಣಯುಗದಿಂದಲೂ ಕಲೆಗೆ ಪ್ರತ್ಯೇಕ ಸ್ಥಾನ ಮಾನವಿದ್ದ ಬಗೆಗೆ ಒಂದು ನಿದರ್ಶನ. ಉಷೆಯು ಕೃಷ್ಣನ ಮೊಮ್ಮಗನಾದ ಅನಿರುದ್ಧನ ಭಾವಚಿತ್ರವನ್ನು ನೋಡಿ ಪ್ರೇಮಿಸಿ ವಿವಾಹ ವಾದಳೆಂಬುದು ಭಾವಚಿತ್ರ ರಚನೆಯ ಉತ್ಕೃಷ್ಟತೆಗೆ ನಿದರ್ಶನ. ಮಹಾಭಾರತದಲ್ಲೂ ಚಿತ್ರರಚನೆ, ವಾಸ್ತುಶಿಲ್ಪಗಳ ಅಸಂಖ್ಯ ಉದಾ ಹರಣೆಗಳು ಸಿಗುತ್ತವೆ.

ಹನ್ನೊಂದನೆಯ ಶತಮಾನದ 'ಅಭಿಲಾಷಿ ತಾರ್ಥ ಚಿಂತಾಮಣಿ' ಗ್ರಂಥದಲ್ಲಿ ವ್ಯಕ್ತಿಚಿತ್ರಣ ವಿದ್ಧ ಕಲೆಯೆಂದೂ ಕಲ್ಪನಾ ಚಿತ್ರ ಅವಿದ್ಧಕಲೆ ಯೆಂದೂ ವರ್ಣಿಸಿದೆ. ವಿದ್ಯಾರಣ್ಯರ 'ಪಂಚ



ಕೃಷ್ಣ-ದೇವಕಿ

ದರ್ಶಿ'ಯಲ್ಲಿ ಚಿತ್ರದ ಮೂಲ ಸಿದ್ಧತೆಯಿಂದ ಹಿಡಿದು ಮುಕ್ತಾಯದವರೆಗೆ ವರ್ಣನೆಯಿದೆ. ನಾರದ ಶಿಲ್ಪ, ಶಿಲ್ಪರತ್ನ, ಕುತ್ತ ನೀಮತ, ಚಿತ್ರ ಸೂತ್ರ, ಮಾನಸಾರಾಗಮ, ಕಾಶ್ಯಪೀಯ, ಶುಕ್ರ ನೀತಿಸಾರ, ಶಿಲ್ಪ ವಿದ್ಯಾ ರಹಸ್ಯೋಪ ನಿಷತ್ ಮುಂತಾದ ಅನೇಕ ಚಿತ್ರಕಲಾ ಶಾಸ್ತ್ರ ಗ್ರಂಥಗಳೂ ಭಾರತೀಯ ಕಲಾ ಸಂಪ್ರದಾಯ ವನ್ನು ಬೆಳೆಸಲು ಕಾರಣವಾಗಿದ್ದವು.

ಭಾರತದಲ್ಲಿ ದೇವಶೈಲಿ, ನಾಗಶೈಲಿ, ಯಕ್ಷ ಶೈಲಿಗಳೆಂಬ ಭೇದಗಳಿದ್ದವು. 'ವಿನಯ ಅಗಮ'ವೆಂಬ ಗ್ರಂಥ ಅಂದಿನ ಕಲಾವಿದರ ಚಿತ್ರಗಳಲ್ಲಿನ ನೈಜ ನಿರೂಪಣೆಯು ನಿಜ ವಸ್ತು ವಿನ ಭ್ರಮೆ ಹುಟ್ಟಿಸುವಷ್ಟು ಸಾದೃಶ್ಯ ಹೊಂದಿ ತ್ತೆಂದೂ ತಿಳಿಸಿದೆ. ಭಾರತೀಯ ಚಿತ್ರಕಲೆ ಯಲ್ಲೂ ನೈಜ ಸಾದೃಶ್ಯ ಅಥವಾ ವಾಸ್ತವಿಕ ತೆಯ ಉನ್ನತ ಆದರ್ಶ ಹಿಂದೆ ಇತ್ತೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಸುಮಾರು ಏಳನೆಯ ಶತಮಾನದವರೆಗೆ ರಚಿಸಲ್ಪಟ್ಟ ಅಜಂತಾ ಚಿತ್ರಕಲಾ ವೈಭವ ಹಾಗೂ ಶ್ರೇಷ್ಠತೆಯನ್ನು ಪಾಶ್ಚಾತ್ಯ ಕಲಾತಜ್ಞ ರಾದ ಲೇಡಿ ಹೆರಿಂಗ್ಹಾಂ, ಮೇಜರ್ ಗಿಲ್, ಜೇಸ್, ಎಚ್ ಕಸಿನ್ಸ್, ವಿನ್ಸೆಂಟ್ ಸ್ಮಿತ್, ಪರ್ಸಿ ಬ್ರೌನ್ ಮುಂತಾದವರೆಲ್ಲರೂ ಮುಕ್ತ ಕಂಠದಿಂದ ಹೊಗಳಿದ್ದಾರೆ. ಅಜಂತಾದಲ್ಲಿ ಇಪ್ಪತ್ತು ಬಗೆಯ ಕಲಾ ಸಂಪ್ರದಾಯಗಳು ಕಂಡುಬರುತ್ತವೆ. ಇವೆಲ್ಲ ಸ್ವತಂತ್ರ ಭಾರತೀಯ ಸಂಪ್ರದಾಯವನ್ನೇ ಎತ್ತಿ ಸಾರುತ್ತಿವೆ ಎಂದು ಲೇಡಿ ಹೆರಿಂಗ್ಹಾಂ ಹೇಳಿದ್ದಾರೆ. ವೈವಿಧ್ಯದ ಸಂಪತ್ತೇ ಭಾರತೀಯ ಕಲೆಯ ಹಿರಿಮೆ.

ಕ್ರಿಸ್ತಶಕ 8ನೆಯ ಶತಮಾನದಿಂದ 12ನೆಯ ಶತಮಾನದವರೆಗೆ ಭಾರತದಲ್ಲಿ ಕಲೆಯು ಅವ ನತಿಯನ್ನು ಗುರುತಿಸಲಾಗಿದೆ. ಇದಕ್ಕೆ ಕಾರಣ ಕಲಾ ಪೋಷಣೆಗೆ ಅಗತ್ಯವಾದ ಯಾವ ದಕ್ಷ ಆಡಳಿತವೂ ಆ ಕಾಲದಲ್ಲಿರಲಿಲ್ಲ. ಭಿತ್ತಿಚಿತ್ರ ಗಳ ನಂತರ 10-11ನೆಯ ಶತಮಾನಗಳಲ್ಲಿ ಜೈನರ ತಾಳೆಗರಿ ಅಥವಾ ಧವಲಾ ಗ್ರಂಥ ಗಳಲ್ಲಿ ಚಿತ್ರರಚನೆ ಬಳಕೆಗೆ ಬಂದಿತು. ಇದಾದ ಮೇಲೆ ಕಾಗದದಲ್ಲಿ ಚಿತ್ರರಚನೆ ಪ್ರಾರಂಭ ವಾಯಿತು. ಮೊಗಲರ ಆಳ್ವಿಕೆ ಪ್ರಾರಂಭ ವಾದಾಗ (ಕ್ರಿಸ್ತಶಕ 1550-1800) ಪರ್ಷಿ ಯದ ಕಲೆ ಬಾಬರನ ಮೂಲಕ ಭಾರತವನ್ನು ಪ್ರವೇಶಿಸಿತು. ಇದು ಮುಂದೆ ಮೊಗಲ್ ಶೈಲಿ ಯಾಯಿತು. ಹಿಂದೂ ರಾಜಪುತ್ರರ ಪೋಷಣೆ ಯಲ್ಲಿ ಜಯಪುರ, ಬಿಕಾನೇರ್, ಉದಯಪುರ ಮುಂತಾದೆಡೆ ರಾಜಪೂತ ಶೈಲಿ, ಕಾಂಗ್ರಾ ಶೈಲಿ, ಪಹಾಡಿ ಶೈಲಿಗಳೆಂದು ಪ್ರಸಿದ್ಧವಾದವು. ರಾಮಾಯಣ, ಭಾಗವತ, ರಾಗ-ರಾಗಿಣಿ ಚಿತ್ರ ಗಳೇ ಇಲ್ಲಿ ಪ್ರಧಾನ. ಕಾವ್ಯಲಕ್ಷಣ ಇವುಗಳ ವಿಶೇಷ.

ಭಾರತೀಯ ಕಲೆಯ ಮೇಲೆ ಬ್ರಿಟಿಶ್ ಆಡ ಳಿತದ ಪ್ರಭಾವ 19ನೆಯ ಶತಮಾನದಿಂದ ಕಂಡುಬರತೊಡಗಿತು. ಮೊದಲಿಗೆ ಬಂದ ಜಾನ್ ಕಂಪನಿಯ ವ್ಯಾಪಾರಸ್ಥರೂ, ನಂತರ ಬ್ರಿಟಿಶ್ ಆಡಳಿತಗಾರರೂ ಪಾಶ್ಚಾತ್ಯ ಕಲಾ ಸಂಪ್ರದಾಯವನ್ನೇ ಭಾರತದಲ್ಲಿ ಬಳಸಲು ಪ್ರೋತ್ಸಾಹಿಸುತ್ತಿದ್ದರು.

ಪಾಶ್ಚಾತ್ಯರ ನೈಜ ಅಕಾಡೆಮಿ ಶೈಲಿಯನ್ನು ಸಮರ್ಥ ರೀತಿಯಲ್ಲಿ ಬಳಸಿ ಅನೇಕ ಜನರಂಜ ನೀಯ ಚಿತ್ರಗಳನ್ನು ರಚಿಸಿದ ಖ್ಯಾತಿ ಮೊದಲಿಗೆ ಕೇರಳದ ರಾಜಾ ರವಿವರ್ಮನಿಗೆ ಸಂದಿದೆ. ಪಾಶ್ಚಾತ್ಯ ಶೈಲಿಯಲ್ಲಿ ಭಾರತೀಯ ವಸ್ತು ವಿಷಯಗಳನ್ನು ಆತ ಚಿತ್ರಿಸಿದ. ಅನೇಕ ಭಾರ ತೀಯ ಕಲಾವಿದರ ಮೇಲೆ ರವಿವರ್ಮನ ಕೃತಿ ಗಳು ಪ್ರಭಾವ ಬೀರಿದವು. ಭಾರತೀಯ ಕಲಾ ಸಂಪ್ರದಾಯವು ಸಂಪೂರ್ಣವಾಗಿ ಮೂಲೆ ಗುಂಪಾಗಿ ಪಾಶ್ಚಾತ್ಯ ಕಲಾ ವೈಭವವು ಇಡೀ ಭಾರತವನ್ನು ಆಕ್ರಮಿಸಿತು.

ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಭಾರತೀಯರ ಸ್ವಾತಂತ್ರ್ಯಕ್ಕಾಗಿ ಆಂದೋಲನ ಆರಂಭವಾದ ನಂತರ ಭಾರತೀಯ ಸಂಸ್ಕೃತಿಯ ಪುನರುತ್ಥಾನ ಚಳವಳಿಯೂ ಪ್ರಾರಂಭವಾಯಿತು. ಲೇಡಿ ಹೆರಿಂಗ್ಹಾಂ, ಇ.ಬಿ. ಹ್ಯಾವೆಲ್ ಮತ್ತಿತರ ಪಾಶ್ಚಾತ್ಯರು ಭಾರತೀಯ ಸಾಂಪ್ರದಾಯಿಕ ಕಲೆ ಹಾಗೂ ಅಜಂತಾ ಶೈಲಿಗಳ ಬಗ್ಗೆ ಗ್ರಂಥಗಳನ್ನು ಪ್ರಕಟಿಸಿದಾಗ ಭಾರತೀಯ ಕಲೆಯ ಶ್ರೇಷ್ಠತೆ ಪ್ರಪಂಚ ಲಕ್ಷ್ಯವನ್ನು ಸೆಳೆಯಿತು.

Statement about ownership and other particulars about Monthly Kasturi, to be published in the first issue every year after the last day of February.

FORM IV

(See Rule 8)

1.	Place of publication	:	Bangalore
2.	Periodicity of its Publication	:	Monthly
3.	Printer's Name whether citizen of India? Address	: : :	M.H. Belgaumkar Yes Samyukta Karnataka, No. 2, Residency Road BANGALORE-25.
4.	Publisher's Name Whether citizen of India? Address	: : :	M.H. Belgaumkar Yes Samyukta Karnataka, No. 2, Residency Road, BANGALORE-25.
5.	Editor's Name Whether citizen of India? Address	: : :	R.A. Upadhya. Yes Samyukta Karnataka. No. 2, Residency Road BANGALORE-25.
6.	Names and address of individuals who own the newspaper and partners or share-holders holding more than one percent of the total capital		Loka Shikshana Trust Koppikar Road, Hubli Board of Trustees Sri B.D. Jatti, Chairman " KSN Adiga. " RA Mundkur " SP Bhat — Trustees " GM Patil

I, M.H. Belgaumkar, hereby declare that the particulars given above are true to the best of my knowledge and belief.

BANGALORE,
Dated 1.3.1988

M.H. Belgaumkar,
Signature of Publisher

1910ರಲ್ಲಿ ಅಜಂತಾ ಕಲೆಯ ಪ್ರತಿಕೃತಿಗಳು ಲಂಡನ್ನಿನಲ್ಲಿ ಮುದ್ರಣಗೊಂಡು ಅನೇಕರ ಕಣ್ಣು ತೆರೆಯಿತು. 1910-11ರ ವೇಳೆಗೆ ಬಂಗಾಳದಲ್ಲಿ ಭಾರತೀಯ ಕಲೆಯ ಪುನರುತ್ಥಾನದ ಕಾರ್ಯ ವ್ಯವಸ್ಥಿತವಾಗಿ ಗರಿಗೂಡಿತು. ಇಂಡಿಯನ್ ಸೊಸೈಟಿ ಆಫ್ ಓರಿಯಂಟಲ್ ಆರ್ಟ್ಸ್ ಸಂಸ್ಥೆ ಅಬನೀಂದ್ರನಾಥ ಟಾಗೋರರ ನೇತೃತ್ವದಲ್ಲಿ ಜನಿಸಿತು. ಅವರ ಶಿಷ್ಯರಾದ ನಂದಲಾಲ ಬಸು, ಅಸಿತ್‌ಕುಮಾರ ಹಾಲ್ದಾರ್, ಗಗನೇಂದ್ರನಾಥ ಟಾಗೋರ್, ಸಮರೇಂದ್ರನಾಥ ಗುಪ್ತ, ಮೈಸೂರಿನ ಕೆ. ವೆಂಕಟಪ್ಪ ಮುಂತಾದವರು ಇದರಲ್ಲಿ ಪಾಲ್ಗೊಂಡು ಭಾರತೀಯ ನವೋದಯ ಕಲಾ ನಿರ್ಮಾಣದ ಪ್ರವರ್ತಕರಾದರು.

ಅಬನೀಂದ್ರರು ಕಲ್ಕತ್ತಾ ಕಲಾಶಾಲೆ, ನಂದಲಾಲಬಸು ಅವರು ಶಾಂತಿನಿಕೇತನ ಕಲಾಶಾಲೆ, ರಾಯಚೌಧುರಿಯವರು ಮದ್ರಾಸಿನ ಕಲಾಶಾಲೆ, ಪ್ರಮೋದಕುಮಾರ ಅವರು ಆಂಧ್ರ ಜಾತೀಯ ಕಲಾಶಾಲೆಯಲ್ಲಿ ಪ್ರಾಧ್ಯಾಪಕರಾಗಿ ಭಾರತೀಯ ನವೋದಯ ಕಲಾ ಸಂಪ್ರದಾಯದಂತೆ ಅನೇಕ ಕಲಾವಿದರನ್ನು ತರಬೇತಿಗೊಳಿಸಿದರು.

ಬಂಗಾಳದ ನೂತನ ಸಂಪ್ರದಾಯ ಶೈಲಿ, ಆಂಧ್ರದ ನೂತನ ಸಂಪ್ರದಾಯ ಶೈಲಿ ಹಾಗೂ ಮದ್ರಾಸಿನ ಸಂಪ್ರದಾಯಗಳು ತಮ್ಮದೇ ಆದ ವೈಶಿಷ್ಟ್ಯವನ್ನು ತೋರಲಾರಂಭಿಸಿದವು. ಈ ಕಾಲಕ್ಕೆ ಪಾಶ್ಚಾತ್ಯ ಅಕಾಡೆಮಿಗಳ ನೈಜ ಶೈಲಿ ಪ್ರೋತ್ಸಾಹಕ ಧೋರಣೆಯ ವಿರುದ್ಧವಾಗಿ ಫ್ರಾನ್ಸಿನಲ್ಲಿ ಕಲಾವಿದರ ಬಂಡಾಯವೆದ್ದು ಮುಕ್ತ ಭಾವನೆಗಳ ನವ್ಯ ಕಲಾ ಸೃಷ್ಟಿ ಆರಂಭವಾಗಿತ್ತು. ಈ ಬಂಡಾಯ ಕ್ರಮೇಣ ಯುರೋಪಿನಾದ್ಯಂತ ಹರಡಲಾರಂಭಿಸಿತು. ಇದರಿಂದ ಅಂದು ಸಾರ್ವತ್ರಿಕವಾಗಿ ಅಕಾಡೆಮಿಯ ನೈಜ ವಾಸ್ತವಿಕ ಶೈಲಿಯನ್ನು ಟೀಕಿಸಿ ನವ್ಯರೂಪಗಳನ್ನು ಪ್ರಶಂಶಿಸಿಸುವುದು ಕಲಾ ವಿಮರ್ಶಕರ ಗುರಿಯಾಯಿತು. ಅಂದು ಹರಡಿದ್ದ ಪಾಶ್ಚಾತ್ಯ ಕಲಾ ಪ್ರಭಾವದಿಂದ ವಿಮುಕ್ತಿಗೊಳಿಸಿ ಭಾರತೀಯತೆಯನ್ನು ಪುನರುದ್ಧಾರಿಸಲು ತೊಡಗಿದ್ದ ಭಾರತೀಯ ಕಲಾವಿಮರ್ಶಕರೂ ಈ ದೃಷ್ಟಿಯಲ್ಲಿ ಹಿಂದುಳಿಯಲಿಲ್ಲ. ಪಾಶ್ಚಾತ್ಯ ಹಾಗೂ ಪೌರಸ್ತ್ಯ ಕಲೆಯೆಂದು ಸ್ಥೂಲವಾಗಿ ವಿಭಾಗಿಸಿ ಭಾರತೀಯ ಸಾಂಪ್ರದಾಯಕ ಕಲೆಯ ಭಾವಪೂರ್ಣ ಆಧ್ಯಾತ್ಮಿಕ ಸೌಂದರ್ಯದ ಆದರ್ಶವನ್ನು ಶ್ಲಾಘಿಸುವುದು ಹಾಗೂ ಪಾಶ್ಚಾತ್ಯ ನೈಜಕಲೆಯ ಭಾವರಹಿತ ಭೌತಿಕ ಸೌಂದರ್ಯ ಕೀಳು ಅಭಿರುಚಿಯದೆಂದು ತೆಗಳುವುದು ಪರಿಪಾಠವಾಯಿತು.



ಗೃಹಲಕ್ಷ್ಮಿ (ಜಲವರ್ಣ ಕೃತಿ)

ಪಾಶ್ಚಾತ್ಯರಲ್ಲಿ ಅಕಾಡೆಮಿಗಳ ಬಿಗಿ ಮುಷ್ಟಿ ಧೋರಣೆಯನ್ನು ಖಂಡಿಸುವ ಸಲುವಾಗಿ ಪಾಶ್ಚಾತ್ಯ ನವ್ಯ ಕಲಾರೂಪಗಳ ಸೃಷ್ಟಿ ಒಂದು ಚಳವಳಿಯಾಗಿ ಮಾರ್ಪಟ್ಟಿತು. ಇದರ ಪ್ರಭಾವ ಭಾರತೀಯ ಕಲಾ ಶೈಲಿಯ ಮೇಲೂ ಆಗಿದೆ. ●

(ಇದೇ ಲೇಖಕರ 'ಕಲೆ ಮತ್ತು ನಾನು' ಪುಸ್ತಕದಿಂದ ಉಧೃತ)

ಇದು ಆ ಇಬ್ಬರ ಕಥೆ

● ಆಂಡ್ರೋ ಪೌಲ್.

ನಾನೀಗ ಬರೆಯುತ್ತಿರುವುದು ಕಸ್ತೂರಿಯ ಕುರಿತು. ಒಬ್ಬಳು ಕಸ್ತೂರಿಯ ಕುರಿತಲ್ಲ. ಇಬ್ಬರು ಕಸ್ತೂರಿಯರನ್ನು ಕುರಿತು! ಇಬ್ಬರನ್ನೂ ಪರಸ್ಪರ ಹೋಲಿಸಿ, ಇಬ್ಬರ ನಡುವೆ ಒಂದು ಕಾಲ್ಪನಿಕ ಸಂಬಂಧವನ್ನು ಸೃಷ್ಟಿಸಿ ಈ ರೀತಿ ಬರೆಯುತ್ತಿರುವೆ. ನಾನು ಈ ಇಬ್ಬರು ಕಸ್ತೂರಿಯರನ್ನು ಪರಸ್ಪರ ಹೋಲಿಸುತ್ತೇನಾದರೂ ಇವಳೇ ಅವಳು ಎಂದೂ ಅವಳೇ ಇವಳು ಎಂದೂ ಹೇಳುವುದಿಲ್ಲ. ಯಾಕೆಂದರೆ ಒಬ್ಬಳು ನನ್ನ ತಂಗಿ, ಮತ್ತೊಬ್ಬಳು ನಮ್ಮ ಮನೆಯ ಹಸು.

ನನ್ನ ತಂಗಿಗೆ ಚಿಕ್ಕಂದಿನಿಂದಲೂ ಸಾಕುಪ್ರಾಣಿಗಳೆಂದರೆ ಪಂಚಪ್ರಾಣ: ನನಗೊ ಅಷ್ಟಕ್ಕಷ್ಟೇ. ತಂದೆ-ತಾಯಿ ಒಮ್ಮೆಯೂ ಅವುಗಳನ್ನು ಮುದ್ದಿಸಿದ್ದನ್ನು ನಾನು ನೋಡಿದ್ದೇ ಇಲ್ಲ. ಹಾಗಿರುವಾಗ ಅವಳಿಗ್ಯಾಕೆ ಈ ಪ್ರಾಣಿಗಳ ಗೀಳು ಅಂಟಿಕೊಂಡಿತೊ? ನನಗಂತೂ ಗೊತ್ತಿಲ್ಲ. ಬಹುಶಃ ಅವಳ ಒಂಟಿತನವೇ ಅವಳನ್ನು ಒಬ್ಬಳು ಪ್ರಾಣಿಪ್ರಿಯಳನ್ನಾಗಿ ಪರಿವರ್ತಿಸಿರಬಹುದು.

ನನಗೂ ಅವಳಿಗೂ ವಯಸ್ಸಿನಲ್ಲಿ ಸುಮಾರು ಹನ್ನೊಂದು ವರ್ಷಗಳ ಅಂತರ. ನಾನು ಹುಟ್ಟಿ ಅನೇಕ ವರ್ಷಗಳವರೆಗೆ ತಾಯಿ ಮತ್ತೆ ಗರ್ಭಿಣಿಯಾಗಲಿಲ್ಲ. ಎಲ್ಲರೂ ಇವಳಿಗೆ ಇನ್ನು ಮಗು ಹುಟ್ಟುವುದಿಲ್ಲ ಎಂದು ವಿಧಿ ಬರೆದರು. ಆದರೆ ಅವರ ಅಭಿಪ್ರಾಯ ತಪ್ಪಾಯಿತು. ತಂದೆ-ತಾಯಿಯರ ಪ್ರಾರ್ಥನೆ ಹರಕೆಗಳು ಫಲಕೊಟ್ಟವು. ನನಗೆ ಈ ತಂಗಿ ಹುಟ್ಟಿದಳು. ಆದ್ದರಿಂದ ನನಗೂ ತಂಗಿಗೂ ಕೂಡಿ ಬೆಳೆಯಲು, ಆಡಿ ನಲಿಯಲು ಸಾಧ್ಯವಾಗಲಿಲ್ಲ. ಅವಳು ಶಿಶುವಾಗಿರುವಾಗ ನಾನು ಶಾಲೆಗೆ ಹೋಗುತ್ತಿದ್ದೆ. ಅವಳು ಶಾಲೆಗೆ ಹೋಗತೊಡಗಿದಾಗ ನಾನು ಕೆಲಸಕ್ಕೆ ಸೇರಿದೆ.

ಬೆಳಿಗ್ಗೆ ಹೊರಟು ಹೋದರೆ ಸಂಜೆ ಬರುತ್ತಿದ್ದ ನಾನು, ಅವರವರ ಕೆಲಸದಲ್ಲಿ ನಿರತರಾಗಿರುವ ತಂದೆ-ತಾಯಿಯರು ಇವರನ್ನು ಬಿಟ್ಟರೆ ಬೇರಾರೂ ಇರದಿದ್ದ ಆ ಮನೆಯಲ್ಲಿ ನನ್ನ ತಂಗಿಗೆ ಆಟವಾಡಲು ಜೊತೆಗಾರರಿರಲಿಲ್ಲ. ಆದ್ದರಿಂದ ಮನೆಯ ಸಾಕುಪ್ರಾಣಿಗಳಲ್ಲೇ ಅವಳು ತನ್ನ ಗೆಳೆಯರನ್ನು ಕಂಡುಕೊಂಡಳು. ಹಸುವಿನ ಕರು ಅವಳ ಕುದುರೆಯಾಯಿತು. ಆಡಿನ ಮರಿ ಛಂಗನೆ ಜಿಗಿಯುವ ಜಿಂಕೆಯಾಯಿತು. ನಾಯಿ ಮರಿ ಅವಳ ರಕ್ಷಕ ಭಟನಾಯಿತು, ಅಳಿಲು ಸ್ಪ್ರಿಂಗ್ ಜೋಡಿಸಿದ ಬೊಂಬೆಯಾಯಿತು, ಗಿಳಿ ಅವಳ ಮಾತನಾಡುವ ಗೆಳತಿಯಾಯಿತು. ಅವಳು ನಿಂತರೆ ಅಳಿಲು ಅವಳ ತಲೆಯನ್ನೇರಿ ಕಿರುಕುಳ ಕೊಡುತ್ತಿತ್ತು. ಕುಳಿತರೆ ಬೆಕ್ಕಿನ ಮರಿ ತೊಡೆಯನ್ನೇರಿ ನಿದ್ರಿಸುತ್ತಿತ್ತು, ನಡೆದರೆ ನಾಯಿ ಮರಿ ರಕ್ಷಕನಂತೆ ಅವಳನ್ನು ಹಿಂಬಾಲಿಸುತ್ತಿತ್ತು. ಓಡಿದರೆ ಪಂಜರದಲ್ಲಿದ್ದ ಗಿಳಿ ಕರೆಯುತ್ತಿತ್ತು.

ಅವಳು ಹೋದಲ್ಲೆಲ್ಲ ಅವಳನ್ನು ಮುತ್ತಿಕೊಂಡಿರುವ ಆ ಪ್ರಾಣಿಗಳನ್ನು ಕಂಡರೆ ನನಗೆ ಏನೋ ಒಂದು ಥರ ಅನಿಸುತ್ತಿತ್ತು. ಕೆಲವು ವೇಳೆ ಸಿಟ್ಟಿನಿಂದ ಗದರಿಸುತ್ತಿದ್ದೆ. "ಕಸ್ತೂರಿ, ಆ ಪ್ರಾಣಿಗಳ ಜೊತೆ ಏನು ಮಾಡ್ತಿದ್ದೀಯಾ? ಅವುಗಳ ರೋಮಗೀಮ ಎಲ್ಲ ಬೆರಸಿ, ಅವುಗಳಿಗೂ ಸ್ವಲ್ಪಸ್ವಲ್ಪ ಕೊಟ್ಟು ಉಂಡರೆ ಮಾತ್ರವಾ ನಿನ್ನ ಹೊಟ್ಟೆ ತುಂಬೋದು?" ನಾನೂ ಹಾಗೆ ರೇಗುವಾಗ ಅವಳು ತುಂಟ ನಗೆ [illegible]

ಮರಿಯನ್ನು ನನ್ನ ತೊಡೆಯಮೇಲಿಟ್ಟು "ನೋಡಣ್ಣಾ, ಎಷ್ಟು ಚಂದ ಇದೆ" ಎನ್ನಬೇಕು. ಆಗ ನನ್ನ ಕೋಪ ಬಿಸಿಲಿಗಿಟ್ಟ ಮಂಜುಗಡ್ಡೆಯಂತೆ ಕರಗಿಹೋಗುತ್ತಿತ್ತು.

ಕಸ್ತೂರಿಯ ಈ ಸಾಕು ಪ್ರಾಣಿಗಳ ಕುರಿತಾದ ಗೀಳು ಅವಳು ಶಾಲೆಗೆ ಸೇರಿದ ನಂತರ ಕಡಿಮೆಯಾದೀತೆಂದು ನಾವೆಲ್ಲ ಗ್ರಹಿಸಿದೆವು. ಆದರೆ ಅದು ಶಾಲೆಗೆ ಸೇರಿದಂದಿನಿಂದ ಹೆಚ್ಚೇ ಆಯಿತೆಂದರೆ ತಪ್ಪಾಗಲಾರದು. ಅವಳು ಬೆಳಿಗ್ಗೆ ಶಾಲೆಗೆ ಹೊರಡುವಾಗ ಎಲ್ಲಾ ಪ್ರಾಣಿಗಳನ್ನು ಒಮ್ಮೆ ಮುದ್ದಿಸುತ್ತಿದ್ದಳು. ಸಂಜೆ ಬಂದ ಕೂಡಲೇ ಕಾಫಿಯನ್ನು ಕುಡಿಯದೆ ಅವುಗಳ ಗೂಡಿನತ್ತ ಓಡುತ್ತಿದ್ದಳು.



ಹೀಗೆ ವರ್ಷಗಳು ಉರುಳಿದವು. ಕಸ್ತೂರಿ ದೊಡ್ಡವಳಾದಳು. ಅವಳೊಂದಿಗೆ ಮರಿಗಳಾಗಿದ್ದ ಬೆಕ್ಕು, ನಾಯಿ, ಕರು, ಆಡು ಎಲ್ಲವೂ ಬೆಳೆದವು. ಹೊಸಮರಿಗಳು ಹುಟ್ಟಿದವು. ವಯಸ್ಸಾದವುಗಳು ಸತ್ತವು. ಬಾಲ್ಯದಿಂದ ಯೌವನಕ್ಕೆ ಕಾಲಿಟ್ಟರೂ, ಯುವತಿಯಾದರೂ ಅವಳು ತನ್ನ ಪ್ರಾಣಿಗಳ ಗೀಳನ್ನು ಬಿಡಲಿಲ್ಲ. ಎಸ್.ಎಸ್.ಎಲ್.ಸಿ. ಯಲ್ಲಿ ಫೇಲಾಗಿ ಮನೆಯಲ್ಲಿ ಕುಳಿತಾಗಲಂತೂ ಅವಳು ತನ್ನ ಪೂರ್ತಿ ಸಮಯವನ್ನು ಪ್ರಾಣಿ ಗಳೊಂದಿಗೇ ಕಳೆಯುತೊಡಗಿದಳು.

ಹೀಗಿರುವಾಗಲೇ ನಮ್ಮ ಮನೆಯ ಹಸು ಕರು ಹಾಕಿದ್ದು. ಅಂದು ನಾನು ಆಫೀಸಿನಿಂದ ಬಸ್ಸಿನಲ್ಲಿ ಬಂದಿಳಿದಾಗ ಕಸ್ತೂರಿ ಪುಟ್ಟ ಕರುವೊಂದನ್ನು ಎತ್ತಿಕೊಂಡು ನನ್ನ ಹತ್ತಿರ ಓಡಿ ಬಂದಳು. "ಅಣ್ಣಾ, ನಮ್ಮ ಗೌರಿ ಕರು ಹಾಕಿದಳು. ನೋಡು, ಕರು ಎಷ್ಟು ಮುದ್ದಾಗಿದೆ" ಅವಳ ಆ ಉತ್ಸಾಹಕ್ಕೆ ತಣ್ಣೀರೆರಚಲು ನನಗೆ ಮನಸ್ಸಿರಲಿಲ್ಲವಾದುದರಿಂದ ನಾನು ಕರುವಿನತ್ತ ದೃಷ್ಟಿ ಬೀರಿ ಒಂದು

ಹೂನಗೆ ಚೆಲ್ಲಿ ಹೇಳಿದೆ, "ಮುದ್ದಾಗಿದೆ. ನಿನ್ನ ಹಾಗೆ"

ಮುಂದಿನ ದಿನಗಳಲ್ಲಿ ಆ ಕರು ಅವಳ ಒಲವಿನ ಗೆಳತಿಯಾಯಿತು. ತನ್ನ ಪ್ರೀತಿಯ ದ್ಯೋತಕವಾಗಿ ಅದನ್ನು ಅವಳು 'ಕಸ್ತೂರಿ' ಎಂದೇ ಕರೆಯತೊಡಗಿದಳು. ನಿಂತಲ್ಲಿ ನಡೆದಲ್ಲಿ ಕಸ್ತೂರಿಯನ್ನು ಹಿಂಬಾಲಿಸುತ್ತಿದ್ದ ಆ ಕರು ಅವಳು ಮಲಗಿದಾಗಲೂ ಅವಳ ಹಾಸಿಗೆಯ ಒಂದು ಭಾಗವನ್ನು ಆಕ್ರಮಿಸುತ್ತಿತ್ತು. ನಾನು ಒಮ್ಮೆ ಅವಳ ಅವಸ್ಥೆಯನ್ನು ಕಂಡು ಛೇಡಿಸಿದ್ದೆ "ಕಸ್ತೂರಿ, ನಿನಗೆ ಹದಿನೇಳು ವರ್ಷ ವಯಸ್ಸಾಗಿದೆ, ಈಗಲೂ ಹೀಗೆ ಪ್ರಾಣಿಗಳನ್ನೆಲ್ಲ ಒಟ್ಟಿಗೆ ಇಟ್ಕೊಂಡು ಮಲಗಬಾದರೂ ನಾಳೆ ನಿಂಗೆ ಮದುವೆ ಆದ ನಂತರವೂ ಹೀಗೆ ಮಾಡಿದೆಯಾದರೆ ಗಂಡ ದನದ ಹಟ್ಟಿಯಲ್ಲೇ ನಿನಗೆ ಹಾಸಿಗೆ ಹಾಸಿ ಕೊಟ್ಟಾನು" ಎಂದು.

"ಈ ಕ್ರೂರಿಗಳಾದ ಮನುಷ್ಯರ ಸನಿಹ ಮಲಗುವುದಕ್ಕಿಂತ ಆ ಪ್ರಾಣಿಗಳ ಒಟ್ಟಿಗೆ ಇದ್ದರೇನೇ ಸುಖ" ಎಂದು ಹೇಳಿ ಅವಳು ನನ್ನ ಬಾಯಿ ಕಟ್ಟಿಸಿದ್ದಳು

ಗಂಟೆಗಳಿಗೆ ರೆಕ್ಕೆಗಳಿವೆಯಂತೆ. ದಿನಕ್ಕೆ ಕಾಲುಗಳಿವೆಯಂತೆ. ನಾವು ಬೇಡ ಬೇಡವೆಂದರೂ ಗಂಟೆಗಳು ನಿರಂತರವಾಗಿ ಹಾರುತ್ತಿರುತ್ತವೆ. ದಿನಗಳು ತಮ್ಮ ಪಯಣವನ್ನು ಮುಂದುವರಿಸುತ್ತವೆ. ಕಸ್ತೂರಿಗೆ ತನ್ನ 'ಕಸ್ತೂರಿ' ಯಾವಾಗಲೂ ಕರುವಾಗಿಯೇ ಉಳಿಯಲಿ ಎಂಬ ಆಸೆ ಆದರೆ ದಿನಗಳುರುಳಿದಂತೆ ಅವಳಲ್ಲಿ ಪರಿವರ್ತನೆಗಳುಂಟಾದವು ಅವಳ ಮುಖದಲ್ಲಿ ಮುಗ್ಧತೆ ಮಾದಕತೆಯಾಗಿ ರೂಪುಗೊಂಡಿತು. ನಡಿಗೆಯಲ್ಲಿ ಯೌವನದ ಕುರುಹುಗಳು ಕಾಣಿಸಿಕೊಂಡವು, ಕಸ್ತೂರಿ ಜೋಡಿಗೆ ಬರುವ ಸಮಯವೂ ಬಂದುಬಿಟ್ಟಿತು.

ಒಂದು ದಿನ ಬೆಳಿಗ್ಗೆ ನಾನು ಏಳುವ ಮೊದಲೇ ತಾಯಿ ನನ್ನ ಕೋಣೆಯ ಬಾಗಿಲು ಬಡಿದರು. ನಾನು ಗಾಬರಿಗೊಂಡು ಎದ್ದು ಹೋಗಿ ಬಾಗಿಲು ತೆರೆದೆ. ತಾಯಿ ಹೇಳಿದರು, "ನೋಡು, ನೀನು ಹೋಗಿ ಆ ಪಶುವೈದ್ಯರನ್ನೊಮ್ಮೆ ಕರೆದುಕೊಂಡು ಬಾ. ನಮ್ಮ ಕರುವಿಗೆ ಒಂದು ಇಂಜೆಕ್ಷನ್ ಕೊಡಿಸಬೇಕು".

"ಯಾಕೆ? ಅವಳಿಗೆ ಹುಷಾರಿಲ್ವಾ?" ನಾನು ಕೇಳಿದೆ.

"ಹಾಗಲ್ಲ ಅವಳಿಗೆ ಗಬ್ಬಕ್ಕೆ ಬರುವ ಸಮಯ ಆಯ್ತು. ಅದಕ್ಕೆ ಒಂದು ಇಂಜೆಕ್ಷನ್ ಕೊಡಿಸಬೇಕು. ಇವತ್ತು ಅದಕ್ಕಿರುವ ದಿನ. ಬಾ ಕಾಫಿ ಕುಡಿದು ಬೇಗ ಪಶು ವೈದ್ಯರನ್ನು ಕರೆದುಕೊಂಡು ಬಾ".

ನಾನು ಪಶುವೈದ್ಯರನ್ನು ಕರೆದುಕೊಂಡು ಬಂದು ಅವಳಿಗೆ ಕೃತಕ ಗರ್ಭಧಾರಣೆಯ ಇಂಜೆಕ್ಷನ್ ಕೊಡಿಸಿದೆ. ಹಾಗೆ ಕಸ್ತೂರಿಯು 'ಮುದ್ದು ಕಸ್ತೂರಿ ಕರು' ಎಂಬ ತನ್ನ ಹಣೆಪಟ್ಟಿಯನ್ನು ಕಳಚಿಕೊಂಡು 'ಹಸು' ಎನಿಸಿಕೊಂಡಳು.

ನನ್ನ ತಂದೆ-ತಾಯಿಗಳಿಗೆ ಸರಕಾರಿ ನೌಕರನಾದ ನನ್ನ ಕುರಿತು ವಿಶೇಷ ಕಾಳಜಿ ಇರಲಿಲ್ಲ. ಆದರೆ ಏನೊಂದೂ ಉದ್ಯೋಗವಿಲ್ಲದೆ ಮನೆಯಲ್ಲೇ ನಿಂತಿದ್ದ ಮದುವೆ ಪ್ರಾಯಕ್ಕೆ ಬಂದ ಕಸ್ತೂರಿ ಅವರ ಚಿಂತೆಗೆ ಕಾರಣಳಾಗಿದ್ದಳು.

ಮೂರೂತ್ತಿನ ಊಟಕ್ಕೆ ಏನೊಂದೂ ತೊಂದರೆಯಿಲ್ಲದವರು, ಒಳ್ಳೆಯ ಕುಟುಂಬ, ಚಂದದ ಹೆಣ್ಣು ಇಷ್ಟಿರುವಾಗ ಮದುವೆ ಪ್ರಸ್ತಾವಗಳು ಬರುವುದು ಸಹಜ. ಹಾಗೆ ಕಸ್ತೂರಿಯನ್ನು ತಮ್ಮ ಮನೆಯ ಸೊಸೆಯಾಗಿರಿಸಿಕೊಳ್ಳಲು ಒಂದಿಬ್ಬರು ಮುಂದೆ ಬಂದಿದ್ದರು. ಆದರೆ ಒಂದಲ್ಲ ಒಂದು ರೀತಿಯಲ್ಲಿ ಹೊಂದಾಣಿಕೆ ಸರಿಗೂಡದ ಕಾರಣ ಮದುವೆ ನಡೆದಿರಲಿಲ್ಲ. ಹಾಗಿರುವಾಗಲೇ ಮೋಹನನ ಮನೆಯವರಿಂದ ಮದುವೆಯ ಕುರಿತು ಪ್ರಸ್ತಾಪ ಬಂದದ್ದು. ಆಗ ಪ್ರತಿಬಂಧಗಳು ಕರಗಿದವು, ಮದುವೆಯ ನಿಶ್ಚಯವೂ ಆಯಿತು.

ಮೋಹನ ಜಿನಸಿ ಅಂಗಡಿ ಕೃಷ್ಣಪ್ಪನವರ ಮಗ. ಚಿಗುರು ಮೀಸೆಯ ಸುಂದರ ಯುವಕ. ಹೆಚ್ಚೇನೂ ವಿದ್ಯಾಭ್ಯಾಸವಿಲ್ಲದಿದ್ದರೂ ವ್ಯವಹಾರ ಜ್ಞಾನವುಳ್ಳವನು. ಮನೆಯಲ್ಲಿ ಕುಳಿತು ಉಣ್ಣಲು ಬೇಕಾದಷ್ಟು ಸಂಪತ್ತಿದ್ದುದರಿಂದ ಕಲಿತು ಉದ್ಯೋಗಕ್ಕೆ ಸೇರುವ ಅವಶ್ಯಕತೆಯಿರಲಿಲ್ಲ. ಅದ್ದರಿಂದ ಒಂದಿಷ್ಟು ಓದಲು, ಬರೆಯಲು ಕಲಿತು ನಂತರ ವ್ಯಾಪಾರದಲ್ಲಿ ತೊಡ

ಗಿದ್ದ.

ಮೂರು ತಿಂಗಳಲ್ಲೇ ಕಸ್ತೂರಿಯ ಮದುವೆ ವಿಜೃಂಭಣೆಯಿಂದ ನಡೆಯಿತು. ಊರಿನ ಪರ ವೂರಿನ ಗೆಳೆಯರು, ಬಂಧುಗಳು, ಮದುವೆ ಯಲ್ಲಿ ಪಾಲ್ಗೊಂಡರು. "ನಮ್ಮ ಮನೆ ಯಂಗಳದಿ" ಹಾಡುತ್ತಾ ನನ್ನ ತಾಯಿ ಕಸ್ತೂರಿ ಯನ್ನು ಗಂಡನ ಮನೆಗೆ ಕಳುಹಿಸಿದರು. ಹಾಗೆ ಹಿರಿಯ ಕಸ್ತೂರಿ ಕಿರಿಯಳನ್ನು ಒಬ್ಬಂಟಿಗಳ ನ್ನಾಗಿ ಮಾಡಿ ಹೊರಟು ಹೋದಳು.


ಎರಡು ವರ್ಷಗಳು ಕಳೆದವು.

ಅಂದು ದೀಪಾವಳಿ ಹಬ್ಬದ ದಿನ. ಕಸ್ತೂರಿ ಮತ್ತು ಮೋಹನ ಹಬ್ಬಕ್ಕೆಂದು ಮನೆಗೆ ಬಂದಿ ದ್ದರು. ರಾತ್ರಿ ಊಟವಾದ ನಂತರ ನಾನು ಅಂಗಳದಲ್ಲಿ ಕುರ್ಚಿಯೊಂದನ್ನು ಹಾಕಿ ಕೂತು ಕೊಂಡು ಪಕ್ಕದ ಮನೆಯ ಹುಡುಗರು ಪಟಾಕಿ ಹಾರಿಸುತ್ತಿದ್ದುದನ್ನು ನೋಡುತ್ತಿದ್ದೆ. ಕಸ್ತೂರಿ ಯೂ ಒಂದು ಕುರ್ಚಿಯನ್ನು ಎತ್ತಿಕೊಂಡು ಬಂದು ನನ್ನ ಹತ್ತಿರ ಕುಳಿತಳು. ನಾವಿಬ್ಬರೂ ಒಂದೊಂದು ವಿಷಯ ಮಾತನಾಡತೊಡಗಿ ದೆವು. ಮಾತಿನ ಮಧ್ಯ ನಾನು ನಗುತ್ತಾ ಕೇಳಿದೆ. "ಅಲ್ಲ ಕಸ್ತೂರಿ, ಮದುವೆ ಆಗಿ ವರ್ಷವೆರೆಡು ಕಳೆಯಿತು. ಇಷ್ಟರವರೆಗೂ ನಮ್ಮ ತಾಯಿಗೆ 'ಅಜ್ಜಿ' ಅನಿಸಿಕೊಳ್ಳುವ ಅವಕಾಶವನ್ನಾಕೆ ಮಾಡಿಕೊಡಲಿಲ್ಲ?"

ತಟ್ಟನೆ ಅವಳು ಮೌನಿಯಾದಳು. ಅವಳ ಮುಖದಲ್ಲಿ ಒಮ್ಮೆಲೇ ಮೂಡಿದ ದುಃಖದ ಛಾಯೆಯನ್ನು ಆ ಮಂದ ಬೆಳಕಿನಲ್ಲೂ ನಾನು ಗುರುತಿಸಿದೆ. ನಾನು ಹಾಗೆ ಕೇಳಿದ್ದು ಅವಳಿಗೆ ಹಿಡಿಸಲಿಲ್ಲವೋ ಏನೋ ಎಂದುಕೊಂಡು ನಾನು ವಿಷಯವನ್ನು ಬದಲಿಸಿದೆ.

ಮತ್ತೆ ಎರಡು ದಿನ ಇದ್ದು ಇಬ್ಬರೂ ಹೊರಟು ಹೋದರು. ಆದರೆ ಕಸ್ತೂರಿ ಆ ಎರಡು ದಿನವೂ ಒಂದು ರೀತಿ ಖಿನ್ನಳಾಗೇ ಇದ್ದಳು. ನಾನು ಏನು ಕೇಳಿದರೂ ನಗುತ್ತಲೇ ಉತ್ತರಿಸುತ್ತಿದ್ದವಳು ಅಷ್ಟೊಂದು ಸಣ್ಣ ವಿಷ ಯಕ್ಕೆ ಯಾಕೆ ಹಾಗೆ ಖಿನ್ನಳಾದಳೆಂಬುದು ನನಗೆ ಸಮಸ್ಯೆಯಾಗಿಯೇ ಉಳಿಯಿತು.

ತಾಯಿಯಲ್ಲಿ ಈ ವಿಷಯವನ್ನು ಹೇಳಬೇ ಬೇಕೆಂದು ನಾನು ನಿರ್ಧರಿಸಿದೆ. ಇದಕ್ಕೆ ಮೊದಲೊಮ್ಮೆ ತಾಯಿ ನನ್ನ ತಂದೆಗೆ ಹೇಳು ವುದನ್ನು ಕೇಳಿದ್ದೆ "ರೀ, ನಮ್ಮ ಕಸ್ತೂರಿಗೆ



"ಆದರೆ... ನೀರಿಗೆ ಬರ. ಬಟ್ಟೆನಲ್ಲಿ ಸ್ನಾನ ದುಬಾರೀನೇ ಆಯ್ತು ಹಾರಾಯ್ರೇ-"

ಮದುವೆಯಾಗಿ ಎರಡು ವರ್ಷವಾಗ್ತಾ ಬಂತು. ಇಷ್ಟರವರೆಗೂ ಏನೂ ಸುದ್ದಿಯೇ ಇಲ್ಲ" ತಾಯಿ ಮುಂದುವರೆಸುವ ಮೊದಲೇ ತಂದೆ ಗುಡುಗಿದ್ದರು, "ನಿನಗೇನು ಅಷ್ಟು ಆತುರ? ಸಮಯಕ್ಕೆ ಸರಿಯಾಗಿ ಎಲ್ಲ ಆಗುತ್ತೆ. ನಮ್ಮ ಕಾಲದ ಹಾಗೇನಾ ಈಗ? ಎಲ್ಲಾ ಬದಲಾಗಿದೆ. ಮಕ್ಕಳು ಹುಟ್ಟಿ ಅ.ಆ.ಇ.ಈ ಕಲಿತ ಕೂಡಲೇ ಅವರಿಗೆ ಕಲಿಸುವುದೇ ಜನಸಂಖ್ಯಾಸ್ಫೋಟ, ಕುಟುಂಬ ಯೋಜನೆಗಳ ಕುರಿತು. ಮತ್ತೆ ನಾವು ಆತುರ ಪಟ್ಟರೆ ಹೇಗೆ?" ತಂದೆಯವರ ನಗುವಿ ನಲ್ಲಿ ತಾಯಿಯೂ ಭಾಗಿಯಾಗಿ ವಿಷಯ ಬದಲಿಸಿದರು.


ನಾನು ಈ ವಿಷಯವನ್ನು ಎತ್ತಿಹಾಕಲು ಸಂದರ್ಭಕ್ಕಾಗಿ ಕಾಯತೊಡಗಿದೆ. ಆದರೆ ಹಠಾತ್ ಒಂದು ದಿನ ಟ್ರಾನ್ಸ್‌ಫರ್ ಆರ್ಡರ್ ನನ್ನ ಕೈ ಸೇರಿತು. ನನ್ನನ್ನು ದೂರದ ಹಳ್ಳಿ ಯೊಂದಕ್ಕೆ ಎತ್ತಿ ಹಾಕಿದ್ದರು. ಹುಟ್ಟಿದಂದಿ ನಿಂದ ಮನೆಬಿಟ್ಟು ದೂರ ಹೋಗಿರದಿದ್ದ ನನಗೆ ಹೀಗೊಂದು ಟ್ರಾನ್ಸ್‌ಫರ್ ಆರ್ಡರ್ ಬಂದಾಗ ದುಃಖ ಉಕ್ಕಿ ಬಂತು. ಆದರೆ ಹೋಗದೆ ಉಪಾಯವಿರಲಿಲ್ಲ. ಟ್ರಾನ್ಸ್‌ಫರ್ ಆರ್ಡರ್ ಕ್ಯಾನ್ಸಲ್ ಮಾಡಿಸಲು ಮಾಡಿದ ಶ್ರಮವೆಲ್ಲ ವ್ಯರ್ಥವಾಗಿತ್ತು. ಗಂಟು ಮೂಟೆ ಕಟ್ಟಿಕೊಂಡು ಹೊರಟುಬಿಟ್ಟೆ.

ಹೊಸ ಪರಿಸರ, ಹೊಸ ಜನರು, ಹೊಸ ಮುಖಗಳನ್ನು ಪರಿಚಯ ಮಾಡಿಕೊಳ್ಳುವುದರಲ್ಲಿ, ಹೊಸ ಪರಿಸರಕ್ಕೆ ಹೊಂದಿಕೊಳ್ಳುವುದರಲ್ಲಿ ನನ್ನ ಸಮಯವೆಲ್ಲ ಕಳೆದು ಹೋಗುತ್ತಿತ್ತು. ಆಗಾಗ ಮನೆಯಿಂದ ಪತ್ರ ಬರುತ್ತಿತ್ತು. ಹಾಗೆ ಒಮ್ಮೆ ತಾಯಿ ಬರೆದಾಗ ಕಸ್ತೂರಿ ಕರು ಹಾಕಿರುವುದಾಗಿಯೂ, ಸತತ ಮೂರನೆಯ ಸಲವೂ ಹೆಣ್ಣು ಕರುವೆಂದೂ ಬರೆದಿದ್ದರು.

ಮುಂದಿನ ದೀಪಾವಳಿ ಹತ್ತಿರವಾಯಿತು. ನಾನು ಒಂದು ವಾರದ ರಜ ಪಡೆದುಕೊಂಡು ಮನೆಗೆ ಹೋದೆ. ಕಸ್ತೂರಿ ಕೂಡಾ ದೀಪಾವಳಿಗೆಂದು ಬಂದಿದ್ದಳು. ಆದರೆ ಕಳೆದ ಎರಡು ದೀಪಾವಳಿಗಳಂತೆ ಮೋಹನ ಬಂದಿರಲಿಲ್ಲ. ಅವನಿಗೆ ಏನೋ ಅರ್ಜೆಂಟ್ ಕೆಲಸವಿದೆಯೆಂದು ಮನೆಯಲ್ಲಿಯೇ ಉಳಿದುಕೊಂಡಿದ್ದ.

ಬಹುದಿನಗಳ ನಂತರ ನಾವೆಲ್ಲ ಒಂದಾಗಿದ್ದೆವು. ಅಷ್ಟು ದಿನವೂ ಪರಸ್ಪರ ಮಾತನಾಡದೆ ಮನದಲ್ಲಿ ಉಳಿದಿದ್ದ ನೂರಾರು ವಿಷಯಗಳನ್ನು ಹೇಳಿಕೊಂಡೆವು. ರಸವತ್ತಾದ ಪ್ರಸಂಗಗಳನ್ನು ವಿವರಿಸಿದೆವು. ನಕ್ಕೆವು, ನಗಿಸಿದೆವು. ಆದರೆ ಕಸ್ತೂರಿ ಯಾವುದೋ ಅಗ್ನಿಪರ್ವತವನ್ನು ಮನದಲ್ಲಿ ಹುದುಗಿಸಿಕೊಂಡು ಸಿಡಿಯಲು ಸಿದ್ಧಳಾಗಿರುವಂತೆ ಖಿನ್ನಳಾಗಿದ್ದಳು. ಮೋಹನ ಬರದಿರುವುದಕ್ಕಾಗಿಯಾಗಿರಬಹುದು ಈ ದುಃಖ ಎಂದು ನಾನು ಸುಮ್ಮನಾದೆ.

ಎರಡು ದಿನ ಹಾಗೆ ಕಳೆಯಿತು. ಮೂರನೆಯ ದಿನ-ಹಬ್ಬದ ಹಿಂದಿನ ದಿನ-ಸಾಯಂಕಾಲ ನಾನು ಜಗಲಿಯಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದೆ. ಕಸ್ತೂರಿ ಗೆಳತಿಯ ಮನೆಗೂ, ತಂದೆ ಪಟ್ಟಣಕ್ಕೂ ಹೋಗಿದ್ದುದರಿಂದ ಮನೆಯಲ್ಲಿ ನಾನು ಮತ್ತು ತಾಯಿಯ ವಿನಾ ಬೇರಾರೂ ಇರಲಿಲ್ಲ. ನಾನು ಓದುತ್ತಿದ್ದಂತೆ ತಾಯಿ ಎರಡು ಗ್ಲಾಸುಗಳಲ್ಲಿ ಚಹಾ ಎತ್ತಿಕೊಂಡು ಬಂದು ಒಂದನ್ನು ನನ್ನ ಕೈಗೆ ಕೊಟ್ಟು ಮತ್ತೊಂದನ್ನು ಹೀರುತ್ತಾ ಪಕ್ಕದಲ್ಲಿದ್ದ ಬೆಂಚಿನಲ್ಲಿ



ಕುಳಿತರು. ನಾನು ಪತ್ರಿಕೆಯನ್ನು ಮಡಿಚಿಟ್ಟು ಚಹಾ ಕುಡಿಯತೊಡಗಿದೆ.

ಇದ್ದಕ್ಕಿದಂತೆ ತಾಯಿ ಕೇಳಿದರು, "ಸುರೇಶಾ, ನಿನ್ನಲ್ಲಿ ಕಸ್ತೂರಿ ಏನಾದರೂ ಹೇಳಿದಳಾ?" ನಾನು ಮುಖವೆತ್ತಿ ಅವರನ್ನು ನೋಡಿದೆ. ಅವರು ಯಾವುದೋ ವಿಷಯವನ್ನು ಹೊರ ಗೆಡಹುವ ಆತುರದಲ್ಲಿದ್ದಾರೆಂದು ನನಗನಿಸಿತು "ಇಲ್ಲ, ನನ್ನಲ್ಲೇನೂ ಹೇಳಲಿಲ್ಲ. ಅವಳು ಎಲ್ಲರಲ್ಲೂ ಸರಿಯಾಗಿ ಮಾತನಾಡಿದರ ತಾನೆ ಏನಾದರೂ ವಿಶೇಷ ಹೇಳೋದು. ಯಾವಾಗಲೂ ಇಂಗು ತಿಂದ ಮಂಗನಂತೆಯೇ ಇರ್ತಾಳೆ."

"ಅದ್ಯಾಕೆ ಅವಳು ಹಾಗೆ ದುಃಖದಿಂದಿರ್ತಾಳೆ ಗೊತ್ತಾ?" ಅವರು ದೀರ್ಘವಾಗಿ ನಿಟ್ಟುಸಿರು ಬಿಟ್ಟು ಮುಂದುವರೆಸಿದರು. "ಅವಳಿಗೆ ಒಂದು ಮಗು ಹುಟ್ಟದ ಕಾರಣ".

"ಅದು ಗಂಡ-ಹೆಂಡತಿಯರ ನಡುವಿನ ಸಮಸ್ಯೆ. ಅದನ್ನು ಅವರಿಬ್ಬರೇ ಪರಿಹರಿಸ ಬಹುದು. ಅದಕ್ಯಾಕೆ ದುಃಖಿಸಬೇಕು." ನಾನು ತಟ್ಟನೆ ಕೇಳಿದೆ.

"ಅವರಿಬ್ಬರಿಂದಲೂ ಪರಿಹರಿಸಲಿಕ್ಕೆ ಆಗ ದಿದ್ದರೆ...?"

"ಅಂದರೆ...?"

"ಅಂದರೆ, ಅವಳಿಗೆ ಮಗು ಹುಟ್ಟುವುದಿಲ್ಲಾ ತಾದರೆ....?"

"ಅಂ ಹುಟ್ಟುವುದಿಲ್ಲಾಂತ ಯಾರು ಹೇಳಿದ್ದು." ನಾನು ಸ್ವರ ತಗ್ಗಿಸಿ ಕೇಳಿದೆ.

"ಮತ್ಯಾರು ಹೇಳ್ತಾರೆ. ಕಲಿತ ಡಾಕ್ಟರುಗಳು. ಅವರು ಕಸ್ತೂರಿ ಎಂದೆಂದಿಗೂ ಬಂಜೆ ಆಗಿ ಉಳಿಯುತ್ತಾಳೆಂದು ತೀರ್ಪು ಕೊಟ್ಟಿದ್ದಾರೆ..." ತಾಯಿ ಬಿಕ್ಕಿ ಬಿಕ್ಕಿ ಅಳತೊಡಗಿದರು.

ನಾನು ಸಿಡಿಲೆರಗಿದವನಂತೆ ಕುಳಿತುಬಿಟ್ಟೆ.

ಹಬ್ಬದ ದಿನ ಬಂತು. ಪ್ರತಿ ವರ್ಷದಂತೆ ಪೂಜೆ, ಆಚಾರಗಳು ನಡೆದವು. ಆದರೆ ಕಳೆದ ಹಬ್ಬಗಳ ಹುರುಪಿಲ್ಲ, ಆಹ್ಲಾದವಿಲ್ಲ. ಯಾರಿಗೂ ಯಾವುದರಲ್ಲೂ ಆಸಕ್ತಿಯಿಲ್ಲ. ಎಲ್ಲರೂ ಕೀಲಿಕೊಟ್ಟ ಬೊಂಬೆಗಳಂತೆ ಓಡಾಡಿದೆವು.

ಹಬ್ಬ ಕಳೆಯಿತು. ಕಸ್ತೂರಿ ಹೊರಟು ಹೋದಳು. ನಾನು ರಜ ಕಳೆಯುವವರೆಗೆ ಮನೆಯಲ್ಲಿದ್ದು ನಂತರ ಕೆಲಸದೂರಿಗೆ ಹೊರಟುಬಿಟ್ಟೆ. ಅದೇ ಕೆಲಸ, ಅದೇ ಪರಿಸರ, ಅದೇ ಜನರು. ನಾನು ಆ ಪ್ರಪಂಚದಲ್ಲಿ ಮುಳುಗಿದೆ. ಆಗಾಗ ಮನೆಯಿಂದ ಬರುತ್ತಿದ್ದ ಪತ್ರ ನನ್ನ ಮನಸ್ಸನ್ನು ಮನೆಯ ಕಡೆ ಎಳೆದೊಯ್ಯುತ್ತಿತ್ತು.. ಕಸ್ತೂರಿ, ಅವಳ ಬಾಲ್ಯ, ಅವಳ ಹಿಂದೆ ಸುತ್ತುತ್ತಿದ್ದ ಪ್ರಾಣಿಗಳು, ಪ್ರಾಣಿಗಳನ್ನು ಎತ್ತಿ ಆಡಿಸುತ್ತಿದ್ದ ಆಕೆಗೆ ತನ್ನ ಕರುಳಿನ ಕುಡಿಯನ್ನು ಎತ್ತಿ ಆಡಿಸಲು ಸಾಧ್ಯವಾಗದ ಅವಳ ದುರ್ಯೋಗ... ಇವುಗಳ ನೆನಪಾಗಿ ನಾನು ನಿಟ್ಟುಸಿರುಬಿಡುತ್ತಿದ್ದೆ.

ಹಾಗಿರುವಾಗ ಮನೆಯಿಂದ ಪತ್ರ ಬಂತು.

ಕಸ್ತೂರಿಯನ್ನು ಮೋಹನ ಮನೆಯಿಂದ ಹೊರಗಟ್ಟಿದನೆಂದೂ, ಅವಳ ಎಲ್ಲ ಒಡವೆ ವಸ್ತುಗಳು ಮತ್ತು ವರದಕ್ಷಿಣೆಯನ್ನು ಹಿಂತಿರುಗಿಸಿದ್ದಾನೆಂದೂ, ಡೈವೋರ್ಸ್‌ಗೆ ಕೋರ್ಟಿಗೆ ಅರ್ಜಿ ಹಾಕಿದ್ದಾನೆಂದೂ, ಆದ್ದರಿಂದ ಕೂಡಲೇ ಬರಬೇಕೆಂದೂ ತಾಯಿ ಬರೆದಿದ್ದರು.

ನಾನು ಒಂದು ವಾರದ ರಜ ತೆಗೆದುಕೊಂಡು ಮನೆಗೆ ಹೊರಟೆ.

ಮನೆಯ ಪರಿಸ್ಥಿತಿ ನನ್ನನ್ನು ಬಹುವಾಗಿ ಚಿಂತೆಗೀಡುಮಾಡಿತು. ಮಗಳ ದುರಾದೃಷ್ಟದ ಕುರಿತು ದುಃಖಿಸಿ ಹಲುಬುವ, ತಾಯಿ, ನಿರ್ವಿಕಾರವಾಗಿ ಕುಳಿತಿರುವ ತಂದೆ, ಮುಖದಲ್ಲಿ ಪ್ರೇತ ಕಳೆ ಹೊತ್ತು ಸೊರಗಿ ಕಡ್ಡಿಯಂತಾಗಿದ್ದ ಕಸ್ತೂರಿ. ಯಾವುದಕ್ಕೂ ಕಣ್ಣೀರಿನಿಂದಲೇ ಉತ್ತರಿಸುತ್ತಿದ್ದ ಅವಳನ್ನು ಕಂಡಾಗ ನನ್ನ ಹೃದಯವೇ ಒಡೆದಂತಾಯಿತು.

ನಾನು ಗಟ್ಟಿ ಮನಸ್ಸು ಮಾಡಿ ಮೋಹನನ ಮನೆಗೆ ಹೋದೆ. ಕಸ್ತೂರಿಯನ್ನು ದುಃಖ ಸಾಗರದೊಳಕ್ಕೆ ತಳ್ಳಬಾರದೆಂದು ಬಿನ್ನವಿಸಿದೆ. ಆದರೆ ಕೃಷ್ಣಪ್ಪನವರು ನಯವಾಗಿಯೇ ನನ್ನ ಕರುಳು ಕತ್ತರಿಸಿದರು.

"ನೋಡಿ, ನಿಮಗೆ ಈಗ ಮದುವೆ ಆಗಿಲ್ಲ ವಾದರೂ ನೀವು ವಿದ್ಯೆಯುಳ್ಳವರು, ಪ್ರಪಂಚ ವನ್ನು ತಿಳಿದವರು. ನೀವು ಕಸ್ತೂರಿಯ ದುಃಖವನ್ನು ಕಂಡು ಈ ರೀತಿ ಹೇಳುತ್ತಿರ ಬಹುದು. ಅದರಂತೆ ನಮಗೂ ದುಃಖವಿದೆಯೆಂದು ತಿಳಿದುಕೊಳ್ಳಿ.

"ಮೋಹನ ನನ್ನ ಒಬ್ಬನೇ ಒಬ್ಬ ಮಗ. ನಮ್ಮ ವಂಶ ಮುಂದುವರಿಯಬೇಕಾದರೆ ಅವನಿಗೊಂದು ಮಗು ಹುಟ್ಟಲೇ ಬೇಕು. ನನ್ನ ಮೊಮ್ಮಗನನ್ನು ನೋಡಬೇಕು, ನಮ್ಮ ವಂಶದ ಕುಡಿಯನ್ನು ಎತ್ತಿ ಆಡಿಸಬೇಕು ಎಂಬ ಆಸೆಯಿಂದ ತಾನೆ ನಾನು ಮೋಹನನಿಗೆ ಮದುವೆ ಮಾಡಿಸಿದ್ದು? ಆದರೇನು ಮಾಡುವುದು? ಕಸ್ತೂರಿ ಬಂಜೆಯಾಗಿಬಿಟ್ಟಳು. ಯಾವುದೇ ದೋಷವಿಲ್ಲದೆ 'ಮಕ್ಕಳಾಗದವ' ಎಂಬ ಅಪ ಹೆಸರಿನಿಂದ ಊರವರಿಂದ ಕರೆಯಲ್ಪಡುವ ಯೋಗ ನನ್ನ ಮಗನಿಗೆ ಬಂದುಬಿಟ್ಟಿತು. ಆ ಹಣೆಪಟ್ಟಿಯನ್ನು ನನ್ನ ಮಗನ ಹಣೆಯಿಂದ ಬಿಚ್ಚಿ ದೂರ ಎಸೆದುಬಿಡಲು ನಾನು ನಿರ್ಧರಿಸಿದ್ದು ತಪ್ಪಾ? ಅದಕ್ಕಾಗಿ ಕಸ್ತೂರಿಯನ್ನು ಡೈವೋರ್ಸ್ ಮಾಡಲೇ ಬೇಕಾಗಿ ಬಂದಿದೆ..."

ಇದಾಗಿ ಎರಡು ತಿಂಗಳೊಳಗೆ ಕೋರ್ಟಿನಿಂದ ಡೈವೋರ್ಸ್ ನೋಟೀಸು ಬಂದುಬಿಟ್ಟಿತು. "ಮೋಹನನ ಉಜ್ವಲ ಬಾಳಿಗೆ ನಾನ್ಯಾಕೆ ಮುಳ್ಳಾಗಬೇಕು" ಎಂದು ಕಸ್ತೂರಿಯೂ ಡೈವೋರ್ಸ್‌ಗೆ ಒಪ್ಪಿದಳು. ಹಾಗೆ ಮೂರೂವರೆ ವರ್ಷ ದಾಂಪತ್ಯ ಜೀವನ ಮುಗಿಸಿಕೊಂಡು ಕಸ್ತೂರಿ ತವರಿಗೆ ಓಂತಿಯಾಗಿದಳು. ಬೇರೆ ಬೇರೆಯಾಗಿದ್ದ ಕಸ್ತೂರಿಯರು ಮತ್ತೊಮ್ಮೆ ಒಂದಾದರು. ಅವರಿಬ್ಬರ ನಡುವೆ ಆ ಹಳೆಯ ಸಂಬಂಧ ಪುನಃ ನೆಲೆಗೊಂಡಿತು.

ಈ ಘಟನೆಗಳು ನಡೆದು ಈಗ ಐದಾರು ವರ್ಷಗಳು ಕಳೆದಿವೆ. ಇಂದು ಅವರಿಬ್ಬರೂ ಒಂದೇ ಮನೆಯಲ್ಲಿ ಮೊದಲಿನಂತೆ ಜೀವಿಸುತ್ತಿದ್ದಾರೆ. ಒಬ್ಬಳು ಪ್ರತಿವರ್ಷವೂ ಚಿಗುರುವ ಮರವಾಗಿ, ಮತ್ತೊಬ್ಬಳು ಒಮ್ಮೆಯೂ ಚಿಗುರದ ಮರವಾಗಿ. ●

ಪ್ರಶಂಸೆ

ಮಿರ್ಜಾಗಾಲಿಬರು ಒಂದು ಪುಸ್ತಕದ ಅಂಗಡಿಯಲ್ಲಿ ಕುಳಿತುಕೊಂಡಿದ್ದರು. ಆಗ ಒಬ್ಬ ಯುವಕ ಅಲ್ಲಿಗೆ ಬಂದು ಅಂಗಡಿಕಾರನಿಗೆ ಗಾಲಿಬರ ಪಾರಸೀ ಭಾಷೆಯ ಕಾವ್ಯಸಂಗ್ರಹದ ಪುಸ್ತಕ ಕೊಡಲು ಹೇಳಿದ. ಅಂಗಡಿಕಾರನ ಬಳಿ ಆ ಪುಸ್ತಕ ಇರಲಿಲ್ಲ. ಆತ ಪಾರಸೀ ಭಾಷೆಯ ಇತರ ಶ್ರೇಷ್ಠ ಕವಿಗಳ ಕಾವ್ಯಸಂಗ್ರಹದ ಪುಸ್ತಗಳನ್ನು ಯುವಕನಿಗೆ ತೋರಿಸಿದ. ಆದರೆ ಆಗ ಯುವಕ "ನನಗೆ ಅವೆಲ್ಲ ಬೇಡ ಗಾಲಿಬರ ಕಾವ್ಯ ಸಂಗ್ರಹವೇ ನನಗೆ ಬೇಕು. ಆ ಬಡ್ಡೀಮಗ ಬಹಳ ಚೆನ್ನಾಗಿ ಬರೆಯುತ್ತಾನೆ" ಎಂದ.

ಅವರ ಮಾತುಗಳನ್ನು ಕೇಳಿ ಅಂಗಡಿಕಾರ "ನಾನು ನಿಮಗೆ ಗಾಲಿಬರ ಕಾವ್ಯಸಂಗ್ರಹವನ್ನು ಕೊಡಲಾರೆ. ಆದರೆ ನೀವು ಬಯಸಿದಲ್ಲಿ ಸ್ವತಃ ಗಾಲಿಬರನ್ನೇ ಕೊಡಬಲ್ಲೆ" ಎಂದ.

ಆಗ ಆ ಯುವಕನ ದೃಷ್ಟಿ ಅಲ್ಲಿ ಕುಳಿತಿದ್ದ ಗಾಲಿಬರ ಕಡೆಗೆ ಹರಿಯಿತು. ಅವರು ಅಲ್ಲಿಯೇ ಇರುವುದನ್ನು ಕಂಡು ಆತ ನಾಚಿಕೆಯಿಂದ ಮುಖ ಕೆಳಗೆ ಮಾಡಿದ.

ಮಿರ್ಜಾ ಗಾಲಿಬರು ಮೇಲೆದ್ದು ಯುವಕನನ್ನು ಪ್ರೇಮದಿಂದ ಆಲಂಗಿಸಿ "ಏನಪ್ಪಾ ಇದರಲ್ಲಿ ನಾಚಿಕೆಪಟ್ಟುಕೊಳ್ಳುವಂತಹದು ಏನಿದೆ? ನಿಜ ಹೇಳಬೇಕೆಂದರೆ ಇಂದು ನೀನು ಮಾಡಿದ ನನ್ನ ಕೃತಿಗಳ ಪ್ರಶಂಸೆಯನ್ನು ಇಲ್ಲಿಯವರೆಗೆ ಬೇರಾರೂ ಮಾಡಿರಲಿಲ್ಲ" ಎಂದು ನುಡಿದರು.

—ಗೋಪಿನಾಥ ಸವಣೂರ

"ಗಾಂಧೀಜೀ" ಹೆಸರಿನ ವ್ಯಕ್ತಿ ಇದ್ದುದು ನಿಜವೇ? ಎಂದು ಸಂದೇಹಿಸುವ ಕಾಲವೂ ಬರಬಹುದು.

ಐನ್‌ಸ್ಟೀನ್

ಪ್ರಯೋಗ ಶಾಲೆಯಲ್ಲಿ

ಮನುಷ್ಯ ಚರ್ಮದ ಬೆಳೆ

ದಕ್ಷಿಣ ಇಂಗ್ಲೆಂಡಿನ ಸ್ಯಾಲಿಸ್‌ಬರಿ ಜನರಲ್ ಆಸ್ಪತ್ರೆಯ ಪ್ರಯೋಗ ಶಾಲೆಯಲ್ಲಿ ವಿಜ್ಞಾನಿ ದಂಪತಿಯೊಂದು ಗಂಭೀರ ರೂಪದ ಸುಟ್ಟ ಗಾಯಗಳಿಗೆ ಒಳಗಾದ ರೋಗಿಗಳಿಗೆ ಚಿಕಿತ್ಸೆ ಮಾಡ ಲೋಸುಗ ಮನುಷ್ಯ ಚರ್ಮದ 'ಬೆಳೆ' ತೆಗೆಯುತ್ತಿದ್ದಾರೆ!.

ಡಾ॥ ಪೀಟರ್ ಜಿ. ಶೇಕ್ಸ್‌ಪಿಯರ್ ಮತ್ತು ಡಾ॥ ವ್ಯಾಲೆರಿ ಎಸ್. ಶೇಕ್ಸ್‌ಪಿಯರ್‌ರವರು ರೋಗಿಯ ಸ್ವಂತ ಚರ್ಮದಿಂದ ಚರ್ಮದ ಹಾಳೆಗಳನ್ನೇ ಉತ್ಪಾದಿಸುತ್ತಿದ್ದಾರೆ!. ಚರ್ಮ ಸುಲಿದ, ಸುಟ್ಟ ಹೆಚ್ಚಿನ ಭಾಗಗಳಿಗೆ ಈ ಚರ್ಮದ ಹಾಳೆಗಳನ್ನು ಆಚ್ಛಾದಿಸಿ, ಚರ್ಮದ ಕಸಿ ಮಾಡ ಬಹುದಾಗಿದೆ.

ಸುಟ್ಟ ಗಾಯಗಳಿಂದಲೋ ಅಥವಾ ಬೇರೆ ರೀತಿಯಲ್ಲಿ ಚರ್ಮ ಸುಲಿದು ಹೋದ, ಹಾಳಾದ ಪ್ರಸಂಗಗಳಲ್ಲೆಲ್ಲಾ ಈ ತಂತ್ರವನ್ನು ಪ್ರಯೋಗಿಸಬಹುದಾಗಿದೆ. ಈ ವಿಧಾನದಿಂದ ಗಾಯಗಳು ಮಾಯಲು ಅತಿ ಕಡಿಮೆ ಕಾಲ ಬೇಕಾಗುತ್ತದೆ. ಹೀಗಾಗಿ ನೋವು ಮತ್ತು ಗಾಯ ಮಾಯಲು ತೆಗೆದುಕೊಳ್ಳುವ ಕಾಲ ಎರಡೂ ಕಡಿಮೆಯಾಗುತ್ತವೆ.

40 ವರ್ಷಗಳ ಹಿಂದೆ ಬ್ರಿಟಿಷ್ ವಿಜ್ಞಾನಿ ಸರ್. ಪೀಟರ್ ಮೆಡಾವರ್‌ವರಿಗೆ ಪ್ರಯೋಗ ಶಾಲೆ ಯಲ್ಲಿ ಚರ್ಮ ಬೆಳೆಸುವ ಐಡಿಯಾ ಹೊಳೆಯಿತಂತೆ. ಫೈಬ್ರೋಬ್ಲಾಸ್ಟ್ ಎಂಬುವು ಚರ್ಮದ ಮೇಲ್ಮೈಯ ಕೆಳಗಿರುವ ಜೀವಕೋಶಗಳ ಪದರ, ಆಗ ಇವುಗಳನ್ನು ಬೆಳೆಸಲು ಸಾಧ್ಯವಾಗಿದ್ದರೂ ಚರ್ಮದ ಮೇಲಿನ ಜೀವಕಣ ಕೋಶಗಳನ್ನು ಬೆಳೆಸುವುದು ಸಾಧ್ಯವಾಗಿರಲಿಲ್ಲ. ಅಮೇರಿಕದ ಡಾ॥ ಹೋವಾರ್ಡ್ ಗ್ರೀನ್‌ರಿಗೆ ಇವುಗಳನ್ನು ಇಲಿಗಳ ಫೈಬ್ರೋಬ್ಲಾಸ್ಟ್ ಜೀವಕೋಶಗಳ 'ಹಾಸಿಗೆ'ಯ ಮೇಲೆ ಬೆಳೆಸುವ ವಿಚಾರ ಹೊಳೆದಾಗ ಈ ತೊಂದರೆ ನಿವಾರಣೆಯಾಯಿತು. ತಂತ್ರ ಯಶಸ್ವಿ ಯಾಯಿತು.

ಮೊದಲ ಹಂತವಾಗಿ, ಸ್ಯಾಲಿಸ್‌ಬರಿ ವಿಜ್ಞಾನಿಗಳ ಜೊತೆ, ಇಲಿಗಳ ಭ್ರೂಣ ಫೈಬ್ರೋಬ್ಲಾಸ್ಟ್ ಪದರದ 'ಕಲ್ಚರ್' ಮಾಡಲಾಯಿತು. ಇವುಗಳನ್ನು "3 ಟಿ 3" ಕೋಶಗಳೆಂದು ಕರೆಯಲಾಯಿತು. ಪ್ರಯೋಗ ಶಾಲೆಯ ಪರಿಸರದಲ್ಲಿ ಇವು ಸುಲಭವಾಗಿ ಬೆಳೆಯಲಾರಂಭಿಸಿದವು. ಈ ಜೀವಕೋಶ ಗಳ ಪದರ ಸಾಕಷ್ಟು ವಿಶಾಲವಾಗಿ ಬೆಳೆದಾಗ ಎಕ್ಸ್-ರೇ ಚಿಕಿತ್ಸೆಯ ಮೂಲಕ ಇವುಗಳ ಬೆಳವಣಿಗೆ ಯನ್ನು ನಿಲ್ಲಿಸಲಾಯಿತು. ಈ ಫೈಬ್ರೋ ಬ್ಲಾಸ್ಟ್‌ನ ಹಾಸಿಗೆಯನ್ನು, ಅವು ಮನುಷ್ಯ ಚರ್ಮದ ಬೆಳಸನ್ನು ಆಧರಿಸಲು ಶಕ್ಯವಾಗುವವರೆಗೆ, ಬಹಳ ಮುತುವರ್ಜಿ ವಹಿಸಲಾಯಿತು.

ನಾಲ್ಕು ಚದರ ಸೆಂಟಿಮೀಟರಿನಷ್ಟು ವಿಸ್ತೀರ್ಣದ ಸಾಮಾನ್ಯ ಆರೋಗ್ಯಯುತ ಚರ್ಮವನ್ನು ರೋಗಿಯ ದೇಹದಿಂದ ತೆಗೆದು, ಈ ಮೊದಲು ಹೇಳಿದ, "3 ಟಿ 3" ಜೀವಕೋಶಗಳ ಹಾಸಿಗೆಯ ಮೇಲೆ ನೆಡಲಾಯಿತು. ಮೂರು ವಾರಗಳಲ್ಲಿ ಈ ನಾಲ್ಕು ಚದರ ಸೆಂಟಿ ಮೀಟರ್ ವಿಸ್ತೀರ್ಣದ ಚರ್ಮ 700ರಿಂದ 800 ಚದರ ಸೆಂಟಿಮೀಟರ್ ವಿಸ್ತೀರ್ಣಕ್ಕೆ ಬೆಳೆಯುತ್ತದೆ! ಇದನ್ನು ಮತ್ತೆ ತುಂಡು ಮಾಡಿ ಬೆಳೆಸಿದರೆ, ಐದು ವಾರಗಳಲ್ಲಿ ಮೂಲದ ನಾಲ್ಕು ಚದರ ಸೆಂಟಿಮೀಟರ್ ವಿಸ್ತೀರ್ಣದ 2000 ಸೆಂಟಿಮೀಟರಿನಷ್ಟು ವಿಸ್ತೀರ್ಣದ ಚರ್ಮವನ್ನು ಬೆಳಸಬಹುದು! ಇದು ಹೊರಗಿನ ರಕ್ಷಣಾ ಪದರ. ಇದುವರೆವಿಗೂ ಪೂರ್ಣ ದಪ್ಪದ ಚರ್ಮವನ್ನು ಬೆಳೆಸಲು ಸಾಧ್ಯ ವಾಗಿಲ್ಲ. ಹಾಗಾಗಿ ಗಾಯ ಮಾಯಲು ಶುರುವಾದಾಗ, ಈ ಚರ್ಮ ಕಸಿ ಮಾಡಿದ ಭಾಗದ ಚರ್ಮದಲ್ಲಿ ಸ್ವೇದ ಗ್ರಂಥಿಗಳಾಗಲೀ, ರೋಮಕೂಪಗಳಾಗಲೀ ಇರುವುದಿಲ್ಲ! ಆದರೆ ರೂಢಿಯಲ್ಲಿ ರುವ ಚರ್ಮ ಕಸಿಯಲ್ಲೂ ಇದೇ ವಿಚಾರವೆನ್ನಿ. ಆದರೂ ಈ 'ಸ್ಯಾಲಿಸ್‌ಬರಿ' ದಂಪತಿಗಳು ಮುಂದೊಮ್ಮೆ ಸ್ವೇದ ಗ್ರಂಥಿಗಳು ಮತ್ತು ರೋಮಕೂಪಗಳನ್ನೊಳಗೊಂಡ ದಪ್ಪ ಚರ್ಮವನ್ನು ಬೆಳೆಯಲು ಸಾಧ್ಯವಾಗಬಹುದು ಎಂಬ ಆಸೆಯನ್ನು ಇಟ್ಟುಕೊಂಡಿದ್ದಾರೆ.

ಸುಟ್ಟಗಾಯದ ಆಕಸ್ಮಿಕಗಳಲ್ಲಿ ಶೇಕಡಾ 50 ರಷ್ಟು ದೇಹದ ಮೇಲ್ಮೈ ಭಾಗದ ಚರ್ಮ ಹಾಳಾದಾಗ, ಅವರ ಸಾವಿನ ಪ್ರಮಾಣ ಶೇಕಡಾ 50 ಎಂದು ಸಾಮಾನ್ಯವಾಗಿ ಹೇಳಲಾಗು ತ್ತದೆ. ಈ ಹೊಸ ಚರ್ಮ ಕಸಿ ವಿಧಾನದಿಂದ ಸಾವಿನ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ. ಅಲ್ಲದೆ ಸುಟ್ಟಗಾಯದಿಂದ ಬಳಲುವವರು ಆಸ್ಪತ್ರೆಯಲ್ಲಿ ಕಳೆಯುವ ಕಾಲವೂ ಕಡಿಮೆಯಾಗು ತ್ತದೆ. 'ಪ್ಲಾಸ್ಟಿಕ್ ಸರ್ಜರಿ'ಗಾಗಿ ಮತ್ತೆ ಆಸ್ಪತ್ರೆ ಸೇರುವ ಪ್ರಸಂಗಗಳು ಕಡಿಮೆಯಾಗುವ ಸಾಧ್ಯತೆಯೂ ಇದೆ.

●

ಜೆ.ವಿ. ಶಶಿಧರ

(ಆಧಾರ: 'Spectrum')

ನನ್ನ ಇಚ್ಛೆ

ಜನ ಕಿಕ್ಕಿರಿದ ಬೀದಿಗಳಲ್ಲಿ ಅಥವಾ
ಜನ ತುಂಬಿದ ಚರ್ಚಿನಾವರಣದಲ್ಲಿ;
ಅಥವಾ ಬಿಸಿರಕ್ತದ ತರುಣರೊಡನೆ ಕುಳಿತಾಗ
ಮುಳುಗುವದು ಮನಸು ಹಗಲುಗನಸಿನಲ್ಲಿ.

ನುಡಿವೆ ನನ್ನಷ್ಟಕ್ಕೆ ನಾ; ಉರುಳುವವು ವರ್ಷಗಳು
ನನ್ನ ಕಣ್ಣಿಗೆ ಬೀಳುವರಲ್ಲಿ ಅನೇಕರು;
ನಾವೆಲ್ಲರಳಿಯುವೆವು ಗುಹ್ಯ ಗವಿಯಲ್ಲಿ
ಸೇರುವರಲ್ಲಿ ಅವಧಿ ಮುಗಿದವರೆಲ್ಲರು.
ಎಲ್ಲಿ, ಏನಾಗುವುದೂ ಯಾವೆಡೆಯಲ್ಲಿ;
ಹೀಗಿದ್ದರೂ ವಿಶ್ರಮಿಸುವ ಇಚ್ಛೆ. ನನ್ನದು
ನನ್ನ ಪ್ರೀತಿಯು ಕರೆವ ಸ್ಥಳಗಳಲ್ಲಿ.

ಮಸಣವಿರಲಿ, ಪ್ರವೇಶ ದ್ವಾರಗಳಿರಲಿ ಅಲ್ಲಿ
ಆಟವಾಡಲಿ ತರುಣ ಬದುಕು ಸತತ;
ಸುರಿಯಲಿ ನಿಸರ್ಗ ತನ್ನ ರಮಣೀಯತೆಯ
ಸುಂದರಗೊಳ್ಳಲಿ ಬದುಕು ಶಾಶ್ವತ.

ಸ್ವಾಗತವ ನುಡಿಯುವುದು ರೂಢಿ ನನಗೆ
ಪ್ರತಿನಿತ್ಯ, ಪ್ರತಿವರ್ಷ ತರ್ಕಿಸುವೆ ನಿಂತು;
ಯಾವ ದಿನ, ಯಾವ ವರ್ಷ, ವಿಜೃಂಭಿಸುವುದೊ
ನನ್ನ ಮೃತ್ಯು ಭವಿಷತ್ತಿನಲಿ ಎಂದಿಂತು.

ಎಲ್ಲಿ ಅಟ್ಟುವುದೇನೊ ದೈವ ಮೃತ್ಯುವನು
ಪಯಣದಲ್ಲಿಯೊ, ಯುದ್ಧದಲ್ಲಿಯೊ ಬಲ್ಲರಾರು?
ಯಾವ ಕಣಿವೆ-ಕಂದರದಲ್ಲಿ, ಪ್ರವಾಹದಲ್ಲಿ
ಅಥವಾ ಮಣ್ಣಿನಲಿ, ಅರಿತವರಾರು?

ಜಗದ ಭಾವಗಳ ಕಳಚಿ ಬೀಳುವ ವೇಷ
ಒಂಟಿ ನಿಂತಿರುವ ಓಕ್ ಮರವ ದಿಟ್ಟಿಸಿದಂತೆ
ಭಾವಿಸುವೆನಿಂತು ಈ ಕಾಡಿನ ಬದುಕನ್ನು;
ಅಧಿಪತಿಗಳು ಮೀರಿ ನಿಂತವರ ಅವಧಿಯನ್ನು
ಅಂತೆ ನನ್ನ ಪೂರ್ವಜರು ಮೌನವಾಗಿರುವುದನ್ನು.

ಮುಗ್ಧ ಮುದ್ದು ಮಗುವನ್ನು ಪ್ರೀತಿಸುವಾಗ
ತರ್ಕಿಸುವೆ ನಿಂತು ಸ್ವಾಗತ ಕೋರಿ ಇಂದು;
ಬಿಟ್ಟು ಕೊಡುವೆನು ನನ್ನ ಸ್ಥಾನವನು ನಿನಗಾಗಿ
ನಾನಳಿಯುವೆನು, ನೀ ಅರಳುವ ಕಾಲವೆಂದು.

ಮೂಲ: ಅಲೆಕ್ಸಾಂಡ್ರ್ ಪುಷ್ಕಿನ್
ಅನು : ಬುದ್ದಣ್ಣ ಹಿಂಗಮಿರೆ

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದ ಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ಪ್ರೇಯಸಿ
   ಅ) ಪ್ರಾಯಕ್ಕೆ ಬಂದವಳು
   ಆ) ಪ್ರೀತಿಯವಳು
   ಇ) ಕಳಿಸಲ್ಪಡುವವಳು
   ಈ) ಉಕ್ಕಿನ

2. ಕುಶಾಲ್
   ಅ) ಸಂತೋಷ ಪ್ರದರ್ಶಕ
   ಆ) ಕೊಲೆಗಡಕ
   ಇ) ಒಂದು ಬಗೆಯ ಹುಲ್ಲಿನ ಉಂಗುರ
   ಈ) ಡಂಗುರ

3. ವಿಸ್ಥಾಪಿತ
   ಅ) ಗಟ್ಟಿಮುಟ್ಟಾದ
   ಆ) ನೆಲೆನಿಂತ
   ಇ) ಧರ್ಮಕ್ಕೆ ಕೊಟ್ಟ
   ಈ) ನೆಲೆತಪ್ಪಿದ

4. ಪ್ರಸ್ಥ
   ಅ) ಕುತೂಹಲ
   ಆ) ತಿಳಿದವ
   ಇ) ಸ್ವಪ್ರತಿಷ್ಠೆ
   ಈ) ಹೆಗಲಿನ ಎಲುಬು

5. ಬೂಟಕ
   ಅ) ಕಪಟ
   ಆ) ಪಿಶಾಚಿಯಂಥ
   ಇ) ಹೊಟ್ಟೆಯೊಳಗಿನ ಶಿಶು
   ಈ) ಅಲೆದಾಡುವ

6. ಅನುಸಂತತ
   ಅ) ಒಂದಕ್ಕೊಂದು ಸಂಬಂಧವಿಲ್ಲದ
   ಆ) ಬಿಟ್ಟೂಬಿಡದೆ ಮುಂದುವರಿದ
   ಇ) ಬೆಂಬತ್ತಿದ
   ಈ) ಒಂದೆಡೆ ಕೂಡಿದ

7. ಉತ್ತಾರ
   ಅ) ಬಚಾವು
   ಆ) ಏಳಿಗೆ
   ಇ) ಉಚಿತವಾಗಿ ಬಿಟ್ಟಿದ್ದು
   ಈ) ಸಾಲ

8. ಪುದುವು
   ಅ) ಗುಪ್ತಧನ
   ಆ) ಅಡಗು
   ಇ) ಕಾಪಾಡು
   ಈ) ಸಂಬಂಧ

9. ಪಾಶವಿ
   ಅ) ಇಂದ್ರನ ಹೆಂಡತಿ
   ಆ) ಶಿವನ ಹೆಂಡತಿ
   ಇ) ಪಶುಗಳಂಥ
   ಈ) ಉರುಲು

10. ಏಕತ್ರಿತ
   ಅ) ಒಂದರಿಂದ ಮೂರರವರೆಗಿನ
   ಆ) ನಾಲ್ಕು
   ಇ) ಮೊರೆಹೊಕ್ಕ
   ಈ) ಒಂದೆಡೆ ಸೇರಿದ

11. ಹುಂಡಿ
   ಅ) ಹಣ ಕೂಡಿಡುವ ಡಬ್ಬಿ
   ಆ) ಬಗ್ಗ ಬಗ್ಗದ ಆಕಳು
   ಇ) ಚಿಕ್ಕ ಹೊಂಡ
   ಈ) ಎಣ್ಣೆ ತೆಗೆದ ಮೇಲೆ ಉಳಿಯುವ ಚರಟ

12. ತೀರ್ಥರೂಪ
   ಅ) ಹೊಳೆದಾಟುವುದು
   ಆ) ತಂದೆ
   ಇ) ಕಡಲ ದಂಡೆ
   ಈ) ಸುಂದರ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. ಪ್ರೇಯಸಿ

ಆ) ಪ್ರೀತಿಯುವಳು, ನಲ್ಲೆ, ಪ್ರಿಯೆ: (ಸಾಮಾನ್ಯವಾಗಿ) ಇನ್ನೂ ಮದುವೆ ಮಾಡಿಕೊಳ್ಳದ ಪ್ರೇಮಿಕೆ. ಉದಾ: ಅವನಿಗೆ ಹಲವು ಪ್ರೇಯಸಿಯರು. (ಸಂ)

2. ಕುಶಾಲ್

ಆ) ಸಂತೋಷ ಪ್ರದರ್ಶನ, ವಿನೋದದ ಉದಾ: ಕುಶಾಲ್ ತೋಪು ಅತಿಥಿಗೆ ಗೌರವಾರ್ಥ ಹಾರಿಸುವ ಫಿರಂಗಿ (ಪಾರಸೀಕ-ಖುಶ್ ಹಾಲ್-ಸುಖಾವಸ್ಥೆ).

3. ವಿಸ್ಥಾಪಿತ

ಈ) ನೆಲೆತಪ್ಪಿದ, ನೆಲೆಕೆಡಿಸಲ್ಪಟ್ಟ, ಸ್ಥಾನಭ್ರಷ್ಟ. ಉದಾ: ನೆರೆಹೊರೆಯ ಸರಕಾರಗಳನ್ನು ವಿಸ್ಥಾಪಿತಗೊಳಿಸಲು ಯತ್ನಿಸಿದರು (ಸಂ.ವಿ-ಅಲ್ಲ+ಸ್ಥಾಪಿತ-ನೆಲೆಗೊಂಡ)

4. ಪ್ರಸ್ಥ

ಇ) ಸ್ವಪ್ರತಿಷ್ಠೆ, ಹಿರಿತನ, ಹಿರಿಮೆ. ಉದಾ: ತಮ್ಮ ಪ್ರಸ್ಥ ಬೆಳೆಸಿಕೊಳ್ಳುವ ರಾಜಕಾರಣಿಗಳು.

5. ಬೂಟಕ

ಅ) ಕಪಟ, ಮೋಸ, ಮೋಸಗಾರ, ಡಾಂಭಿಕ. ಉದಾ: ಬೂಟಕದ ಮಾತಾಡಿ ಕಾರ್ಯ ಸಾಧಿಸಿದ (ದೇಶ್ಯ).

6. ಅನುಸಂತತ

ಆ) ಬಿಟ್ಟೂಬಿಡದೆ, ಮುಂದುವರಿದ. ಎರಿಗಡಿಯುದ. ಉದಾ: ಕರ್ಮಗಳ ಅನುಸಂತತ ಸರಪಳಿ (ಸಂ)

7. ಉತ್ತಾರ

ಇ) ಉಚಿತವಾಗಿ ಬಿಟ್ಟ ಭೂಮಿ, ಉಂಬಳಿ, ದತ್ತಿ. ಉದಾ: ಮಠಕ್ಕೆ ಬಿಟ್ಟ ಉತ್ತಾರದ ಗ್ರಾಮ (ಸಂ)

8. ಪುದುವು

ಈ) ಸಂಬಂಧ, ಹೊಂದಾಣಿಕೆ, ಮೊರೆ, ಆಶ್ರಯ ಉದಾ: ಅವನಿಗೂ ಇವನಿಗೂ ಹೆಂಡತಿಯ ಕಡೆಯಿಂದ ಪುದುವು (ದೇಶ್ಯ. ತುಳು-ಪೊದು)

9. ಪಾಶವಿ

ಇ) ಪಶುಗಳಂಥ, ಮೃಗೀಯ, ಅನಾಗರಿಕ ಉದಾ: ಪಾಶವೀ ಹಿಂಸೆ (ಸಂ. ಪಶುವಿನಿಂದ)

10. ಏಕತ್ರಿತ

ಈ) ಒಂದೆಡೆ ಸೇರಿದ, ಸಂದಣಿಸಿದ. ಉದಾ: ದೊಡ್ಡಗುಂಪು ಏಕತ್ರಿತವಾಯಿತು (ಸಂ. ಏಕತ್ರ-ಒಂದೆಡೆ)

11. ಹುಂಡಿ

ಆ) ಹಣ ಕೂಡಿಡುವ ಡಬ್ಬಿ, ಕಣಜ, ಇತ್ಯಾದಿ. ಚೆಕ್, ಬ್ಯಾಂಕ್ ಡ್ರಾಫ್ಟ್, ಸಾಲಪತ್ರ ಇತ್ಯಾದಿ. ಉದಾ: ದೇವರ ಹುಂಡಿ (ಮರಾಠಿ?)

12. ತೀರ್ಥರೂಪ

ಆ) ತಂದೆಯನ್ನು ಕುರಿತಾಡುವಾಗ ಬಳಸುವ ಗೌರವದ ಮಾತು. ಉದಾ: ತೀರ್ಥರೂಪರಿಗೆ ಒಪ್ಪಿಗೆಯಾಗಲಿಲ್ಲ (ಸಂ. ತೀರ್ಥ-ಪವಿತ್ರ+ ರೂಪ).

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ನೋಡಿ. ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6-8 ಸರಿಯಿದ್ದರೆ ... ಸಾಧಾರಣ
9-10 " ... ಉತ್ತಮ
11-12 " ... ಅತ್ಯುತ್ತಮ

ಗಂಗಾನದಿಯ ಪಾವಿತ್ರ್ಯ ಕಟ್ಟುಕಥೆಯಲ್ಲ
ಆದರಲ್ಲಿ ವೈಜ್ಞಾನಿಕ ತಥ್ಯ ಅಡಕವಾಗಿದೆ.

ಕಸ್ತೂರಿ ನಡೆದುಬಂದದಾರಿ

ಔಷಧಂ ಜಾಹ್ನವೀ ತೋಯಂ

ಮುತ್ತಿನ ಕೋಲಿಗೆ ಅಲ್ಲಲ್ಲಿ ನೀಲದ
ಮಣಿಗಳ ಕೋದಂತೆ ಒಂದೆಡೆಗೆ
ಬೆಳುದಾವರೆಗಳ ಮಾಲೆಯೊಳಲ್ಲಲ್ಲಿ
ನೈದಿಲೆಗಳನ್ನಿಟ್ಟಂತಿನ್ನೊಂದೆಡೆ,
ಕೆಲವೆಡೆ ಹಾರಾಟ ಮಾನಸ ಹಂಸಗ-
ಳೋಳಿ ಮೋಡಗಳಲ್ಲಿ ಬೆರೆತಂತೆ,
ಬೇರೊಮ್ಮೆ ಶರಧಿ ಬಿಳಿ ಮೋಡದೆಡೆಯಲ್ಲಿ
ಬಾನ್ನೀಲವಲ್ಲಲ್ಲಿ ಹಣಕಿದಂತೆ
ಮತ್ತೊಮ್ಮೆ ಕಾಳ ಸರ್ಪಗಳನ್ನು ತೊಟ್ಟಂಥ
ಭಸ್ಮಭೂಷಿತ ಶಿವ ತನುವಿನಂತೆ,
ಯಮನೆಯ ತೆರೆಗಳನಪ್ಪಿದ ಗಂಗೆಯ
ಸೊಬಗ ನಾನೇನೆಂಬೆ ನೋಡೆ ಕಾಂತೆ.
-ರಘುವಂಶ.

ಮಹಾಕವಿ ಕಾಳಿದಾಸನ ಸೌಂದರ್ಯ ದೃಷ್ಟಿಗೆ ಗಂಗೆಯಲ್ಲಿ, ಗಂಗಾಜಲದಲ್ಲಿ ಮೇಲೆ ವರ್ಣಿಸಿದಂತೆ ಸೌಂದರ್ಯವು ಕಂಡುಬಂದಿತು. ಆದರೆ ಗಂಗಾ ನದಿಯ ವೈಶಿಷ್ಟ್ಯವು ಕೇವಲ ಸೌಂದರ್ಯ ಮಾತ್ರವಲ್ಲ.

ಹಿಂದು ಧರ್ಮದಲ್ಲಿ ನದಿಗಳಿಗೆ ಅತಿಶಯ ಮಹತ್ವದ ಸ್ಥಾನ ಕೊಡಲ್ಪಟ್ಟಿದೆ. ನದಿಗಳನ್ನು, ಅದರಲ್ಲೂ ಗಂಗಾ ನದಿಯನ್ನು ನಾವು ಬಹು ಪವಿತ್ರವೆಂದು ಭಾವಿಸುತ್ತೇವೆ. ಗಂಗೆಯಲ್ಲಿ ಒಮ್ಮೆ ಸ್ನಾನ ಮಾಡುವುದರಿಂದ ಸಕಲ ಪಾಪ ತೊಳೆದು ಹೋಗುವುದು ಎಂದು ನಂಬುತ್ತೇವೆ. ನಮ್ಮಲ್ಲಿ ಗಂಗಾ ನದಿಯ ಈ ಮಹಾತ್ಮೆಯನ್ನು ಪ್ರಾಚೀನ ಕಾಲದಿಂದಲೂ ಮನ್ನಿಸುತ್ತ ಬಂದಿದ್ದಾರೆ. ಗಂಗಾಜಲವು ಪವಿತ್ರವೂ ಆರೋಗ್ಯದಾಯಿಯೂ ಎಂದು ತಿಳಿದಿದ್ದೇವೆ. ನಮ್ಮ ಪುರಾಣ ಗ್ರಂಥಗಳಲ್ಲಿ ಮತ್ತು ಐತಿಹಾಸಿಕ ಗ್ರಂಥಗಳಲ್ಲಿ ಗಂಗಾಸ್ನಾನದಿಂದ ಪುಣ್ಯ ಲಭಿಸುವುದರ ಜೊತೆಗೆ ಆರೋಗ್ಯ ಪ್ರಾಪ್ತಿಯೂ ಆಗುವುದೆಂಬ ಉಲ್ಲೇಖಗಳಿವೆ.

2000 ವರ್ಷಗಳ ಹಿಂದೆಯೇ
ಆಯುರ್ವೇದ ವಿಶಾರದ ಚರಕನು

ಹಿಮವತ್ಪ್ರಭವಾ ಪಥ್ಯಾಃ
ಪುಣ್ಯಾ ದೇವರ್ಷಿ ಸೇವಿತಃ

1956ರ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದದ್ದು

"ಹಿಮಾಲಯದಿಂದ ಹೊರಡುವ ಈ ನದಿಗಳು ಹಿತಕರವೂ ಪುಣ್ಯಕಾರಕವೂ ಆಗಿವೆ" ಎಂದು ಬರೆದಿದ್ದಾನೆ.

ಹಿಮವನ್ಮಲಯೋದ್ಭೂತಾಃ
ಪಥ್ಯಾಸ್ತಾ ಏವ ಚ ಸ್ಥಿರಾಃ

"ಹಿಮಾಲಯ ಮತ್ತು ಮಲಯ ಗಿರಿಗಳಿಂದ ಹೊರಡುವ ನದಿಗಳು ಪಥ್ಯಕಾರಕವೂ ಸ್ಥಿರವೂ ಆಗಿವೆ" ಎಂದಿದ್ದಾನೆ.

ಈ ನದಿಗಳ ನೀರು ಗುಡ್ಡ ಕೊಳ್ಳಗಳಲ್ಲಿ ಹರಿದು ಬರುವುದರಿಂದ ಅವುಗಳ ನೀರು ಪಚನಕ್ಕೆ ಹಗುರಾಗಿರುತ್ತದೆ. ಚಕ್ರಪಾಣಿ ದತ್ತನು ಹಿಮಾಲಯ

ಗಂಗಾ ಜಲಂ ಪಥ್ಯಂ

"ಮೇಲಿನ ಲಕ್ಷಣಗಳಿಂದ ಗಂಗಾ ನದಿಯ ಉಗಮ ಹಿಮಾಲಯದಲ್ಲಿದೆ ಆದುದರಿಂದಲೇ ಅದರ ನೀರು ಹಿತಕರವಾಗಿದೆ" ಎಂದು ಹೇಳಿದ್ದಾನೆ.

ಪುಣೆಯ "ಭಂಡಾರಕರ ರಿಸರ್ಚ್ ಇನ್‌ಸ್ಟಿಟ್ಯೂಟ"ದಲ್ಲಿ 'ಭೋಜನ ಕುತೂಹಲ' ಎಂಬುದೊಂದು ಹಸ್ತಲಿಖಿತ ಗ್ರಂಥವಿದೆ. ಅದರಲ್ಲಿ

ಶ್ವೇತಂ ಸ್ವಾದು ಸ್ವಚ್ಛ ಮತ್ಯಂತರುಚ್ಯಂ
ಪಥ್ಯಂ ಪಾಕ್ಯಂ ಪಾಚನಂ ಪಾಪಹಾರಿ।

"ಈ ಗಂಗಾಜಲವು ಶುಭ್ರ, ಸ್ವಚ್ಛ, ಸ್ವಾದಿಷ್ಟ, ರುಚಿಕರ, ಅಡಿಗೆಗೆ ಯೋಗ್ಯ, ಪಚನ ಶಕ್ತಿಗೆ ಪೋಷಕ ಮತ್ತು ಪಾಪಗಳನ್ನು ನಾಶಮಾಡುವದಾಗಿದೆ" ಎಂದು ಹೇಳಿದೆ. ಗಂಗಾಜಲವು ಬುದ್ಧಿವರ್ಧಕವೂ ಆಗಿದೆ. ಗಂಗಾಜಲದಲ್ಲಿ ಇಷ್ಟೆಲ್ಲ ಗುಣಗಳಿವೆಯೆಂದೇ ನಾವು ಪ್ರಾಚೀನ ಕಾಲದಿಂದಲೂ ಅದನ್ನು 'ತೀರ್ಥ' ಎಂಬ ಪಾವಿತ್ರ್ಯ ನಿರ್ದೇಶಕ ಸಂಜ್ಞೆಯಿಂದ ಸಂಬೋಧಿಸುತ್ತ ಬಂದಿದ್ದೇವೆ.

ಬಹುಗುಣ ಸಂಪನ್ನವಾದ ಪವಿತ್ರ ಗಂಗಾಜಲದ ಸೇವನೆಯನ್ನು ಹಿಂದುಗಳಂತೂ ಸರಿ, ಭಾರತದಲ್ಲಿ ಆಳಿದ ವಿದೇಶೀ ರಾಜರು ಕೂಡ ಮಾಡುತ್ತಿದ್ದರು. 16ನೆಯ ಶತಮಾನದಲ್ಲಿ ಆಗಿಹೋದ ಮಹಮ್ಮದ ತಘಲಕನು ನಿಯಮಿತವಾಗಿ ಗಂಗಾಜಲವನ್ನು ಪಾನ ಮಾಡುತ್ತಿದ್ದನು. ಅವನು ದೌಲತಾಬಾದಿನಲ್ಲಿ ವಾಸಿಸುತ್ತಿದ್ದರೂ ಕಾಶಿಯಿಂದ ಗಂಗಾಜಲವನ್ನು ತರಿಸಿಕೊಳ್ಳುತ್ತಿದ್ದನು. ಕಾಶಿಯಿಂದ ದೌಲತಾಬಾದಕ್ಕೆ ಗಂಗಾಜಲವನ್ನು ತರಲು 80 ದಿನಗಳು ಹಿಡಿಯುತ್ತಿದ್ದವು. ಅದರಂತೆ ವಿಪರೀತ ವೆಚ್ಚವು ಬರುತ್ತಿತ್ತು.

ಮಹಮ್ಮದ ತಘಲಕನಂತೆ ಅಕಬರ ಬಾದಶಾಹನಿಗೂ ಗಂಗಾಜಲವಿಲ್ಲದೆ ನಡೆಯುತ್ತಿರಲಿಲ್ಲ. ಅಬುಲ ಫಜಲನು ಅಕಬರನ

ಗಂಗಾನದಿ ಭಾರತದ ಪುರಾಣಗಳ ಪ್ರಕಾರ ದೇವಲೋಕದ ನದಿ. ಅವಳನ್ನು ಭೂಮಿಗಿಳಿಸಿದವನು ಇಕ್ಷ್ವಾಕು ವಂಶದ ಭಗೀರಥ ರಾಜ. ಭಗೀರಥನ ಮುತ್ತಜ್ಜಂದಿರಾದ 60 ಸಾವಿರ ಸಗರ ಪುತ್ರರು ಕಪಿಲ ಮುನಿಯನ್ನು ಕೆರಳಿಸಿ ಅವನ ಕೋಪಾಗ್ನಿಯಿಂದ ಭಸ್ಮವಾದರು. ಅವರಿಗೆ ಸದ್ಗತಿಯನ್ನುಂಟುಮಾಡಲು ದೇವಲೋಕದಿಂದ ಗಂಗೆಯನ್ನು ಭೂಮಿಗಿಳಿಸಬೇಕೆಂದು ಭಗೀರಥನು ತಪಸ್ಸು ಮಾಡಿದನು. ಆದರೆ ದೇವಲೋಕದಿಂದ ಧುಮುಕುವ ಅವಳ ವೇಗವನ್ನು ತಡೆಯಲಸಾಧ್ಯವೆನಿಸಿತು. ಭಗೀರಥನು ಮತ್ತೆ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಅವನ ತಲೆಯ ಮೇಲೆ ಗಂಗೆ ಬಿದ್ದು ಆಮೇಲೆ ಸಾವಧಾನವಾಗಿ ಭೂಮಿಗಿಳಿಯುವಂತೆ ವರ ಪಡೆದನು.

ಬಳಿಕ ಭಗೀರಥನನ್ನು ಅನುಸರಿಸಿ ಬಂದ ಗಂಗೆ ದಾರಿಯಲ್ಲಿ ಜಹ್ನುವಿನ ಯಜ್ಞಶಾಲೆಯಲ್ಲಿ ನುಗ್ಗಿದ್ದರಿಂದ ಅವನು ಸಿಟ್ಟಾಗಿ ಅವಳನ್ನು ನುಂಗಿಬಿಟ್ಟನು. ಭಗೀರಥನು ಅವನನ್ನೊಲಿಸಿ ಗಂಗೆಯನ್ನು ಕಿವಿಯಿಂದ ಹೊರಬಿಡುವಂತೆ ಮಾಡಿದನು.

ಇಷ್ಟೆಲ್ಲ ಕಷ್ಟಪಟ್ಟು ಭಗೀರಥನು ಅವಳನ್ನು ತನ್ನ ಮುತ್ತಜ್ಜಂದಿರಾದ ಸಗರರ ಬೂದಿಯ ಮೇಲೆ ಹರಿಸಿ ಅವರಿಗೆ ಸದ್ಗತಿಯುಂಟುಮಾಡಿದನು. ಅದಕ್ಕಾಗಿ ಇಂದಿಗೂ ಮಹಾ ಪ್ರಯತ್ನವನ್ನು 'ಭಗೀರಥ ಪ್ರಯತ್ನ'ವೆಂದು ವಿಶೇಷಿಸಲಾಗುತ್ತದೆ.

ಭಗೀರಥನ ಸಂಬಂಧದಿಂದ 'ಭಾಗೀರಥಿ'ಯೆಂದೂ, ಜಹ್ನುವಿನ ಸಂಬಂಧದಿಂದ 'ಜಾಹ್ನವಿ'ಯೆಂದೂ ಗಂಗೆಗೆ ಹೆಸರುಗಳು ಬಂದಿವೆ.

ವಿಚಾರವಾಗಿ ಬರೆದಿರುವ 'ಆಯಿನೆ ಅಕಬರಿ' ಗ್ರಂಥದಲ್ಲಿ ಅಕಬರನಿಗೆ ಗಂಗಾಜಲವು ಎಷ್ಟು ಪ್ರಿಯವಾಗಿತ್ತು ಎಂಬುದನ್ನು ಹೀಗೆ ವರ್ಣಿಸಿದೆ.

"ಬಾದಶಾಹನಿಗೆ ಗಂಗಾಜಲವು ಅಮೃತ ದಂತೆ ಭಾಸವಾಗುತ್ತಿತ್ತು. ಗಂಗಾಜಲವು ತನಗೆ ಸಿಗ ಬೇಕೆಂದು ಆತನು ಅದಕ್ಕಾಗಿ ಪ್ರತ್ಯೇಕ ಜನರನ್ನೇ ನೇಮಿಸಿಕೊಂಡಿದ್ದನು. ಈ ಜನರು ಗಂಗಾನದಿಯ ದಂಡೆಯಲ್ಲಿ ವಾಸಿಸುತ್ತಿದ್ದರು. ಗಂಗಾಜಲವನ್ನು ಕೊಡಗಳಲ್ಲಿ ತುಂಬಿ ಬಾಯಿಗೆ ಮುದ್ರೆಯೊತ್ತಿ ಬಾದಶಹನಿಗೆ ಕಳಿಸಿ ಕೊಡುತ್ತಿದ್ದರು. ಗಂಗಾಜಲವನ್ನಲ್ಲದೆ ಬೇರೆ ನೀರನ್ನೇ ಬಾದಶಹನು ಕುಡಿಯುತ್ತಿರಲಿಲ್ಲ. ಬಾದಶಾಹನಿಗಾಗಿ ಸಿದ್ಧಪಡಿಸುತ್ತಿದ್ದ ಅಡಿಗೆಗೆ ಉಪಯೋಗಿಸುತ್ತಿದ್ದ ಮಳೆಯ ನೀರು ಅಥವಾ ಯಮುನಾನದಿಯ ನೀರಿನಲ್ಲೂ ತುಸು ಗಂಗಾ ಜಲವನ್ನು ಸೇರಿಸುತ್ತಿದ್ದರು..."

ಹಿಂದುಗಳ ಮತ್ತು ಹಿಂದು ಧರ್ಮದ ಕಡು ವೈರಿಯಾದ ಔರಂಗಜೇಬ ಬಾದಶಾಹನಿಗೂ ಗಂಗಾಜಲವಿಲ್ಲದೆ ಸಾಗುತ್ತಿರಲಿಲ್ಲ. 1659 ರಿಂದ 1677ರ ನಡುವಿನ ಕಾಲದಲ್ಲಿ ಬರ್ನಿಯರ ಎಂಬ ಫ್ರಂಚ್ ಪ್ರವಾಸಿಯೊಬ್ಬ ಭಾರತದಲ್ಲಿದ್ದನು. ಆತನು ಬರೆದಿರುವ ಪ್ರವಾಸ ಗ್ರಂಥದಲ್ಲಿ ಔರಂಗಜೇಬನಿಗೆ ಗಂಗಾ ಜಲವು ಪ್ರಾಣಕ್ಕಿಂತಲೂ ಪ್ರಿಯವಾಗಿತ್ತು ಎಂಬ ಉಲ್ಲೇಖವಿದೆ. ಆತನ ದರಬಾರದ ಜನರೂ ಗಂಗಾಜಲವನ್ನು ಉಪಯೋಗಿಸು ತ್ತಿದ್ದರು. ಪ್ರವಾಸದಲ್ಲಿ ಔರಂಗಜೇಬನು ತನ್ನ ಸಂಗಡ ಗಂಗಾಜಲವನ್ನೊಯ್ಯುತ್ತಿದ್ದನು. ಗಂಗಾಜಲವನ್ನು ಒಂಟೆಗಳ ಮೂಲಕ ತರಿಸು ತ್ತಿದ್ದರು. ಮುಂಜಾನೆ ಉಪಾಹಾರದ ನಂತರ ಕುಡಿಯಲು ಔರಂಗಜೇಬನು ಗಂಗಾಜಲವನ್ನೇ ಉಪಯೋಗಿಸುತ್ತಿದ್ದನು.

ಟೆವ್ಹೆರ್ನಿಯರ ಎಂಬ ಫ್ರೆಂಚ್ ಪ್ರವಾಸಿಯ ಪುಸ್ತಕದಲ್ಲಿ ನವಾಬರು ಗಂಗಾಜಲವನ್ನು ಉಪಯೋಗಿಸುತ್ತಿದ್ದರು ಎಂಬ ದಾಖಲೆ ಯಿದೆ. ಲಗ್ನ ಹಾಗೂ ಇನ್ನಿತರ ಸಮಾರಂಭ ಪ್ರಸಂಗಗಳಲ್ಲಿ ಆಮಂತ್ರಿತರಿಗೆ ಕುಡಿಯಲು ಗಂಗಾಜಲವನ್ನು ಕೊಡಲಾಗುತ್ತಿತ್ತು ಎಂದು ಆತ ಬರೆದಿದ್ದಾನೆ. ಎಡ್ವರ್ಡ್ ಮೂರನು ಟೀಪೂ ಸುಲ್ತಾನನೊಂದಿಗೆ ಯಾವುದೋ ಯುದ್ಧದಲ್ಲಿ ಭಾಗವಹಿಸಿದ್ದನು. "ಟೀಪೂ ಸುಲ್ತಾನನು ಗಂಗಾಜಲವನ್ನು ಮಾತ್ರ ಕುಡಿಯುತ್ತಿದ್ದನು" , ಎಂದು ಅವನು ಬರೆದಿದ್ದಾನೆ. ಮಹಾರಾಷ್ಟ್ರ ರಾಜ್ಯಕರ್ತರಂತೂ ಗಂಗಾಜಲವನ್ನು ಅಮೃತ ತುಲ್ಯವೆಂದು ಭಾವಿಸುತ್ತಿದ್ದರು. ಬಹು ಕಷ್ಟ ದಿಂದ, ಬಹಳ ಹಣ ವೆಚ್ಚಮಾಡಿ ಪೇಶವೆಯರಿಗಾಗಿ ಕಾಶಿಯಿಂದ ಗಂಗಾಜಲ ವನ್ನು ತರಲಾಗುತ್ತಿತ್ತು.

ಪ್ರತಿವರ್ಷ ಲಕ್ಷಗಟ್ಟಳೆ ಹಿಂದುಗಳು ಈ ಪವಿತ್ರ ನದಿಯಲ್ಲಿ ಸ್ನಾನ ಮಾಡುತ್ತಾರೆ. ತಾಮ್ರದ ಪಾತ್ರೆಗಳಲ್ಲಿ ಗಂಗಾಜಲವನ್ನು ತುಂಬಿಕೊಂಡು ಮನೆಗೆ ತರುತ್ತಾರೆ. ತಾಮ್ರದ ಪಾತ್ರೆಗಳಲ್ಲಿ ಬಾಯಿಗೆ ಮುದ್ರೆ ಹಾಕಿಟ್ಟರೆ ಗಂಗಾಜಲವು ಎಷ್ಟು ವರ್ಷವಾದರೂ ತುಸು ವಾದರೂ ಕೆಡುವುದಿಲ್ಲವೆಂಬುದು ಸರ್ವವಿಧಿತ ವಾಗಿದೆ. ಇದರ ಸತ್ಯಾಸತ್ಯತೆಗಳ ಬಗ್ಗೆ ಶಾಸ್ತ್ರೀಯ ಸಂಶೋಧನವೂ ಆಗಿದೆ. ಅಮೇರಿಕದಲ್ಲಿ ಪ್ರಕಟವಾಗುವ 'ಸೆಲ್ಲ ರಿಯಲಾಯ ಝೇಶನ್' ಮಾಸಿಕದ 1958ರ ಒಂದು ಸಂಚಿಕೆಯಲ್ಲಿ 'ಭಾರತದ ಸರ್ವೋ ತ್ಕೃಷ್ಟತೆ' ಎಂಬ ಒಂದು ಲೇಖ ಬಂದಿದೆ. ಕಾನಡಾದ ಮ್ಯಾಕಗಿಲ್ ವಿಶ್ವವಿದ್ಯಾಲಯದ ಡಾ॥ ಎಫ್.ಸಿ. ಹ್ಯಾರಿಸನ್ನರು ಈ ಲೇಖದಲ್ಲಿ ಗಂಗಾಜಲದ ವಿಷಯವಾಗಿ ಈ ರೀತಿ ಬರೆದಿದ್ದಾರೆ.

"ಗಂಗಾನದಿಯ ನೀರಿನಲ್ಲಿ ಕಾಲರಾದ ಜಂತುಗಳು ಮೂರರಿಂದ ಐದು ತಾಸುಗಳೊಳ

ಪಾವಿತ್ರ್ಯ

ಗಂಗೆಯು ಪವಿತ್ರ
ಎನಿಸಿರುವುದು
ಅದರಲ್ಲಿ
ಹರಿದಿರುವ
ಭಗೀರಥನ
ಬೆವರಿನಿಂದ ಕೂಡ.

—ಡಾ॥ ಪಿ.ಎಸ್. ರಾಮಾನುಜಂ.
('ಮುಕ್ತಾಯ' ಕವನ ಸಂಗ್ರಹದಿಂದ)

ಗಾಗಿ ಸಾಯುತ್ತವೆ. ಗಂಗಾನದಿಯಲ್ಲಿ ಅನೇಕ ಬಗೆಯ ಕೊಳೆ ತೇಲಿಬರುತ್ತದೆ. ಹಾಗಿದ್ದರೂ ಸಾವಿರಾರು ಹಿಂದುಗಳು ಸ್ನಾನ ಮಾಡುತ್ತಾರೆ. ಗಂಗಾನದಿಯ ನೀರು ಎಂದಿಗೂ ಕೆಡುವುದಿಲ್ಲ. ಅದನ್ನು ಉಪಯೋಗಿಸಿದರೆ ಏನೂ ಕೆಡಕಿಲ್ಲ ಎಂದು ಅವರು ನಂಬುತ್ತಾರೆ. ಅವರ ಈ ನಂಬಿಗೆಯ ಆಧಾರದಿಂದ ಆಧುನಿಕ ಕ್ರಿಮಿ ಶಾಸ್ತ್ರೀಯ ಸಂಶೋಧನವನ್ನು ನಡೆಸಿ ನೋಡಬೇಕು"

ಈ ವಿಚಾರದಲ್ಲಿ ಪ್ರಖ್ಯಾತ ಫ್ರೆಂಚ್ ಡಾಕ್ಟರ್ ಡಿ. ಹೆರೆಲಿಯವರು ಕೂಡ ಕೆಲ ಪ್ರಯೋಗಗಳನ್ನು ಮಾಡಿದ್ದಾರೆ. ಅತಿಸಾರ ಮತ್ತು ಕಾಲರಾ ರೋಗಗಳಿಂದ ಸತ್ತ ಕೆಲವರ ಶವಗಳು ಕೆಳಗೆ ಕೆಲವು ಅಡಿಗಳವರೆಗೂ ನೀರಿನಲ್ಲಿ ರೋಗ ಜಂತುಗಳು ಕಾಣಿಸಿಗಬೇಕು. ಆದರೆ ಆ ಶವಗಳ ಅಕ್ಕಪಕ್ಕದಲ್ಲೂ ರೋಗ ಜಂತುಗಳು ಕಂಡು ಬರಲಿಲ್ಲ. ಇದನ್ನು ಕಂಡು ಡಾ॥ ಹೆರೆಲಿಯವರಿಗೆ ಆಶ್ಚರ್ಯವಾಯಿತು. ಅವರು ಇನ್ನೂ ಒಂದು ಪ್ರಯೋಗ ಮಾಡಿದರು. ಕೆಲ ರೋಗಿಗಳ ದೇಹದಿಂದ ಅವರು ಕೆಲ ರೋಗಜಂತುಗಳನ್ನು ಸಂಪಾದಿಸಿ ಅವನ್ನು ಬೆಳೆಸಿದರು. ನಂತರ ಅವುಗಳನ್ನಿಟ್ಟ ನಳಿಗೆಯಲ್ಲಿ ತುಸು ಗಂಗಾಜಲವನ್ನು ತುಂಬಿದರು. ಕೆಲ ವೇಳೆಯ ನಂತರ ನಳಿಗೆಯಲ್ಲಿದ್ದ ಸಕಲ ರೋಗಜಂತುಗಳೂ ನಾಶವಾಗಿದ್ದು ಅವರಿಗೆ ಕಂಡು ಬಂತು.

ಇನ್ನೂ ಒಂದು ಸಾಮಾನ್ಯ ಪ್ರಮಾಣವು ಗಮನಾರ್ಹವಾಗಿದೆ. ಗಂಗಾಜಲದ ಶುದ್ಧತೆಯ ವಿಷಯವಾಗಿ ಬ್ರಿಟಿಷ್ ಡಾಕ್ಟರ್ ಸಿ.ಈ. ನೆಲ್ಸನ್, ಎಫ್.ಆರ್. ಸಿ.ಎಸ್. ಇವರು ಹೀಗೆ ಬರೆದಿರುವರು:

"ಕಲ್ಕತ್ತೆಯಿಂದ ಇಂಗ್ಲೆಂಡಿಗೆ ಹೋಗುವ ಹಡಗುಗಳು ಹುಗಳಿ ನದಿಯ ನೀರನ್ನು ತುಂಬಿಕೊಳ್ಳುತ್ತವೆ. ಹುಗಳಿ ನದಿಯು ಗಂಗಾನದಿಯ ಮುಖವೇ ಆಗಿದೆ. ಇಂಗ್ಲೆಂಡನ್ನು ತಲುಪುವವರೆಗೂ ಈ ನೀರು ಶುದ್ಧವಾಗಿಯೇ ಇರುತ್ತದೆ. ಆದರೆ ಇಂಗ್ಲೆಂಡಿನಿಂದ ಹಿಂದುಸ್ತಾನಕ್ಕೆ ಬರುವ ಹಡಗುಗಳಲ್ಲಿ ತುಂಬಿಕೊಂಡ ನೀರು ಮುಂಬಯಿಗೆ ಬರುವವರೆಗೆ ಕೂಡ ಶುದ್ಧವಾಗಿರುವದಿಲ್ಲ. ಹಾದಿಯಲ್ಲಿ ಪೋರ್ಟ್ ಸಯ್ಯದ, ಸುಯೇಜ ಅಥವಾ ಏಡನಿನಲ್ಲಿ ಲಂಡನ್ನಿನಲ್ಲಿ ತುಂಬಿಕೊಂಡ ನೀರನ್ನು ಚೆಲ್ಲಿ ಹೊಸನೀರನ್ನು ತುಂಬಿಕೊಳ್ಳಬೇಕಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿಯೂ ಚರ್ಮ ರೋಗಗಳ ಚಿಕಿತ್ಸೆಗಾಗಿ ಗಂಗಾನದಿಯ ನೀರನ್ನು ಉಪಯೋಗಿಸುತ್ತಾರೆಂದು ತಿಳಿಯುತ್ತದೆ. ವಿಶೇಷ ಸಂಶೋಧನೆ ನಡೆಸಿದಲ್ಲಿ ಹಿಮಾಲಯದಲ್ಲಿ ಗಂಗಾನದಿಯ ಉಗಮವಿರುವಲ್ಲಿ ವಿಶಿಷ್ಟ ಪ್ರಕಾರ ಜಂತುನಾಶಕ ಮಹಾಶಕ್ತಿಶಾಲಿ ತತ್ವಗಳು ಕಂಡುಬರುವ ಸಂಭವವಿದೆ. ಯಾಕಂದರೆ ಹಿಮಾಲಯದ ಆ ಪ್ರದೇಶವು ವನಸ್ಪತಿ, ಔಷಧಿ ಮತ್ತು ಖನಿಜ ಪದಾರ್ಥಗಳ ಆಗರವಾಗಿದೆ"

ಪುರಾತನರು "ಔಷಧಂ ಜಾಹ್ನವೀತೋಯಂ ವೈದ್ಯೋ ನಾರಾಯಣೋ ಹರಿಃ" ಎಂದಾಗ ವೈಜ್ಞಾನಿಕ ಸತ್ಯವನ್ನೇ ಆಡಿದ್ದರು. ●

(ಹಿಂದಿ ಅನುವಾದ)

ಎಲ್ಲಿ ಹೋಯಿತು?

ಹಣತೆಯ ಹಚ್ಚಿ, ಬೆಳಕನು ಬೀರುತ ಬಂದನು ಕಂದ।
ನಿಂತು ನಾ ಕೇಳಿದೆ "ಕಂದ! ಇದನು ಎಲ್ಲಿಂದ ತಂದೆ?"।
ನಿಮಿಷಾರ್ಧದಲ್ಲಿ "ಉಫ್" ಎಂದು ಊದಿದನು ಕಂದ।
"ಈಗ ಹೇಳು, ಅದು ಎಲ್ಲಿ ಹೋಯಿತೆಂದು ತಂದೆ?"॥

-"ಹಸನ್"
ಅನುವಾದ: 'ಕಲಾ'

ಕೈಗಾರಿಕಾ ಮೂಲವಸ್ತುಗಳಾಗಿ



ಕಾಫಿಯ ವ್ಯರ್ಥ ವಸ್ತುಗಳು

—ಮುನಿಯಾಲ್ ಗಣೇಶ ಶೆಣೈ

ಕೆಲವು ದಿನಗಳ ಹಿಂದೆ ಮಡಿಕೇರಿಗೆ ಸಮೀಪದ ಚೆಟ್ಟಳ್ಳಿಗೆ ಅಲ್ಲಿಯ ಸುಂದರ ಪ್ರಕೃತಿಯ ಮಡಿಲಲ್ಲಿ ಕೆಲವು ದಿನಗಳನ್ನು ಕಳೆಯುವ ಉದ್ದೇಶದಿಂದ ಹೋಗಿದ್ದೆ. ಆದರೆ ಅಲ್ಲಿ ನನ್ನ ಪರಿಚಿತರ ಮನೆ ತಲುಪಿದಾಗ ಎಲ್ಲೆಲ್ಲೂ ಭೀಕರ ದುರ್ವಾಸನೆ. ಆ ಕಟು ಹುಳಿಯಾದ ವಾಸನೆ ನನ್ನ ನಾಸಿಕವನ್ನೂ, ಮಸ್ತಿಷ್ಕವನ್ನೂ ಕೆಣಕಿಬಿಟ್ಟಿತು. ಹಳ್ಳ, ತಗ್ಗು, ಮೋರಿ, ತೊರೆಗಳಲ್ಲೆಲ್ಲ ತುಂಬಿಹೋಗಿದ್ದ ಕೊಳೆತ ಕಾಫಿಯ ತಿರುಳು (ಪಲ್ಪ್) ಈ ದುರ್ವಾಸನೆಗೆ ಕಾರಣವೆಂದು ತಿಳಿಯಿತು. ಕಾಫಿ ಹಣ್ಣಿನಿಂದ ಬೀಜ ತೆಗೆದು ಉಳಿದ ತಿರುಳನ್ನು ಹೀಗೆ ಎಲ್ಲೆಂದರಲ್ಲಿ ಚೆಲ್ಲಿದ್ದರು. ದುರ್ನಾತದ ಈ ನರಕಕ್ಕಿಂತ ದಟ್ಟ ಹೊಗೆಯ ಬೆಂಗಳೂರೆಂಬ ನರಕವೇ ಉತ್ತಮವೆನಿಸಿತು ನನಗೆ.

ಹಬೆಯಾಡುವ ಕಾಫಿ ನಮ್ಮ ಮನಸ್ಸಿಗೆ ಆಹ್ಲಾದಕರವಾಗಿದ್ದರೂ, ಮಿದುಳನ್ನು ಪ್ರಚೋದಿಸುವುದಾದರೂ ಸುತ್ತಲಿನ ಪರಿಸರಕ್ಕಂತೂ ಖಂಡಿತ ಧಕ್ಕೆಯೊಡ್ಡುತ್ತಿದೆ. ಕಾಫಿಯ ವ್ಯರ್ಥ ವಸ್ತುಗಳ ವಿಲೇವಾರಿ ಹೇಗೆ ಎಂಬ ಸಮಸ್ಯೆ ತೀರಾ ಗಂಭೀರವಾಗಿದೆ. ಕಾಫಿಯನ್ನು ಬೆಳೆಯುವ ಬ್ರೆಝಿಲ್, ಕೊಲಂಬಿಯ, ಮೆಕ್ಸಿಕೊ, ಇಂಡೋನೇಶಿಯ, ಐವರಿಕೋಸ್ಟ್, ಕೊಸ್ಟಾರೀಕಾ ಮೊದಲಾದ ರಾಷ್ಟ್ರಗಳಲ್ಲಿ ಕಾಫಿಯ ವ್ಯರ್ಥ ವಸ್ತುಗಳನ್ನು ಇಲ್ಲಿಯವರೆಗೆ ಅನಿಯಂತ್ರಿತವಾಗಿ ಹೊರ ಹಾಕುತ್ತಿದ್ದರು. ಇದರ ಪರಿಣಾಮವಾಗಿ ನೆಲ, ನೀರು, ಗಾಳಿ ವಿಪರೀತ ಕಲುಷಿತವಾಗುತ್ತಿದೆ. ಲ್ಯಾಟಿನ್ ಅಮೇರಿಕವೊಂದರಲ್ಲೆ ಪ್ರತಿವರ್ಷ ಒಂದು ಕೋಟಿ ಟನ್ ಕಾಫಿಯ ವ್ಯರ್ಥ ವಸ್ತುಗಳನ್ನು ಹೊರಚೆಲ್ಲುತ್ತಿದ್ದಾರೆ. ಗ್ವಾಟೆಮಾಲದಲ್ಲಿಯಂತೂ ಹೀಗೆ ಚೆಲ್ಲಲ್ಪಡುವ ಕಾಫಿಯ ವ್ಯರ್ಥ

ವಸ್ತುಗಳ ಪ್ರಮಾಣ ಎಷ್ಟೆಂದರೆ ಅವು ಕೊಳೆಯಲು ಮೂರು ಕೋಟಿ ಜನರಿಗೆ ಬೇಕಾಗುವಷ್ಟು ಆಮ್ಲಜನಕವನ್ನು ಬಳಸುವಷ್ಟು. ಈ ಕಾರಣದಿಂದ ಪಶ್ಚಿಮ ಗ್ವಾಟೆಮಾಲದಲ್ಲಿ ಕುಡಿಯುವ ನೀರು ತೀರ ಕಲುಷಿತವಾಗುತ್ತಿರುವುದರಿಂದ ಅಲ್ಲಿರುವ ಕಾಫಿ ಸಂಸ್ಕರಣ ಘಟಕವನ್ನು ಮುಚ್ಚಬೇಕಾದ ಪರಿಸ್ಥಿತಿ ಒದಗಿದೆ.

ಕಾಫಿ ಹಣ್ಣಿನಲ್ಲಿ ಬೀಜ ಶೇಕಡಾ 44 ಭಾಗ, ಹಣ್ಣಿನ ತಿರುಳು ಶೇಕಡಾ 44 ಭಾಗ, ಬೀಜದ ಮೇಲಿನ ಒಂದು ಬಗೆಯ ಅಂಟು (ಮ್ಯುಸಿಲಿಜ್) ಶೇಕಡಾ 12 ಭಾಗ ಇರುತ್ತವೆ. ಒಂದು ಟನ್ ಒಣ ಕಾಫಿ ಬೀಜವನ್ನು ಪಡೆಯುವಾಗ ಮೂರು ಟನ್ ವ್ಯರ್ಥ ವಸ್ತುಗಳು ಉತ್ಪನ್ನವಾಗುತ್ತವೆ. ಇದಕ್ಕೆ ನಾಲ್ಕು ಟನ್ನಿನಷ್ಟು ನೀರು

ಕಾಫಿ: ಇನ್ನಷ್ಟು ವಿವರಗಳು

ಇಥಿಯೋಪಿಯದಲ್ಲಿ ಪ್ರಚಲಿತವಿರುವ ಒಂದು ದಂತ ಕತೆಯಿದು: ಕ್ರಿಸ್ತಶಕ 800ರ ಸುಮಾರಿನಲ್ಲಿ ಕುರುಬನೊಬ್ಬ, ತನ್ನ ಕುರಿಗಳು ಪೊದೆಯೊಂದರ ಹಣ್ಣುಗಳನ್ನು ತಿಂದಾಗ ತೀವ್ರ ಚಟುವಟಿಕೆಯಿಂದಿರುವುದನ್ನು ಗಮನಿಸಿದ. ಆತನೂ ಆ ಹಣ್ಣನ್ನು ತಿಂದಾಗ ಮನಸ್ಸು ಉಲ್ಲಾಸಗೊಂಡಿತು. ಹೀಗೆ ಕಾಫಿಯ ಗುಣ ಮೊದಲ ಬಾರಿಗೆ ಬೆಳಕಿಗೆ ಬಂತು.

ಅರಬ್ಬರು ಮೊದಲ ಬಾರಿಗೆ ಕಾಫಿಯನ್ನು ಕಾಯಿಸುವ ಕಲೆಯನ್ನು ಕಂಡುಕೊಂಡರು. ಆದರೆ ಅವರ ಧಾರ್ಮಿಕ ಗುರುಗಳು ಕಾಫಿಯನ್ನು ಮಾದಕ ವಸ್ತುವೆಂದು ಬಗೆದು ಅದನ್ನು ಸೇವಿಸುವವರನ್ನು ದಂಡಿಸಲಾರಂಭಿಸಿದರು. ಎಷ್ಟೇ ವಿರೋಧವಿದ್ದರೂ ಕಾಫಿ ಅರಬ್ಬರ ಜನಪ್ರಿಯ ಪಾನೀಯವಾಯಿತು. ಕ್ರಿಸ್ತಶಕ 1470ರಲ್ಲಿ ಮಕ್ಕಾ ಮದೀನಗಳಲ್ಲಿ ಕಾಫಿ ಗೃಹಗಳು ತಲೆ ಎತ್ತಿದವು. ಕ್ರಿಸ್ತಶಕ 1600 ಸುಮಾರಿಗೆ ಮಕ್ಕಾಕ್ಕೆ ಯಾತ್ರಾರ್ಥಿಯಾಗಿ ಬಂದ ಬಾಬಾ ಬುಡನ್ ತನ್ನ ತಾಯ್ನಾಡಿಗೆ ಮರಳುವಾಗ ಕಾಫಿ ಬೀಜವನ್ನು ತಂದು ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಕಾಫಿ ಬೆಳೆಯಲು ಕಾರಣನಾದ.

ಕಾಫಿ ಹಣ್ಣಿನಿಂದ ಕಾಫಿ ಪುಡಿಯಾಗುವವರೆಗೆ ಅನೇಕ ಕೆಲಸಗಳು ನಡೆಯುತ್ತವೆ. ಹಣ್ಣನ್ನು ಒಣಗಿಸಿ. ಕುಟ್ಟಿ. ಸಿಪ್ಪೆ ತೆಗೆದು ಬಂದ ಬೀಜವನ್ನು ಹುರಿದು ಪುಡಿ ಮಾಡಬಹುದು. ಆಧುನಿಕ ವಿಧಾನವೆಂದರೆ ಮೊದಲು ಹಣ್ಣಿನಿಂದ ತಿರುಳು ಸಿಪ್ಪೆ ಬೇರೆ ತೆಗೆದು ಬೀಜದ ಮೇಲಿನ ಹೊದಿಕೆ ತೆಗೆಯಲು ಅದನ್ನು ಕೊಳೆಯಿಸುತ್ತಾರೆ. ನಂತರ ಸಿಪ್ಪೆ ತೆಗೆದು ಒಣಗಿಸಿದ ಬೀಜವನು 260 ಸೆಲ್ಸಿಯಸ್ ಉಷ್ಣತೆಯಲ್ಲಿ ಹುರಿದು ಪುಡಿಮಾಡುತ್ತಾರೆ.

ಕಾಫಿಯ ಪರಿಮಳಕ್ಕೆ ಕಾರಣ ಅದರಲ್ಲಿರುವ ಕಾಫಿಯೋಲ್ ಎನ್ನುವ ತೈಲ. ಕಾಫಿಯಲ್ಲಿರುವ ಪ್ರಚೋದಕ ವಸ್ತು ಕೆಫಿನ್. ಕಾಫಿ ಪುಡಿಗೆ ಚಿಕೋರಿ. ಧಾನ್ಯಗಳು. ಸೋಯಾಬೀನ್. ನೆಲಗಡಲೆ ಮುಂತಾದವನ್ನು ಹುರಿದು ಪುಡಿ ಮಾಡಿ ಬೆರೆಸುವುದುಂಟು. ಕೆಫಿನ್ನನ್ನು ತೆಗೆದು ಸಹ ಕಾಫಿ ಮಾಡಬಹುದು. ಇಂಡೋನೇಶಿಯ ಮಲೇಶಿಯಗಳಲ್ಲಿ ಒಣ ಕಾಫಿ ಎಲೆಗಳಿಂದಲೂ ಕಾಫಿ ಮಾಡುತ್ತಾರೆ. ಅರಬ್ಬರು ಕಾಫಿ ಹಣ್ಣಿನ ತಿರುಳನ್ನು ಕೊಳೆಯಿಸಿ ಮದ್ಯವನ್ನು ತಯಾರಿಸುತ್ತಾರೆ. ಕಾಫಿ ದ್ರವವನ್ನು ತೀವ್ರ ಉಷ್ಣತೆಯಲ್ಲಿ ತುಂತುರಾಗಿ ಚೆಲ್ಲಿ ವಿಧೀರ್ ಕಾಫಿ ತಯಾರಿಸುತ್ತಾರೆ. ಕಾಫಿ ಬೀಜದಿಂದ ಕಾಫಿಲೈಟ್ ಎನ್ನುವ ಪ್ಲಾಸ್ಟಿಕ್ ವಸ್ತುವನ್ನು ತಯಾರಿಸಬಹುದು.

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯ ಕಾರ್ಬೋನೀಕೃತ ಕಾಫಿ ಪಾನೀಯವನ್ನು ಅಭಿವೃದ್ಧಿಪಡಿಸಿದೆ. ಕಾಫಿ. ಸಕ್ಕರೆ. ಆಮ್ಲ. ಪರಿಮಳಕಾರಕಗಳಿರುವ ಈ ಪಾನೀಯವನ್ನು ತಂಪು ಪಾನೀಯದಂತೆ ಅಂಗಡಿಗಳಲ್ಲಿ ಮಾರಬಹುದು. ಒಂದು ಬಾಟಲಿ ಪಾನೀಯದ (200 ಮಿಲಿಲೀಟರ್) ತಯಾರಿಕೆಯ ವೆಚ್ಚ ಎಂಬತ್ತು ಪೈಸೆಗಳು.

ಉಪಯೋಗಿಸಬೇಕಾಗುತ್ತದೆ.

ಇತ್ತೀಚೆಗೆ ಕಾಫಿಯ ವ್ಯರ್ಥ ವಸ್ತುಗಳನ್ನು ಉಪಯೋಗಿಸಿ ಬೇರೆ ವಸ್ತುಗಳನ್ನು ತಯಾರಿಸುವ ಕುರಿತು ಅಲ್ಲಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಸುಮಾರು ಮೂವತ್ತು ವರ್ಷಗಳಿಂದಲೂ ಕಾಫಿಯ ವ್ಯರ್ಥವಸ್ತುಗಳನ್ನೇ ಕಾಫಿ ಸಂಸ್ಕರಣೆಯ ಕೆಲಸಕ್ಕೆ ಬೇಕಾಗುವ ಇಂಧನವಾಗಿ ಉಪಯೋಗಿಸುವ ಬಗ್ಗೆ ಪ್ರಯೋಗಗಳು ನಡೆಯುತ್ತಿವೆ. ಮಧ್ಯ ಅಮೇರಿಕದ ಸಂಶೋಧನೆ ಮತ್ತು ಕೈಗಾರಿಕಾ ತಂತ್ರಜ್ಞಾನ ಸಂಸ್ಥೆ ಈ ದಿಶೆಯಲ್ಲಿ ಬಹುಮಟ್ಟಿಗೆ ಯಶಸ್ಸು ಗಳಿಸಿದೆ. ಸಂಸ್ಥೆ ಅಭಿವೃದ್ಧಿಪಡಿಸಿರುವ ವಿಧಾನದಿಂದ ಕಾಫಿಯ ವ್ಯರ್ಥ ವಸ್ತುವಿನಿಂದ ಮಿಥೇನ್ ಅನಿಲದ ಉತ್ಪಾದನೆ ಸಾಧ್ಯ. ಕಾಫಿ ಬೀಜವನ್ನು ಒಣಗಿಸುವ ಡ್ರೈಯರ್‌ಗಳು ಮತ್ತು ಕಾಫಿ ಸಂಸ್ಕರಣಾ ಘಟಕದಲ್ಲಿ ಹೆಚ್ಚಿನ ಉಷ್ಣತೆ ಇರುವಂತೆ ಮಾಡಲು ಮಿಥೇನನ್ನು ಈ ಸಂಸ್ಥೆಯು ಕಾಫಿ ಬೀಜ ಒಣಗಿಸುವ ಡ್ರೈಯರ್‌ಗಳನ್ನು ಅಭಿವೃದ್ಧಿಪಡಿಸಿದ್ದು ಒಣಗಿಸಿದ ಕಾಫಿಯ ವ್ಯರ್ಥ ವಸ್ತುಗಳನ್ನೂ ಕಾಫಿ ಸಿಪ್ಪೆಯನ್ನೂ ಇದಕ್ಕೆ ಇಂಧನವಾಗಿ ಹಾಕಬಹುದು.

ಈ ವ್ಯರ್ಥ ವಸ್ತುಗಳನ್ನು ಕಾಫಿ ಬೆಳೆಗೆ ಗೊಬ್ಬರವಾಗಿ ಬಳಸುವ ಬಗ್ಗೆಯೂ ಪ್ರಯೋಗಗಳು ನಡೆದಿವೆ. ಕಾಫಿ ನಾರು ಇನ್ನಿತರ ವಸ್ತುಗಳಿಂದ ಮಾಡಿದ ಕಾಂಪೋಸ್ಟ್ ಗೊಬ್ಬರ ನೀರನ್ನು ಹಿಡಿದಿಟ್ಟುಕೊಳ್ಳುವುದೇ ಅಲ್ಲದೆ ಸಾರಜನಕವನ್ನು ಮತ್ತು ಇನ್ನಿತರ ಪೋಷಕಾಂಶಗಳನ್ನು ಸಸ್ಯಕ್ಕೆ ಒದಗಿಸುವುದೆಂದು ತಿಳಿದುಬಂದಿದೆ.

ಕೊಲಂಬಿಯದಲ್ಲಿ ಕಾಫಿಯ ವ್ಯರ್ಥ ವಸ್ತುಗಳನ್ನು ಒಂದು ತಿಂಗಳ ಕಾಲ ಕೊಳೆಯಲು ಬಿಡುತ್ತಾರೆ. ನಂತರ ಸಿಗುವ ಗೊಬ್ಬರವನ್ನು ವ್ಯವಸಾಯಕ್ಕೆ ಅದರಲ್ಲೂ ಮುಖ್ಯವಾಗಿ ಕಾಫಿಯ ಸಸಿಗಳನ್ನು ನೆಡುವಾಗ ಉಪಯೋಗಿಸುತ್ತಾರೆ.

ಸತ್ವಯುತವಾದ ಮೇವನ್ನು ಕಾಫಿಯ ವ್ಯರ್ಥ ವಸ್ತುಗಳಿಂದ ಪಡೆಯಬಹುದು. ಹತ್ತು ವರ್ಷಗಳ ಸತತ ಪ್ರಯೋಗಗಳ ನಂತರ ಈ ವ್ಯರ್ಥ ವಸ್ತುಗಳಿಂದ ದನಕರುಗಳ ಮೇವನ್ನು ತಯಾರಿಸುವ ಘಟಕವೊಂದು ಕೋಸ್ಟರಿಕಾದಲ್ಲಿ 1981 ರಲ್ಲಿ ಆರಂಭವಾಗಿದೆ. ಇಲ್ಲಿ ವರ್ಷಕ್ಕೆ ಮೂವತ್ತು ಲಕ್ಷ ಟನ್ ಮೇವು ಉತ್ಪನ್ನವಾಗುತ್ತಿದೆ. ಇದನ್ನು ನೇರವಾಗಿ ಪಶು ಆಹಾರವಾಗಿ ಉಪಯೋಗಿಸಲು ಸಾಧ್ಯವಿಲ್ಲ. ಮೇವಿನ ಜೊತೆಗೆ ಶೇಕಡಾ 12ರಷ್ಟನ್ನು ಮಿಶ್ರಮಾಡಿ ಕೊಡಬಹುದು. ಆದರೆ ಇಲ್ಲಿರುವ ತೊಂದರೆ ಎಂದರೆ ಕೆಫಿನ್ ಮತ್ತು ಟ್ಯಾನಿನ್. ಈಗಾಗಲೇ ಕಾಫಿಯ ವ್ಯರ್ಥ ವಸ್ತುವಿನಿಂದ ಕೆಫಿನ್ ಮತ್ತು ಟ್ಯಾನಿನ್‌ಗಳನ್ನು ತೆಗೆಯಲಾಗುತ್ತಿದೆ. ಹೀಗೆ ತೆಗೆದ ಕೆಫಿನ್ ಲಘು ಪಾನೀಯಗಳು ಮತ್ತು ಔಷಧ ಉದ್ಯಮಗಳಲ್ಲಿ ಒಂದು ಮೂಲವಸ್ತುವಾಗಿ ಬಳಕೆಗೆ ಬರುತ್ತದೆ. ಕೆಫಿನ್ನಿನಂತೆಯೇ ಕಾಫಿಯ ವ್ಯರ್ಥವಸ್ತುಗಳಿಂದ ಪಡೆಯಬಹುದಾದ ಮತ್ತೊಂದು ವಸ್ತು ಪೆಕ್ಟಿನ್. ಇದನ್ನು ಜೀರ್ಣಕಾರಕಗಳು, ಗಾಯವನ್ನು ಮಾಯಿಸುವ ಔಷಧಗಳು, ವಿಷಹಾರಿಗಳು ಮತ್ತು ರಕ್ತಸ್ರಾವವನ್ನು ನಿಲ್ಲಿಸುವ ಔಷಧಗಳ ತಯಾರಿಕೆಯಲ್ಲಿ ಬಳಸುತ್ತಾರೆ. ಸೌಂದರ್ಯ ಪ್ರಸಾಧನ ವಸ್ತುಗಳು, ಪ್ಲಾಸ್ಟಿಕ್ ಸಂಶ್ಲೇಷಿತ ನೂಲು, ಸಾಬೂನುಗಳ ತಯಾರಿಕೆಯಲ್ಲೂ ಪೆಕ್ಟಿನ್ನನ್ನು ಉಪಯೋಗಿಸುತ್ತಾರೆ.

ಕಾಫಿಯ ವ್ಯರ್ಥವಸ್ತುಗಳಿಂದ ಇನ್ನೂ ಅನೇಕ ಕೈಗಾರಿಕಾ ಮೂಲವಸ್ತುಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ತಯಾರಿಸಬಹುದು. ಇದರಿಂದ ಹೆಚ್ಚಿನ ಆದಾಯ ಸಿಗುವುದಲ್ಲದೆ ನಿರುದ್ಯೋಗ ಸಮಸ್ಯೆಯೂ ಬಹುಮಟ್ಟಿಗೆ ನಿಯಂತ್ರಣವಾಗುತ್ತದೆ. ಈ ಮೂಲವಸ್ತುಗಳಿಂದಾಗಿ ಹೊಸ ಹೊಸ ಕೈಗಾರಿಕೆಗಳೂ ಆರಂಭವಾಗುತ್ತವೆ. ಮುಖ್ಯವಾಗಿ ವ್ಯರ್ಥವಸ್ತುಗಳನ್ನು ಬಳಸುವುದರಿಂದ ವಾತಾವರಣದ ಮಾಲಿನ್ಯ ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಕಾಫಿಯ ವ್ಯರ್ಥವಸ್ತುಗಳಿಂದ ಉಪವಸ್ತುಗಳನ್ನು ತಯಾರಿಸುವ ದೊಡ್ಡ ಘಟಕವೊಂದರ ಅಧಿಕಾರಿಯೊಬ್ಬರು ಹೇಳುವಂತೆ ಮುಂದೊಂದು ದಿನ ಈ ಉಪವಸ್ತುಗಳಿಗಾಗಿಯೇ ಕಾಫಿಯನ್ನು ಬೆಳೆಸುವುದು ಮುಖ್ಯವಾಗಿ ಆದರ ಪಾನೀಯವೇ ಒಂದು ಉಪವಸ್ತುವಾದೀತು. ●

(ಆಧಾರಿತ)

ತಾಯಿ ಮತ್ತು ಮಗು

ಮೂಲ: ಕೆ.ಎ. ಅಬ್ಬಾಸ್.
ಅನುವಾದ: ಗೋಪಾಲ ಆಶ್ರಿತ.

ಫಲಕ್ನುಮಾ ಪೆಲೇಸ್ ಹೊಟೆಲ್ ಭೋಪಾಲದ ಆಕರ್ಷಣೆಗಳಲ್ಲೊಂದಾಗಿದೆ. ಇಲ್ಲಿಯ ಊಟ ಕೂಡಾ ಈ ಹೊಟೆಲ್ಲಿನಷ್ಟೇ ದಿವ್ಯ. ಮೊಘಲಾಯಿ ಊಟ, ಈ ಹೊಟೆಲ್ಲಿನ ವೈಶಿಷ್ಟ್ಯವಾದರೂ, ಇಲ್ಲಿ ಇಂಗ್ಲಿಷ್ ಮತ್ತು ಚೀನೀ ಊಟ ಕೂಡಾ ದೊರೆಯುತ್ತದೆ. ನಾನು ಈ ಹೊಟೆಲ್ಲಿನಲ್ಲಿ ಉಳಿದುಕೊಂಡಿದ್ದೆ. ಮಧ್ಯಾಹ್ನದ ಊಟಕ್ಕೆ ಎಲ್ಲರೂ ಇಲ್ಲಿಗೇ ಬರುತ್ತಿದ್ದೆವು. ವಿಶಾಲವಾದ ಈ ಊಟದ ಕೋಣೆಯಿಂದ ಆ ನಗರದ ಸಿರಿ ಸೊಬಗನ್ನು ನೋಡುವುದೇ ಇಲ್ಲಿಯ ಮತ್ತೊಂದು ವೈಶಿಷ್ಟ್ಯವಾಗಿತ್ತು. ಸುಮಾರು 18 ಕಿಲೋ ಮೀಟರ್ ಉದ್ದ ಹಾಗೂ ಅಗಲವಾದ ಸರೋವರ ಕಿಟಕಿಯ ಹೊರಗಿತ್ತು. ಈ ಸರೋವರ ಒಂದು ಸಣ್ಣ ಸಮುದ್ರದಂತೆ ಕಾಣುತ್ತಿತ್ತು. ಸರೋವರಕ್ಕೂ ಸಮುದ್ರಕ್ಕೂ ಇದ್ದ ಒಂದೇ ಒಂದು ಭೇದವೆಂದರೆ, ಸಮುದ್ರ ದಂಡೆಯ ಮೇಲಿರುವಂತೆ ನುಣುಪಾದ ಉಸುಕು ಇದರ ನೀಲಿ ದಂಡೆಯ ಮೇಲಿರಲಿಲ್ಲ.

ಆದರೆ ಆಕಾಶದಲ್ಲಿ ಸಾಕಷ್ಟು ಮೋಡಗಳು ಕಂಡದ್ದರಿಂದ, ಮಳೆಯಿಂದಾಗಿ ಈ ಸರೋವರಕ್ಕೆ ಇನ್ನೂ ನೀರು ಬರಬಹುದೆನಿಸಿತು. ಅಂದು ಬೆಳಿಗ್ಗೆ ನಾನು ಭೋಪಾಲಿನ ಕಾರ್ಬೈಡ್ ಫ್ಯಾಕ್ಟರಿಗೆ ಹೋಗಿದ್ದೆ. ಅಲ್ಲಿಯೇ ಹತ್ತಿರದಲ್ಲಿದ್ದ ಗುಡಿಸಲುಗಳ ಮಧ್ಯ ಒಂದು ಅತಿ ದೊಡ್ಡ ಕಲ್ಲಿನ ಹೆಣ್ಣು ಮೂರ್ತಿ ನಿಂತಿದ್ದನ್ನೂ ಕಂಡೆ. ಕಾರ್ಬೈಡ್ ಫ್ಯಾಕ್ಟರಿಯ ದುರಂತದಲ್ಲಿ ಬಲಿಯಾದವರ ಸಂಕೇತವಾಗಿ ನಿಂತಿದ್ದ ಈ ಮಹಿಳೆಯ ಕೈಯಲ್ಲಿ ಒಂದು ಮೃತ ಶಿಶು ಇತ್ತು. ಅದಕ್ಕಿಂತಲೂ ಸ್ವಲ್ಪ ದೊಡ್ಡದಾದ ಇನ್ನೊಂದು ಮಗು ಈ ತಾಯಿಯ ಸೀರೆಯ ಸೆರಗಿಗೆ ಅಂಟಿಕೊಂಡಿತು.

ಈ ಕಲ್ಲಿನ ಮೂರ್ತಿ ಒಬ್ಬ ಸುಂದರ ಹಾಗೂ ಕೋಮಲ ಮಹಿಳೆಯ ಸಂಕೇತವೇನಾಗಿರಲಿಲ್ಲ. ಮಂದಿರಗಳಲ್ಲಿ ಕಟಿದು ನಿಲ್ಲಿಸಲಾದ ದೇವಿಯರ ಮೂರ್ತಿಗಳಂತೆ ಇದು ಕೂಡಾ ನಿರ್ಜೀವವಾಗಿತ್ತು. ಈ ಜಗತ್ತಿನ ತಾಯುಂದಿರನ್ನು ಮತ್ತು ಅವರ ತಾಯ್ತನವನ್ನೆಲ್ಲ ಹಿಂಡಿ ಶಿಲಾಮೂರ್ತಿಯಲ್ಲಿ ತುಂಬಿದಂತಿತ್ತು. ಸ್ತನಗಳು ಸಾಕಷ್ಟು ದೊಡ್ಡವಾಗಿದ್ದು ಹಾಲಿನಿಂದ ತುಂಬಿಕೊಂಡಿದ್ದವು; ಆದರೆ ಆ ಹಾಲು ನಿಷ್ಪ್ರಯೋಜಕ. ಕಾರ್ಬೈಡಿನ ವಿಷ ಅದರಲ್ಲಿ ತುಂಬಿಕೊಂಡಿತ್ತು. ಆ ತಾಯಿಯ ಕಹಿ ಕಣ್ಣಲ್ಲಿ ಕಾಣುವ ವಿಷ, ಮೃತ ಶಿಶುವಿನ ನರನಾಡಿಗಳಲ್ಲಿ ಸೇರಿದ್ದು ಅದರ ಆತ್ಮದ ಮೂಲಕ ಜಿನುಗಿತ್ತು.

ಈ ಮೂರ್ತಿಯ 30 ಚಿತ್ರಗಳನ್ನು ಮಾತ್ರ ಎಕ್ಸ್‌ಪೋಜ್ ಮಾಡಿದೆ. ಮೇಲೆ ನೋಡುತ್ತಿದ್ದ ಅವಳ ತಲೆ, ಬಟ್ಟೆ ತುಂಡು ಮಾತ್ರ ಹೊದ್ದಂತಿದ್ದ ಆ ಶಿಶುವಿನ ಕ್ಲೋಸ್ ಅಪ್ಸ್ ಅವಳ ಸೀರೆಯ ಸೆರಗಿಗೆ ಅಂಟಿಕೊಳ್ಳಲು ಯತ್ನಿಸುತ್ತಿದ್ದ ಹಿರಿಯ ಮಗುವಿನ ಚಿತ್ರಗಳನ್ನು ಬೇರೆ ಬೇರೆ ಕೋನಗಳಿಂದ ನನ್ನ ಕೆಮರಾದಲ್ಲಿ ಸೆರೆ ಹಿಡಿದಿದ್ದೆ. ದುರಂತದ ದಾಖಲೆಯನ್ನೇ ನನ್ನ ಕೆಮರಾದಲ್ಲಿ ಸೆರೆ ಹಿಡಿದು ನಾನು ಫಲಾಕ್ನುಮಾ ಪೆಲೇಸ್ ಹೊಟೆಲ್ಲಿಗೆ ಮರುಳು



ತ್ತಿದ್ದಂತೆ ಒಬ್ಬ ಮಹಿಳೆಯ ಧ್ವನಿ ನನ್ನನ್ನು ಸ್ವಾಗತಿಸಿತು: "ನಾನು ಕ್ಯಾಪ್ಟನ್ ಸಲ್ಮಾ ಸರ್" ಎಂದು ಆಕೆ ತನ್ನ ಪರಿಚಯವನ್ನು ಹೇಳಿದಳು.

ಸ್ವಲ್ಪ ಆಶ್ಚರ್ಯದಿಂದಲೇ "ಕ್ಯಾಪ್ಟನ್ ಸಲ್ಮಾ!" ಎಂದು ಅವಳ ಹೆಸರನ್ನು ಪುನರುಚ್ಚರಿಸಿದೆ. ಒಬ್ಬ ಮಹಿಳೆ ತನ್ನನ್ನು 'ಕ್ಯಾಪ್ಟನ್' ಎಂದು ಪರಿಚಯಿಸಿಕೊಳ್ಳುತ್ತಿರುವುದನ್ನು ನಾನು ಕೇಳಿದ್ದು ಇದೇ ಮೊದಲಬಾರಿ ಯಾಗಿತ್ತು. ಭೋಜನ ಶಾಲೆಯಲ್ಲಿ ಕುಳಿತು ಕೊಳ್ಳುತ್ತಿದ್ದಂತೆ ನನ್ನ ಕೆಮರಾವನ್ನು ಅಮೃತ ಶಿಲೆಯ ಮೇಜಿನ ಮೇಲಿಟ್ಟೆ. ಕ್ಯಾಪ್ಟನ್ ಸಲ್ಮಾ ಆ ಕೆಮರಾವನ್ನು ಎತ್ತಿ ಮೇಜಿನ ಇನ್ನೊಂದು ಬದಿಯಲ್ಲಿಟ್ಟಳು. "ನೀವು ತೆಗೆದಿರುವ ಎಲ್ಲಾ ಚಿತ್ರಗಳು ಭಾರತ ಭವನದ್ದೇನು?" ಎಂದು ಅವಳು ಪ್ರಶ್ನಿಸಿದಳು. "ಇಲ್ಲ ಆದರೆ ಅದಕ್ಕಿಂತಲೂ ಹೆಚ್ಚು ಮುಖ್ಯ ಹಾಗೂ ಘೋರ ಚಿತ್ರ ಗಳಿವೆ" ಎಂದೆ.

"ನೀವೇನಾದರೂ ಅಕಸ್ಮಾತ್ತಾಗಿ ಭೋಪಾಳದ ಸುಂದರಿಯನ್ನು ಭೇಟಿಯಾದರೇನು?... ಅವಳು ಸಾಕಷ್ಟು ಅಪಾಯಕಾರಿಯಾಗಿರಬಹುದು". (ಸ್ವತಃ ಭೋಪಾಳದ ಸುಂದರಿಯಾಗಿದ್ದ) ಅವಳು ಕೇಳಿದಳು "ಭೋಪಾಳದ ಈ ಸುಂದರಿಯನ್ನು ತಾವು ಭೇಟಿಯಾದುದೆಲ್ಲಿ?"

"ಅವಳು ಕಾರ್ಬೈಡ್ ಫ್ಯಾಕ್ಟರಿಯ ಎದುರಿನಲ್ಲಿ ಕಲ್ಲಾಗಿ ನಿಂತಿದ್ದಾಳೆ ಮತ್ತು ಅವಳ ಬೇಡಿಕೆಗಳು ಈಡೇರುವ ತನಕ ಅಲ್ಲಿಯೇ ನಿಂತಿರುತ್ತಾಳೆ".

"ನೀವು ಏನಾದರೂ ತಿನ್ನಲು ತೆಗೆದುಕೊಳ್ಳುವಿರಾ, ಸರ್?..." "ನನಗೇನೂ ಬೇಕಿಲ್ಲ ಆ ಮೂರ್ತಿ ಮತ್ತು ಝೋಪಡಿಗಳಲ್ಲಿ ಆ ಜನರನ್ನು ನೋಡಿದಾಗಿನಿಂದ ನನಗೆ ಏನು ತಿನ್ನಲೂ ಮನಸ್ಸಾಗುತ್ತಿಲ್ಲ".

"ಹಾಗಾದರೆ ಸ್ವಲ್ಪ ಚಿಕನ್ ಸೂಪ್ ತೆಗೆದುಕೊಳ್ಳಿರಲ್ಲ..." "ಸರಿ. ಒಳ್ಳೆಯ ವಿಚಾರ, ಆದರೆ ಅದರಲ್ಲಿ ವಾಸನೆ ಇರಬಾರದು".

"ಚಿಕನ್ ವಾಸನೆ ಮಾತ್ರ ಇರುತ್ತದೆ".

ಚಿಕನ್ ಸೂಪ್ ಸೇವಿಸಿ ನನ್ನ ಕೋಣೆಗೆ ಮರಳಿದೆ. ಬಾಗಿಲಿಗೆ ಒಂದು ಚೀಟಿಯನ್ನು ಸಿಗಿಸಲಾಗಿತ್ತು. ಅದರಲ್ಲಿ ಪೆನ್ಸಿಲ್ಲಿನಿಂದ: "ಇಲ್ಲಿಯ ಅನಿಲ ದುರಂತದ ಬಗ್ಗೆ ನೀವು ಬರೆಯಲಿಚ್ಛಿಸುತ್ತಿದ್ದರೆ, ಆ ಬಗ್ಗೆ ಈವರೆಗೆ ಯಾವ ಪತ್ರಕರ್ತನಿಗೂ ಹೇಳಿರದ ಎಲ್ಲ ವಿವರಗಳನ್ನು ನಾನು ನೀಡಬಲ್ಲೆ. ಸಾಯಂಕಾಲ ನಾಲ್ಕರಿಂದ ರಾತ್ರಿ ಎಂಟರವರೆಗೆ ನನಗೆ ಕೆಲಸದಿಂದ ವಿರಾಮ. ಈ ನಾಲ್ಕು ಗಂಟೆಗಳನ್ನು ನಿಮಗಾಗಿ ವಿನಿಯೋಗಿಸುವೆ. ಕ್ಯಾಪ್ಟನ್ ಸಲ್ಮಾ".

ಆಯಿತು... ಇವಳ ಕಥೆಯನ್ನಾದರೂ ಕೇಳೋಣವೆಂದೆನಿಸಿತು.

ಅಂದು ಸಂಜೆ ಸರಿಯಾಗಿ ನಾಲ್ಕು ಗಂಟೆಗೆ, ನನ್ನ ಬಾಗಿಲಿನಲ್ಲಿ ಕರೆಗಂಟೆ... ಸ್ವಲ್ಪ ಹಗುರವಾಗಿ... ಬಾರಿಸಿತು. "ಕ್ಯಾಪ್ಟನ್ ಸಲ್ಮಾ ಬಹುಶಃ ಸ್ವಲ್ಪ ಪುಕ್ಕಲು ಸ್ವಭಾವದವಳಿರಬೇಕು" ಎಂದುಕೊಳ್ಳುತ್ತ ಬಾಗಿಲು ತೆರೆದೆ.

ಬಾಗಿಲ ಹೊರಗೆ ನಿಂತಿದ್ದ ಹುಡುಗಿ ಕ್ಯಾಪ್ಟನ್ ಸಲ್ಮಾ ಆಗಿರಲಿಲ್ಲ. ಆದರೆ ಅವಳ ಮುಖ ಮಾತ್ರ ಪರಿಚಯದ್ದೆನಿಸಿತು. ಆ ಮೂರ್ತಿ ಧರಿಸಿದಂಥ ಸಡಿಲು ಸೀರೆಯನ್ನು ಅವಳೂ ಉಟ್ಟಿದ್ದಳು. ಅವಳ ಕೈಯಲ್ಲಿ ಒಂದು ಮೃತ ಶಿಶುವಿತ್ತು. "ಓಹ್... ದೇವರೆ... ಇದೇನು ನಾನು ಕಾಣುತ್ತಿರುವುದು" ಎಂದುಕೊಂಡೆ.

ಒಳಗೆ ಬಂದವಳೇ, ಹತ್ತಿರದ ಸೋಫಾದ ಮೇಲೆ ಕುಳಿತು ಸೋಫಾದ ಕಟ್ಟಿಗೆಯ ಫಲಕದ ಮೇಲೆ ಗೊಂಬೆ (ಅಥವಾ ಮೃತ ಶಿಶು) ಯನ್ನಿರಿಸಿ "ನಿಮಗೇನು ಕೇಳುವದಿದೆಯೋ ದಯವಿಟ್ಟು ಕೇಳಿ..." ಎಂದಳು.

"ನಿನ್ನ ಮದುವೆಯಾಗಿದೆಯಾ?"

"ಆಗಿತ್ತು... ಭೋಪಾಳದ ಮೇಲೆ ಈ ದುರಂತ ಆಕ್ರಮಿಸುವವರೆಗೆ..."

"ನಿನ್ನ ಗಂಡ ಯಾವ ಕೆಲಸದಲ್ಲಿದ್ದ?"

"ಅವನು ಈ ಕಾರ್ಬೈಡ್ ಫ್ಯಾಕ್ಟರಿಯಲ್ಲಿ ಇಂಜಿನೀಯರಾಗಿದ್ದ. ಅಮೆರಿಕದಲ್ಲಿದ್ದಾಗಲೇ ಅವನ ನೇಮಕವಾದದ್ದು. ಇಂಥ ಒಂದು ಫ್ಯಾಕ್ಟರಿಯನ್ನು ತಮ್ಮದೇ ಊರಾದ ಭೋಪಾಳದಲ್ಲಿ ಸ್ಥಾಪಿಸಲಾಗುತ್ತಿದ್ದುದನ್ನು ಅವನ ಮನೆಯವರೆಲ್ಲ ಸಂತೋಷದಿಂದ ಸ್ವಾಗತಿಸಿದ್ದರು. ಕೆಮಿಕಲ್ ಇಂಜಿನೀಯರಿಂಗಿನಲ್ಲಿ ಪ್ರಾಯೋಗಿಕ ತರಬೇತಿಗಾಗಿ ಅವನನ್ನು ಅಮೇರಿಕದ, ಮೂಲ ಫ್ಯಾಕ್ಟರಿಗೆ ಕಳಿಸಿದ್ದರು. ನನ್ನ ಗಂಡ ಬಹಳ ಸುಂದರ ಯುವಕ...

ಸಾವಿರದಲ್ಲೊಬ್ಬನಾಗಿದ್ದ".

"ದಯವಿಟ್ಟು ನಿನ್ನ ಗಂಡನ ಬಗ್ಗೆ ಸ್ವಲ್ಪ ಹೇಳುವಿಯಾ? ಆದದ್ದಾದರೂ ಏನು?"

"ನನ್ನ ಗಂಡನ ಹೆಸರು ಆಲಮ್ ಖಾನ್. ಅಮೆರಿಕದಿಂದ ಮರಳಿ ಬಂದ ಕೆಲವೇ ದಿನಗಳಲ್ಲಿ ಅವನನ್ನು ಇಂಜಿನೀಯರೆಂದು ಇಲ್ಲಿ ನೇಮಿಸಿಕೊಳ್ಳಲಾಯಿತು. ಅಮೇರಿಕನ್ನರನ್ನು ಬಿಟ್ಟರೆ ಅವನೇ ಎಲ್ಲರಿಗಿಂತ ವರಿಷ್ಠ ಅಧಿಕಾರಿ. ಈ ಫ್ಯಾಕ್ಟರಿಯ ಏಳ್ಗೆಗಾಗಿ ಅವನು ಹಗಲು ರಾತ್ರಿ ಶ್ರದ್ಧೆಯಿಂದ ದುಡಿದನು. ಒಂದು ದಿನ ಭಾರತ ಭವನದ ಬಯಲು ನಾಟಕ ಗೃಹ ದಲ್ಲಿ ವಿಲಿಯಮ್ ಶೇಕ್ಸ್‌ಪಿಯರ್‌ನ 'ಎ ಮಿಡ್ ಸಮರ್ ನೈಟ್ಸ್, ಡ್ರೀಮ್' ನಾಟಕವನ್ನು ನೋಡಲು ಹೋದಾಗ ನಮ್ಮಿಬ್ಬರ ಭೆಟ್ಟಿಯಾಯಿತು.

"ಮಧ್ಯಾಂತರದಲ್ಲಿ ಅವನು ಯಾವ ಕೆಲಸದಲ್ಲಿದ್ದಾನೆಂದು ಕೇಳಿದೆ. ಅದಕ್ಕೆ ಅವನಿತ್ತ ಉತ್ತರ 'ನಾನ್‌ಸೆನ್ಸ್'

"ಹಾಗೆಂದರೇನು?" ಎಂದು ಮತ್ತೆ ಕೇಳಿದೆ.

"ವಿಷಪೂರಿತ ಅನಿಲವನ್ನು ತಯಾರಿಸುವ ಕಾರ್ಖಾನೆಯಲ್ಲಿ ಕೆಲಸ ಮಾಡುವುದು ಮೂರ್ಖತನವಲ್ಲದೆ ಮತ್ತೇನು? ಒಂದು ದಿನ ಈ ಅನಿಲ ಸೋರಿತೆಂದರೆ ಈ ಊರನ್ನೇ ನಾಶ ಮಾಡುತ್ತದೆ" ಎಂದನು.

"ಇಂಥ ಅಪಾಯಕಾರಿ ಕೆಲಸವನ್ನೇಕೆ ಮಾಡುತ್ತೀರಿ?"

"ಹೊಟ್ಟೆಪಾಡಿಗಾಗಿ... ...[illegible] ಮಾಡುತ್ತೀರಿ?"

"ನಾನು [illegible] ಕಾಲೇಜಿನಲ್ಲಿ ಓದುತ್ತಿದ್ದೇನೆ. ಅದೂ ಒಂದು ರೀತಿಯ ಮೂರ್ಖತನವೇ".

"ಅದನ್ನೇಕೆ ಮೂರ್ಖತನವೆನ್ನುತ್ತೀರಿ?"

"ಯಾವ ವರ್ಷದಲ್ಲಿ ಬಾಬರ್ ಪಾಣಿಪತ್ ಯುದ್ಧ ಗೆದ್ದ? ಯಾವ ವರ್ಷದಲ್ಲಿ ಅಶೋಕ ಸ್ತಂಭಗಳನ್ನು ನಿಲ್ಲಿಸಿದ? ಅವುಗಳನ್ನು ಯಾವಾಗ ಮತ್ತು ಎಲ್ಲಿ ಸ್ಥಾಪಿಸಿದ? ಇಂಗ್ಲೀಷ್ ಯುಗದ ಪ್ರಾರಂಭ ಹಾಗೂ ಕೊನೆ ಯಾವಾಗ? ಇಂಥ ಅಸಂಬದ್ಧ ವಿಷಯಗಳು ನಮ್ಮ ಇತಿಹಾಸದ ಪಠ್ಯಕ್ರಮದಲ್ಲಿವೆ. ಇದು ಮೂರ್ಖತನವಲ್ಲದೆ ಮತ್ತೇನು? ಈಗ ನಾನು ಎಂ.ಎ. ಮಾಡುತ್ತಿದ್ದೇನೆ. ಆದರೆ ನನಗೆ ಚಿಕನ್ ಸಾರು ಹೇಗೆ ಮಾಡಬೇಕೆಂಬುದು ಗೊತ್ತಿಲ್ಲ, ಕಿಚಡಿ ಮಾಡಲೂ ಬರುವುದಿಲ್ಲ".

"ನೀವು ಕಿಚಡಿಯೆನ್ನುತ್ತಿದ್ದಂತೆ, ನಮ್ಮ ಅಜ್ಜಿ ಹೇಳುತ್ತಿದ್ದ ಒಂದು ಕಥೆ ನೆನಪಾಯಿತು ಒಂದೂರಲ್ಲಿ ಒಂದು ಹೆಣ್ಣು ಹಾಗೂ ಗಂಡು ಗುಬ್ಬಿಗಳಿದ್ದವು. ಗಂಡು ಗುಬ್ಬಿ ಅಕ್ಕಿ ಕಾಳುಗಳನ್ನು ತಂದು ಹಾಕಿದರೆ ಹೆಣ್ಣು ಗುಬ್ಬಿ ಬೇಳೆ ಕಾಳುಗಳನ್ನು ಆರಿಸಿಕೊಂಡು ತಂದಿತಂತೆ. ಅವೆರಡೂ ಕೂಡಿ ತಂದ ಕಾಳುಗಳಿಂದ ಕಿಚಡಿ ತಯಾರಿಸಿ ಸಂತೋಷದಿಂದ ಉಂಡವಂತೆ. ಅದೇನೇ ಇರಲಿ... ನಿಮಗೊಂದು ವಿಷಯ ವನ್ನು ಕೇಳಬೇಕೆಂದಿರುವೆ. ಮದುವೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅದೂ ಈ ಗಂಡು ಹೆಣ್ಣು ಗುಬ್ಬಿಗಳ ಕತೆಯಂತೆ-ಮೂರ್ಖ ತನವೆ?"

"ಮದುವೆಯೆಂಬುದೇ ಆ ಗುಬ್ಬಿಗಳ ಕಥೆ. ನಾನೂ ಒಂದು ಗುಬ್ಬಿಯೆ; ಆದರೆ ನನ್ನ ಚಂಚು ಮಾತ್ರ ಬಹಳ ಚೂಪಾಗಿವೆ... ಅದು ಮಾತ್ರ ನೆನಪಿನಲ್ಲಿಡಬೇಕಾದ ಅಂಶ" "ಅಷ್ಟರಲ್ಲಿ ನಾಟಕ ಮತ್ತೆ ಪ್ರಾರಂಭವಾಯಿತು. ಇದರಿಂದಾಗಿ ನಮ್ಮ ಮಾತುಕತೆ ನಿಂತಿತು. ಶೇಕ್ಸ್‌ಪಿಯರ್‌ನ ಆ ರೋಮಾಂಚಕಾರಿ ನಾಟಕ ಮುಂದುವರಿದಂತೆ ಅದ್ಹೇಗೊ ನನಗೆ ತಿಳಿಯದು, ಇಂಜಿನೀಯರ್ ಆಲಮ್ ಒರಟಾದ ಕೈ ನನ್ನ ಕೋಮಲ ಕೈಯನ್ನು ಹಿಡಿದಿತ್ತು. ಯಾರಿಗಾಗಿ ಈ ಕೈಗಳ ನಿರ್ಮಾಣ ವಾಗಿತ್ತೋ, ಅವನನು ಗಂಡು ಗುಬ್ಬಿಯೆನ್ನುವಂತಿರಲಿಲ್ಲ. ಆ ಸ್ಪರ್ಶ ನನಗೆ ಆನಂದ ನೀಡಿತು".

'ನಾಟಕ ಮುಗಿಯುತ್ತಿದ್ದಂತೆ 'ಈ ಆಟ ನಿಮಗೆ ಹಿಡಿಸಿತೆ?' ಎಂದು ಆಲಮ್ [illegible].

"ಯಾವ ಆಟ? ಎಂದು ಕೇಳಿದೆ. ಅವನು ಕೇಳಿದ್ದು ನೋಡಿದ ಆಟದ ಬಗ್ಗೆಯೋ ಅಥವಾ ನಮ್ಮ ಕೈಗಳ ಆಸಕ್ತಿಯುತ ಆಟದ ಬಗ್ಗೆಯೋ ನನಗೆ ತಿಳಿಯಲಿಲ್ಲ. ಆದರೂ 'ನಾನು ಮಾತ್ರ ಬಹಳ ಆನಂದಿಸಿದೆ' ಎಂದು ಒಂದೇ ವಾಕ್ಯದಲ್ಲಿ ಉತ್ತರಿಸಿದೆ. ಈ ಉತ್ತರ ನಾಟಕ ಹಾಗೂ ಕೈಗಳ ಆ ಆಟಕ್ಕೆ ನಿಜವಾಗಿಯೂ ಅನ್ವಯಿಸಿತ್ತು".



"ಹಕ್ಕಿಯೊಂದು ವಿಮಾನಕ್ಕೆ ಬಡಿದು ವಿಮಾನಾಪಘಾತ– 15 ಮಂದಿಗೆ ಗಾಯ ಆದರೆ ಹಕ್ಕಿಗೆ ಏನಾಯ್ತೆಂದು ಬರೀಲೇ ಇಲ್ವಲ್ಲಾ!"

"ಒಂದು ವಾರದ ನಂತರ ನಮ್ಮ ಮದುವೆ ಯಾಯಿತು. ಮಾಜಿ ರಾಜರ ಸಂಸ್ಥಾನದಲ್ಲಿ ಆಸ್ಥಾನಿಕನಾಗಿದ್ದ ನನ್ನ ತಂದೆ ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ವಿಲೀನಗೊಂಡಾಗ ಆಘಾತದಿಂದ ಮೃತನಾಗಿದ್ದ. ನನ್ನ ತಾಯಿ ಬದುಕಿದ್ದರೂ, ತನ್ನ ಗಂಡ ಸತ್ತ ನಂತರ ತನ್ನ ಸಮಯವನ್ನೆಲ್ಲ ಪ್ರಾರ್ಥನೆಯಲ್ಲಿ ಕಳೆಯುತ್ತಿದ್ದಳು. ತನ್ನ ಅಳಿಯ ಅಮೇರಿಕದಲ್ಲಿ ಶಿಕ್ಷಣ ಪಡೆದು ಅಮೇರಿಕದ ಫ್ಯಾಕ್ಟರಿಯಲ್ಲಿ ಇಂಜಿನೀಯರಾಗಿ 2200-00 ರೂಪಾಯಿ ಸಂಬಳ ಪಡೆಯುತ್ತಿರುವಂಥವನು ಎಂದು ತಿಳಿದಾಗ ಸಂತೋಷದಿಂದ ನಮ್ಮ ಮದುವೆಗೆ ಒಪ್ಪಿಗೆಯೆನ್ನಿತ್ತಿದ್ದಳು.

"ನಮ್ಮ ಮದುವೆಯಾದ ಮೂರನೆಯ ದಿನ ನಾನು ನಿಮ್ಮ ಫ್ಯಾಕ್ಟರಿಯನ್ನು ತೋರಿಸಲು ನನ್ನನ್ನು ಕರೆದೊಯ್ಯುವುದಿಲ್ಲವೆ?" ಎಂದು ಕೇಳಿದೆ.

"ಫ್ಯಾಕ್ಟರಿಯಲ್ಲಿ ನೋಡುವಂಥದ್ದೇನೂ ಇಲ್ಲ".

"ಯಾಕಿಲ್ಲ? ಬಹಳ ದಿನಗಳಿಂದ ಈ ಫ್ಯಾಕ್ಟರಿಯನ್ನು ನೋಡಬೇಕೆಂಬುದು ನನ್ನಾಸೆ. ಅಲ್ಲಿರುವ ದೊಡ್ಡ ಯಂತ್ರಗಳು, ನೂರಾರು ಕೆಲಸಗಾರರು, ನಿಮ್ಮಂಥ ಇಂಜನೀಯರುಗಳನ್ನು ನೋಡಬೇಕೆನಿಸಿದೆ. ಅಲ್ಲಿ ಹೆಣ್ಣು ಮಕ್ಕಳೂ ಇದ್ದಾರೇನು? ಅವರೆಲ್ಲರನ್ನೂ ಭೇಟಿಯಾಗಬೇಕೆನಿಸಿದೆ" ಎಂದು ಹಠ ಹಿಡಿದೆ.

"ಈ ರೀತಿ ಹಠ ಮಾಡಿ ಫ್ಯಾಕ್ಟರಿ ನೋಡಲು ಹೋದೆ. ಅಲ್ಲಿಯ ಕೆಲಸಗಾರರೆಲ್ಲ ಗಂಡಸರಾಗಿದ್ದರು. ಅಲ್ಲಿ ಹೆಣ್ಣುಗಳಿರಲಿಲ್ಲವೆಂದೇ ಹೇಳಬೇಕು. ಒಂದು ಕಡೆ ಮಾತ್ರ ಇಬ್ಬರು ಮಹಿಳೆಯರು ಕೆಲಸದಲ್ಲಿ ತೊಡಗಿದ್ದರು. ಅಲ್ಲಿದ್ದ (ಅನಿಲದಿಂದ ತುಂಬಲಾಗಿದ್ದ) ಎರಡು ಸಿಲಿಂಡರುಗಳು ನನ್ನ ಆಸಕ್ತಿಯನ್ನು ಕೆರಳಿಸಿದವು. ಇವುಗಳ ಪೈಕಿ ಒಂದರಿಂದ ಮಾತ್ರ ಅನಿಲ ಸೋರಿ ಅಸಹ್ಯ ವಾಸನೆ ಬರಹತ್ತಿತ್ತು. ನನ್ನ ಕೈ ಚೀಲದಲ್ಲಿದ್ದ ಕರವಸ್ತ್ರ ತೆಗೆದುಕೊಂಡು, ನಾನು ಮೂಗು ಮುಚ್ಚಿಕೊಂಡೆ. ಅನಂತರ ಫ್ಯಾಕ್ಟರಿಯ ಬಗ್ಗೆ ಮತ್ತು ಆ ಅಸಹ್ಯ ವಾಸನೆಯ ಬಗ್ಗೆ ಮರೆತು ಬಿಟ್ಟೆ. ನಾನೇನೋಮರೆತೆ... ಆದರೆ ಅದೇ ನನ್ನ ಪಾಲಿಗೆ ಮತ್ತು ನನ್ನ ಊರಿನ ಪಾಲಿಗೆ ದುರದೃಷ್ಟವಾಗಿ ಪರಿಣಮಿಸಿತು.

"ಒಂದು ತಿಂಗಳ ನಂತರ ನಾನು ಗರ್ಭ ಧರಿಸಿದ ವಿಷಯ ವೈದ್ಯಳಿಂದ ತಿಳಿದಾಗ ನನ್ನ ಉತ್ಸಾಹ ಹೆಚ್ಚಿತು.

"ಅನಂತರ ಲೆಕ್ಕ ಹಾಕಿ ವಿಚಾರ ಮಾಡಿದಾಗ, ನಾನು ನನ್ನ ಪತಿಯನ್ನು ಒತ್ತಾಯಿಸಿ ಫ್ಯಾಕ್ಟರಿಗೆ ಹೋದ ದಿನವೇ ಗರ್ಭ ಧಾರಣೆಯಾಗಿರಬೇಕೆನಿಸಿತು.

"ಆ ಸಂಭ್ರಮದ ಸಮಯದಲ್ಲಿ 'ಚಿರಾಯುವಾಗಲಿ ಈ ಫ್ಯಾಕ್ಟರಿ' ಎಂದು ಹರಸಿದ್ದೆ".

"ಡಿಸೆಂಬರ್ ಕೊನೆಯ ವಾರದಲ್ಲಿ ಹೆರಿಗೆಯಾಗಬಹುದೆಂದು ಆ ವೈದ್ಯಳು ಹೇಳಿದ್ದಳು. ಆದರೆ ಕೆಲವು ತೊಡಕುಗಳು ಕಾಣಿಸಿಕೊಳ್ಳಬಹುದೆನಿಸಿದಾಗ ಒಂದು ವಾರ ಮುಂಚಿತವಾಗಿ ನನ್ನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಲಮ್ ಕೂಡಾ ನನ್ನ ಬಗ್ಗೆ ಬಹಳ ಚಿಂತಿಸಹತ್ತಿದ. ಹೆರಿಗೆಯ ದಿನಗಳು ಹತ್ತಿರವಾಗುತ್ತಿದ್ದಂತೆ ನನ್ನಲ್ಲಿ ಕಳವಳ ಹೆಚ್ಚಾಯಿತು. ಇನ್ನೊಂದೆಡೆ, ಫ್ಯಾಕ್ಟರಿಯಲ್ಲಿ ಕೆಲವು ಸಮಸ್ಯೆ

ಗಳು ಹುಟ್ಟಿಕೊಂಡಿದ್ದವು. ಒಂದು ದೊಡ್ಡ ಸಿಲಿಂಡರಿನಿಂದ ಅನಿಲ ಸೋರಿ ಹೋಗಿತ್ತು. ಸೋರುತ್ತಿದ್ದ ಭಾಗದ ರಂಧ್ರವನ್ನು ಮುಚ್ಚಲು ಹೋದ ಕೆಲಸಗಾರನೊಬ್ಬ ಸತ್ತು ಹೋಗಿದ್ದ. ಕಾರ್ಖಾನೆಯ ದಾಖಲೆ ಪುಸ್ತಕದಲ್ಲಿ ಇದೊಂದು ಸಾಧಾರಣ ಆಕಸ್ಮಿಕ ಘಟನೆ ಯೆಂದು ಬರೆಯಲಾಗಿತ್ತು. ಅಂದು ಆಲಮ್ ನನ್ನನ್ನು ನೋಡಲು ಆಸ್ಪತ್ರೆಗೆ ಬರಬೇಕಾಗಿತ್ತು. ಬಹಳ ರಾತ್ರಿಯಾಗಿದ್ದರೂ ಅವನು ಫ್ಯಾಕ್ಟರಿಯಲ್ಲೇ ಉಳಿದಿದ್ದ. ಫ್ಯಾಕ್ಟರಿಯ ಕೆಲಸ ಗಾರರನ್ನೆಲ್ಲ ಭಯ ಆವರಿಸಿತ್ತು. ಕೆಲಸಗಾರರನ್ನೆಲ್ಲ ಅವನು ತಡೆಯಲು ಪ್ರಯತ್ನಿ ಸಿದ. ಆದರೆ ಅವರೆಲ್ಲ ಒಂದೇ ಕಂಠದಿಂದ 'ಆಲಮ್ ಸಾಹೇಬ ಅನಿಲ ಹರಿದು ಹೋಗುತ್ತಿದೆ. ನೀವೂ ಓಡಿ ಬಂದರೆ ಜೀವ ಉಳಿದೀತು' ಎಂದು ಕೂಗಿದರು. ಆದರೆ ಆಗ ಆಲಮ್ ಅಲ್ಲಿಯ ಉಸ್ತುವಾರಿ ಇಂಜಿನೀಯರನಾಗಿದ್ದ. ಮುಳುಗುತ್ತಿದ್ದ ಆ ಹಡಗಿಗೆ ಅವನೇ ನಾಯಕ. ಅಂಥ ಸ್ಥಿತಿಯಲ್ಲಿ ಅವನು ಜೀವ ಭಯದಿಂದ ಓಡಿ ಹೋಗುವಂತಿರಲಿಲ್ಲ.

"ಎಲ್ಲ ಕೆಲಸಗಾರರೂ ಓಡಿ ಹೋಗಿ ಸಮೀಪದ ಮುರಕು ತಗಡಿನ ಛಾವಣಿಯ ಗುಡಿಸಲುಗಳಲ್ಲಿ ಅವಿತುಕೊಳ್ಳುತ್ತಿದ್ದಂತೆ ಅನಿಲ ಅವರನ್ನು ಅಟ್ಟಿಕೊಂಡು ಹೋಯಿತು. ಆದರೆ, ಆಲಮ್ ಆ ಅನಿಲ ಹರಿಯದಂತೆ, ರಂಧ್ರ ಮುಚ್ಚಿದನು. ಆದರೂ ಅವನ ಗಂಟ ಲಲ್ಲಿ ಸ್ವಲ್ಪ ಉರಿಯುತ್ತಿದ್ದಂತೆನಿಸಿತು. ಅವನಿಗೆ ಮಂಪರು ಕವಿಯಿತು. ಆದರೂ ಆ ಮಂಪರನ್ನು-ಸುಮಾರು ಹತ್ತು ನಿಮಿಷಗಳ ವರೆಗೆ ಆಸ್ಪತ್ರೆ ತಲುಪವರೆಗಾದರೂ ನಿಯಂತ್ರಿಸ ಬೇಕಾಗಿತ್ತು. ಅಮೆರಿಕದಲ್ಲಿ ಅವನು ಕೊಂಡಿದ್ದ ಅಮೆರಿಕನ್ ಮಾದರಿಯ ಮೋಟಾರು ಗಾಡಿ ಸ್ವಲ್ಪ ದೊಡ್ಡದಾಗಿತ್ತಲ್ಲದೆ ಸಾಕಷ್ಟು ಭಾರದ್ದಾಗಿತ್ತು. ಆದರೆ ಆ ರಾತ್ರಿ ಅವನ ಪಾಲಿಗೆ ಸತ್ವ ಪರೀಕ್ಷೆಯ ರಾತ್ರಿಯೆನಿಸು ತ್ತಿದ್ದಂತೆ- ಆ ಮೋಟಾರು ಕೂಡ ಹೆಪ್ಪು ಗಟ್ಟಿದಷ್ಟು ತಣ್ಣಗಾಗಿತ್ತು. ಬಹಳ ಪ್ರಯಾಸ ಪಟ್ಟ ನಂತರ ಆ ಯಂತ್ರ ಚಲಿಸಿತು. ಬರುತ್ತಿದ್ದ ನಿದ್ರೆಯನ್ನು ನಿಯಂತ್ರಿಸಿಕೊಂಡು ಆಲಮ್ ಬಹಳ ನಿಧಾನ ಹಾಗೂ ಎಚ್ಚರಿಕೆಯಿಂದ ಗೇರ್ ಬದಲಾಯಿಸಿಕೊಂಡು ಶಾಂತವಾದ ಮುಖ್ಯ ರಸ್ತೆಗೆ ಬಂದು ವೇಗವನ್ನು ಹೆಚ್ಚಿಸಿದ.

"ಆಸ್ಪತ್ರೆಯನ್ನು ತಲುಪುತ್ತಲೇ ಪೋರ್ಟಿಕೋ ದಲ್ಲಿಯೇ ಮೋಟಾರು ನಿಲ್ಲಿಸಿ ದೊಡ್ಡ ಹೆಜ್ಜೆ ಗಳನ್ನಿಡುತ್ತಾ ನನ್ನ ಕೋಣೆಯತ್ತ ಧಾವಿಸಿದ. ಕೋಣೆ ಖಾಲಿಯಿದ್ದುದನ್ನು ಕಂಡ ಅವನಿಗೆ ಒಂದು ಕ್ಷಣ ಹೃದಯ ಬಡಿತ ನಿಂತಂತೆನಿಸಿತು. ಮರುಕ್ಷಣ, ಶುಭ್ರ ವಸ್ತ್ರಧಾರಿಯಾಗಿದ್ದ ಅಲ್ಲಿಯ ನರ್ಸೊಬ್ಬಳು ಬಂದು 'ನಿಮ್ಮ ಹೆಂಡತಿ ಆಪರೇಷನ್ ಥಿಯೇಟರ್‌ನಲ್ಲಿದ್ದಾಳೆ. ಅವಳಿಗೆ ಸಿಜೇರಿಯನ್ ಆಪರೇಷನ್ ಮಾಡ ಬೇಕೆಂದು ಡಾಕ್ಟರು ನಿರ್ಧರಿಸಿದ್ದಾರೆ. ನಿಮ್ಮ ಫ್ಯಾಕ್ಟರಿಗೆ ಫೋನ್ ಮಾಡಿ ನಿಮ್ಮನ್ನು ಸಂಪರ್ಕಿ ಸಲು ಪ್ರಯತ್ನಿಸಿದೆವು. ಆದರೆ ಬಹುಶಃ ನೀವಾ ಗಲೇ ಹೊರಟಿದ್ದಿರಿ. ಇದನ್ನು ಕೇಳುತ್ತಿದ್ದಂತೆ ಆಲಮ್‌ನಿಗೆ ಕೆಟ್ಟ ವಿಚಾರ ಬಂತಲ್ಲದೆ ಏನೋ ಕೆಡುಕು ಸಂಭವಿಸಬಹುದೆಂದು ಹೆದರಿ ಆಪರೇ ಷನ್ ಥಿಯೇಟರ್ ಕಡೆ ಓಡ ಹತ್ತಿದನು. ದಾರಿ ಯಲ್ಲಿ ಅವನಿಗೆ ಎದುರಾದ ನರ್ಸಿನ ಕೈಯಲ್ಲಿ ಏನೋ ಕಾಣಿಸಿತು. ಬಟ್ಟೆಯೊಂದರಲ್ಲಿ ಸುತ್ತಿದ್ದ ಆ ವಸ್ತು ಅನಿಷ್ಟಕರವೆನಿಸಿತು. 'ಇದರಲ್ಲೇನಿದೆ?'

"ಇದು ನಿಮ್ಮ ಮಗು" ಎಂದು ಹೇಳಿ ಅವನ ಕೈಯಲ್ಲಿಟ್ಟಳು. ಆ ಬಟ್ಟೆಯ ಹೊದಿಕೆಯನ್ನು ತೆಗೆದ ಆಲಮ್‌ನಿಗೆ ತಲೆ ಸುತ್ತ ಹತ್ತಿತು. ಅದು ಅದೇ ತಾನೇ ಜನ್ಮ ತಳೆದ ಮಗುವಾಗಿತ್ತೇನೋ ನಿಜ. ಆದರೆ ಅದು ತನ್ನದಾಗಿರಲು ಸಾಧ್ಯವಿಲ್ಲ. ಅದು ದೆವ್ವದ ಮಗುವಾಗಿರಬೇಕು. ಅದಕ್ಕೆ ಕಣ್ಣುಗಳಿರಲಿಲ್ಲ, ಕಿವಿಗಳಿರಲಿಲ್ಲ, ಮೂಗಿರ ಲಿಲ್ಲ , ಮುಖವಿರಲಿಲ್ಲ. ಒಂದು ಮಾಂಸದ ಮುದ್ದೆಯಾಗಿತ್ತು. 'ಇದೇನಾ ನಮ್ಮ ಮಗು' ಎಂದು ಚೀರುತ್ತಿದ್ದಂತೆ ಒಂಭತ್ತು ತಿಂಗಳ ಹಿಂದೆ ನಾನು ಅವನನ್ನು ಫ್ಯಾಕ್ಟರಿಗೆ ಕರೆದೊಯ್ಯಲು ಒತ್ತಾಯಿಸಿದ ಪ್ರಸಂಗ ನೆನ ಪಾಯಿತು. ವಿಷಾನಿಲ ತಯಾರಾಗುತ್ತಿದ್ದುದು ಅಲ್ಲಿಯೇ. ಆಲಮ್ ಅಲ್ಲಿಯ ಇಂಜಿನಿಯರ್ ಆ ಫಾಕ್ಟರಿಯಲ್ಲಿ ತಯಾರಿಸಲಾಗುತ್ತಿದ್ದ ವಿಷಾ ನಿಲದ ತೀಕ್ಷ್ಣತೆಯ ಬಗ್ಗೆ ಅವನಿಗೆ ತಿಳಿದಿತ್ತು.

"ತಲೆ ಸುತ್ತಿದಂತಾಗಿ, ಸ್ಮೃತಿ ತಪ್ಪಿ ಅವನು

ಅಲ್ಲಿಯೇ ಕುಸಿದು ಬಿದ್ದ. ನನಗೆ ಎಚ್ಚರವಾದಾಗ ಹತ್ತಿರದ ಮಂಚದ ಮೇಲೆ ಬೆಳೆದ ಮುದ್ದು ಮಗುವಿನಂತೆ ಮಲಗಿದ್ದ, ಅರ್ಧ ಎಚ್ಚರದ ಸ್ಥಿತಿಯಲ್ಲಿಯೇ 'ಹೇಗಿರುವೆ ಅಲಮ್?' ಎಂದು ಕೇಳಿದೆ. 'ಈ ಅನಾಹುತ ಏಕಾಯಿತು? ಪ್ರಿಯ ಅಲಮ್ ಯಾವ ಪಾಪಕ್ಕಾಗಿ ನಮಗೆ ಈ ಶಿಕ್ಷೆ?' ಎಂದು ಕೇಳುತ್ತಿದ್ದಂತೆ ಆಲಮ್‌ನಿಗೆ, ಒತ್ತಿ ಬರುತ್ತಿದ್ದ ಕೆಮ್ಮಿನಿಂದಾಗಿ ಸಂಪೂರ್ಣ ಎಚ್ಚರ ಬಂದಿತ್ತು.

"ನಿನ್ನ ಹಠ... ಅದಕ್ಕೆ ನಾನು ಮಣಿದದ್ದರಿಂದ ಇಷ್ಟೆಲ್ಲ ಸಂಭವಿಸಿದ್ದು. ನಾನು ಅಲ್ಲಿಯ ಇಂಜಿನಿಯರಾದ್ದರಿಂದ ಈ ಅಪಾಯದ ಬಗ್ಗೆ ತಿಳಿದಿತ್ತು. ನಾನು ನಿನ್ನ ಒತ್ತಾಯಕ್ಕೆ ಮಣಿಯಬಾರದಾಗಿತ್ತು...ನಿನ್ನನ್ನು ಫ್ಯಾಕ್ಟರಿಗೆ ಕರೆದೊಯ್ಯಬಾರದಿತ್ತು.' ಎಂದ.

"ಆ ನನ್ನ ಒತ್ತಾಯದ ಫಲವೇ ಈ ಮಾಂಸದ ಮುದ್ದೆ? 'ಆದರೆ ಅಪಾಯಕಾರಿ ಪರಿಣಾಮಗಳ ಬಗ್ಗೆ ತಿಳಿದಿದ್ದ ನಾನು. ನಿನ್ನನ್ನು ಅಲ್ಲಿಗೆ ಕರೆದೊಯ್ಯಬಾರದಿತ್ತು....' ಎಂದ.

"ಇದಾದ ಕೆಲವೇ ದಿನಗಳಲ್ಲಿ ಆಲಮ್ ಕೊನೆಯುಸಿರೆಳೆದ; ಆ ಫ್ಯಾಕ್ಟರಿಯ ಮೊದಲ ಹುತಾತ್ಮನಾದ

"ಅನಂತರ ನಾನು ಮುರುಕು ತಗಡಿನ ಗುಡಿಸಲುಗಳಿಗೆ ಸಾಗಿದೆ. ಅಲ್ಲಿ [illegible] ಶಿಲ್ಪಿಗಳು ಕೆಂಪು ಶಿಲೆಯಲ್ಲಿ ಭೂಪಾಲ ದುರಂತದ ಸ್ಮರಣಾರ್ಥವಾಗಿ ಮೂರ್ತಿಯೊಂದನ್ನು ಕಟೆಯಲು ಬಂದರು. ಅವರು ಮಾದರಿ[illegible] ನನ್ನು ಹುಡುಕುತ್ತಿದ್ದಾಗ, ನನ್ನ ಅಳಲು ಕೇಳಿದಂತೆ, ನನ್ನನ್ನು ಅರ್ಪಿಸಿದೆ. ಅವರು ಕೇಳಿದರು 'ಮಡಿಲಲ್ಲಿ ಕೂಡಿಸಿಕೊಳ್ಳಲು ನಿಮಗೊಂದು ಮಗುವಿದೆಯೇ?'

'ಒಂದು ಮಗುವಿತ್ತು, ಅದರ ಈ ಅನಿಲಕ್ಕೆ ಬಲಿಯಾಯಿತು' ಎಂದುತ್ತರಿಸಿದೆ . ಆಗ ಅವರು ಮೇಣದ ಗೊಂಬೆಯೊಂದನ್ನು ನನ್ನ ಮಡಿಲೊಳಗಿರಿಸಿಕೊಳ್ಳಲು ಕೊಟ್ಟರು. ಅದರ ಕಡೆ ಒಂದು ಸಲ ನೋಡಿ 'ಅದರ ಕಣ್ಣುಗಳನ್ನು ಕಿತ್ತು ಹಾಕಿರಿ, ಮೇಣದಿಂದ ಅದರ ಕಿವಿಗಳನ್ನು ಮುಚ್ಚಿಬಿಡಿರಿ, ಅದರಂತೆ ಮೂಗನ್ನೂ ಮುಚ್ಚಿ ಹಾಕಿರಿ. ಆಗ ಮಾತ್ರ ಅದು ನನ್ನ ಮಗುವಿನಂತೆ ಕಾಣುತ್ತದೆ. ಆಗ ಮಾತ್ರ ಅದು ನನ್ನ ಸ್ವಂತ ಮಗುವೆನಿಸುತ್ತದೆ' ಎಂದೆ.

"ನಾಲ್ಕು ದಿನಗಳವರೆಗೆ ಅವರು ಹೇಳಿದಂತೆ ನಿಂತೆ. ಅವರ ಕೆತ್ತನೆಯ ಕೆಲಸದಲ್ಲಿ ಒಬ್ಬ ತಾಯಿಯ ಅನಿಸಿಕೆಗಳು ಮೂಡಿ ಬಂದಿವೆ. ಆ ಕೆಲಸ ಮುಗಿದ ನಂತರ ಆಸ್ಪತ್ರೆಯ ವೈದ್ಯಳ ಹತ್ತಿರ ಹೋಗಿ 'ನನ್ನ ಆಯುಷ್ಯದ ಉಳಿದ ದಿನಗಳೆಷ್ಟಿವೆ? ಎಂದು ಕೇಳಿದೆ.

"ನೀನು ಸರಿಯಾಗಿ ಚಿಕಿತ್ಸೆ ಮಾಡಿಸಿಕೊಂಡರೆ ಪೂರ್ಣಾಯುಷ್ಯೆಯಾಗಿ ಬಾಳುವೆ;" ಎಂದು ಹೇಳಿದಳು.

"ಆದರೆ ನನಗೆ ಬದುಕುವ ಆಸೆ ಇಲ್ಲ. ಆಸ್ಪತ್ರೆಯ ಹಾಸಿಗೆ ಮೇಲೆ ಬಿದ್ದುಕೊಂಡು, ಬರುವ ಆ ಮೃತ್ಯುವಿನ ದಾರಿಯನ್ನು ನೋಡ ಬಯಸುತ್ತೇನೆ.

"ಹಾಗೆಂದರೆ ನಾವು ಏನೂ ಹೇಳಲು ಸಾಧ್ಯವಿಲ್ಲ; ಬಹುಶಃ ಒಂದು ವರ್ಷ. ಆದರೆ ನೀನಿನ್ನೂ ತರುಣಿ, ಸ್ಫುರದ್ರೂಪಿ. ಆದರೂ ನೀನು ಬದುಕ ಬಯಸುವುದಿಲ್ಲವೇಕೆ? ಸಾಯುವ ಆಸೆ ಏಕೆ?"

"ನನಗೆ ತಕ್ಕ ಶಿಕ್ಷೆಯಾಗಬೇಕಾಗಿದೆ. ಒಂದು ದುಷ್ಕಾರ್ಯದಲ್ಲಿ ನೆರವಾಗಿದ್ದೆ... ಈ ಒಂದು ವರ್ಷದವರೆಗೆ ಎಲ್ಲಾದರೂ ಕೆಲಸಕ್ಕೆ ಸೇರುವೆ.

"ಅಲ್ಲಿಂದ ಹೊರಟು ಬಂದ ನಾನು ಎಂ.ಎ. ಪದವಿ ಪಡೆದುಕೊಂಡೆ. ನಂತರ ಈ ಹೊಟೇಲಿನಲ್ಲಿ ಕ್ಯಾಪ್ಟನ್ ಕೆಲಸ ದೊರೆಯಿತು. ಈ ಒಂದು ವರ್ಷದ ಅವಧಿಯಲ್ಲಿ ಇಲ್ಲಿಗೆ ಬಂದವರಲ್ಲಿ ಈ ದುರಂತ ಕಥೆಯ ಬಗ್ಗೆ ಆಸಕ್ತಿ ತೋರಿಸಿದವರಿಗೆಲ್ಲ ಇದನ್ನು ಹೇಳಿದ್ದೇನೆ. ಇಂದಿಗೆ ಒಂದು ವರ್ಷ ಮುಕ್ತಾಯಗೊಂಡಿದೆ"

ಅಂದು ರಾತ್ರಿ ನಾನು ಭಾರತ ಭವನದಲ್ಲಿನ ಕಾರ್ಯಕ್ರಮಕ್ಕೆ ಹೋದೆ. ಅದೊಂದು ನಾಟಕ ಕಾರ್ಯಕ್ರಮವೆನ್ನುವುದಕ್ಕಿಂತ ಭೂಪಾಲ ದುರಂತದ ವಾಸ್ತವಿಕ ಚಿತ್ರಣದಂತಿತ್ತು. 'ಬ್ರಾಂಜ್ ಪಾಟ' ಎಂಬ ಹೆಸರಿನ ಈ ನಾಟಕ ಸತ್ಯಕಥೆಯೊಂದಾಗಿತ್ತು. ಸುಮಾರು ಮೂವತ್ತೈದು ಜನ ನಟರು-ನಟಿಯರು ಹಾಗೂ ಮಕ್ಕಳು ಎರಡು ವರ್ಷಗಳ ಹಿಂದೆ ಭೂಪಾಲದಲ್ಲಿ ಸಂಭವಿಸಿದ ದುರಂತವನ್ನು ಮತ್ತೆ ಸೃಷ್ಟಿಸಿದ್ದರು.

"ಬಯಲು ರಂಗ ಮಂಟಪದಲ್ಲಿ ಪ್ರದರ್ಶಿಸಲಾದ ಈ ನಾಟಕದಲ್ಲಿ, ಹತ್ತು, ಹನ್ನೆರಡು ಜನ ಮಹಿಳೆಯರು, ತಮ್ಮ ಗೆಳತಿಯನ್ನು ಪ್ರಸೂತಿ

ಗೃಹದಿಂದ ಕರೆದು ತರುವ ದೃಶ್ಯವದು. ಆ ತಾಯಿ, ತಾನು ಜನ್ಮವಿತ್ತ ಮಗುವನ್ನು ಬಹು ಸಂತೋಷದಿಂದ ಎದೆಗವಚಿಕೊಂಡಿದ್ದಳು. ಆಕೆಯ ಗೆಳತಿಯರು, ಸುಗ್ಗಿಯ ಹಾಡನ್ನು ಹಾಡಿದರು.ಈ ದುರಂತ ನಾಟಕ ಮುಗಿಯುವಾಗ, ಮತ್ತೊಮ್ಮೆ ಮೆರವಣಿಗೆ ಕಾಣಿಸಿತು. ಆ ಮಹಿಳೆಯರು ಬಹಳ ಮೆತ್ತನೆಯ ದನಿಯಲ್ಲಿ ಬಹುಶಃ ಶೋಕ ಗೀತೆಯೊಂದನ್ನು ಹಾಡುತ್ತಿದ್ದರು. ಆ ತಾಯಿ ತನ್ನ ಗರ್ಭದಿಂದ ಬಂದಿದ್ದ- ಮುಖವಿರದ, ಮಾಂಸದ ಮುದ್ದೆಯಂತಿದ್ದ ಮಗುವನ್ನು ಎದೆಗವಚಿಕೊಂಡಿದ್ದಳು. ಆ ಮಾಂಸದ ಮುದ್ದೆಯನ್ನು ಅವಳು ಅಲ್ಲಿದ್ದ ಹಿರಿಯನ ಕೈಗಿತ್ತಳು. ಅವನು ಆ ಮಾಂಸದ ಮುದ್ದೆಯನ್ನು ತನ್ನ ತಲೆಯ ಮೇಲೆ ಎತ್ತಿ ಹಿಡಿದು, ತನ್ನ ಹೆಬ್ಬೆರಳು ಮತ್ತು ಮುಂದಿನ ಬೆರಳುಗಳಿಂದ ಅದರ ಜೀವ ತೆಗೆಯುವ ದೃಶ್ಯವದು.

"ಶೋಕ ಗೀತೆಯಂತಿದ್ದ ಈ ಮಹಿಳೆಯರ ಧ್ವನಿ, ಗ್ರೀಕ್ ದುರಂತ ನಾಟಕದ ಸಮೂಹ ಗಾನದಂತೆ ಏರುತ್ತಾ ಹೋಯಿತು. ಆ ಕಣಿವೆಯೆಲ್ಲ ಈಗ ಫಲವತ್ತಾಗಿರದ ಬಂಜರು ಭೂಮಿಯಾಗಿದೆ. ಇಲ್ಲಿ ಸಂತಸ ಹಾಗೂ ಉತ್ಸಾಹದ ಹಾಡುಗಳ ಮಧ್ಯೆ ಮಕ್ಕಳ ನಲಿದಾಟಕ್ಕೆ ಆಸ್ಪದವಿಲ್ಲ. ಜನಜೀವನ ಮತ್ತು ನಗು ಎನ್ನುವುದು ಭೂಪಾಲ ಕಣಿವೆಯಿಂದ ಬಹಳ ದೂರ ಹೋಗಿದೆ.

"ಬೆಳಕಿನ ಒಂದು ಮಿಣುಕು. ಕೂಡಲೇ ಆ ಮೂವತ್ತೈದೂ ನಟ-ನಟಿಯರು, ಆ ಬೆಳಕಿನಲ್ಲಿ, ಸಾವಿರಾರು ಜನರಂತಾದರು ಮತ್ತು ಅವರ ಹಾಡು ಈಗ ಸವಾಲಾಗಿ ಬಿಟ್ಟಿತು. ಮಹಿಳೆಯರು ಈ ಜನಸಂದಣಿಯಲ್ಲಿ ಭೂಪಾಲದ ಕ್ಯಾಪ್ಟನ್ ಸಲ್ಮಾ ಓಡುತ್ತಿದ್ದ ಹಾಗೆ ಕಾಣಿಸಿತು. ಬೆಳಕಿನ ಪರಿಣಾಮ ಮಂದವಾಗುತ್ತಿದ್ದಂತೆ, "ಪ್ರಿಯ ಆಲಮ್, ನನ್ನ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿದೆ... ಈಗ ನಾನೂ ನಿನ್ನ ಹತ್ತಿರ ಬರುತ್ತಿದ್ದೇನೆ". ಎನ್ನುವುದು ಕೇಳಿಸಿತು.

ಮುಕ್ತಾಯದ ಆ ನಿಶ್ಶಬ್ದತೆಯಲ್ಲಿ, ಮಾರಕ ಕೆಮ್ಮಿನ ಶಬ್ದ ಹಾಗೂ ದೇಹವೊಂದು ಬಿದ್ದು, ಸತ್ತ ಶಬ್ದ ಕೇಳಿಸಿತು. ಆದರೆ "ಅಬ್ಬಾಸ್ ಸಾಹೇಬ್, ನನ್ನ ಈ ಕಥೆಯನ್ನು ಜನರಿಗೆ ತಿಳಿಸಿದ್ದಕ್ಕಾಗಿ ಧನ್ಯವಾದಗಳು.... ಈ ಚಿಕನ್ ಸೂಪ್ ತೆಗೆದುಕೊಳ್ಳುವುದನ್ನು ಮರೆಯದಿರಿ..."ಎಂದ ಅವಳ ಮಾತುಗಳು ನನಗೆ ಮಾತ್ರ ಕೇಳಿಸಿದವು. ●

(ಇಲ್ಲ್ಯುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾದ ಅನುಮತಿಯಿಂದ)

ಕಾಲಾತೀತರು

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ನಾವು ಬಾರತೀಯರು ಕಾಲಾತೀತರು! ಈ ಜನ್ಮದಲ್ಲಿ ಈಡೇರಲಾರದ ಕೆಲಸಗಳನ್ನು ಮುಂದಿನ ಜನ್ಮಕ್ಕೆ ಮುಂದೂಡುವ ಜನ ನಾವು.

ಒಬ್ಬ ವಿದೇಶಿ ಪತ್ರಕರ್ತ ಹೇಳಿದಂತೆ ನಿನ್ನೆ-ನಾಳೆಗಳಿಗೆ ಒಂದೆ ಶಬ್ದ ಬಳಕೆಯಲ್ಲಿರುವ ರಾಷ್ಟ್ರ ಭಾಷೆಯಿರುವುದು ಇಡೀ ಜಗತ್ತಿನಲ್ಲಿ ಭಾರತವೊಂದೆ! ಅರ್ಥಾತ್ ನಿನ್ನೆ-ನಾಳೆಗಳಲ್ಲಿ ನಮಗೆ ಅಂತರವೇ ಕಾಣುವುದಿಲ್ಲ. ಭೂತ, ಭವಿಷ್ಯತ್ತು ಎರಡೂ ಒಂದೇ ನಮ್ಮ ಮಟ್ಟಿಗೆ!

ಕಾಲದ ಬಗೆಗೆ ಇಷ್ಟೊಂದು ಅಗಾಧವಾದ ಪ್ರಜ್ಞೆಯಿರುವ ನಮಗೆ ವೇಳೆಯ ಮಹತ್ವ ಹೇಗೆ ತಾನೆ ತಿಳಿದೀತು? ಗಾಡಿ-ವಿಮಾನಗಳು ಗಂಟೆಗಟ್ಟಳೆ ತಡವಾಗಿ ಓಡುವುದಾಗಲಿ, ಮಂತ್ರಿಗಳು ತಾಸುಗಟ್ಟಲೆ ಸಭಿಕರನ್ನು ಕಾಯಿಸುವುದಾಗಲಿ ನಮಗೆ ಮಾಮೂಲಾಗಿಬಿಟ್ಟಿದೆ. ಸಮಯ ಪ್ರಜ್ಞೆ, ವೇಳೆಯ ಬೆಲೆಗಳನ್ನು ಆದಿಯಿಂದ ಸರ್ಕಾರ ಕಾಲಹರಣ ಮಾಡಿದ್ದರ ಫಲವಾಗಿ ರಾಜಬೊಕ್ಕಸಕ್ಕೆ ಕೋಟಿಗಟ್ಟಲೆ ನಷ್ಟವಾಗಿದೆ, ಆಗುತ್ತಲಿದೆ.

—ನಾನಿ ಪಾಲ್ಖೀವಾಲಾ

(ಸಂಗ್ರಹ: ವಾಸುದೇವ ಥಾ. ಕಲಘಟಗಿ)

ಭಾರತಕ್ಕೆ ಬಂತು ಮೊದಲ ವಿಮಾನ

ಈಗಲೂ ನಮ್ಮಲ್ಲಿಯ ಕೆಲವು ಹಳ್ಳಿಗಳಲ್ಲಿ ಕಾರ್ ಎಂದರೆ ಇಂದ್ರ ಲೋಕದ ಐಭೋಗ. ಊರಿಗೆ ಕಾರು ಬಂದರೆ ಅದರ ಸುತ್ತ ಜಾತ್ರೆಯಂತೆ ಜನ ನೆರೆಯುತ್ತಾರೆ. ಅಂಥದರಲ್ಲಿ ಎಪ್ಪತ್ತು ವರ್ಷದ ಹಿಂದೆ ಮೊದಲ ವಿಮಾನ ಭಾರತಕ್ಕೆ ಬಂದಾಗ ಎಂಥ ಸಂಭ್ರಮ ಇದ್ದಿರಬೇಡ.


ಆಳರಸರಾಗಿದ್ದ ಬ್ರಿಟಿಷ್ ವಲಯದಲ್ಲಂತೂ ಎಲ್ಲಿಲ್ಲದ ಹರುಪು. ಸ್ವಾಗತಕ್ಕೆಂದೇ ವಿಶೇಷ ಸಮಾರಂಭ. ವಿಮಾನವನ್ನು ನೋಡಲು ಬಂದ ಅಧಿಕಾರಿಗಳಿಗೆ ಬಣ್ಣದ ಶಾಮಿಯಾನಾದ ಚಪ್ಪರ. ಪ್ರತಿಷ್ಠಿತರಿಗೆ ಮುಂದಿನ ಸಾಲಿನ ಕುರ್ಚಿ. ಇಡೀ ಮೈದಾನದ ತುಂಬ ತಳಿರು ತೋರಣ.

ಆಗಿನ್ನೂ ಭಾರತದಲ್ಲಿದ್ದ ಕರಾಚಿಯಿಂದ ಹತ್ತು ಮೈಲು ದೂರದ ಮಗರ್ ಪೀರ್ ಎಂಬಲ್ಲಿ ವಿಮಾನ ಇಳಿಯುವುದಿತ್ತು. ವಿಮಾನದ ಪೈಲಟ್ ನಡೆದುಬರಲು ಶಾಮಿಯಾನದವರೆಗೆ ರೆಡ್ ಕಾರ್ಪೆಟ್. ಆತ ನಡೆದು ಬರುವಾಗ ಸ್ವಾಗತ ಗೀತೆ ನುಡಿಸಲು ಸಿದ್ಧವಿದ್ದ ಮಿಲಿಟರಿ ಬ್ಯಾಂಡ್‌ಸೆಟ್ ಪೈಲಟ್ ತಂದು ಕೊಡುವ ಬ್ರಿಟಿಷ್ ರಾಜಮುದ್ರೆಯ ಪತ್ರವನ್ನು ಸ್ವೀಕರಿಸಲು ಕರಾಚಿಯ ಚೀಫ್ ಕಮಿಷನರ್ ಸರ್ ಹೆನ್ರಿ ಲಾರೆನ್ಸ್ ಸಿದ್ಧವಾಗಿ ನಿಂತಿದ್ದರು. ಸಮಾರಂಭದ ಮುಕ್ತಾಯ ಭಾಷಣ ಕರಾಚಿಯ ಪುರಸಭಾಧ್ಯಕ್ಷರಿಂದ. 1918ರ ಡಿಸೆಂಬರ್ 18 ರಂದು ನಡೆಯ ಬೇಕಿದ್ದ ಸಮಾರಂಭಕ್ಕೆ ಕಿಕ್ಕಿರಿದು ಜನ ಸೇರಿದ್ದರು. ಮುಗಿಲಿನತ್ತ ಕತ್ತು ಚಾಚಿ ನೋಡಿದ್ದೇ ಬಂತು. ವಿಮಾನ ಬರಲಿಲ್ಲ. ಮರುದಿನ ಡಿಸೆಂಬರ್ ಹತ್ತೊಂಬತ್ತಾದರೂ ಅದರ ಸುಳಿವಿಲ್ಲ.

ಮರುಭೂಮಿಯ 'ಮಗರ್ ಪೀರ್'ನಲ್ಲಿ ಗಾಳಿ ಹೊಡೆತಕ್ಕೆ ಸಿಕ್ಕಿ ತಳಿರು-ತೋರಣವೆಲ್ಲ ಚಿಂದಿಯಾಯಿತು. ಸಮಾರಂಭಕ್ಕೆ ತಂದಿದ್ದ ಹೂವೆಲ್ಲ ಬಾಡಿತು. ಹಾಗೇ ಬ್ರಿಟಿಷ್ ಅಧಿಕಾರಿಗಳ ಮುಖ ಕೂಡ.

ಯೋಜಿಸಿದಂತೆ ಐದು ದಿನ ಮುಂಚೆಯೇ ಇಂಗ್ಲೆಂಡಿನ ಇಪ್ಸ್‌ವಿಚ್‌ನಿಂದ ವಿಮಾನ ಹೊರಟಿತ್ತು. ಆದರೆ ತಲುಪಬೇಕಾಗಿದ್ದ ಭಾರತವನ್ನು ಮಾತ್ರ ಅದು ಸರಿಯಾದ ಸಮಯಕ್ಕೆ ತಲುಪಲಿಲ್ಲ. ಹೀಗೆ ಭಾರತಕ್ಕೆ ಹೊರಟಿದ್ದ ವಿಮಾನದ್ದೇ ಒಂದು ಕಥೆ. "ಹ್ಯಾಂಡ್ಲಿ ಪೇಜ್" ಎಂಬ ಹೆಸರಿನ ನಾಲ್ಕು ಎಂಜಿನ್ನುಗಳ ಈ ಬೃಹತ್ ವಿಮಾನದ ತೂಕ ಹದಿನಾಲ್ಕು ಟನ್‌ಗಳು. ಅದನ್ನು ನಿರ್ಮಿಸಿದ್ದು ಪ್ರಥಮ ಜಾಗತಿಕ ಯುದ್ಧದಲ್ಲಿ ಬಳಸಲು ಬರ್ಲಿನ್ ನಗರದ ಮೇಲೆ ಬಾಂಬ್ ಹಾಕಲು 'ಹ್ಯಾಂಡ್ಲಿ ಪೇಜ್" ರೂಪಿತವಾಗಿತ್ತು. ಚಾಲಕರಿಗೆ ತಕ್ಕ ತರಬೇತು ನೀಡುವಷ್ಟರಲ್ಲಿ ಯುದ್ಧವೇ ಮುಗಿದಿತ್ತು. ಬ್ರಿಟಿಷರಿಗೆ ಯುದ್ಧದಲ್ಲಿ ವಿಜಯಲಕ್ಷ್ಮಿ ಬೇರೆ ಒಲಿದಿದ್ದಳು. ಇಂಥ ಸಮಯದಲ್ಲಿ 'ಹ್ಯಾಂಡ್ಲಿ ಪೇಜ್' ನಿರುಪಯುಕ್ತ ಎನಿಸಿರಬಾರದಲ್ಲ. ಆಗತಾನೇ ಸ್ವಾತಂತ್ರ್ಯದ ಮೊದಲ ಕಿಡಿ ಭಾರತದಲ್ಲಿ ಹೊಗೆಯಾಡುತ್ತಿತ್ತು. ಈ ಬೃಹತ್ ವಿಮಾನವನ್ನು ಭಾರತಕ್ಕೆ ಕಳಿಸುವದಾದರೆ ತಮ್ಮ ಸಾಧನೆಯನ್ನು ಭಾರತೀಯರಿಗೂ ಪರಿಚಯಿಸಿದಂತೆ ಆಗುತ್ತದೆ, ವಿಜಯೋತ್ಸವ ಆಚರಿಸಿದಂತೆಯೂ ಆಗುತ್ತದೆ ಎಂದು ಬ್ರಿಟಿಷರು ಯೋಜಿಸಿದರು.

ಸಮರೋಪಾದಿಯಲ್ಲಿ ಸಿದ್ಧತೆಗಳು ನಡೆದವು. ಅಲ್ಲಲ್ಲಿ ವಿಮಾನದ ಇಳಿದಾಣಗಳು ತಲೆ ಎತ್ತಿದವು. ಸೈನಿಕ ಗುಡಾರ ಸಜ್ಜು



ಗೊಂಡವು. ರನ್‌ವೇ ಗುರುತಿಸುವ ಬಿಳಿ ಪಟ್ಟಿಗಳನ್ನು ಸ್ಥಳೀಯ ಕೂಲಿಕಾರರು ಬಳಿದರು. ನೀರು, ಪೆಟ್ರೋಲ್, ವಿಮಾನದ ಬಿಡಿಭಾಗಗಳು, ಆಹಾರ ಸಾಮಗ್ರಿ ಅಷ್ಟೇ ಏಕೆ. ಟಾಯಿಲೆಟ್ ಪೇಪರ್ ಕೂಡ ಮರೆಯದೇ ಸಂಗ್ರಹಿಸಿ ಇಟ್ಟರು. ವಿಮಾನ ಚಾಲಕರಿಗೆ ಗಾಳಿಯ ದಿಕ್ಕು ತಿಳಿಯುವಂತೆ ಹೊಗೆ ಕುಂಡಗಳನ್ನು ಹೊತ್ತಿಸಿಡಲಾಯಿತು. ಮೋಡ ಮುಸುಕಿ ವಿಮಾನ ಇಳಿಯುವ ಜಾಗ ಕಾಣದಂತಾದರೆ ಇರಲೆಂದು ಹಸಿರು ಬೆಳಕು ಚೆಲ್ಲುವ ಪಿಸ್ತೂಲ್ ಕೂಡ ಸಜ್ಜು ಮಾಡಿಕೊಂಡರು.

ಡಿಸೆಂಬರ್ ಹದಿಮೂರರಂದು ಇಪ್ಸ್‌ವಿಚ್ ಬಿಟ್ಟ ಹ್ಯಾಂಡ್ಲಿ ಪೇಜ್ ಐದು ದಿನದಲ್ಲಿ ಭಾರತ ತಲುಪಬೇಕಿತ್ತು. ಹಗಲು ಹೊತ್ತು ಮಾತ್ರ ಅದರ ಸಂಚಾರ. ಅದನ್ನು ನಡೆಸುತ್ತಿದ್ದವನು ಮೇಜರ್ ಎ ಎಸ್ ಮೆಕ್‌ಲಾರೆನ್, ಅವನ ಸಹಾಯಕ ಪೈಲಟ್ ಕ್ಯಾಪ್ಟನ್ ಹ್ಯಾರಿ. ಜತೆಗೊಬ್ಬ ಮೆಕ್ಯಾನಿಕ್ ಸಾರ್ಜೆಂಟ್ ಸ್ಮಿತ್. ಭಾರತದತ್ತ ಹೊರಟ ವಿಮಾನ ಅರ್ಧ ಹಾದಿಯಲ್ಲಿ ಕೆಟ್ಟಿತು. ಓರ್ಮರ್ ಎಂಬಲ್ಲಿ ಒಂದು ಎಂಜಿನ್ ತೊಂದರೆಗೀಡಾಯಿತು. ಕೆಲವು ವಾರಗಳವರೆಗೆ ವಿಮಾನದ ಸಿಬ್ಬಂದಿ ಅಲ್ಲಿಯೇ ತಂಗಿ ಹರಸಾಹಸ ನಡೆಸಿದರೂ ರಿಪೇರಿ ಸಾಧ್ಯವಾಗಲಿಲ್ಲ. ಏನಾದರಾಗಲೆಂದು ಹಾಗೆಯೇ ಅವರು ಓರ್ಮರಾದಿಂದ ಭಾರತದತ್ತ ಹೊರಟರು.

ಕರಾಚಿಗೆ ಇನ್ನೇನು ಒಂದು ಗಂಟೆಯ ಹಾದಿ. ಮತ್ತೊಂದು ಎಂಜಿನ್ ಕೆಟ್ಟಿತು. ವಿಮಾನದ ಹೊರೆಯನ್ನು ಕಡಿಮೆ ಮಾಡುವುದಗತ್ಯವಾಯಿತು. ನಕ್ಷೆ ದುರ್ಬೀನು ಕೊನೆಗೆ ಚಾಲಕ ಸಿಬ್ಬಂದಿಯ ಬಟ್ಟೆ ಬರೆಗಳನ್ನೂ ನೆಲಕ್ಕೆಸೆದರು. ಅಂತೂ ಇಂತೂ ಕರಾಚಿಯ ಬಳಿ ನೆಲಕ್ಕಿಳಿದ ವಿಮಾನ ಗುಡುಗಿ ನಿಂತಾಗ ಆಗಲೇ ಸಂಜೆಗತ್ತಲು ಮುಸುಕಿತ್ತು. ಇಪ್ಪತ್ತೆಂಟು ದಿನ ತಡವಾಗಿಯಾದರೂ ಬಂದ ವಿಮಾನವನ್ನು ಸ್ವಾಗತಿಸಲು ಅಧಿಕಾರಿಗಳ ಚಿಕ್ಕ ತಂಡವೊಂದು ಸಿದ್ಧವಿತ್ತು. ಹಡಗಿನಲ್ಲಾದರೆ ಹನ್ನೆರಡು ದಿನಕ್ಕೆ ಭಾರತ ತಲುಪುತ್ತಿದ್ದ ಪತ್ರವನ್ನು ಮುವತ್ನಾಲ್ಕು ದಿನಕ್ಕೆ ಕೊನೆಗೂ ಗುರಿ ತಲುಪಿಸಲಾಯಿತು. ಅತ್ಯದ್ಭುತವೆನಿಸಿದ ಈ ಯಾನದಲ್ಲಿ ಸಿಬ್ಬಂದಿಯ ಜತೆ ಪ್ರಯಾಣಿಸಿದ್ದ ಫಾಕ್ಸ್ ಟೆರಿಯರ್ ಜಾತಿಯ ಒಂದು ನಾಯಿ ಕೂಡ ನೆಲಕ್ಕಿಳಿಯಿತು.

1918ರ ಡಿಸೆಂಬರ್ ಹದಿನೆಂಟರಂದು ಬರಬೇಕಿದ್ದ ಭಾರತದ ಮೊಟ್ಟ ಮೊದಲ ವಿಮಾನ 1919ರ ಜನವರಿ ಹದಿನೈದರಂದು ಕೊನೆಗೂ ಗುರಿ ತಲುಪಿತು. ●

ಕರ್ನಾಟಕ ಸರ್ಕಾರ

ಇದು ನಿಮಗೆ ತಿಳಿದಿರಲಿ — ಜನನ ಮತ್ತು ಮರಣಗಳ ನೋಂದಣಿ ಕಾನೂನಿನ ಪ್ರಕಾರ ಕಡ್ಡಾಯ

ನಿಮ್ಮ ಸಂಸಾರದಲ್ಲಿ ಆಗುವ, ಜನನ ಮತ್ತು ಮರಣ ಪ್ರಕರಣಗಳ ನೋಂದಣಿಯನ್ನು ಮಾಡಿಸಲೇಬೇಕು.

1) ಗ್ರಾಮೀಣ ಪ್ರದೇಶದಲ್ಲಿ: ಗ್ರಾಮ ಲೆಕ್ಕಿಗರು, ಜನನ ಮರಣಗಳ ರಿಜಿಸ್ಟ್ರಾರರು.
2) ಮುನಿಸಿಪಾಲಿಟಿಗಳಲ್ಲಿ: ಆರೋಗ್ಯಾಧಿಕಾರಿಗಳು, ಜನನ ಮರಣಗಳ ರಿಜಿಸ್ಟ್ರಾರರು.
3) ಜನನವನ್ನು ಜನನದ ದಿನಾಂಕದಿಂದ 14 ದಿನಗಳೊಳಗೆ ನೋಂದಾಯಿಸಬೇಕು
4) ಮರಣವನ್ನು ಮರಣದ ದಿನಾಂಕದಿಂದ 7 ದಿನಗಳೊಳಗೆ ನೋಂದಾಯಿಸಬೇಕು.

ಈ ಕೆಳಗಿನ ಕೆಲವು ಕಾರಣಗಳಿಗಾಗಿ ಜನನ, ಮರಣಗಳ ಪ್ರಮಾಣ ಪತ್ರಗಳು ಅತಿ ಅವಶ್ಯ.

1. ಶಾಲೆಗೆ ಪ್ರವೇಶ ಪಡೆಯಲು
2. ಉದ್ಯೋಗ ದೊರಕಿಸಿಕೊಳ್ಳಲು
3. ವಿವಾಹಕ್ಕೆ ಅರ್ಹತೆಯನ್ನು ಸಮರ್ಥಿಸಲು
4. ಮತ ಹಾಕುವ ಅರ್ಹತೆಯನ್ನು ಪಡೆಯಲು
5. ಡ್ರೈವಿಂಗ್ ಲೈಸನ್ಸ್ ಪಡೆಯಲು
6. ಪಾಸ್‌ಪೋರ್ಟ್ ಹೊಂದಲು
7. ಸಾಮಾಜಿಕ ರಕ್ಷಣೆಯ ಸವಲತ್ತು ಪಡೆಯಲು
8. ಮಿಲಿಟರಿಯಲ್ಲಿ ಸೇವೆ ಸಲ್ಲಿಸಲು
9. ವಿಮೆ ಮತ್ತು ನಿವೃತ್ತಿ ವೇತನ ಪಡೆಯಲು
10. ಆಸ್ತಿ ಹಕ್ಕನ್ನು ಹೊಂದಲು
11. ಮರಣದ ಕಾರಣ ತಿಳಿದು ಕೊಂಡು ಚಿಕಿತ್ಸಾಕ್ರಮ ರೂಪಿಸಲು

ಜನನ ಮರಣದ ದಾಖಲಾತಿ ಮಾಡಿಸುವುದು ಕರ್ತವ್ಯ ಹಾಗೂ ಸೇವೆ. ಮಾಡಿಸದೇ ಇರುವುದು ಅಪರಾಧ — ಶಿಕ್ಷೆಗೆ ಒಳಗಾಗಬೇಕಾಗುತ್ತದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಜನನ, ಮರಣ ಮತ್ತು ಮದುವೆಗಳ ಮುಖ್ಯ
ರಿಜಿಸ್ಟ್ರಾರರು ಹಾಗೂ ನಿರ್ದೇಶಕರು,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
ಕರ್ನಾಟಕ ರಾಜ್ಯ, ಬೆಂಗಳೂರು.

"ಕರ್ನಾಟಕ ವಾರ್ತೆ"

ಜೀವನ ದರ್ಶನ-2 ★ ಕೆ.ಟಿ. ಪಾಂಡುರಂಗಿ

ಮೌನದ ಜಾಣ್ಮೆ

ಮೌನವು ಮನುಷ್ಯನ ಮನಸ್ಸಿಗೆ ವಿಶ್ರಾಂತಿಯ ಶಾಂತಿಯನ್ನೂ ಕೊಡುವ ಒಂದು ಉತ್ತಮ ಸಾಧನ. ಕೇವಲ ಮಾತನಾಡದೇ ಇರುವದು ಮೌನವಲ್ಲ. ಮೌನದ ಮೂರು ಹಂತಗಳಿವೆ. ಮೊದಲನೆಯದು ಮತ್ತು ಹೊರಗೆ ಕಾಣುವದು ಮಾತನಾಡದೇ ಇರುವದು. ಎರಡನೆಯದು ಮನಸ್ಸಿನಲ್ಲಿ ತಾಳಮೇಳವಿಲ್ಲದೆ ಬರುವ ವಿಚಾರಗಳನ್ನು ಒಂದು ಸ್ತಿಮಿತಕ್ಕೆ ತಂದು ಮನಸ್ಸನ್ನು ಒಂದು ಸ್ಥಿರತೆಗೆ ತರುವದು. ಮೂರನೆಯದು ಮನಸ್ಸಿನಲ್ಲಿ ಉಂಟಾಗುವ ಭಾವನೆಗಳನ್ನೂ ಒಂದು ಸ್ತಿಮಿತಕ್ಕೆ ತಂದು ಮನಸ್ಸಿಗೆ ಒಂದು ಪ್ರಶಾಂತತೆಯನ್ನು ತರುವದು. ವಿಚಾರಗಳನ್ನು ಹತ್ತಿಕ್ಕುವದು ಅಥವಾ ಭಾವನೆಗಳನ್ನು ಹತ್ತಿಕ್ಕುವದು ಮತ್ತು ಮಾತನ್ನು ನಿಲ್ಲಿಸುವದು ಮೌನವಲ್ಲ; ಆದರೆ ವಿಚಾರ ಮತ್ತು ಭಾವನೆಗಳನ್ನು ತಿಳಿಗೊಳಿಸಿಕೊಂಡು ಅವುಗಳ ಗೊಂದಲ ಒತ್ತಡಗಳನ್ನು ಕಡಿಮೆಮಾಡಿಕೊಂಡು ಮಾತುಗಳ ಅಗತ್ಯವೇ ಇಲ್ಲದಂತೆ ಮಾಡಿಕೊಳ್ಳುವುದು ಮೌನ. ಇದು ಸಾಧ್ಯವಾಗಬೇಕಾದರೆ ಗುರು ದೇವತೆ ಅಥವಾ ಓರ್ವ ಆದರ್ಶವ್ಯಕ್ತಿ ಇಲ್ಲವೆ ಒಂದು ಆದರ್ಶವನ್ನು ಕೇಂದ್ರವಾಗಿ ಮಾಡಿಕೊಂಡು ಧ್ಯಾನವನ್ನು ಮಾಡುವದು ಸುಲಭೋಪಾಯವು. ಮೌನದಿಂದ ಮನುಷ್ಯನ ಮಾನಸಿಕ ಬಲವು ಹೆಚ್ಚಾಗುವದು. ಎಲ್ಲವನ್ನೂ ತಟಸ್ಥ ದೃಷ್ಟಿಯಿಂದ ನೋಡಿ ಸಂಕುಚಿತ ಹಿತಾಸಕ್ತಿಗಳಿಂದ ಮನಸ್ಸನ್ನು ಮೇಲಕ್ಕೆ ಎತ್ತಲು ಸಹಾಯವಾಗುವದು. ಸ್ವಂತ ಗುಣಾವಗುಣಗಳನ್ನೇ ತಟಸ್ಥ ದೃಷ್ಟಿಯಿಂದ ನೋಡಿ ತಿದ್ದಿಕೊಳ್ಳಲು ಸಹಾಯವಾಗುವದು. ಭಾವನಾವಶತೆಯ ಒತ್ತಡವನ್ನು ನಿಯಂತ್ರಿಸಲು ಸಹಾಯವಾಗುವದು. ನಮ್ಮ ಮನಸ್ಸಿನಲ್ಲಿ ವಿಚಾರಗಳು ದಿಕ್ಕು ತಪ್ಪಿ ಅಲೆಯುವುದನ್ನು ತಡೆಯಲು ಸಹಾಯವಾಗು ವದು. ಹೀಗೆ ಮಾನಸಿಕ ಶಕ್ತಿ ವರ್ಧನೆಗೆ ಮೌನವು ಬಹಳ ಸಹಾಯಕವಾಗಿದೆ. ಆದ್ದರಿಂದಲೇ ನಮ್ಮ ದೇಶದಲ್ಲಿ ಮೌನವು ಒಂದು ವ್ರತವೆಂದು ಆಚರಿಸಲ್ಪಡುತ್ತಿತ್ತು. ದೀರ್ಘಕಾಲದ ಮೌನವಲ್ಲದೆ ಒಂದು ತಿಂಗಳ ಮೌನ ಒಂದು ದಿನದ ಮೌನ ಊಟಕ್ಕೆ ಕುಳಿತಾಗ ಮೌನ ಹೀಗೆ ಅನೇಕ ರೀತಿಯಿಂದ ಮೌನವನ್ನು ಆಚರಿಸುವ ರೂಢಿಯಿತ್ತು. ಮಾನಸಿಕ ರೋಗಗಳ ಒತ್ತಡವು ಹೆಚ್ಚಾಗುತ್ತಿರುವ ಇಂದಿನ ಯುಗದಲ್ಲಿ ಮೌನದ ಕ್ರಮ ಪರಿಣಾಮಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿ ಅದನ್ನು ಬಳಕೆಯಲ್ಲಿ ತಂದರೆ ಅದೊಂದು ವರವಾಗಬಹುದು.

ಮನಸ್ಸಿನ ಬಲವನ್ನು ಹೆಚ್ಚಿಸಿಕೊಳ್ಳುವ ಮೌನದ ಈ ಪ್ರಯೋಜನಗಳಲ್ಲದೆ ನಿತ್ಯ ಜೀವನದಲ್ಲಿಯೂ ಮೌನದ ಕೆಲವು ಚುಟುಕು ಪ್ರಯೋಜನಗಳಿರುವವು. ಮೌನವು ಮೂರ್ಖತನವನ್ನು ಮುಚ್ಚುವದು. ಮೌನವು ಸಮ್ಮತಿಯನ್ನು ಅಥವಾ ಅರ್ಧಸಮ್ಮತಿಯನ್ನು ಸೂಚಿಸುವದು. ಮೌನವು ಒಮ್ಮೊಮ್ಮೆ ಅಸಮ್ಮತಿಯನ್ನೂ ಸೂಚಿಸುವದು. ಮೌನವು ಹೆಚ್ಚು ತಿಳುವಳಿಕೆಯಿರುವದನ್ನೂ ಸೂಚಿಸುವದು. ಮೌನವು ತಟಸ್ಥ ಪ್ರವೃತ್ತಿಯನ್ನೂ ಸೂಚಿಸುವದು. ಇವುಗಳಲ್ಲಿ ಯಾವ ಭಾವನೆಯು ಸೂಚಿಸಲ್ಪಟ್ಟಿದೆ ಎಂಬುದನ್ನು ಆಯಾ ಸಂದರ್ಭ ಮತ್ತು ವ್ಯಕ್ತಿಗಳ ಮನೋಧರ್ಮಗಳಿಂದಲೇ ನಿರ್ಧರಿಸಬೇಕಾಗುವದು. ಇವೆಲ್ಲವನ್ನೂ ತಪ್ಪಿಸಿಕೊಳ್ಳುವ ಚುರುಕು ಬುದ್ಧಿಯನ್ನೂ ಮೌನವು ಸೂಚಿಸುವದು. ಮಾತಿನ ಜಾಣ್ಮೆಗಿಂತ ಮೌನದ ಜಾಣ್ಮೆ ಹೆಚ್ಚು ಅಗತ್ಯ.

ಮುಂಬಯಿಯಲ್ಲೊಂದು ಕಲ್ಮಶ ಕೂಪ

● ಮುಳ್ಳಹಳ್ಳಿ ಸೂರಿ

ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕೊಳಚೆ ನಿವಾಸಿಗಳ ಸಮಸ್ಯೆಯೂ ಒಂದು.

ಏಶಿಯದಲ್ಲೆ ಬೃಹತ್ತಾದ ಕೊಳೆಗೇರಿ ಮುಂಬಯಿ ಮಹಾನಗರದಲ್ಲಿರುವ 'ಧಾರಾವಿ'. 175 ಹೆಕ್ಟೇರುಗಳಲ್ಲಿ ವ್ಯಾಪಿಸಿದೆ ಇದು. ಇಲ್ಲಿ ವಾಸವಾಗಿರುವವರ ಪೈಕಿ ಉತ್ತರ ಪ್ರದೇಶದ ಭೂರಹಿತ ಮುಸ್ಲಿಮರು ಹಾಗೂ ಭಾರತದ ಪಶ್ಚಿಮ ತೀರ ಪ್ರದೇಶದಲ್ಲಿ ದಟ್ಟವಾಗಿ ನೆಲೆಸಿರುವ ಕ್ರಿಶ್ಚಿಯನ್ನರೆ ಹೆಚ್ಚು.

ಈ ಕೊಳೆಗೇರಿಯಲ್ಲಿರುವವರ ಸಂಖ್ಯೆ ಇಂದು ಎಂಟು ಲಕ್ಷವನ್ನು ಮೀರಿದೆ. ಕಳ್ಳಸಾಗಾಟ, ಮಾದಕ ವಸ್ತು-ವಹಿವಾಟು ಹಾಗೂ ಇನ್ನಿತರ ರಹಸ್ಯ ವ್ಯವಹಾರಗಳಲ್ಲಿ ನಿರತರಾಗಿರುವವರಿಗೂ ಆಶ್ರಯ ನೀಡಿದೆ ಈ ಕೊಳಚೆ ಪ್ರದೇಶ. ಒಂದು ಕಾಲಕ್ಕೆ ಮೀನುಗಾರರು, ಕುಂಬಾರರು ಹಾಗೂ ಚಮ್ಮಾರರು ವಾಸಿಸುತ್ತಿದ್ದ ಧಾರಾವಿ ಇಂದು ರಾಷ್ಟ್ರದ ಎಲ್ಲೆಡೆಯಿಂದ ಬಂದ ವಲಸೆಗಾರರನ್ನು ತನ್ನ ಮಡಿಲಿಗೆ ಸೇರಿಸಿಕೊಂಡಿದೆ. ಹೀಗಾಗಿ ಈ ಕೊಳೆಗೇರಿ ಗಾತ್ರದಲ್ಲೂ ಬೆಳೆದಿದೆ.

ಮುಂಬಯಿಯ ಎಂಭತ್ತೆರಡು ಲಕ್ಷ ಜನಸಂಖ್ಯೆಯಲ್ಲಿ ಶೇಕಡಾ 44ರಷ್ಟು ಜನ ಧಾರಾವಿಯಂಥ ಕೊಳೆಗೇರಿಗಳಲ್ಲಿ ಬದುಕನ್ನು ಸವೆಸುತ್ತಿದ್ದಾರೆ. ಭಾರತದ ನಗರ ಜನಸಂಖ್ಯೆ ಪ್ರತಿ ವರ್ಷ ಶೇಕಡಾ 4ರಷ್ಟು ಬೆಳೆಯುತ್ತಿರುವಾಗ ಸ್ವಾಭಾವಿಕವಾಗಿಯೆ ಕೊಳೆಗೇರಿಗಳ ಸಮಸ್ಯೆ ಇನ್ನಷ್ಟು ತೀವ್ರಗೊಳ್ಳುತ್ತಿದೆ.

ಧಾರಾವಿಯೆ ಒಂದು ನಗರದಂತಿದೆ. ಆದರೆ ಈ ನಗರದಲ್ಲಿಯೆ ಇನ್ನೂ ಅನೇಕ 'ನಗರ'ಗಳು. ಇಂತಹ ಪ್ರತಿಯೊಂದು ನಗರದಲ್ಲಿಯೂ ಒಂದೇ ಉದ್ಯೋಗದಲ್ಲಿ ನಿರತರಾಗಿರುವ ಒಂದೇ ಮತದ ಅಥವಾ ಭಾರತದ ಒಂದೇ ಪ್ರದೇಶಕ್ಕೆ ಸೇರಿದವರೇ ಹೆಚ್ಚಾಗಿ ಕಂಡು ಬರುತ್ತಾರೆ.

ದೊಡ್ಡ ಚರಂಡಿಗಳ ಆಸುಪಾಸಿನಲ್ಲಿ ಜೋಪಡಿ, ಸಣ್ಣಮನೆಗಳಲ್ಲಿ ವಾಸಿಸುವ ಈ ಕೊಳಚೆ ನಿವಾಸಿಗಳು ಮಳೆಗಾಲದಲ್ಲಿ ಬಹಳ ತೊಂದರೆಗೊಳಗಾಗುತ್ತಾರೆ. ತುಂಬಿ ಹರಿಯುವ ಚರಂಡಿ ನೀರು ಮನೆಯೊಳಗೆ ನುಗ್ಗುವುದೊಂದೆಡೆಯಾದರೆ, ಮೇಲಿಂದ ತೊಟ್ಟಿಕ್ಕುವ ಮಳೆನೀರು ಇನ್ನೊಂದೆಡೆ. ಮೊದಲೇ ತಗ್ಗಾದ, ಜೌಗು ಪ್ರದೇಶವಾದ ಧಾರಾವಿ ಮಳೆಗಾಲದಲ್ಲಿ ಗಿಜಿಗಿಜಿ ಅನ್ನುತ್ತಿರುತ್ತದೆ.

ಇಲ್ಲಿಯ ಜನರು ಎದುರಿಸುತ್ತಿರುವ ಹಲವು ಸಮಸ್ಯೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹುಮುಖ್ಯ. ಧಾರಾವಿಯ ಕೆಲವು ಮನೆಗಳಿಗೆ ಮಾತ್ರ ನಲ್ಲಿ ನೀರು ವ್ಯವಸ್ಥೆ. ಅದೂ ನಿಗದಿತ ಸಮಯದಲ್ಲಿ ಸ್ವಲ್ಪ ಕಾಲ ಮಾತ್ರ ನೀರು ಬರುವುದರಿಂದ ಅದನ್ನು ಶೇಖರಿಸಿಟ್ಟುಕೊಂಡು ಬಹು ಎಚ್ಚರದಿಂದ ಬಳಸಬೇಕಾಗುತ್ತದೆ.

ನೀರಿನ ಸೌಲಭ್ಯವಿಲ್ಲದವರಿಗೆ ಇಲ್ಲಿ ಬೀದಿ ಕೊಳಾಯಿಯೇ ಗತಿ. ದಿನಕ್ಕೆ ಒಂದೆರಡು ತಾಸು ಮಾತ್ರ ನೀರು ಬರುವುದರಿಂದ ಅದಕ್ಕಾಗಿ ಭಾರೀ ಪೈಪೋಟಿ. ಜಗಳ-ಗಲಾಟೆಗಳಂತೂ ಸರ್ವೇಸಾಮಾನ್ಯ.



ಇಲ್ಲಿಯವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನಗಳು ಅವರ ಉದ್ಯೋಗವನ್ನವಲಂಬಿಸಿದೆ. ಶೇಕಡಾ 65ರಷ್ಟು ಪುರುಷರು ಪೂರ್ಣಾವಧಿ ಉದ್ಯೋಗದಲ್ಲಿದ್ದಾರೆ. ಉಳಿದವರಿಗೆ ಅರ್ಧಾವಧಿ ಉದ್ಯೋಗವೇ ಆಧಾರ. ಇವರಲ್ಲಿ ದಿನಗೂಲಿಗಳೂ ಸೇರಿದ್ದಾರೆ. ಮಹಿಳೆಯರಲ್ಲಿ ಶೇಕಡಾ 3ರಷ್ಟು ಜನ ಮಾತ್ರ ಉದ್ಯೋಗಸ್ಥರಾಗಿದ್ದು ಉಳಿದವರು ಬುಟ್ಟಿ ಹೆಣೆಯುವುದು, ಊದುಬತ್ತಿ ತಯಾರಿಸುವುದು ಮುಂತಾದ ಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಲ್ಪಸ್ವಲ್ಪ ಹಣ ಸಂಪಾದಿಸುತ್ತಾರೆ.

ಧಾರಾವಿಯಲ್ಲಿಯ ಮಕ್ಕಳನ್ನು ಸಾಮಾನ್ಯವಾಗಿ ಕ್ಷಯ, ಅತಿಸಾರ, ಶ್ವಾಸಕೋಶದ ರೋಗಗಳು ಕಾಡುತ್ತವೆ. ಪೌಷ್ಟಿಕ ಆಹಾರದ ಕೊರತೆಯಿರುವುದರಿಂದ ಚರ್ಮವ್ಯಾಧಿಯೂ ಅವರ ಬೆನ್ನು ಬಿಟ್ಟಿಲ್ಲ.

ಧಾರಾವಿ ನಿವಾಸಿಗಳ ಜೀವನಮಟ್ಟವನ್ನು ಸುಧಾರಿಸಲೆಂದೇ 1985ರಲ್ಲಿ ರಾಜೀವ್ ಗಾಂಧಿ ಅವರು ಯೋಜನೆಯೊಂದನ್ನು ಘೋಷಿಸಿ ನೂರುಕೋಟಿ ರೂಪಾಯಿಗಳ ನೆರವನ್ನು ಇದಕ್ಕಾಗಿ ನೀಡುವುದಾಗಿ ಪ್ರಕಟಿಸಿದರು. ಆ ಯೋಜನೆಯಿನ್ನೂ ಕಾರ್ಯಗತವಾಗಬೇಕಾಗಿದೆ.

ನೀರು ಸರಬರಾಜಿನಲ್ಲಿರುವ ಈ ನಿಯಂತ್ರಣದಿಂದಾಗಿ ಲಭ್ಯವಿರುವ ಕೆಲವೇ ಶೌಚಾಲಯಗಳನ್ನೂ ಬಳಸುವುದು ಅಸಾಧ್ಯ. ಹಿರಿಯರು ಕೊಳಗೇರಿಯ ಆಸುಪಾಸಿನ ತಗ್ಗು ಪ್ರದೇಶಗಳನ್ನು ಶೌಚಕ್ಕೆ ಬಳಸಿದರೆ, ಮಕ್ಕಳು ಖಾಲಿಯಿರುವ ಯಾವುದೇ ಪ್ರದೇಶವನ್ನು ಬಳಸಿಕೊಳ್ಳುತ್ತಾರೆ.

ಆ ಯೋಜನೆಯ ಪ್ರಕಾರ ಧಾರಾವಿಯಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಿ ಕೊಳಗೇರಿಯನ್ನು ಕಡಿಮೆ ವರಮಾನದವರ ಬಡಾವಣೆಯನ್ನಾಗಿ ಪರಿವರ್ತಿಸಲಾಗುವುದು. ಶಾಲೆ, ಆಟದ ಮೈದಾನ, ಉದ್ಯಾನವನ, ಅಂಚೆತಂತಿ ಕಛೇರಿ, ಆಸ್ಪತ್ರೆ, ಮಾರುಕಟ್ಟೆ, ಬಸ್ ನಿಲ್ದಾಣಗಳು ಹೀಗೆ ಸಾರ್ವ ಸೌಲಭ್ಯಗಳನ್ನೊದಗಿಸಿ ಧಾರಾವಿಯ ಈಗಿರುವ ಸ್ವರೂಪವನ್ನು ಬದಲಿಸಲು ಈ ಯೋಜನೆ ನೆರವಾಗಲಿದೆ.

ಆದರೆ ಈ ಯೋಜನೆಯೇನೂ ನಿವಾಸಿಗಳಿಗೆ ಮುದ ತಂದಂತಿಲ್ಲ. "ನ[illegible] ಆಟದ ಮೈದಾನ ಬೇಡ. ಉದ್ಯಾನವನವೂ ಬೇಡ. ಇರಲೊಂದು ಸೂರು, ಶೌಚಾಲಯ, ಕುಡಿಯುವ ನೀರು ಇಷ್ಟು ಸಿಕ್ಕರೆ ಸಾಕು" ಎನ್ನುತ್ತಾರವರು.

ಇದುವೆ ಜೀವ ಇದು ಜೀವನ

ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪನಕ್ಕಾಗಿ ಬೆಂಗಳೂರಿಗೆ ಹೋಗಿದ್ದೆ. ಆಗ ಅಲ್ಲಿನ ಭಾರತೀಯ ವಿದ್ಯಾಭವನದಲ್ಲಿ ರಂಗನಾಥ ಶರ್ಮರಿಂದ ಡಿ.ವಿ.ಜಿ.ಯವರ "ಶ್ರೀಕೃಷ್ಣ ಪರೀಕ್ಷಣಮ್" ಕೃತಿಯನ್ನು ಕುರಿತು ಉಪನ್ಯಾಸ ಏರ್ಪಡಿಸಿದರು.

ಉಪನ್ಯಾಸದ ನಡುವೆ ರಂಗನಾಥ ಶರ್ಮರು ಒಂದು ಘಟನೆ ಹೇಳಿದರು. ಒಂದು ಬಾರಿ ಶರ್ಮರು ವಿಚಾರ ವಿನಿಮಯಕ್ಕಾಗಿ ಡಿ.ವಿ.ಜಿ.ಯವರ ಮನೆಗೆ ಹೋಗಿದ್ದರಂತೆ. ಆಗ ಡಿ.ವಿ.ಜಿ.ಯವರು ಬೋಂಡಾ ತಿನ್ನುತ್ತಿದ್ದರು. ಶರ್ಮರಿಗೂ ಒಂದು ತಟ್ಟೆಯಲ್ಲಿ ಬೋಂಡಾ ಬಂತು. ಶರ್ಮರು ತಿಂದುಳಿದ ಬೋಂಡಗಳನ್ನು ನೋಡಿ, ಡಿ.ವಿ.ಜಿ.ಯವರು "ತೆಗೆದುಕೊಳ್ಳೋಣವಾಗಬೇಕು" ಎಂದು ಹೇಳಿ, ತಮ್ಮ ಹೊಟ್ಟೆಯ ಮೇಲೆ ಕೈಯಾಡಿಸುತ್ತಾ, "ನೋಡಿ, ಇದು ವಾಲ್‌ಕ್ಲಾಕ್ ಇದ್ದ ಹಾಗೆ, ನಿಮ್ಮದಾದರೋ ಲೇಡೀಸ್ ವಾಚ್ ಇದ್ದ ಹಾಗೆ" ಎಂದು ಗಟ್ಟಿಯಾಗಿ ನಗೆಯಾಡಿದರಂತೆ.

ತಾವೂ ಸಂತೋಷವಾಗಿ ಇರದೇ, ಬೇರೊಬ್ಬರಿಗೂ ಸಂತೋಷ ಉಂಟುಮಾಡಲು ಗೊತ್ತಿಲ್ಲದೇ, ತಮ್ಮ ತಮ್ಮೊಳಗೇ ಒಂದೊಂದು ಪ್ರಪಂಚ ನಿರ್ಮಿಸಿಕೊಂಡಿರುವ ಅನೇಕರ ಬದುಕನ್ನು ಕಂಡಾಗ, ಡಿ.ವಿ.ಜಿ.ಯವರ ಜೀವನ ದೃಷ್ಟಿಕೋನ, ಆತ್ಮೀಯತೆ ಕಂಡಾಗ, ಅವರ "ನಗುವು ಸಹಜದ ಧರ್ಮ, ನಗಿಸುವುದು ಪರಧರ್ಮ" ಎಂಬ ಸಾಲುಗಳು ನನ್ನ ಮನಃ ಪಟಲದ ಮೇಲೆ ಮೂಡಿ, ಅವರ ಕೃತಿಗಳು ಜೀವನದ ಕನ್ನಡಿಯೇ ಆಗಿದೆ ಎಂಬ ಭಾವ ಮೂಡಿತು.

— ವಾಗೀಶ್ವರೀ ಶಿವರಾಮ್

ಶಿವರಾತ್ರಿಯ ರಜೆಯಲ್ಲಿ ನಾನು ನನ್ನಿಬ್ಬರು ಗೆಳತಿಯರನ್ನು ನಮ್ಮೂರಿಗೆ ಕರೆದುಕೊಂಡು ಹೋಗಿದ್ದೆ. ಅವರಲ್ಲಿ ಒಬ್ಬಳು ಕೇರಳದವಳು. ನಮ್ಮ ಸಂಪರ್ಕದಿಂದಾಗಿ ಸ್ವಲ್ಪ ಸ್ವಲ್ಪ ಕನ್ನಡ ಬರುತ್ತಿತ್ತು.

ಶಿವರಾತ್ರಿಯ ರಾತ್ರಿ ನಮ್ಮ ಹಳ್ಳಿಯಲ್ಲಿ ವಿವಿಧ ವೇಷಗಳು ಮನೆ ಮನೆಗೆ ಬರುವುದು ವಾಡಿಕೆ. ರಾತ್ರಿ ಸುಮಾರು ಹತ್ತು ಗಂಟೆಯಾಗಿರಬಹುದು. ನಾವು ಹಾಸಿಗೆಯ ಮೇಲೆ ಹರಟುತ್ತ ಕುಳಿತಿದ್ದಾಗ, ನನಗೆ ದೋಲು ಬಡಿಯುವ ಸದ್ದು ಕೇಳಿಸಿತು. ಹರ್ಷದಿಂದ, "ವೇಷ ಬಂತು ಹೊರಗೆ ಹೋಗೋಣ, ಬನ್ನಿ" ಎಂದು ಕೂಗಿದೆ. ಹರಟುತ್ತ ಕುಳಿತಿದ್ದ ನನ್ನ ಮಲಯಾಳಿ ಗೆಳತಿಯ ಮುಖ ಕಪ್ಪಿಟ್ಟಿತು. ಬೇಗ ರಗ್ಗನ್ನೆಳೆದು ಮಲಗುವ ಪ್ರಯತ್ನ ಮಾಡತೊಡಗಿದಳು. ಅವಳ ಈ ಹೆದರಿಕೆ ನೋಡಿ

ನಮಗೆ ತಮಾಷೆಯೆನಿಸಿತು. ಅವಳನ್ನು ಒತ್ತಾಯದಿಂದ ಹೊರಗೆ ಕರೆದುಕೊಂಡು ಹೋದೆವು. ಕರಡಿ ವೇಷದ ಕುಣಿತವನ್ನು ನೋಡಿ ಒಳಬಂದು ಮಲಗಿದೆವು.

ಮಾರನೇ ದಿನ ಅವಳ ಹೆದರಿಕೆಗೆ ಕಾರಣ ತಿಳಿದಾಗ ನಗು ಬಂದರೂ 'ಅಯ್ಯೋ ಪಾಪ' ಎನಿಸಿತು. ವೇಷ ಎಂಬುದಕ್ಕೆ ಅವಳು ಕಲ್ಪಿಸಿಕೊಂಡ ಅರ್ಥ 'ವೇಶ್ಯೆ' ಆಗಿತ್ತು. 'ವೇಶ್ಯೆಯರು' ಮನೆಗೆ ಬರುವ ಈ ಹೊಸ ಪದ್ಧತಿಯಿಂದ ಅವಳು ಗಾಬರಿಗೊಂಡದ್ದು ಸ್ವಾಭಾವಿಕವೇ ಆಗಿತ್ತು.

— ತಾರಾ

ಒಂದು ಭಾನುವಾರ. ಬೆಂಗಳೂರು ನಗರ ಸಾರಿಗೆ ಬಸ್ಸಿನಲ್ಲಿ ಹೋಗುತ್ತಿದ್ದೆ. ನನ್ನ ಸಹ ಪ್ರಯಾಣಿಕರ ಸಂಖ್ಯೆ 40ಕ್ಕೂ ಮಿಕ್ಕಿತ್ತು. ಇದ್ದಕ್ಕಿದ್ದ ಹಾಗೆ ಬಸ್ಸಿನಲ್ಲಿ ಸ್ವಲ್ಪ ಜಗಳ ಪ್ರಾರಂಭವಾಯಿತು. ಕಾರಣ ಒಬ್ಬ ಯುವಕ ಆತನ ಮುಂದಿನ ಸೀಟಿನಲ್ಲಿ ಗಂಡನೊಡನೆ ಕುಳಿತಿದ್ದ ಹೆಂಗಸನ್ನು ಜಿಗುಟಿದ್ದು ಹಾಗೂ ಹಲವು ಬಾರಿ ಆಕೆಯ ಸೀರೆಯ ಸೆರಗನ್ನು ಎಳೆದದ್ದು. ಇದನ್ನು ಕಂಡು ಸಹಿಸಲಾರದ ಆಕೆಯ ಗಂಡ ದಬಾಯಿಸಿದಾಗ ಆ ಕೆಟ್ಟ ಯುವಕ ಹಾಗೂ ಆತನ ಮಿತ್ರರು "ಓಹೋ ನಿನ್ನ ಹೆಂಡತಿ ಪತಿವ್ರತೆ.." ಇತ್ಯಾದಿ ವ್ಯಂಗ ನುಡಿಗಳನ್ನು ಅಶ್ಲೀಲ ಪದಗಳೊಡನೆ ಸುರಿಮಳೆಗೈದರು.

ಇಷ್ಟಾದರೂ ನಾನು ಮತ್ತು ನನ್ನ ಸಹ ಪ್ರಯಾಣಿಕರು ಮೌನವನ್ನು ಮುರಿಯಲಿಲ್ಲ. ಆ ದುಷ್ಟ ಹುಡುಗರು ಮಧ್ಯದ ನಿಲ್ದಾಣದಲ್ಲಿ ಇಳಿದು ಹೋದ ನಂತರ ಎಲ್ಲರೂ "ಅಂಥವರನ್ನು ನಾನು ಆ ಟ್ರೇನಿನಲ್ಲಿ ಕಂಡೆ, ನಾನು ಅಂಥ ಕಡೆ ಕಂಡೆ, ನಾನು ಇಂಥ ಕಡೆ ಕಂಡೆ ಇವರಿಗೆಲ್ಲಾ ಹೇಳುವವರು ಕೇಳುವವರು ಯಾರೂ ಇಲ್ಲ" ಎಂದು ಹೇಳಿಕೊಂಡವೇ ಹೊರತು ಆ ಗಂಡ-ಹೆಂಡತಿಯ ರಕ್ಷಣೆಗೆ ತೊಡಗಿರಲಿಲ್ಲ.

ನೆರಮನೆಯ ಸುಟ್ಟ ಬೆಂಕಿ ನಮ್ಮ ಮನೆಯನ್ನೂ ಸುಟ್ಟೀತೆಂಬ ಅರಿವು ಮೂಡುವುದೆಂದು ನಮಗೆ?

—ನಾಗಭೂಷಣ್ ಮಾಗಡಿ

ಪಂಜೆ ಮಂಗೇಶರಾಯರು ಥಾಮಸ್ ಹುಡ್ ಕವಿಯ "Bridge of Sighs" (ದುಃಖ ಸೇತು) ಕವನವನ್ನು ಬಹಳವಾಗಿ ಮೆಚ್ಚಿದ್ದರಂತೆ. ಒಮ್ಮೆ ಉಪನ್ಯಾಸ ಮಾಡುತ್ತಾ ತಮ್ಮ ಈ ಮೆಚ್ಚುಗೆಯ ಕವನವನ್ನು ಪೂರ್ಣವಾಗಿ ಉದಾಹರಿಸಿದರಂತೆ. ಆಗ ಸಭೆಯಲ್ಲಿದ್ದ ಒಬ್ಬ ಇದ್ದಕ್ಕಿದ್ದ ಹಾಗೆ, "ಸ್ವಾಮಿ ನಾನು ಅವಳ ಕೈ ಬಿಡುವುದಿಲ್ಲ" ಎಂದು ಕೂಗಿಕೊಂಡನಂತೆ. ಇದೇನು ಸಮಾಚಾರವೆಂದು ವಿಚಾರಿಸಿದಾಗ ಆತ ಒಲಿದು ಬಂದ ಹೆಣ್ಣೊಬ್ಬಳಿಗೆ ಅನ್ಯಾಯ ಮಾಡಿದ್ದನೆಂದೂ, ಈ ಕವನವನ್ನು ಕೇಳಿ ಮನಸ್ಸು ಕರಗಿ ಈ ರೀತಿಯ ಉದ್ಗಾರ ಅವನ ಬಾಯಿಂದ ಹೊರಟಿತೆಂದೂ ತಿಳಿಯಿತಂತೆ.

—ವಿ.ಎಸ್. ದಿಲೀಪಕುಮಾರ

ನಾನು ಬೆಮೆಲ್ ನಗರ ಪೋಸ್ಟ್ ಆಫೀಸ್‌ನಲ್ಲಿ ನನ್ನ ಕೌಂಟರ್‌ನಲ್ಲಿರುವಾಗ, ಒಬ್ಬ ಹುಡುಗ ಮನಿ ಆರ್ಡರ್ ಫಾರ್ಮನ್ನು ತೋರಿಸುತ್ತಾ ನನ್ನತ್ತ ಮುಗುಳುನಗೆ ಬೀರಿದ. ಪೋಲಿ ಹುಡುಗ, ಇವನಿಗೆಷ್ಟು ಗರ್ವ ಅಂತ ದುರುಗುಟ್ಟಿ ನೋಡಿದೆ. "ಮೇಡಂ, ನನ್ನ ಗುರುತು ಸಿಗಲಿಲ್ವಾ?" ಅಂತ ಕೇಳಿದಾಗ "ನೀನ್ಯಾರಾದರೆ ನನಗೇನು?" ಎಂದು ರೇಗಿದೆ. "ಇಲ್ಲ ಮೇಡಂ ನಾನು ಕುಮಾರ್, ನೀವು ಕಾಲೇಜಿಗೆ ಹೋಗುವಾಗ ನಿಮಗೆ ಎಷ್ಟೊಂದು ಲಂಗ, ಮ್ಯಾಕ್ಸೀ, ಜಾಕೀಟ್ ಹೊಲೆದು ಕೊಟ್ಟಿದ್ದು ಮರೆತು ಹೋಗಿದೆಯಾ. ನಾನು ಈಗ ಬಾಗಲಕೋಟೆಯಲ್ಲಿ ಸೆಕೆಂಡ್ ಇಯರ್ ಬಿ.ಇ. ಓದುತ್ತಿದ್ದೇನೆ" ಎಂದಾಗ, ನಾನು ಕಾಲೇಜಿಗೆ ಹೋಗುವ ದಿನಗಳಲ್ಲಿ ಗೋಪಿನಾಥ್ ಟೈಲರ್ ಶಾಪ್‌ನಲ್ಲಿ ಪುಟ್ಟ ಹುಡುಗ ಸೂಜಿಗೆ ದಾರ ಪೋಣಿಸುತ್ತಾ, ಗುಂಡಿ ಹೊಲಿಯುತ್ತಾ 'ಅಕ್ಕ ನನಗೂ ನಿಮ್ಮಂತೆ ಕಾಲೇಜಿಗೆ ಹೋಗಲು ಇಷ್ಟ. ಆದರೆ ನಾವು ಬಡವರು, ದುಡ್ಡಿಲ್ಲ' ಎಂದು ಎನ್ನುತ್ತಿದ್ದ ದೃಶ್ಯ ಕಣ್ಣುಮುಂದೆ ಬಂತು. ತಲೆಯೆತ್ತಿ ಸಂತೋಷದಿಂದ ನಾಲ್ಕು ಮಾತು ಹೇಳಬೇಕೆನ್ನುವಷ್ಟರಲ್ಲೆ ಅಲ್ಲಿಂದ ಮಾಯವಾಗಿದ್ದ.

—ಟಿ.ಎಸ್. ಪದ್ಮ



ಸರ್ಕಸ್ ದುರಂತದಲ್ಲಿ ನಾವು

● ಟಿ. ಪಾಶಪ್ಪ

1981ರ ಮಾರ್ಚ್ ಎರಡನೆಯ ಶನಿವಾರ. ಕ್ಯಾಂಪಿನ ಕೊನೆಯ ಎರಡು ಮೂರು ದಿನಗಳಲ್ಲಿ ತಮ್ಮ ಪ್ರದರ್ಶನಗಳನ್ನು ಕಾರ್ಮಿಕರು ಮತ್ತು ಶಾಲೆಯ ಮಕ್ಕಳಿಗೆ ಮೀಸಲಿಟ್ಟು ಟಿಕೆಟುಗಳನ್ನು ಬಿಡುಗಡೆ ಮಾಡಿದ್ದರು ಸರ್ಕಸ್ಸಿನವರು. ನಾನು ಕೆಲಸದಿಂದ ಮನೆಗೆ ಬಂದಾಗ ಕಿರಿಯ ಕುಮಾರ ಲೋಕೇಶ ತಾನು ಸರ್ಕಸ್ ನೋಡಲೇಬೇಕೆಂದು ಹಟ ಹಿಡಿದ. "ಇನ್ನೆರಡೇ ದಿನವಂತೆ.- ಇಷ್ಟು ದಿನವಂತೂ ನಿಮ್ಮಿಂದ ಮಡುಗರಿಗೆ ಸರ್ಕಸ್ ತೋರಿಸೋದಕ್ಕಾಗಲಿಲ್ಲ!" ಎಂದು ಒಳಗಿನಿಂದ ಇವಳ ಧ್ವನಿಯೂ ಬಂತು.

ಹೌದು. ಸರ್ಕಸ್ಸು ನೋಡಬೇಕಾದದ್ದೆ. ಕಷ್ಟಪಟ್ಟು, ಸಾಧಿಸಿದ ಸಾಧನೆಗಳನ್ನವರು ತೋರಿಸುತ್ತಾರೆ. ಅವುಗಳಲ್ಲಿ ಕೆಲವಂತೂ ಪ್ರಾಣಾಂತಕ. ಸಿನಿಮಾ ಗೊಂಬೆಗಳಿಗಿಂತ ಸರ್ಕಸ್ ಕಲಾವಿದರನ್ನು ನಾನು ಗೌರವಿಸುತ್ತೇನೆ.

"ಆಯಿತು, ಹೋಗೋಣ" ಎಂದೆ. ಕೂಡಲೇ ಲೋಕೇಶ ಅಕ್ಕಪಕ್ಕದ ಮನೆಗಳಿಗೆಲ್ಲ ಈ ಸುದ್ದಿಯನ್ನು ಹೇಳಿಬಂದ. ಮಧ್ಯಾಹ್ನದ ಆಟಕ್ಕೆ ಹೋಗುವುದೆಂದು ನಿರ್ಧಾರವಾಯಿತು. ನಾನು, ನನ್ನವಳು, ಹಿರಿಯ ಮಗ ರಮೇಶ(14 ವರ್ಷ), ಮಗಳು ಪುಷ್ಪ(12 ವರ್ಷ), ಕೊನೆಯ ಮಗ ಲೋಕೇಶ(8 ವರ್ಷ) ಮತ್ತು ಸ್ನೇಹಿತರ ಹುಡುಗ ಕೃಷ್ಣ(9 ವರ್ಷ). ಶೀನ (15 ವರ್ಷ) ಹೊರಟಿದ್ದಾಯಿತು.

ಸರ್ಕಸ್ ಗುಡಾರವನ್ನು ಕೆರೆಯ ದಂಡೆಗೆ ಮಣ್ಣು ತುಂಬಿ ಜಾಗ ಮಾಡಿ ಕಟ್ಟಿದ್ದರು. ಒಂದು ಕಡೆ ಟಾರು ರಸ್ತೆ, ಅದರ ಪಕ್ಕದಲ್ಲೇ ಹೈಟೆನ್‌ಶನ್ ವಿದ್ಯುತ್ ಲೈನು ಹಾಯ್ದು ಹೋಗಿದೆ. ಅಲ್ಲಿಂದಲೇ ಸರ್ಕಸ್ ಡೇರೆಗೆ ಪ್ರವೇಶದ್ವಾರ. ಸರ್ಕಸ್‌ನ ಬಲಗಡೆ ರೈಲು ಮಾರ್ಗ. ಉಳಿದೆರಡು ಕಡೆ ಆಳೆತ್ತರ ಆಳದ ಹಳ್ಳಗಳು. ಸರ್ಕಸ್ ಎರಡೋ ಮೂರೋ ದಿನ ಇರುವುದರಿಂದ ನೋಡಲು ಬಂದ ಜನರ ನೂಕು ನುಗ್ಗಲು ಜಾಸ್ತಿ. "ಬೇಡ ಮನೆಗೆ ಹೋಗಿಬಿಡೋಣ" ಎಂದೆ. ಹುಡುಗರು "ನೋಡಿಯೇ ಹೋಗೋಣ" ಎಂದು ಪಟ್ಟು ಹಿಡಿದರು. ಅಂತೂ ಕ್ಯೂನಲ್ಲಿ ನಿಂತಕೊಂಡು ಟಿಕೆಟ್ ಪಡೆದದ್ದಾಯಿತು.

ನಾವು ಗ್ಯಾಲರಿಯಲ್ಲಿ ಕುಳಿತಿದ್ದೆವು. ಆಟದ ಕೊನೆಯ ಅಂಕ. ಮಂದ ನೀಲಿ ಬೆಳಕಿನಲ್ಲಿ ಜೋಕಾಲಿಯಾಟದ ಕಸರತ್ತುಗಳು . ಮುಗಿಯುವ ಹಂತದಲ್ಲಿದ್ದವು. ನಾನು ನನ್ನಾಕೆಯತ್ತ ನೋಡಿದೆ. ಇಂಥದರಲ್ಲಿ ತುಂಬ ಹುಷಾರಾದ ನನ್ನಾಕೆ ಹೊರಗೆ ಹೋಗೋಣ, ನಡೆಯಿರೆಂದು ಮಕ್ಕಳಿಗೆ ಸೂಚಿಸಿದಳು. ಎಲ್ಲರೂ ಗ್ಯಾಲರಿ ಪಕ್ಕದಲ್ಲೆ ನಡೆದು ಗೇಟಿನೆಡೆ ಹೊರಟೆವು. ಹುಡುಗರು ಆಗಲೇ ಗ್ಯಾಲರಿಗೂ ಕುರ್ಚಿಗಳಿಗೂ ನಡುವೆ ಇದ್ದ ಕಟಕಟೆಯನ್ನು ದಾಟಿ ಹೋಗಿದ್ದರು. ನಾನು ದಾಟಬಹುದಾಗಿತ್ತು. ಆದರೆ ಈಕೆಗೆ ದಾಟಲು ಸಾಧ್ಯವಿರಲಿಲ್ಲ. ಬೇಗಾಗಿ ಅವಳ ಹಿಂದಿನಿಂದ ಹೊರಟಿದ್ದ ನನಗೆ ಆಕೆ! ಎದುರು ಸರ್ಕಸ್ಸಿನ ಕೆಲಸಗಾರರು ವಾಸಿಸುತ್ತಿದ್ದ ಜಾಗವನ್ನು ತೋರಿಸಿ "ನೋಡಿ, ಅಲ್ಲಿ ಬೆಂಕಿ ಕಾಣುತ್ತಿದೆ" ಎಂದಳು. "ಸಣ್ಣ ಜ್ವಾಲೆ, ಏನಾಗುವುದಿಲ್ಲ, ನಡೆ" ಎಂದೆ.

ಅಷ್ಟರಲ್ಲೇ ಗಲಾಟೆ ಶುರುವಾಯಿತು. ಮೇಲಿದ್ದ ಜನರೆಲ್ಲ ಕೆಳಗೆ ಧುಮುಕಿ ಓಡುತ್ತಿದ್ದರು. ಗೇಟು ಇನ್ನೂ ನೂರಡಿ ದೂರವಿರಬಹುದು. ಆ ಜನರ ನೂಕುನುಗ್ಗಲಲ್ಲಿ ಗೇಟನ್ನು ಬೇಗ ತಲಪುವುದಂತೂ ಸಾಧ್ಯವಾಗದ ಮಾತಾಯಿತು. ಕೆಲವರು ಗ್ಯಾಲರಿ ಹಲಗೆಗಳನ್ನು ಕಿತ್ತು ಜಾಗ ಮಾಡಿಕೊಂಡು ಹೋಗುತ್ತಿದ್ದರು. ಒಳಗೋ ಹಾಹಾಕಾರ ಶುರುವಾಗಿತ್ತು. ನಾನೂ ಗ್ಯಾಲರಿಯ ಹಲಗೆಯೊಂದನ್ನು ಕಿತ್ತಿ ನನ್ನಾಕೆಗೆ ಜಾಗ ಮಾಡಿ ಆಕೆ ಹೊರಗೆ ಹೋದ ಮೇಲೆ ನಾನೂ ಹೊರಡುತ್ತಿದ್ದಂತೆಯೇ ದಾರಿಯಲ್ಲಿ ಮಗುವೊಂದು ಅಳುತ್ತ ಬಿದ್ದಿತ್ತು. ಅದರತ್ತ ಯಾರಿಗೂ ಲಕ್ಷವೇ ಇರಲಿಲ್ಲ. ನಾನದನ್ನು ಸುರಕ್ಷಿತ ಜಾಗದಲ್ಲಿ ಕುಳ್ಳಿರಿಸಿ ಮುಂದೆ ಹೋಗುವುದರಲ್ಲಿಯೇ ನನ್ನವಳು ನಾಪತ್ತೆ! ಈ ಹೊತ್ತಿಗೆ ದೀಪಗಳೂ ಆರಿ ಮತ್ತಷ್ಟು ಹಾಹಾಕಾರಕ್ಕೆ ಕಾರಣವಾಯಿತು. ಇವರ ಜತೆಗೆ ಸಮಯಸಾಧಕರು ಲೂಟಿಗಿಳಿದರು. ಪೊಲೀಸರು ಲಾಠಿ ಪ್ರಹಾರಕ್ಕೆ ತೊಡಗಿದರು.

ನಾನು ಅಲ್ಲಿದ್ದ ಕ್ಯಾಂಟೀನ್ ಮೂಲಕ ಹೊರಬಂದೆ. ನನ್ನ ಮಡದಿ, ಮಕ್ಕಳನ್ನು ಹುಡುಕಿದೆ. ಸಿಕ್ಕಲಿಲ್ಲ. ಅವರೆಲ್ಲ ಎಲ್ಲಿ ಹೋದರು? ಡೇರೆಯೊಳಗೇ ಉಳಿದರೆ? ಈ ವೇಳೆಗೆ ತನ್ನ ನಾಲಗೆಗಳನ್ನು ಆಕಾಶದೆತ್ತರಕ್ಕೆ ಚಾಚಿತ್ತು ಬೆಂಕಿ. ನನ್ನ ಮಕ್ಕಳನ್ನು ನಾನೇ ಸುಟ್ಟೆನೆ? ಹುಚ್ಚು ಹಿಡಿದಂತಾಗಿ ಅತ್ತಿತ್ತ ಓಡಾಡಿದೆ. ಕಂಡಕಂಡವರನ್ನೆಲ್ಲ "ನನ್ನ ಮಕ್ಕಳನ್ನು ನೋಡಿದಿರಾ?" ಎಂದು ಕೇಳಿದೆ. ಸಮೀಪವೇ ಇದ್ದ ಸ್ನೇಹಿತ ಗಂಗೋಜಿರಾಯರ ಮನೆಗೆ ಈಕೆ ಮಕ್ಕಳೊಂದಿಗೆ ಹೋಗಿರಬಹುದೆ? ಅನಿಸಿತು. ನೇರ ಗಂಗೋಜಿರಾಯರ ಮನೆಗೆ ಹೋದೆ. ಅಲ್ಲಿಗೆ ಅವರಾರೂ ಬಂದಿರಲಿಲ್ಲ. ವಿಷಯ ಕೇಳಿ ಗಂಗೋಜಿ


ತುಟಿ ಒಡೆಯುವದು, ಕಾಲು ಒಡೆಯುವದು,
ಕಾಲಿಗೆ ಬಿರುಕು ಬಿಡುವದು,
ಥಂಡಿಯಿಂದ ಮೈ ಒಡೆಯುವದು
ಮೈ ಚರ್ಮ ಒಣಗಿ ತುರಿಕೆ
ಕೈಕಾಲು ಉರಿಯುವದು
ಆ್ಯಸಿಡ್, ಬಿಸಿನೀರಿನಿಂದ
ಅಥವಾ ಬೆಂಕಿಯಿಂದ ಆದ
ಗಾಯಕ್ಕೆ ಅತ್ಯಂತ ಗುಣಕಾರಿ
AMRUT
MALAM
ಅಮೃತ
ಮಲಮ್
ದೂರವಾಣಿ : 24323
ಅಮೃತ ಫಾರ್ಮಾಸುಟಿಕಲ್ಸ
ಅಮೃತ ನಗರ ಹಿಂಡಲಗಾ, ಬೆಳಗಾವಿ - 591 108
M K Publicity

ರಾಯರೂ ಅವರ ಮನೆಯ ಜನರೂ ಗಾಬರಿಯಾದರು. ನನ್ನೊಂದಿಗೆ ಅವರೂ ಹುಡುಕಲು ಹೊರಟರು. ನಾನು ಮತ್ತೆ ಸರ್ಕಸ್ಸಿನ ಪ್ರವೇಶ ದ್ವಾರದ ಕಡೆ ಓಡಿದೆ.

ಅಲ್ಲಿ ಕೆಲವರು ಒಂಟೆಗಳನ್ನು ಬಿಚ್ಚಿ ಓಡಿಸುತ್ತಿದ್ದರು. ಬೆಂಕಿ ಗುಡಾರದ ಅರ್ಧಭಾಗವನ್ನು ಆವರಿಸಿತ್ತು. ಉರಿ ಕೆಳಗಿನಿಂದ ಮೇಲೇರುತ್ತಿತ್ತು. ಗುಡಾರದ ಎಡ ಭಾಗದಲ್ಲಿ, ಚರ್ಚ್ ಪಕ್ಕದಲ್ಲಿ ಗುಡಾರದ ಹಗ್ಗವನ್ನು ಕತ್ತರಿಸುತ್ತಿದ್ದರು. ಅದರ ಪರಿಣಾಮವೇನಾದೀತೆಂದು ಅವರಿಗೆ ತಿಳಿದಿರಲಿಲ್ಲವೇನೋ. ನಾನು ದ್ವಾರದ ಮೂಲಕ ಒಳಗೆ ಹೋದೆ. ಅಲ್ಲಿ ಯಾರೂ ಇರಲಿಲ್ಲ. ಇನ್ನೂ ಸ್ವಲ್ಪ ಮುಂದೆ ಹೋದೆ. ಅಲ್ಲಿ ನೂಕುನುಗ್ಗಲಿನ್ನೂ ಇತ್ತು. ಬಲಹೀನರು, ಹೆಂಗಸರು ಕೆಳಗೆ ಬಿದ್ದಿದ್ದರು. ಬಲವಿದ್ದವರು ಅವರನ್ನು ತುಳಿಯುತ್ತಿರುವುದನ್ನು ಗಮನಿಸಿಯೂ ಜೀವವುಳಿಸಿಕೊಳ್ಳಲೆಂದು ಓಡುತ್ತಿದ್ದರು. ಹೆಂಗಸರಂತೂ ತುಳಿತದ ನೋವಿನಿಂದ ಅಳುತ್ತಿದ್ದರು. ಒಬ್ಬಳನ್ನು ಹೊರಗೆ ಎಳೆಯಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ಅಷ್ಟರಲ್ಲೆ ಗುಡಾರವೇ ಬೀಳತೊಡಗಿದಾಗ ನಾನು ಪಾರಾದೆ. ನನ್ನ ಹಿಂದೆಯೇ ಹೆಂಗಸೊಬ್ಬಳು ಉರಿಯುತ್ತಿರುವ ಬಟ್ಟೆಗಳೊಂದಿಗೆ ಓಡಿಬರುತ್ತಿದ್ದಳು. ಅವಳ ಬಟ್ಟೆ, ತಲೆಗೂದಲಿನ ಬೆಂಕಿಯನ್ನು ನಂದಿಸಿ ಹೊರಗೋಡಿ ಬಂದೆ. ಇಷ್ಟರಲ್ಲೇ ಕುಸಿದ ಗುಡಾರದ ಕೆಳಗೆ ಅದೆಷ್ಟು ಜನ ಸಿಕ್ಕರೋ? ಎಷ್ಟು ಜನ ಸತ್ತರೋ? ಒಂದು ವೇಳೆ ನನ್ನ ಜನವೂ ಅಲ್ಲಿ ಸಿಕ್ಕಿದ್ದರೆ? ಎಂದು ನೆನೆದೊಡನೆಯೇ ಅಳು ತಡೆಯಲಾಗಲಿಲ್ಲ. ಮತ್ತೆ ಗಂಗೋಜಿರಾಯರ ಮನೆಗೆ ಓಡಿಬಂದೆ. ಅಷ್ಟರಲ್ಲಿ ನಮ್ಮೊಂದಿಗೆ ಸರ್ಕಸ್ಸಿಗೆ ಬಂದಿದ್ದ ಶೀನ ಅಲ್ಲಿಗೆ ಬಂದಿದ್ದ. "ಅವರೆಲ್ಲ ಎಲ್ಲಪ್ಪಾ?" ಎಂದೆ ಗದ್ಗದಿತನಾಗಿ.

"ನಾವು ಐದೂ ಜನ ಗೇಟುದಾಟಿ ಹೊರಗಿನ ಗೇಟಿನ ಹತ್ತಿರ ಬಂದಾಗ ನೂಕಾಟ ಜಾಸ್ತಿಯಾಗಿ ಬೇರೆ ಬೇರೆಯಾದೆವು" ಎಂದ. ಅವರೆಲ್ಲ ಪಾರಾಗಿದ್ದಾರೆ ಎಂಬ ಒಂದು ಸಮಾಧಾನ ನನಗೆ.

ಮತ್ತೆ ಡೇರೆಯ ಹತ್ತಿರ ಬಂದೆ, ಹುಡುಕಿದೆ. ಯಾರೂ ಸಿಗಲಿಲ್ಲ. ಅಲ್ಲಲ್ಲಿ ಕೆಲವು ಮಕ್ಕಳನ್ನು ನಿಲ್ಲಿಸಿಕೊಂಡು ಪೊಲೀಸರು ನಿಂತಿದ್ದರು. ಅಲ್ಲಿ ಹೋಗಿ ನೋಡಿದೆ. ಊಹೂಂ. ನಮ್ಮ ಹುಡುಗರು ಅಲ್ಲಿರಲಿಲ್ಲ. ಮತ್ತೆ ಗಂಗೋಜಿರಾಯರ ಮನೆಗೆ ಬಂದೆ. ನನ್ನವರೆಲ್ಲ ಅಲ್ಲಿದ್ದರು!

ನನ್ನಾಕೆ ಹುಡುಗರನ್ನು ಕರೆದುಕೊಂಡು ಹೋದರಾಯಿತೆಂದು ಗೇಟು ದಾಟಿ ಹೋದಾಗ ಆಕೆಗೆ ಸಿಕ್ಕವರು ಕೃಷ್ಣ ಮತ್ತು ಶೀನನನ್ನುಳಿದು ಉಳಿದ ಹುಡುಗರು. ಅವರನ್ನು ಮೊದಲು ಅಲ್ಲಿಂದ ಕರೆದುಕೊಂಡು ಪಕ್ಕದಲ್ಲೇ ಇದ್ದ ರೇಲ್ವೆ ಕ್ವಾರ್ಟರ್ಸಿನಲ್ಲಿ ಬಿಟ್ಟು, ಕೃಷ್ಣ, ಶೀನರನ್ನು ಹುಡುಕಲು ಹೋದಳಂತೆ.

ಶೀನ ಸಿಕ್ಕಿದ್ದರೂ ಕೃಷ್ಣ ತಪ್ಪಿಸಿಕೊಂಡಿದ್ದ. "ಪಾಪ, ಕಳೆದ ವರ್ಷವೇ ತಂದೆಯನ್ನು ಕಳೆದುಕೊಂಡ ಮಗು ಅದು. ಈಗ ಅವನಿಲ್ಲದೇ ಅವರ ಮನೆಯ ಜನಕ್ಕೆ ಹೇಗೆ ಮುಖ ತೋರಿಸುವುದು?" ಎಂದು ನನ್ನಾಕೆ ಅಳತೊಡಗಿದಳು.

ನಾನು ಮತ್ತೊಮ್ಮೆ ಹೋಗಿ ಕೃಷ್ಣನನ್ನು ಹುಡುಕಿದೆ. ಆಗ ರಾತ್ರಿ ಒಂಬತ್ತು ಮೀರಿತ್ತು. ಆತ ಮನೆಗೇ ನೇರವಾಗಿ ಹೋಗಿದ್ದರೆ? ಎಂದುಕೊಂಡು ಶೀನನೊಂದಿಗೆ ಮನೆಗೆ ಧಾವಿಸಿದೆ.

ಕೃಷ್ಣ ಅಲ್ಲಿದ್ದ.

ಎಲ್ಲರೂ ಸುರಕ್ಷಿತವಾಗಿ ಪಾರಾಗಿದ್ದರಾದರೂ ನನಗೆ ಸರ್ಕಸ್ ಎಂದ ಕೂಡಲೇ ಇಂದಿಗೂ ಆ ದೃಶ್ಯ, ಆ ಆಕ್ರಂದ ಕಣ್ಣಿಗೆ ಕಟ್ಟಿ, ಕಿವಿಯಲ್ಲಿ ತುಂಬಿಕೊಳ್ಳುತ್ತವೆ. ●

ನಮ್ಮ ಗುರಿ ಮುಟ್ಟಿಸುವ ಸಾಧನಗಳಲ್ಲಿ ಜ್ಞಾನವೆಂಬುದು ಅತ್ಯಂತ ಪವಿತ್ರವಾದದು ಮತ್ತು ಶ್ರೇಷ್ಠವಾದುದು.

ಸ್ಮೃತಿಕಾರರು

ವಿಧವೆಯ ಕಣ್ಣೀರನ್ನು ತೊಡೆಯಲಾರದ, ದೀನರ ಹಸಿವನ್ನು ನೀಗಿಸಲಾಗದ ದೇವರಲ್ಲಾಗಲಿ, ಧರ್ಮದಲ್ಲಾಗಲಿ ನನಗೆ ನಂಬಿಕೆ ಇಲ್ಲ.

ಸ್ವಾಮಿ ವಿವೇಕಾನಂದ

ರಕ್ತ ಸಂಕ್ರಮಣ

ಇಂದು ನಿನ್ನೆಯದಲ್ಲ

ಡಾ॥ ಕರವೀರಪ್ರಭು ಕ್ಯಾಲಕೊಂಡ

ರೋಗಿಗೆ ಅಗತ್ಯ ಬಿದ್ದಲ್ಲಿ ಬೇರೆಯವರ ರಕ್ತ ನೀಡುವುದು ಇಂದು ಸಾಮಾನ್ಯ ಸಂಗತಿ. ಇದನ್ನೇ ನಾವು ಬ್ಲಡ್ ಟ್ರಾನ್ಸ್‌ಫ್ಯೂಶನ್, ಅಂದರೆ ರಕ್ತ ಸಂಕ್ರಮಣ ಎನ್ನುತ್ತೇವೆ. ಈ ರಕ್ತ ಸಂಕ್ರಮಣಕ್ಕೆ ಐದುನೂರು ವರ್ಷಗಳ ಸುದೀರ್ಘ ಇತಿಹಾಸವಿದೆ. ವೈಜ್ಞಾನಿಕವಾಗಿ ಮುಂದುವರಿದ ಇಂದಿನ ದಿನಗಳಲ್ಲಿ ರಕ್ತ ಸಂಕ್ರಮಣದ ಬಗ್ಗೆ ನಮ್ಮ ಪೂರ್ವಜರಿಗಿದ್ದ ಭಾವನೆಗಳು ಹಾಸ್ಯಾಸ್ಪದವೆನಿಸಿದರೂ ಅಂದಿನ ಜನರಿಗೆ ಅವು ವೈಜ್ಞಾನಿಕವಾಗಿ ಸತ್ಯವಾಗಿದ್ದ ಸಂಗತಿಗಳು.

ಹಿಂದೆ, ರಕ್ತವು ಜೀವ, ಯೌವನ ಹಾಗೂ ಆರೋಗ್ಯಗಳನ್ನು ನಿರ್ಧರಿಸುವ ದ್ರವ ಎಂದು ತಿಳಿದಿದ್ದ ಇಜಿಪ್ತದವರು ಚೈತನ್ಯದ ಚಿಲುಮೆಯನ್ನು ಮರಳಿ ಪಡೆಯುವ ಉದ್ದೇಶದಿಂದ ರಕ್ತದಲ್ಲಿ ಸ್ನಾನ ಮಾಡುತ್ತಿದ್ದರು. ರೋಮ್‌ನಲ್ಲಿ ಸೈನಿಕರಲ್ಲಿ ಹುರುಪು, ಹುಮ್ಮಸ್ಸು, ಧೈರ್ಯ ಹಾಗೂ ಚಾಣಾಕ್ಷತನವನ್ನು ಬಳುವಳಿಯಾಗಿ ಕೊಡುವ ಉದ್ದೇಶದಿಂದ ಚಾಣಾಕ್ಷ ಹಾಗೂ ಧೈರ್ಯವಂತರ ರಕ್ತವನ್ನು ಕುಡಿಯಲು ಕೊಡುತ್ತಿದ್ದರು.

ಹದಿನೈದನೆ ಶತಮಾನದ ಮಧ್ಯಾವಧಿಯಲ್ಲಿ ರಕ್ತ ಕುಡಿಯುವುದನ್ನು ಮಲರೋಗ, ಪಾರ್ಶ್ವವಾಯು, ಹುಚ್ಚು ಮುಂತಾದ ರೋಗಗಳನ್ನು ನಿವಾರಿಸಲು ಒಂದು ಚಿಕಿತ್ಸಾ ವಿಧಾನವಾಗಿ ಬಳಸಿಕೊಳ್ಳಲಾಗಿತ್ತು. 1487ರಲ್ಲಿ ರಕ್ತ ಸಂಕ್ರಮಣದ ಪ್ರಥಮ ಪ್ರಯತ್ನ ನಡೆಯಿತು. ಎಂಟನೇ ಪೋಪ್ ಮರಣಶಯ್ಯೆಯಲ್ಲಿ ಮಲಗಿದ್ದಾಗ, ಮೂವರು ತರುಣರ ರಕ್ತವನ್ನು ತೆಗೆದು ಅವರಿಗೆ ಕೊಡಲಾಯಿತು. ದುರ್ದೈವದಿಂದ ಪೋಪ್ ಕೊನೆಯುಸಿರೆಳೆದಿದ್ದರಿಂದ ಈ ವಿಧಾನಕ್ಕೆ ಪ್ರಚಾರ ಬೆಂಬಲ ಸಿಗದೇ ಹೋಯಿತು. ಈ ಘಟನೆ ಮುಂದೆ ಒಂದು ನೂರು ವರ್ಷಗಳಿಗಿಂತ ಹೆಚ್ಚು ಕಾಲ ರಕ್ತ ಸಂಕ್ರಮಣದ ಪ್ರಗತಿ ಪಥದಲ್ಲಿ ದೊಡ್ಡ ಬಂಡೆ

ಗಲ್ಲಾಗಿ ನಿಂತಿತು.

ಈ ಪ್ರಯತ್ನಕ್ಕೆ ಕೈಹಾಕಿದ ವೈದ್ಯರು ತಲೆ ಮರೆಸಿಕೊಂಡರು. ಈ ದಿಶೆಯಲ್ಲಿ ಸಂಶೋಧನೆಗಳು ಮತ್ತೆ ಆರಂಭವಾದುದು 1667ರ ನವಂಬರ್‌ನಲ್ಲಿ. ಆಗ ಇಂಗ್ಲೆಂಡಿನ ವಿಜ್ಞಾನಿ ರಿಚರ್ಡ್ ಲೋವರ್ ಒಂದು ನಾಯಿಯ ರಕ್ತವನ್ನು ಇನ್ನೊಂದು ನಾಯಿಗೆ ನೀಡಲು ಯತ್ನಿಸಿ ಯಶಸ್ವಿಯಾದ. ಇದಾದ ಮೇಲೆ ಒಂದು ಜಾತಿಯ ಪ್ರಾಣಿಯ ರಕ್ತವನ್ನು ಇನ್ನೊಂದು ಜಾತಿಯ ಪ್ರಾಣಿಗೆ ಕೊಡುವ ಪ್ರಯೋಗಗಳು ನಡೆದವು. ಈ ವಿಷಯದಲ್ಲಿ ಆಗಿನ ಜನರಿಗೆ ಎಂಥ ಭಾವನೆಗಳಿದ್ದುವೆಂದರೆ ಕುರಿಯ ರಕ್ತವನ್ನು ನಾಯಿಗೆ ಕೊಟ್ಟರೆ ನಾಯಿಯ ದೇಹದ ಮೇಲೆ ಉಣ್ಣೆ ಬೆಳೆಯಬಹುದೆಂದು ಊಹಿಸಿದ್ದರು. ಇನ್ನೂ ಸ್ವಾರಸ್ಯವೆಂದರೆ, ಟಗರಿನಂತೆ ನಾಯಿಗೂ ಕೋಡು ಮೂಡಬಹುದೆಂದು ಕಾದು ನೋಡಿದರಂತೆ. ಆದರೆ ಇಂಥ ಸಂಗತಿಗಳು ಜರುಗುವುದು ಅಸಂಭವವೆಂದು ಇತ್ಯರ್ಥವಾಯಿತು.

1668ರ ಅಂತ್ಯದಲ್ಲಿ ಲಂಡನ್ನಿನ ರಾಯಲ್ ಸಂಸ್ಥೆಯ ಆವರಣದಲ್ಲಿ ಎಡ್ಮಂಡ ಕಿಂಗ್ ಮನುಷ್ಯರಲ್ಲಿ ರಕ್ತ ಸಂಕ್ರಮಣ ಸಾಧ್ಯವೆಂದು ತೋರಿಸಿಕೊಟ್ಟ. ರಕ್ತ ಸಂಕ್ರಮಣಕ್ಕೆ ಉಪಯೋಗಿಸಿದ ಸಲಕರಣೆಗಳು ಮತ್ತು ವಿಧಾನದ ಮಾಹಿತಿಗಳು ಮಾತ್ರ ಸ್ಪಷ್ಟವಾಗಿ ಎಲ್ಲೂ ಸಿಗುತ್ತಿಲ್ಲ. ಇದರ ಬಗ್ಗೆ ಆ್ಯಂಡ್ರೆಸ್ ಲಿಬಾವಿಯಸ್ ಈ ರೀತಿ ಬರೆದಿದ್ದಾನೆ.

"ಒಂದು ಕಡೆ ಯೌವನ ಚಿಮ್ಮುತ್ತಿರುವ ದೃಢ ಕಾಯದ ಯುವಕನಿರಲಿ, ಇನ್ನೊಂದು ಕಡೆ ತೆಳ್ಳಗೆ, ಒಣಕಲಾದ, ಶಕ್ತಿಹೀನ, ಬದುಕಿ ಉಳಿಯಲು ದುಸ್ತರಗೊಂಡ ಮುದುಕನಿರಲಿ. ತಜ್ಞ ವೈದ್ಯನ ಹತ್ತಿರ ಒಂದಕ್ಕೊಂದು ಜೋಡಿಸಲು ಬರುವಂತಹ ಎರಡು ಬೆಳ್ಳಿಯ ಕೊಳವೆಗಳಿರಲಿ ವೈದ್ಯನು ಯುವಕನ ರಕ್ತನಾಳದಲ್ಲಿ ಕಿರಿದಾದ ಬೆಳ್ಳಿಯ ಕೊಳವೆಯನ್ನು ಮತ್ತು ಮುದುಕನ ರಕ್ತನಾಳದೊಳಗೆ ದಪ್ಪ ದೊಡ್ಡದಿರುವ ಕೊಳವೆಯನ್ನು ಸೇರಿಸಬೇಕು. ನಂತರ ಯುವಕನ ರಕ್ತನಾಳದಲ್ಲಿರುವ ಕಿರಿ ಕೊಳವೆಯನ್ನು ಮುದುಕನ ರಕ್ತನಾಳದಲ್ಲಿ ನಟ್ಟಿರುವ ಕೊಳವೆಯಲ್ಲಿ ಸೇರಿಸಬೇಕು. ಆಗ ಯುವಕನ ಬಿಸಿರಕ್ತವು ಮುದುಕನ ದೇಹದಲ್ಲಿ ಜೀವನದ ಕಾರಂಜಿಯು ಪುಟಿಯುವಂತೆ ಚಿಮ್ಮುವುದು. ಮುದುಕನ ಎಲ್ಲ ರೀತಿಯ ಅಶಕ್ತತೆಗಳು ಒಮ್ಮೆಲೆ ಮಾಯವಾಗುವವು.

ಆದರೆ ಇದೊಂದು ಕೇವಲ ಕಲ್ಪನೆಯಾಗಿರಬಹುದೇ ವಿನಾ ಕಾರ್ಯರೂಪಕ್ಕೆ ಇಳಿಸಬಲ್ಲ ವಿಧಾನವಲ್ಲ. ಹೀಗೇನಾದರೂ ಮಾಡಿದರೆ ರಕ್ತ ಒತ್ತಡ ಹೆಚ್ಚಿರುವ ಮುದುಕನ ರಕ್ತವೇ ಕಡಿಮೆ ರಕ್ತ ಒತ್ತಡವಿರುವ ಯುವಕನ ದೇಹದಲ್ಲಿ ನುಸುಳಬಹುದು. ಅಲ್ಲದೆ ಇನ್ನೂ ಅನೇಕ ದುಷ್ಪರಿಣಾಮಗಳಾಗಬಹುದು. ಆದರೆ ಇಲ್ಲಿ ವಿಧಾನಕ್ಕಿಂತ ರಕ್ತ ಸಂಕ್ರಮಣ ಸಾಧ್ಯವೆಂಬ ಅರಿವು ಆಗಿನ ಜನರಿಗಿತ್ತು ಎಂಬುದು ಮುಖ್ಯ. ಆ ಗುರಿಯನ್ನು ಸಾಧಿಸಲು ಅವರು ಕೆಲ ಪ್ರಯತ್ನಗಳನ್ನೂ ಮಾಡಿದ್ದರೆನಿಸುತ್ತದೆ. ಈ ವಾದಕ್ಕೆ ಮ್ಯಾಗ್ನಸ ಪೆಜಿಲ್ ಹಾಗೂ ಹೈರೋನಿಯುಸ್ ಕಾರ್ಡ್ಯಾನಸ್ ಎಂಬುವರ ಲೇಖನಗಳು ಪುಷ್ಠಿ ಕೊಡುತ್ತವೆ. ಇವರಿಬ್ಬರೂ ಓರ್ವ ವ್ಯಕ್ತಿಯ ರಕ್ತವನ್ನು ಇನ್ನೊಬ್ಬರಿಗೆ ಕೊಡುವ ಆಗಿನ ವಿಧಾನವನ್ನು ವಿವರವಾಗಿ ಬರೆದಿದ್ದು ಕಂಡು ಬರುತ್ತದೆ.

ಡೆನಿಸ್ ಎಂಬ ಸಾಹಸಿ ವೈದ್ಯನೊಬ್ಬ, 1669ರಲ್ಲಿ ಕುರಿಯ ಕುತ್ತಿಗೆಯಲ್ಲಿರುವ ಕ್ಯಾರೋಟಿಡ್ ರಕ್ತನಾಳದಿಂದ ಸುಮಾರು 250 ಮಿಲಿಲೀಟರ್ ರಕ್ತವನ್ನು ಓರ್ವ ಯುವಕನಿಗೆ ತಲೆಯ ಮೂಲಕ ನೀಡಿ ಯಶಸ್ವಿಯಾದ. ಆ ಕಾಲಕ್ಕೆ ಅದೊಂದು ಅಪೂರ್ವ ಘಟನೆಯಾಗಿ ಪರಿಣಮಿಸಿತು. ರಕ್ತ ಸಂಕ್ರಮಣದ ಪ್ರಾರಂಭದ ಹಂತದಲ್ಲಿ ಬುದ್ಧಿ ಭ್ರಮೆಗೊಂಡಿದ್ದ ವ್ಯಕ್ತಿಯೊಬ್ಬನಿಗೆ ಕುರಿಯ ರಕ್ತ ಕೊಟ್ಟಮೇಲೆ ಗುಣವಾಯಿತಂತೆ. ಇದು ವಾಸ್ತವದಲ್ಲಿ ಕೇವಲ ಆಕಸ್ಮಿಕವಾಗಿರಬಹುದು. ಆದರೆ ಆಗ ಇದೇ ಒಂದು ಮಹಾಸಂಗತಿಯಾಗಿ ಪರಿಣಮಿಸಿತು. ಗುಣವಾಗದಂತಹ ರೋಗಗಳಿಗೆ ರಕ ಕೊಡುವುದು ಶ್ರೇಷ್ಠ ಮದ್ದಿರಬಹುದೆಂಬ ಭಾವನೆಗಳೂ ಬೆಳೆದವು. ಹೊಸ ಹುಮ್ಮಸ್ಸಿನಲ್ಲಿ ಡೆನಿಸ್‌ರು ತಮ್ಮ ವಿಧಾನವನ್ನು ಮುಂದುವರಿಸಿದರು. ಆದರೆ ಅವರ ಕೆಲ ಪ್ರಯತ್ನಗಳು ವಿಫಲವಾದಾಗ ಇದೇ ಸಂಧಿಯನ್ನು ಕಾಯುತ್ತಿದ್ದ ಅವರ ವಿರೋಧಿಗಳು ಅವರನ್ನು

ನ್ಯಾಯಾಲಯಕ್ಕೆಳೆದರು. ಡೆನಿಸ್‌ರು ನಿರಪರಾಧಿಯೆಂದು ನಿರ್ಣಯಿಸಲಾದರೂ ಪ್ರಾಣಿಗಳ ರಕ್ತವನ್ನು ಮಾನವನಿಗೆ ನೀಡುವುದು ಕಾಯ್ದೆ ಬಾಹಿರವೆಂದು ಆದೇಶಿಸಲಾಯಿತು. ಇದರಿಂದ ರಕ್ತ ಸಂಕ್ರಮಣ ಶಾಸ್ತ್ರದಲ್ಲಿ ನಡೆಯಬಹುದಾಗಿದ್ದ ಸುಧಾರಣೆಗಳು ನಿಂತು ಹೋದವೆಂದು ಹೇಳಬಹುದು. ಈ ತಟಸ್ಥ ಪರಿಸ್ಥಿತಿ ಸುಮಾರು 150 ವರ್ಷಗಳವರೆಗೆ ಮುಂದುವರಿಯಿತು.

ನಂತರ ಜೇಮ್ಸ್ ಬ್ಲಂಡೆಲ್ 1818ರಲ್ಲಿ ಒಂದು ನವೀನ ವಿಧಾನದಿಂದ ರಕ್ತ ಸಂಕ್ರಮಣಕ್ಕೆ ಪ್ರಯತ್ನಿಸಿ ಯಶಸ್ವಿಯಾಗಿ ಅದಕ್ಕೆ ಪುನರ್ಜನ್ಮವನ್ನಿತ್ತ. ರಕ್ತ ಸಂಕ್ರಮಣವನ್ನು ಸ್ವಜಾತಿ ಪ್ರಾಣಿಗಳಲ್ಲಿ ನಡೆಸಿದರೆ ತೊಂದರೆಗಳು ಕಡಿಮೆ ಎಂಬುದು ಜನರಿಗೆ ಮನವರಿಕೆಯಾಗುವಂತೆ ಮಾಡಿದ. ಆದರೂ ಒಂದು ತೊಂದರೆ ಎದುರಾಯಿತು. ಅದೆಂದರೆ ದಾನಿಯ ರಕ್ತವನ್ನು ಕೆಲವು ವೇಳೆಯವರೆಗೆ ಪಾತ್ರೆಯಲ್ಲಿ ಶೇಖರಿಸುವಷ್ಟರಲ್ಲಿ ಅದು ಹೆಪ್ಪುಗಟ್ಟತೊಡಗಿತು. ಆಗ ಹೆಪ್ಪುಗಟ್ಟುವಿಕೆ ನಿರೋಧಕ ಲವಣಗಳ ಬಳಕೆ ಪ್ರಾರಂಭವಾಯಿತು. ಮೊದಲು ವಿವಿಧ ಲವಣಗಳು ಬಳಸಲ್ಪಟ್ಟವು. ಕೊನೆಗೆ ಸಿಟ್ರೇಟ್ ಲವಣವು ಸೂಕ್ತವಾದುದೆಂದು ಮನಗಂಡರು.

ಇಂಥ ಹಲವಾರು ಸುಧಾರಣೆಗಳಾದರೂ ರಕ್ತ ಸಂಕ್ರಮಣ ಸುರಕ್ಷಿತ ವಿಧಾನವೆಂದು ಪರಿಗಣಿಸಲ್ಪಡಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ರಕ್ತವನ್ನು ಗುಂಪುಗಳಲ್ಲಿ ವಿಭಾಗಿಸಿದಾಗ ರಕ್ತ ಸಂಕ್ರಮಣ ಸಾಕಷ್ಟು ಸುರಕ್ಷಿತವಾಯಿತು. ಹೀಗೆ ಸುಧಾರಣೆಗೊಳ್ಳುತ್ತ ಪಾತ್ರೆಯ ಬದಲು ಗಾಜಿನ ಬಾಟಲಿಗಳು, ಸಿರಿಂಜಿನ ಬದಲು ಸೂಜಿ ಹಾಗೂ ರಬ್ಬರ ನಳಿಕೆ ಬಳಸಲ್ಪಟ್ಟವು. ಇಂದು ದಾನಿಗಳ ರಕ್ತ ತೆಗೆಯುವ ಹಾಗೂ ರೋಗಿಗೆ ರಕ್ತ ಕೊಡುವ ವಿಧಾನಗಳೆರಡೂ ವೇದನಾರಹಿತವಾಗಿವೆ ಮತ್ತು ಸುಲಭವಾಗಿವೆ. ಈಗ ರಕ್ತವನ್ನಷ್ಟೇ ಅಲ್ಲದೆ ರಕ್ತದ ಘಟಕವನ್ನು ಮಾತ್ರ ಕೊಡುವಷ್ಟು ಸುಧಾರಣೆಯೂ ಆಗಿದೆ. ರಕ್ತ ಸಂಕ್ರಮಣದ ಬಗ್ಗೆ ಇನ್ನೂ ಕೆಲವು ಸಂಗತಿಗಳು ನಿಗೂಢವಾಗಿವೆ ಯಾದರೂ ಈಗ ಅದೊಂದು ಸುರಕ್ಷಿತ ವಿಧಾನವೆನಿಸಿದೆ. ●

ವಿದ್ಯಾರ್ಥಿ ಜೀವನ

ಈಗಿನ ಕಾಲದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ಜೀವನ ತುಂಬಾ ಕಷ್ಟಕರವಾದದ್ದು, ತಾವು ಅಧ್ಯಯನ ಮಾಡಲು ವಿನಿಯೋಗಿಸುವ ಕಾಲ ನರಗಳನ್ನು ಕುಕ್ಕುವಂಥಾದ್ದು, ನರಗಳಿಗೆ ಓಂಸೆ ಕೊಡುವಂಥಾದ್ದು ಎಂದು ಭಾವಿಸುವದಾದರೆ, ಅವರು 1815ರಲ್ಲಿನ ಗಾಂಟ್ಟಿಂಜೆನ್ ವಿಶ್ವವಿದ್ಯಾನಿಲಯದ ಪ್ರತಿದಿನದ ಕಾರ್ಯಕ್ರಮದ ಪಟ್ಟಿಯನ್ನು ಪರಿಶೀಲಿಸಲಿ.

ಆ ವರ್ಷ ಇಬ್ಬರು ತರುಣ ಅಮೇರಿಕನ್ನರು- ಜಾರ್ಜ್ ಟಿಕನರ್ ಎಂಬುವವ ಒಬ್ಬ, ಎಡ್‌ವರ್ಡ್ ಎವೆರಟ್‌ರೆ ಎಂಬಾತ ಇನ್ನೊಬ್ಬ- ಈ ವಿಶ್ವವಿದ್ಯಾನಿಲಯದ ಕಾಲೇಜೊಂದಕ್ಕೆ ಸೇರಿದರು. ಅವರು ತುಂಬಾ 'ಮೃದು' ಎಂದು ಭಾವಿಸಿ 16 ಗಂಟೆಗಳ ಅಧ್ಯಯನವನ್ನು 13 ಗಂಟೆಗಳಿಗೆ ಕಡಿತಗೊಳಿಸಲಾಗಿತ್ತು.

ಇದವರ ಪ್ರತಿದಿನದ ವೇಳಾಪಟ್ಟಿ.

ಬೆಳಿಗ್ಗೆ

5 ರಿಂದ 8	:	ಗ್ರೀಕ್
8 ರಿಂದ 9	:	ಜರ್ಮನ್
9 ರಿಂದ 10	:	ಅರ್ಥ ಪ್ರತಿಪಾದನೆ, ನಿರೂಪಣೆ, ಭಾಷ್ಯ.
10 ರಿಂದ 12	:	ಗ್ರೀಕ್

ಮಧ್ಯಾಹ್ನ

2 ರಿಂದ 4	:	ಲ್ಯಾಟಿನ್ ಮತ್ತು ಫ್ರೆಂಚ್
4 ರಿಂದ 5	:	ತತ್ವಶಾಸ್ತ್ರ
5 ರಿಂದ 7	:	ಗ್ರೀಕ್
7 ರಿಂದ 8	:	ಡ್ರಿಲ್ (ಕವಾಯಿತು)
9 ರಿಂದ 10	:	ಹೀಬ್ರ್ಯೂ ಅಥವಾ ದಿನದ ಪಾಠಗಳ ಪುನರಾವರ್ತನೆ.

ಎಸ್. ವಿಶ್ವನಾಥ್.

ಅನಿಸಿಕೆ

ದಲ್ಲಾಳಿ

ರಶಿಯದಲ್ಲಿ, ವ್ಯಾಪಾರ ಕ್ಷೇತ್ರವು ಸಂಪೂರ್ಣವಾಗಿ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವುದರಿಂದ ಆ ಕ್ಷೇತ್ರದಲ್ಲಿ ವಿಸ್ಫೋಟವೆಂಬುದಿಲ್ಲ. ತತ್ಫಲವಾಗಿ, ಜಾಹೀರಾತುಗಳಿಗೆ ಸಂಪತ್ತನ್ನು ವ್ಯಯಿಸುವ ಧರಾಟೆಯೂ ಅಲ್ಲಿಲ್ಲ. ಹೀಗಾಗಿ ಕಳೆದ ಮುವತ್ತು ವರ್ಷಗಳಿಂದ ಅಲ್ಲಿ ಪದಾರ್ಥಗಳ ಬೆಲೆಗಳು ಬದಲಾಗಿಲ್ಲ. ಇತ್ತೀಚೆಗೆ ರಶಿಯ ಪ್ರವಾಸ ಕೈಕೊಂಡು ಬಂದ ನನ್ನ ಸೋದರ ನನಗೆ ಈ ಮಾತುಗಳನ್ನು ಹೇಳಿದ. ವ್ಯವಹಾರದಲ್ಲಿ ವಿಸ್ಫೋಟ ಹಾಗೂ ಜಾಹೀರಾತಿಗೆ ಧನವ್ಯಯ ಇವುಗಳ ಬಗ್ಗೆ ಯೋಚಿಸುತ್ತಿರುವಂತೆಯೇ, ನನ್ನ ಆಲೋಚನೆಗೆ ವ್ಯವಹಾರ ಕ್ಷೇತ್ರದ ಇನ್ನೊಂದು ಮುಖವೂ ತೋರಿತು. ಅದುವೇ 'ದಲ್ಲಾಳಿ'. ದಲ್ಲಾಳಿಗೆ ಕೊಡತಕ್ಕ ಹಣವೇ 'ದಲ್ಲಾಳಿ' ಅಂದರೆ, ಮಧ್ಯವರ್ತಿಗೆ ಕೊಡತಕ್ಕ ವಟ್ಟಾ ದಲ್ಲಾಳಿಯು. ವಟ್ಟಾ ತೆಗೆದುಕೊಂಡು ಮಾಲಿಗೆ ಗಿರಾಕಿ ಒದಗಿಸುವವನು. ಆಂಗ್ಲ ಭಾಷೆಯ 'ಕಮೀಷನ್ ಏಜೆಂಟ'ನಾಗಿ ಜನಪ್ರಿಯ ಈತ! ಈತನಿಲ್ಲದೆಯೇ ವ್ಯವಹಾರ ನಡೆಯದೆ? ಹೆಚ್ಚಿನ ಕಡೆಗಳಲ್ಲಿ 'ಇಲ್ಲ'. ಇದು ನಾವು ಮಾಡಿಕೊಂಡಿರುವ ವ್ಯವಸ್ಥೆ. 'ಅವಸ್ಥೆ' ಎನ್ನುವುದು ಹೆಚ್ಚು ಯೋಗ್ಯ. ಏಕೆಂದರೆ, ಮಾಲು ಇರುತ್ತದೆ. ಮಾಲಿಗೆ ಗಿರಾಕಿ ಇರುತ್ತಾನೆ. 'ಮಧ್ಯವರ್ತಿ' ಕೇವಲ. ಮಧ್ಯವರ್ತಿಸುವವನು. ಅರ್ಥಾತ್ ವ್ಯವಹಾರ ಕುದುರಿಸುವವನು ಅಷ್ಟೆ. ಈತನಿಲ್ಲದೆಯೇ ಹಲವೊಮ್ಮೆ ಮಾಲಿಗೂ ಗಿರಾಕಿಗೂ ಸಂಪರ್ಕ ಕಷ್ಟವಾಗಬಹುದು. ಆದರೆ ಅಸಾಧ್ಯವೇನಲ್ಲ. ಈತನನ್ನು ಅನಿವಾರ್ಯ ಮಾಡಿರುವ ವ್ಯವಸ್ಥೆ ಈತನಿಂದ ಹೊರತಾಗಿಯೂ ಇರಲು, ಕಷ್ಟವಾದರೂ ಸಾಧ್ಯವಿತ್ತು. ಮೇಲುನೋಟಕ್ಕೆ ಈ ದಲ್ಲಾಳಿಯು ಕೊಡುಕೊಳ್ಳುವವರಿಬ್ಬರಿಗೂ ಲಾಭಕಾರಕನಾಗಿ ಕಂಡರೂ, ಅಂತಿಮದಲ್ಲಿ ಈಗ ಇಬ್ಬರಿಗೂ ನಷ್ಟಕಾರಕನೇ. ಇಬ್ಬರಿಂದಲೂ ಹಣ ಪಡೆದು ಜೀವಿಸುವ ಈತನಿಂದ ಯಾವ 'ಉತ್ಪಾದನೆ'ಯೂ ಸಮಾಜಕ್ಕಿಲ್ಲ. ಆದರೂ ನಮ್ಮಲ್ಲೀತ 'ಅಗತ್ಯ'ವೆಂಬಂತೆ ಆಗಿಬಿಟ್ಟಿರುವುದಕ್ಕೆ ಕಾರಣ, ಕೊಡುಕೊಳ್ಳುವವರಲ್ಲಿರುವ, ಅವಸರದ ವ್ಯವಹಾರದ ಆತುರ. ಪರಮಾವಧಿ ಲಾಭದ ಆಸೆ ಹಾಗೂ ಕುದುರಿಸುವಿಕೆಯ ಮೇಲಿನ ಮಿಥ್ಯವಾದ ಒಲವು. 'ಲಾಭ'ದ ವ್ಯಾಪ್ತಿ ಇಲ್ಲಿ ಗೋಜಲು. ನಮ್ಮ ಸಾಹಿತ್ಯ ಕ್ಷೇತ್ರ ಹಾಗೂ ವಿಚಾರರಂಗಗಳೂ ದಲ್ಲಾಳಿತನಕ್ಕೆ ಪಕ್ಕಾಗಿವೆ. ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶಕರು ಅನೇಕ ದಲ್ಲಾಳಿ ಕೆಲಸ ಮಾಡ ತೊಡಗಿದರೆ ವಿಚಾರರಂಗದಲ್ಲಿ 'ಗ್ರಂಥ'ಗಳು ಈ ಕೆಲಸ ಮಾಡುತ್ತಿವೆ. ಇದರಿಂದಾಗಿ 'ಜ್ಞಾನ' ತುಟ್ಟಿಯಾಗುತ್ತದೆ. ಮಾತ್ರವಲ್ಲ, ವಿಕೃತವಾಗುತ್ತದೆ ಕೂಡಾ! ದಲ್ಲಾಳಿತನದಿಂದಾಗಿ ಜ್ಞಾನಾರ್ಜನೆ ಒಂದು ವಿಸ್ಫೋಟಯುಕ್ತ ವ್ಯಾಪಾರವಾಗುತ್ತದೆ! ಇಂಥ ವ್ಯಾಪಾರದಲ್ಲಿ ಲಾಭವಾಗಲೂಬಹುದು, ಮೋಸ ಹೋಗಲೂಬಹುದು! ಲಾಭದ ವ್ಯಾಪ್ತಿ ಇಲ್ಲಿಯೂ ಗೋಜಲೇ!

ಎಚ್. ಆನಂದರಾಮಶಾಸ್ತ್ರಿ

ಪಾದುಕಾ ಪುರಾಣ

ರಾಮಾಯಣದಲ್ಲಿ ಪಾದುಕೆಗಳ ಮಹತ್ವವನ್ನು ಬಹಳ ಸುಂದರವಾಗಿ ವಿವರಿಸಲಾಗಿದೆ. ಪಾದುಕೆಗಳ ಮಹಿಮೆಯನ್ನು ಕುರಿತಂತೆ ನನ್ನ ಜೀವನದಲ್ಲಿಯೂ ಒಮ್ಮೆ ಒಂದು ಘಟನೆ ನಡೆದುದುಂಟು.

1921ರಲ್ಲಿ ನಾನು ಮತ್ತು ನನ್ನ ಕೆಲವು ಸ್ನೇಹಿತರು ತಿರುಚೆಂಗೊಡುವಿನ ಗಾಂಧಿ ಆಶ್ರಮದಲ್ಲಿ ಕೆಲಸ ಮಾಡುತ್ತಿದ್ದೆವು. ಈ ಪ್ರದೇಶದಲ್ಲಿ ಮಳೆಯ ಅಭಾವದಿಂದಾಗಿ ಆಗಾಗ ಭೀಕರ ಬರಗಾಲ ಉಂಟಾಗುತ್ತಿತ್ತು. ಆಶ್ರಮದಿಂದ ಬಡ ಜನರಿಗೆ ಅರ್ಧಬೆಲೆಗೆ ದವಸ ಧಾನ್ಯಗಳನ್ನು ನೀಡಲಾಗುತ್ತಿತ್ತು.

ಕ್ಷಾಮಪೀಡಿತ ಹಳ್ಳಿಗಳಲ್ಲಿ ಮಾಗೆಯನೂರ ಗ್ರಾಮದ ಸ್ಥಿತಿ ಅತ್ಯಂತ ಶೋಚನೀಯವಾಗಿತ್ತು. ಆ ಹಳ್ಳಿಯ ಜನರೆಲ್ಲ ಮೋಚಿಗಳು. ವಾರಕ್ಕೊಮ್ಮೆ ಆ ಹಳ್ಳಿಯಲ್ಲಿ ಸಂತೆ ಸೇರುತ್ತಿತ್ತು. ಅಕ್ಕ ಪಕ್ಕದ ಗ್ರಾಮಸ್ಥರೂ ವ್ಯಾಪಾರ ವಹಿವಾಟುಗಳಿಗಾಗಿ ಸಂತೆಗೆ ಬರುತ್ತಿದ್ದರು. ಇಂಥ ಸ್ಥಳಗಳಲ್ಲೇ ಸರ್ಕಾರ ಹೆಂಡದ ಅಂಗಡಿಗಳನ್ನು ತೆರೆಯುತ್ತಿತ್ತು.

ಮಾಗೆಯನೂರಿನ ಮೋಚಿಗಳೂ ಸೇರಿದಂತೆ ಗಾಂಧಿ ಆಶ್ರಮದ ಮೂಲಕ ಸಹಾಯ ಪಡೆಯುತ್ತಿದ್ದ ಗ್ರಾಮಸ್ಥರು ತಾವು ಎಂದಿಗೂ ಹೆಂಡ ಕುಡಿಯುವುದಿಲ್ಲ ಎಂದು ಪ್ರಮಾಣ ಮಾಡಿದ್ದರು.

ಪ್ರತಿ ಗುರುವಾರ ಗ್ರಾಮಸ್ಥರಿಗೆ ಆಶ್ರಮದಿಂದ ದವಸ ಧಾನ್ಯ ನೀಡಲಾಗುತ್ತಿತ್ತು. ಅಂಥ ಒಂದು ಗುರುವಾರ ಮಾಗೆಯನೂರಿನ ಮುನಿಯನ್ ಮತ್ತು ಕೆಲವು ಜನ ನನ್ನ ಮುಂದೆ ಬಂದು ನಿಂತರು.

"ಏನು ಸಮಾಚಾರ?" ನಾನು ಕೇಳಿದೆ.

"ನಿನ್ನೆ ರಾತ್ರಿ ಇಬ್ಬರು ಕುಡಿದಿದ್ದರು ಸ್ವಾಮಿ" ಅವರೆಂದರು.

"ಅವರು ಬಂದಿದ್ದಾರೆಯೇ?"

"ಹೌದು ಸ್ವಾಮಿ ಒಬ್ಬ ಬಂದಿದ್ದಾನೆ. ಮತ್ತೊಬ್ಬನ ಹೆಂಡತಿ ಬಂದಿದ್ದಾಳೆ."

"ಅವರು ತಪ್ಪು ಒಪ್ಪಿಕೊಂಡಿದ್ದಾರಾ?"

"ಇಲ್ಲ ಸ್ವಾಮಿ ಇವನು ರಾತ್ರಿ ಕುಡಿದು ಬಂದು ಹೆಂಡತಿಯ ಹತ್ತಿರ ಜಗಳವಾಡುತ್ತಿದ್ದ. ಇದು ಹಳ್ಳಿಗೆಲ್ಲ ಗೊತ್ತು" ಎಂದ ಮುನಿಯನ್.

ನಾನು ಅಪರಾಧಿಯನ್ನು "ಏನಪ್ಪ ನೀನು ಏನಾದರೂ ಹೇಳುವುದಿದೆಯೆ?" ಎಂದು ಕೇಳಿದೆ. ಅವನು "ಸ್ವಾಮಿ ನಾನು ಹೆಂಡತಿ ಹತ್ತಿರ ಜಗಳವಾಡಿದ್ದಂತೂ ನಿಜ. ಆದರೆ ಕುಡಿದಿರಲಿಲ್ಲ.

—ಚಕ್ರವರ್ತಿ ರಾಜಗೋಪಾಲಾಚಾರಿ

ಮೇಲಾಗಿ ಕುಡಿಯುವವರು ಮಾತ್ರ ಜಗಳವಾಡುತ್ತಾರೆಯೇ? ಕುಡಿಯದೇ ಇರುವವರು ಜಗಳವಾಡುವುದಿಲ್ಲವೇ?" ಎಂದಾತ ಕೇಳಿದ.

"ನೋಡಪ್ಪಾ ನಿಜ ಹೇಳು. ನಿನ್ನ ಹಳ್ಳಿಯಲ್ಲಿ ಒಬ್ಬ ಹೆಂಡ ಕುಡಿದರೂ ಹಳ್ಳಿಗೆಲ್ಲ ದವಸ ಬಂದ್" ಎಂದೆ ನಾನು.

"ಇಲ್ಲ ಸ್ವಾಮಿ ನಾನು ಕುಡಿದಿರಲಿಲ್ಲ. ಮುನಿಯನ್ ಸುಳ್ಳು ಹೇಳುತ್ತಿದ್ದಾನೆ" ಎಂದ ಆತ.

"ನೀವು ಈ ಮುದುಕನನ್ನ ಕೇಳಿ ಸ್ವಾಮಿ ಬೇಕಾದರೆ" ಮುನಿಯನ್ ಕೋಪದಿಂದ ಹೇಳಿದ. ಮುದುಕ ಅಪರಾಧಿಯ ತಂದೆಯಾಗಿದ್ದ.

"ನಿಜ ಹೇಳು ನಿನ್ನ ಮಗ ರಾತ್ರಿ ಕುಡಿದಿದ್ದನೆ?" ನಾನು ಕೇಳಿದೆ.

ಮುದುಕ ಸ್ವಲ್ಪ ಹೊತ್ತು ಸುಮ್ಮನಿದ್ದು ಆಮೇಲೆ "ತನ್ನ ಹೆಂಡತಿ ಜೊತೆ ಜಗಳವಾಡುತ್ತಿದ್ದ. ಹೆಂಡ ಕುಡಿದಿರಲಿಲ್ಲ" ಎಂದ.

"ಹಾಗಾದರೆ ಇವನು ಪ್ರಮಾಣ ಮಾಡಲಿ ಸ್ವಾಮಿ" ಎಂದ ಮುನಿಯನ್.

ನಾನು ಹದಿನೆಂಟು ವರ್ಷಗಳವರೆಗೆ ವಕೀಲನಾಗಿದ್ದು, ಆಗ ಪ್ರಮಾಣಗಳ ಮೇಲೆ ನಂಬಿಕೆ ಮುನ್ನೇ ಕಳೆದುಕೊಂಡುಬಿಟ್ಟಿದ್ದೆ. ಯೋಚಿಸುತ್ತ ಇದ್ದಾಗ ನನ್ನ ದೃಷ್ಟಿ ಹರಿದುಹೋದ ನನ್ನ ಚಪ್ಪಲಿಯ ಕಡೆ ಹೋಯಿತು. ನಾನು ಮುದುಕನನ್ನು ಹತ್ತಿರ ಕರೆದು "ನೋಡು ನಿಮ್ಮೆಲ್ಲರ ಜೀವನ ಈ ಚರ್ಮದಿಂದ ತಾನೇ ಸಾಗುತ್ತಿದೆ?" ಎಂದೆ.

ಮುದುಕ "ಹೌದು ಸ್ವಾಮಿ" ಎಂದ.

"ಹಾಗಾದರೆ ನಿನ್ನ ಮಗ ರಾತ್ರಿ ಕುಡಿದಿದ್ದನೇ, ಇಲ್ಲವೇ, ಎನ್ನುವುದನ್ನು ಈ ಚಪ್ಪಲಿ ಕೈಲಿ ಹಿಡಿದು ಪ್ರಮಾಣ ಮಾಡು" ಮುದುಕ ಚಪ್ಪಲಿ ಕೈಲಿ ಎತ್ತಿಕೊಂಡ. ಅವನಿಂದ ಸುಳ್ಳು ಹೇಳಲಾಗಲಿಲ್ಲ. "ಹೌದು ಸ್ವಾಮಿ, ನನ್ನ ಮಗ ಕುಡಿದಿದ್ದ" ಎಂದ. ಅಪರಾಧಿ ಸಹ ತನ್ನ ತಪ್ಪು ಒಪ್ಪಿಕೊಂಡ.

ಅಂದಿನಿಂದ ನನಗೆ ಪಾದುಕಾ ಪೂಜಾ ಒಂದು ಮರೆಯಲಾಗದ ಪಾಠವನ್ನು ಕಲಿಸಿತು. ಮೋಚಿಯ ದೃಷ್ಟಿಯಲ್ಲಿ ಚಪ್ಪಲಿಯೇ ದೇವರು. ಏಕೆಂದರೆ ಅದರಿಂದಲೇ ಅವನ ಹೊಟ್ಟೆ ತುಂಬುತ್ತಿತ್ತು. ಅದು ಅವನ ಪಾಲಿಗೆ ನಾರಾಯಣ, ದೈವ ಎಲ್ಲವೂ ಆಗಿತ್ತು. ನಾನು ಆ ಘಟನೆಯ ಅನಂತರ ಚಪ್ಪಲಿ ತೊಡುವ ಮುನ್ನ ಮನಸ್ಸಿನಲ್ಲೇ ಅದಕ್ಕೆ ನಮಸ್ಕಾರ ಮಾಡುವುದನ್ನು ಅಭ್ಯಾಸ ಮಾಡಿಕೊಂಡೆ.

(ನವನೀತ ಸೌರಭದಿಂದ)

ಮದಗಜಕ್ಕೊಂದು ಮರುವಸತಿ

ಎಚ್.ಎಸ್. ನಾಗೇಶರಾವ್

ನಿ[illegible] ಪ್ರಾಣಿಗಳ ಸಹಜ ವಾಸಸ್ಥಳಗಳು ಸಂಕುಚಿತಗೊಳಿಸಿ ಕಾಪಂಚಿನಲಿ ಮನೆ ವಾರ್ತೆ ನಡೆಸಲು ಹೋದರೆ ಏನಾಗಬಹುದು ಎಂಬುದನ್ನು ಸಷ್ಟಪಡಿಸುತ್ತಿವೆ ಮರುಕಳಿಸುತ್ತಿರುವ ಕಾಡಾನೆಯ ಹಾವಳಿಗಳು.

ಕುಟುವಾಸ್ತಗಳನ್ನಷ್ಟೇ ಕೊಡುವ ವರಟಗಾರನಾದ ನಾನೂ ಒಬ್ಬ ಮನುಷ್ಯನೇ. ಕಾಡಿನ ಸಮೇತ, ಜನ-ಜಾನುವಾರುಗಳಿಗಾಗುತ್ತಿರುವ ಹಾನಿ, ವನ್ಯಜೀವಿಗಳ ವಿನಾಶಗಳು ನನ್ನ ಕಣ್ಣಲ್ಲಿ ನೀರು ತರಿಸುತ್ತವೆ.

ಈಗ ನಾನು ನನ್ನ ವಿಹಾರಿ ಸ್ನೇಹಿತನೊಬ್ಬನೊಡನೆ ಬಂದಿರುವುದು ಕಟ್ಟೆಪುರ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿಗೆ ಸೇರಿದ ಕಾಡಿದು. ಇಲ್ಲಿ ದಟ್ಟ ಕಾನನ ಈಗ ಕ್ಷೀಣಿಸುತ್ತಿದೆ. ಗಿಡಮರಗಳಿಗೆ ಕೊಡಲಿ ಸೇವೆ, ಶ್ರೀಗಂಧ ತೇಗಗಳ ಕಳ್ಳಸಾಗಾಟಗಳ ಪಿಡುಗುಗಳ ಜೊತೆಗೆ ನೆರೆಹೊರೆಯ ಪ್ರದೇಶಗಳವರಿಂದಾದ ಅರಣ್ಯ ಪ್ರದೇಶದ ಮೇಲೆ ಅತಿಕ್ರಮಣ ಒತ್ತುವರಿಯಾದ ಕಾಡಿನ ಜಾಗದಲ್ಲೆಲ್ಲ ಬೇಸಾಯ-ಜನವಸತಿ. ಹೀಗಾದರೆ ವನ್ಯಜೀವಿಗಳೇನು ಮಾಡಬೇಕು? ಹೀಗೆ ತಮ್ಮ ಸಹಜ ನೆಲೆ ಕಳೆದುಕೊಂಡ ಕಾಡಾನೆಗಳ ಹಿಂಡು ಕಿರಿದಾದ ಜಾಗದಲ್ಲಿ ಒತ್ತಟ್ಟಿಗೆ ಜೀವಿಸಬೇಕಾಗಿ ಬಂದ ದುರ್ಭರ ಪರಿಸ್ಥಿತಿಯಿಂದಾಗಿ ಅವು ಗುಳೆ ಏಳಬೇಕಾಯಿತು.

ಹೀಗೆ ಗುಳೆಯೆದ್ದ ಕಾಡಾನೆಗಳ ದಾಂಧಲೆಯ ಅನೇಕ ಪ್ರಸಂಗಗಳನ್ನು ಓದಿ ಕೇಳಿರುವ ನಮಗೆ ತಪ್ಪು ಯಾರದೆಂದು ನಿರ್ಧರಿಸುವುದು ಬಲು ಕಷ್ಟದ ವಿಷಯ.

ಹಿಂದೆ ಇಂಥ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು "ಖೆಡ್ಡಾ" ಕಾರ್ಯಾಚರಣೆ ರೂಢಿಯಲ್ಲಿತ್ತು. ಆದರೀಗ ಇವುಗಳನ್ನು ಹಿಡಿದು ಸ್ಥಳಾಂತರಿಸಲು ಹೊಸ ವಿಧಾನವೊಂದನ್ನು ಅಳವಡಿಸಿಕೊಂಡಿದೆ ಕರ್ನಾಟಕ ರಾಜ್ಯದ ಅರಣ್ಯ ಇಲಾಖೆ.

ಇಂಥದೊಂದು ಕಾರ್ಯಾಚರಣೆಯನ್ನು ಖುದ್ದಾಗಿ ನೋಡುವ ಸಲುವಾಗಿಯೇ ವಿಹಾರಿಯಾದ ನನ್ನ ಕಪಿ ಮಿತ್ರನೊಂದಿಗೆ ನಾನಿಲ್ಲಿ ಬಂದಿರುವುದು. ಹಿಂದಿನ ಖೆಡ್ಡಾ ಕಾರ್ಯಾಚರಣೆ ಮತ್ತು ಈಗಿನ ಹೊಸ ವಿಧಾನಗಳ ಕುರಿತು ರಾಜ್ಯ ಅರಣ್ಯ ಇಲಾಖೆಯ ವನ್ಯಜೀವಿಗಳ ಸಂರಕ್ಷಣಾಧಿಕಾರಿಗಳು ಒದಗಿಸಿರುವ ವಿವರಗಳಿವು:

ದಕ್ಷಿಣ ಭಾರತದಲ್ಲಿಯ ಆನೆಗಳ ಸಂಖ್ಯೆ ಮತ್ತು 'ಖೆಡ್ಡಾ' ಮೂಲಕ ಕಾಡಾನೆಗಳನ್ನು ಹಿಡಿಯುತ್ತಿದ್ದ ವಿಶಿಷ್ಟ ವಿಧಾನದಿಂದಾಗಿ ಕರ್ನಾಟಕ ಜಗದ್ವಿಖ್ಯಾತಿಯನ್ನು ಗಳಿಸಿತ್ತು.

ಖೆಡ್ಡಾ ಕಾರ್ಯಾಚರಣೆಯ ಆರಂಭಕ್ಕೆ ಮಾಸ್ತಿ ಕಟ್ಟೆಗೆ ಪೂಜೆ ಸಲ್ಲಿಸಿದ ನಂತರ ಕಂಬ ನೆಡುವ ಕಾರ್ಯಕ್ರಮ. ಆಮೇಲೆ 'ಖೆಡ್ಡಾ' ಪ್ರದೇಶಕ್ಕೆ ಇಲಾಖೆಯ ಪಳಗಿಸಿದ ಆನೆಗಳನ್ನು

ಸಾಲುಗಟ್ಟಿ ಕರೆದೊಯ್ಯಲಾಗುತ್ತಿತ್ತು. ಈ ಪಳಗಿಸಿದ ಆನೆಗಳನ್ನು 'ಕುಮ್ಕಿ'ಗಳು ಎನ್ನುತ್ತಾರೆ. (ಬಹುಶಃ ಇದು 'ಕುಂಭಿ'ಯ ಅಪಭ್ರಂಶವಾಗಿರಬೇಕು. ಕುಂಭಿ ಎಂದರೆ ಆನೆ) ನಂತರ ಕಾಡಾನೆಗಳನ್ನು ಹುಯಿಲೆಬ್ಬಿಸಿ ನದಿಗೆ ಅಟ್ಟುತ್ತಿದ್ದರು. ಆಮೇಲೆ ಈ ಕಾಡಾನೆಗಳನ್ನು ಅವಕ್ಕಾಗಿಯೇ ನಿರ್ಮಿಸಿದ ವಿಶೇಷವಾದ ಕಟ್ಟಿಗೆಯ ಪಂಜರಗಳತ್ತ ಇಲಾಖೆಯ ಆನೆಗಳ ಸಹಾಯದಿಂದ ಓಡಿಸಿ ತಂದು ಪಂಜರಗಳಲ್ಲಿ ಬಂಧಿಸುತ್ತಿದ್ದರು. ಹೀಗೆ ಬಂಧಿಸಿದ ಆನೆಗಳನ್ನು ಒಂದೊಂದಾಗಿ ಹೊರತಂದು ತಿತಿಮತಿ ಕಾಡಿನ ಮಜ್ಜಿಗೆ ಹಳ್ಳದಲ್ಲಿರುವ ಗಜ ತರಬೇತಿ ಕೇಂದ್ರದಲ್ಲಿ ಪಳಗಿಸಲಾಗುತ್ತಿತ್ತು. (ಈಗಲೂ ಈ ತರಬೇತಿ ಕೇಂದ್ರದಲ್ಲಿ ಆನೆಗಳನ್ನು ಪಳಗಿಸಲಾಗುತ್ತಿದೆ) ಪಳಗಿದ ಆನೆಗಳಲ್ಲಿ ಕೆಲವನ್ನು ಇಲಾಖೆಯ ಕೆಲಸಗಳಿಗೆಂದೇ ಉಳಿಸಿಕೊಂಡು ಉಳಿದವುಗಳನ್ನು ದೇವಾಲಯ ಮಠ ಮುಂತಾದುವುಗಳಿಗೆ ಮಾರಾಟ ಮಾಡಲಾಗುತ್ತಿತ್ತು. ಇಂಥ 29 ಖೆಡ್ಡಾಗಳು ನಡೆದು ಒಟ್ಟು 1536 ಕಾಡಾನೆಗಳನ್ನು ಹಿಡಿದರು. 1971ರಲ್ಲಿ ಕೊನೆಯ ಖೆಡ್ಡಾ ನಡೆಯಿತು. ಈ ಕಾರ್ಯಾಚರಣೆ ನಡೆಯುತ್ತಿದ್ದ ಪ್ರದೇಶ ಕಬಿನಿ ಜಲಾಶಯ ನಿರ್ಮಾಣದಿಂದಾಗಿ ಮುಳುಗಡೆಯಾದುದೇ ಖೆಡ್ಡಾ ನಿಲ್ಲಲು ಕಾರಣ.

ಅಮಾನುಷವೆನ್ನಬಹುದಾದ ಖೆಡ್ಡಾ ವಿಧಾನದಲ್ಲಿ ಶೇಕಡಾ 40ರಷ್ಟು ಆನೆಗಳು ಊನವಾಗಿಯೋ ಜೀವ ಕಳೆದುಕೊಂಡೋ ಬಿಡುವ ಪ್ರಸಂಗಗಳಿದ್ದುದರಿಂದಲೂ ಆ ಕ್ರಮವನ್ನು ನಿಲ್ಲಿಸಲಾಯಿತು.

ಹೀಗಾಗಿ ನಿರಪಾಯಕರವಾದ ಕಾಡಾನೆಗಳಿಗೇನೂ ಹಾನಿಯಾಗದಂಥ ಹೊಸ ವಿಧಾನವೊಂದರ ಅಗತ್ಯವಿತ್ತು. (ಕಟ್ಟೆಪುರ ಸಂರಕ್ಷಿತ ಅರಣ್ಯದಲ್ಲಿ ನಾವು ನೋಡಿ ಈಗ ಬರೆಯುತ್ತಿರುವ ಈ ಕಾರ್ಯಾಚರಣೆಯೇ ಹೊಸ ವಿಧಾನವನ್ನಳವಡಿಸಿಕೊಂಡ ಇಂಥ ಮೊದಲ ಕಾರ್ಯಕ್ರಮ).

ಕಟ್ಟೆಪುರ ಸಂರಕ್ಷಿತ ಅರಣ್ಯದ ವಿಸ್ತೀರ್ಣ 234 ಹೆಕ್ಟೇರ್‌ಗಳು. ಈ ಮೀಸಲು ಅರಣ್ಯದ ಉತ್ತರಕ್ಕೆ ಹೇಮಾವತಿ ಅಣೆಕಟ್ಟು. ದಕ್ಷಿಣದಲ್ಲಿ ಹಾರಂಗಿ ಜಲಾಶಯ ಮತ್ತು ಈ ಕಾಡಿನ ಸುತ್ತಮುತ್ತ ತಲೆಯೆತ್ತಿದ ಕಾಫಿ ತೋಟಗಳು ಕಾಡಾನೆಗಳು ತಮ್ಮ ಮೂಲ ನೆಲೆಯನ್ನು ಸೇರಲು ಅಡ್ಡಿಯಾದುವು.

ಇಂಥ ಪರಿಸ್ಥಿತಿಯಲ್ಲಿ ಆನೆಗಳನ್ನು ನಿಯಂತ್ರಿ



ಆನೆಗಳನ್ನು ಹಿಡಿಯುವ ಮುನ್ನ ನೀರಿಗೆ ಅಟ್ಟುತ್ತಿರುವ ದೃಶ್ಯ (ಖೆಡ್ಡಾ ಕಾರ್ಯಾಚರಣೆ)

ಸಲು ಅರಣ್ಯ ಇಲಾಖೆ ಕಟ್ಟೆಪುರ ಕಾಡಿನ ಸುತ್ತ ವಿದ್ಯುತ್ ಬೇಲಿಯನ್ನು ನಿರ್ಮಿಸಿತು. ಇದರಿಂದಲೂ ಪ್ರಯೋಜನವಾಗಲಿಲ್ಲ.

1985ರ ನವೆಂಬರ್ ತಿಂಗಳಿನಲ್ಲಿ ಬಂಡೀಪುರದಲ್ಲಿ ಸಮಾವೇಶಗೊಂಡಿದ್ದ ಏಶಿಯದ ಗಜತಜ್ಞರ ಸಭೆಯಲ್ಲಿ ಈ ತುಡುಗು ಕಾಡಾನೆಗಳ ವಿಷಯ ಚರ್ಚೆಗೆ ಬಂತು. ಆಗ ಮಲೇಶಿಯಾ ಮತ್ತು ಶ್ರೀಲಂಕಾಗಳಲ್ಲಿ ಗಜ ಸ್ಥಳಾಂತರ ಕಾರ್ಯಾಚರಣೆ ಯಶಸ್ವಿಯಾಗಿ ನಡೆದುದರ ಪ್ರಸ್ತಾಪ ಬಂತು. ಅದೇ ವಿಧಾನವನ್ನು ಇಲ್ಲಿಯೂ ಅಳವಡಿಸಿಕೊಳ್ಳಲು ಸೂಚಿಸಲಾಯಿತು. ಆದರೆ ಸ್ಥಳಾಂತರಿಸುವ ಮುನ್ನ ಕಾಡಾನೆಗಳನ್ನು ಹಿಡಿಯುವ ಬಗೆ?

ಆನೆಗಳನ್ನು ನಿಶ್ಚೇಷ್ಟಿತಗೊಳಿಸಿ ಸೆರೆಹಿಡಿದು ನಾಗರಹೊಳೆ ಅಭಯಾರಣ್ಯಕ್ಕೆ ಸಾಗಿಸಬೇಕೆಂಬ ಸಲಹೆ ಬಂತು. ಅದು ಸರ್ವಮಾನ್ಯವೆನಿಸಿದ್ದರಿಂದ ಯೋಜನೆಯೊಂದನ್ನು ಹಾಕಿಕೊಳ್ಳಲಾಯಿತು.

ಇದೇ ಸಮಯಕ್ಕೆ ಸಲಗವೊಂದರ ದಂತಗಳು ಒಂದರ ಮೇಲೊಂದು ಬೆಸೆದುಕೊಂಡಿದ್ದು, ಆಹಾರ ಸೇವಿಸಲು ಆ ಆನೆ ಪಡುತ್ತಿದ್ದ ಪಾಡನ್ನು ಕಂಡು ಅರಣ್ಯ ಇಲಾಖೆಯು ಸಿಬ್ಬಂದಿ 1986ರ ಜುಲೈ 12 ರಂದು ಮೇಲಿನ ಯೋಜನೆಯನ್ನು ಪರೀಕ್ಷಿಸಿ ನೋಡಲು ನಿರ್ಧರಿಸಿತು. ಆ ಸಲಗಕ್ಕೆ ಔಷಧಯುಕ್ತ ಗುಂಡನ್ನು ಹಾರಿಸಿ ಅದನ್ನು ನಿಶ್ಚೇಷ್ಟಿತಗೊಳಿಸಿ, ಬೆಸೆದುಕೊಂಡಿದ್ದ ದಂತವನ್ನು ಬೇರ್ಪಡಿಸಿ ಕತ್ತರಿಸಲಾಯಿತು. ಈ ಯಶಸ್ಸಿನ ನಂತರ ಮುಂದಿನ ಗಜ ಸ್ಥಳಾಂತರಗಳಿಗೆ ಸ್ಫೂರ್ತಿ ಹಾಗೂ ಮೂರ್ತರೂಪ ಬಂತು.

ಭಾರತ ಸರ್ಕಾರದ ಅರಣ್ಯ ಮತ್ತು ವನ್ಯಜೀವಿ ಇಲಾಖೆ ನಮ್ಮಲ್ಲಿಯ ಔಷಧ ಸಂಗ್ರಹದ ಪ್ರಮಾಣ ತೀರ ಕಡಿಮೆಯೆಂದರಿತು ಇನ್ನಷ್ಟು ಔಷಧಿಗಳನ್ನು ಒದಗಿಸಿದೆ. ಅಲ್ಲದೆ ಅರಣ್ಯ ಇಲಾಖೆಯು ಕಾರ್ಯಾಚರಣೆಯ ತಂಡಕ್ಕೆ ಬೇಕಾದ ಅಗತ್ಯ ಮಾರ್ಗದರ್ಶನ ಹಾಗೂ ಸಲಹೆ ನೀಡಲು ಕೇರಳದ ಡಾ॥ ಚೀರನ್ ಮುಂದಾಗಿದ್ದಾರೆ. ಅವರು ಕೇರಳದ ಪಶುವೈದ್ಯಕೀಯ ಹಾಗೂ ಜೀವ ವಿಜ್ಞಾನಗಳ ಕಾಲೇಜಿನ ಪ್ರಾಚಾರ್ಯರು. 1987ರ ಫೆಬ್ರವರಿಯಲ್ಲಿ ಪ್ರಸ್ತುತ ಗಜ ಸ್ಥಳಾಂತರ ಕಾರ್ಯಾಚರಣೆಯ ಶಿಬಿರಕ್ಕಾಗಿ ಸೂಕ್ತ ಸ್ಥಳದ ಪರಿಶೀಲನೆ ನಡೆಸಿ ಸಮೃದ್ಧವಾಗಿ ನೀರು ಸಿಗುವ ಕಟ್ಟೆಪುರ ಸಂರಕ್ಷಿತ ಅರಣ್ಯ ಪ್ರದೇಶವನ್ನು ಆಯ್ಕೆ ಮಾಡಲಾಯಿತು. ಸನಿಹದಲ್ಲೇ ಕುಮ್ಕಿಗಳ ಶಿಬಿರವೂ ಇತ್ತು.

ನಾನು ಅರಣ್ಯ ಇಲಾಖೆಯ ವನ್ಯಜೀವಿ ಸಂರಕ್ಷಣಾಧಿಕಾರಿಗಳು ಹೇಳಿದ್ದನ್ನೆಲ್ಲ ಗಮನದಲ್ಲಿರಿಸಿಕೊಂಡು ಮರುದಿನದ ಕಾರ್ಯಾಚರಣೆಯನ್ನು ವೀಕ್ಷಿಸಲು ಗೆಳೆಯನೊಂದಿಗೆ ಸಿದ್ಧನಾದೆ.

ಕುಮ್ಕಿಗಳ ಶಿಬಿರದ ಸನಿಹವೇ ಈ ಕಾರ್ಯಾಚರಣೆಯ ಸಿಬ್ಬಂದಿಗೆ ಊಟ ಉಪಚಾರದ ವ್ಯವಸ್ಥೆಯಿದೆ. ಮಾಹುತರ ತಂಡಕ್ಕೂ ಊಟ ವಸತಿಯ ಏರ್ಪಾಡಿದೆ. ನಿಶ್ಚೇಷ್ಟಿತಗೊಳಿಸಬೇಕಾಗಿರುವ ಆನೆಗಳನ್ನು ಬಂಧಿಸಲು ಬೇಕಾದ ಗಟ್ಟಿ ಹಗ್ಗವನ್ನು ಕ್ಯಾನಿಬಾಸ್ ಸೆಟೀವ್‌ನಿಂದ (ಪುಂಡಿ ಸಣಬು) ತಯಾರಿಸುವ ಕಿರಿ ಕೈಗಾರಿಕೆಯೂ ಇಲ್ಲಿದೆ.

ಕಾಡಾನೆಗಳನ್ನು ನಿಶ್ಚೇಷ್ಟಿತಗೊಳಿಸಲು ಬೇಕಾದ ಔಷಧಗಳ ಸಂಗ್ರಹಾಗಾರ ಮತ್ತು ಪಶುವೈದ್ಯರು ಪರಿಣಿತರ ಶಿಬಿರದಲ್ಲಿ ಕಾರ್ಯಾಚರಣೆಯ ವಿಧಿವಿಧಾನಗಳ ಚರ್ಚೆ ಹಾಗೂ ಸಲಗಕ್ಕೆ ಗುರಿಯಿಟ್ಟು ಎಸೆಯಬಹುದಾದ ಚುಚ್ಚುಮದ್ದನ್ನು ಪಿಸ್ತೂಲಿಗೆ ಅಥವಾ ಬಂದೂಕಿನಿಂದ ನಳಿಗೆಗೆ ತುಂಬುವ ಪ್ರಾತ್ಯಕ್ಷಿಕ ಡಾ॥ ಚೀರನ್‌ರಿಂದ. ಜತೆಗೆ ವೈರ್‌ಲೆಸ್ ವ್ಯವಸ್ಥೆ. ಕಾರ್ಯಾಚರಣೆಯ ಸ್ಥಳಕ್ಕೆ ಅಧಿಕಾರಿಗಳನ್ನು, ವೈದ್ಯರನ್ನು ಮತ್ತು ಸಿಬ್ಬಂದಿಯನ್ನು ಕರೆದೊಯ್ಯಬಲ್ಲ ವಾಹನಗಳ ವ್ಯವಸ್ಥೆಯೂ ಉಂಟು.

ಕಾಡಾನೆಯನ್ನು ಅದರ ಹೆಜ್ಜೆಯ ಗುರುತಿನಿಂದ ಇಲ್ಲವೇ ಅದು ವಿಸರ್ಜಿಸಿರಬಹುದಾದ ಮಲಮೂತ್ರಗಳ ಮೂಲಕ ಪತ್ತೆಹಚ್ಚುವ ಕಾಡುಕುರುಬರಿಗೆ ಅನೇಕ ಖೆಡ್ಡಾಗಳಲ್ಲಿ ಭಾಗವಹಿಸಿದ ಅನುಭವ. ಇಲಾಖೆಯ ಪರಿಣಿತ ಅಧಿಕಾರಿಯೊಬ್ಬರು ಇವರಿಗೆ ಮಾರ್ಗದರ್ಶಕರು. ಬಿದಿರಿನ ಕಡ್ಡಿಗಳನ್ನು ಬಡಿದು ಹುಯಿಲೆಬ್ಬಿಸುತ್ತ, ಕಾಡಾನೆ ಕಾಡುಬಿಟ್ಟು ಹೋಗದಂತೆ ಕಾಯಬಲ್ಲ ಇವರು ಕಾಕನ



"ಅಂತೂ ನೀಮ ಎಣ್ಣೆ ಉಳಿಸಿ ಬಿಟ್ರೀ……!"

ಕೋಟೆ ಕಡೆಯುವರು. ಇವರಲ್ಲಿ ಕೆಲವರು ಜೇನು ಕುಗುಬರು. ಕಾಡಾನೆಯನ್ನು ಓಡಿಯುವ ಎರಡು ದಿನಗಳಿಗೆ ಮೊದಲೇ ಕಾರ್ಯಾಚರಣೆಯ ಸ್ಥಳವನ್ನಿವರು ಸೇರು ತ್ತಾರೆ. ರಾತ್ರಿಯಿಡೀ ಬೆಂಕಿ ಹಾಕಿಕೊಂಡು ಅಡಿಗೆ ಮಾಡುತ್ತಲೋ ಕಾಫಿ ಕಾಸುತ್ತಲೋ ಜತೆಗೆ ಹುಯಿಲೆಬ್ಬಿಸುತ್ತಲೋ ಕಾಡಾನೆಗೆ ಗಾಬರಿಯುಂಟುಮಾಡಿ ಅದನ್ನು ಕಾಯುವ ಇವರಿಗೆ ಅರಣ್ಯ ಇಲಾಖೆಯಿಂದಲೇ ಆಹಾರ ಸಾಮಗ್ರಿಗಳ ಸರಬರಾಜು.

1987 ಮಾರ್ಚ್ 16ರ ಸೂರ್ಯೋದಯ ಸಮಯ. ಭಾಗವಹಿಸಬೇಕಾದವರೆಲ್ಲ ಬೇಗನೇ ಎದ್ದು ಮುಗಿಸಬೇಕಾದ್ದನ್ನೆಲ್ಲ ಮುಗಿಸಿ ಸಜ್ಜಾಗಿದ್ದಾರೆ. ಕಾರ್ಯಾಚರಣೆಗೆ ಮುನ್ನ ಪೂಜೆ. ಹಿಂದಿನ ಖೆಡ್ಡಾಗಳಲ್ಲಿದ್ದ 60 ಜನ ಶ್ರಮಜೀವಿಗಳು ಹೊಸ ಉತ್ಸಾಹದಿಂದ ಈ ಹೊಸ ಕಾರ್ಯಾಚರಣೆಯಲ್ಲಿ ಭಾಗವಹಿ ಸಿದ್ದಾರೆ.

ಕಟ್ಟೆಪುರದಲ್ಲಿ ದಾಂಧಲೆಯೆಬ್ಬಿಸಿದ ಆ ದೈತ್ಯ ಇರಬಹುದಾದ ಸ್ಥಳಗಳತ್ತ ಸಾಹಸಿಗಳು ಹೆಜ್ಜೆ ಹಾಕಿದರು. ಈ ಕಾರ್ಯಾಚರಣೆಯನ್ನು ನನ್ನ ಕವಿಹೃದಯದ ವಿಹಾರಿ ಮಿತ್ರನಂತೆ ಕಾವ್ಯ ಮಯವಾಗಿ ವರ್ಣಿಸಲಾರೆ. ಆದ್ದರಿಂದ ಸದ್ಯ ಅವನಿಗೆ ವರ್ಣಿಸಲು ಅವಕಾಶಕೊಟ್ಟು, ನಾನು ಸ್ವಲ್ಪಕಾಲ ಸುಮ್ಮನಿರುವೆ.

ನಾನು ವಿಹಾರಿ. ನನ್ನ ಪರಿಚಯವನ್ನೀಗಾಗಲೇ ಪತ್ರಕರ್ತ ಮಿತ್ರ ನಿಮಗೆ ಮಾಡಿ ಕೊಟ್ಟಿದ್ದಾನಲ್ಲ.

ಈಗ ನಾನು ಕುಮ್ಕಿಯ ಮೇಲೆ ಕೂತು ಕಾಡಾನೆ ಇರುವ ಕಡೆಗೆ ಹೋಗುತ್ತಿರುವುದ ರಿಂದ ಯಥಾವತ್ ವಿವರಣೆ ಕೊಡುತ್ತೇನೆ.

ಸಾಕಷ್ಟು ಪ್ರಮಾಣದಲ್ಲಿ ನೀರು ಮತ್ತು ಹಗ್ಗ ಗಳ ಹೊರೆಯನ್ನು ಹೊತ್ತು ದೃತಗತಿಯಲ್ಲಿ ಸಾಗುತ್ತಿವೆ ಕುಮ್ಕಿಗಳು. ದಟ್ಟಡವಿಯ ನಡುವೆ ಪೊದೆಗಳ ಮರೆಯಲ್ಲಿ ನಿಧಾನವಾಗಿ ಮುಂದು ವರಿದಿದೆ ಸಾಹಸಿಗರ ಮೆರವಣಿಗೆ.

ಅತ್ತ ಕಾಡಿನ ಅತಿ ಎತ್ತರದ ಮರಗಳ ಮೇಲೆ ಕುಳಿತು ಕಟ್ಟೆಪುರದ ದೈತ್ಯನ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದಾರೆ ಪಹರೆಯುವರು. ಅದ ರಿಂದ ದೈತ್ಯನಿರುವ ಜಾಗದ ಸುಳಿವು ಸಿಕ್ಕಿದ್ದೇ ತಡ ಅಧಿಕಾರಿಗಳು, ಸಿಬ್ಬಂದಿ ಅತ್ತ ಧಾವಿಸಿ ದ್ದಾರೆ. ಕುಮ್ಕಿಗಳು ಸಹ ತಮ್ಮ ಮೈಭಾರ ಮರೆತು ಅತ್ತ ಓಡುತ್ತಿವೆ. ಪೊದೆಯ ಮರೆ ಯಲ್ಲಿ ಸುಳಿದಾಡುತ್ತಿರುವ ಸಾಹಸಿಗರಿಗಿದು ಸವಾಲು. ಅರೆಕ್ಷಣದಲ್ಲೇ ಅವನತ್ತ ಔಷಧ ಯುಕ್ತ ಗುಂಡು ಹಾರಿಸಿದ್ದಾರೆ ಅಧಿಕಾರಿಗಳು. ಅದು ಗುರಿ ತಪ್ಪಿಲ್ಲ. ಸಲಗನ ಬಲಪೃಷ್ಠದ ಒಳ ಹೊಕ್ಕಿದೆ ಚುಚ್ಚುಮದ್ದು. ಆ ಚುಚ್ಚು ಮದ್ದಿನ ಮೇಲ್ತುದಿಗೆ ಬಣ್ಣದ ನಿಶಾನೆಯನ್ನು ಹಚ್ಚ ಲಾಗಿದೆ. ಇದರಿಂದ ಕಾಡಾನೆಯನ್ನು ಪತ್ತೆ ಹಚ್ಚುವುದು ಸಾಧ್ಯ. ಅಲ್ಲದೆ ಹಾಗೊಂದು ವೇಳೆ ಗುರಿ ತಪ್ಪಿದರೆ ಅತ್ಯಂತ ಬೆಲೆಬಾಳುವ ಆ ಔಷಧಯುಕ್ತ ಚುಚ್ಚುಮದ್ದನ್ನು ಹುಡುಕಿ ಮರಳಿ ಪಡೆಯಲು ಸಾಧ್ಯವಾಗುತ್ತದೆ.

ಆ ಸಲಗ ಹುಚ್ಚೆದ್ದು ಓಡಿತು. ಸಣ್ಣ ದಿಬ್ಬ ಏರಿ ಕೆಳಗಿಳಿದು ಕಾಡಿನ ಮರೆಯಲ್ಲಿ ನುಸುಳಿ ತೆಂದು ಪಹರೆಯುವ ಹೇಳಿದ. ವೈರ್‌ಲೆಸ್ಸಿನಿಂದ ಎಲ್ಲರಿಗೂ ಈ ವಿಷಯ ಬಿತ್ತರಿಸಲ್ಪಟ್ಟಿತು. ಜಾಡು ಹಿಡಿಯುವ ಕಡುಜಾಣ ಕಾಡು ಕುರುಬರ ಅನುಭವ, ಸಮಯ ಪ್ರಜ್ಞೆಯ ಪರಿ ಚಯವಾಗುವುದು ಇಂಥ ಸಂದರ್ಭದಲ್ಲೇ. ಅರ್ಧ ಕಿಲೋಮೀಟರ್ ದೂರದಲ್ಲಿ ಕೆಳ ಗಡೆ ಬಿದ್ದಿರುವ ಸಲಗದತ್ತ ವೈದ್ಯರ ತಂಡ ವಾಹನಗಳಲ್ಲಿ ತ್ವರೆಯಿಂದ ಸಾಗಿದೆ. ಕೂಡಲೇ ಅದಕ್ಕೆ ಇನ್ನೊಂದು ಚುಚ್ಚುಮದ್ದನ್ನು ನೀಡದೇ

ಮಾಡಿದರೆ ಬಹುಶಃ ಅದು ಜೀವಂತ ಸಿಗಲಾರ ದೆಂದೇ ಇರಬೇಕು ಎಲ್ಲರಿಗೂ ಅವಸರ ಧಾವಂತ.

ಹಳ್ಳಿಯ ಜನ-ಜಾನುವಾರುಗಳನ್ನು ಗೋಳಾ ಡಿಸಿ ಸೊಕ್ಕಿನಿಂದ ಬೆಳೆಗಳನ್ನೆಲ್ಲ ತಿಕ್ಕಿ ಮುಕ್ಕಿದ ಕಟ್ಟೆಪುರದ ದೈತ್ಯನೀಗ ನಿಶ್ಚೇಷ್ಟಿತನಾಗಿ ಬಿದ್ದಿ ದ್ದಾನೆ.

ಕುಮ್ಕಿಗಳ ಮೇಲೆ ಕೊಂಡೊಯ್ದಿದ್ದ ಹಗ್ಗ ಗಳಿಂದ ಕಟ್ಟೆಪುರದ ಪೋರನ ಕೈಕಾಲುಗಳನ್ನೂ ದೇಹವನ್ನೂ ಬಂಧಿಸುವ ಕಾರ್ಯವೀಗ ನಡೆ ದಿದೆ. ಇದು ತೀವ್ರಗತಿಯಲ್ಲಾಗಬೇಕಾದ ಕೆಲಸ. ಯಾಕೆಂದರೆ ನಿಶ್ಚೇಷ್ಟಿತನಾಗಿರುವ ದೈತ್ಯ ಕೆಲಹೊತ್ತಿನಲ್ಲೇ ಮತ್ತೆ ಗತ್ತು ತೋರಿಸ ಲಾರಂಭಿಸುವ ಸಾಧ್ಯತೆ ಆ ಎರಡನೆಯ ಚುಚ್ಚು ಮದ್ದಿನ ಪರಿಣಾಮದಿಂದ ಇದೆ.

ಮನುಷ್ಯನ ದೇಹಾರೋಗ್ಯದ ವಿಷಯದಲ್ಲಿ ವಹಿಸಬೇಕಾದ ಕಾಳಜಿಯನ್ನೇ ಕಾಡಾನೆಯ ವಿಷಯದಲ್ಲೂ ವಹಿಸಬೇಕಾಗುತ್ತದೆ. ದೇಹದ ತಾಪಮಾನವನ್ನೀಗ ಅಳೆಯುತ್ತಿದ್ದಾರೆ. ಹಾಗೆಯೇ ತಾಪಮಾನವನ್ನು ಇಳಿಸಲು ಸಲಗನ ದೇಹದುದಕ್ಕೂ ನೀರು ಸುರಿಯು ತ್ತಲೇ ಇರಬೇಕಾಗುತ್ತದೆ. ವೈದರು ಸಲಗನ ಅಂಗಾಂಗ ಮಾಪನ ನಡೆಸಿದ್ದಾರೆ: ಮುಂಗಾಲು, ಹಿಂಗಾಲು, ಪಾದ, ದಂತ, ಪುಷ್ಠ, ಬೆನ್ನು, ಸೊಂಡಿಲು, ಹೊಟ್ಟೆ, ಇವುಗಳ ಸೈಜ್ ಅಳೆಯಲಾಗುತ್ತಿದೆ. ಈ ಮಾಪನದಿಂದ ಪ್ರಾಣಿಯ ವಯಸ್ಸನ್ನು ನಿರ್ಧರಿಸಲು ಸಾಧ್ಯ ಎನ್ನುತ್ತಾರೆ ತಜ್ಞರು.

ಈವರೆಗೆ ಐವರನ್ನು ಆಹುತಿ ತೆಗೆದುಕೊಂಡಿ ರುವ ಈ ತುಡುಗನ ಎತ್ತರ 9 ಅಡಿ 8 ಅಂಗುಲ ಗಳು. ವಯಸ್ಸು ಸುಮಾರು 30 ವರ್ಷಗಳು. ಕಾಡಾನೆಯ ಕಣ್ಣಿನ ಎವೆ ಮತ್ತು ಪಾಪೆಗಳ ಕ್ರಿಯೆಯನ್ನು ಗಮನಿಸಲಾಗುತ್ತಿದೆ. ನಾಸಿಕಾ ರಂಧ್ರ ಹಾಗೂ ದೇಹದ ಇತರ ಟೊಳ್ಳು ಭಾಗ ಗಳನ್ನು ಬೆಸೆದಿರುವ ಚರ್ಮದ ಭಾಗ ಗುಲಾಬಿ ಬಣ್ಣಕ್ಕೆ ತಿರುಗುತ್ತಿದೆ. ಶಿಶ್ನದ ಹೊರಭಾಗ ಇಷ್ಟಷ್ಟೇ ಒಳಸರಿಯುತ್ತಿದೆ. ಉಸಿರಾಟ ಸಹಜ ವಾಗಿದ್ದು ಸಲಗ ಪ್ರಜ್ಞಾವಸ್ಥೆಗೆ ಬರುವ ಸೂಚನೆಗಳು ಕಂಡುಬರುತ್ತಿವೆ. ಈ ಮಧ್ಯೆ ಒಂದೊಮ್ಮೆ ಯಾರೋ ಹಾರಿಸಿರಬಹುದಾದ ಗುಂಡನ್ನು ಹೊರತೆಗೆದು ಅಲ್ಲಾಗಿದ್ದ ಗಾಯ ದಿಂದ ಕೀವು ತೆಗೆದು ಚೂರ್ಣ ಸಿಂಪಡಿಸಿ ಶುಶ್ರೂಷೆ ಮಾಡಲಾಗುತ್ತಿದೆ.

ಸಹಿಹದ ಹಾಡಿಗಳ ಮೇಲೆ ದಿಢೀರ್ ದಾಳಿ



ಸ್ಥಳಾಂತರ ಕಾರ್ಯಾಚರಣೆ ಮುನ್ನ ಚುಚ್ಚುಮದ್ದು ನೀಡಿಕೆ

ನಡೆಸುತ್ತಿದ್ದ ಹಾಗೂ ಅಲ್ಲಿಯ ಜನಗಳ ನೆಮ್ಮದಿಯನ್ನು ಕೆಡಿಸಿದ್ದ ದೈತ್ಯ ಈಗ ಮಾನವ ಶಕ್ತಿಗೆ ಶರಣಾಗಿದ್ದಾನೆ. ತಮ್ಮ ದುಃಖ ದುಮ್ಮಾನಗಳಿಗೆ ಕಾರಣನಾಗಿದ್ದವನನ್ನು ಕಾಣಲು ಜನ ಕಿಕ್ಕಿರಿದು ಸೇರಿದ್ದಾರೆ. ಈಗ ದೈತ್ಯ ಆನೆಯ ಬಲಪೃಷ್ಠದ ಮೇಲೆ ಇನ್ನೊಂದು ಚುಚ್ಚುಮದ್ದನ್ನು ಕೊಡುತ್ತಿದ್ದಾರೆ ವೈದ್ಯರು.

ಕಟ್ಟೆಪುರದ ದೈತ್ಯನನ್ನು ಹಗ್ಗಗಳಿಂದ ಕಟ್ಟುವ ಕೆಲಸ ಮುಗಿದಿದೆ. ಔಷಧಿ ತನ್ನ ಪರಿಣಾಮವನ್ನು ಬೀರಿದೆ. ಆನೆಯನ್ನು ನಿಶ್ಚೇಷ್ಟಿತಗೊಳಿಸುವ ಕೆಲಸ ಈಗ ಅಂತಿಮ ಘಟ್ಟವನ್ನು ತಲುಪಿದೆ. ಈಗ ಇನ್ನೊಂದು ಪುನಶ್ಚೇತನಕರ ಚುಚ್ಚುಮದ್ದನ್ನು ನೀಡಬೇಕಾಗಿದ್ದು, ಸೇರಿರುವ ಜನರನ್ನು ವೈದ್ಯರು ದೂರ ಹೋಗಲು ಕೇಳುತ್ತಿದ್ದಾರೆ. ಒಂದು ವೇಳೆ ಆನೆಗೆ ಸ್ಮೃತಿ ಬಂದುಬಿಟ್ಟರೆ ಆಗಬಹುದಾದ ಅನಾಹುತ ಅಪಾರ.

ಅರೆ, ಈಗ ಚುಚ್ಚಿದ ಮದ್ದು ಅದೆಷ್ಟು ಪರಿಣಾಮಕರ! ಔಷಧ ದೇಹದ ಒಳಸೇರಿದ್ದೇ ತಡ, ಆನೆ ಮೇಲೇಳಲು ಯತ್ನಿಸುತ್ತಿದೆ! ಅರವತ್ತಮೂರು ನಿಮಿಷಗಳ ನಂತರ ಅದು ಮತ್ತೆ ವಾಸ್ತವಕ್ಕೆ ಮರಳುತ್ತಿದೆ. ಸಲಗ ಮೇಲೇಳಲು ಕುಮ್ಕಿಗಳು ಸಹಾಯಮಾಡುತ್ತವೆ. ಆದರೆ ಸಲಗ ಮಾತ್ರ ಮಾದಕ ಸ್ಥಿತಿಯಲ್ಲೇ ಇದೆ. ಹೀಗಿದ್ದೂ ಅದು ಮೊದಲಿನ ಮುಂಗೋಪ ಹಾಗೂ ಹಠವನ್ನು ಬಿಟ್ಟಂತಿಲ್ಲ. ತನ್ನ ಕಟ್ಟುಗಳನ್ನು ಕಾಲುಗಳಿಂದ ಹಾಗೂ ಸೊಂಡಿಲಿನಿಂದ ಕಿತ್ತೆಸೆಯಲು ಶತಪ್ರಯತ್ನ ನಡೆಸಿದೆ. ಇಲಾಖೆಯ ಆನೆಗಳ ಮೇಲೆ ಎರಗಿ ಹೋಗುವ ಸನ್ನಾಹದಲ್ಲೂ ಇದೆ. ಪ್ರಯತ್ನಗಳೆಲ್ಲಾ ವಿಫಲಗೊಂಡ ಮೇಲೆ ಸಲಗ ಸುಮ್ಮನೇ ಶರಣಾಗಿದೆ.

ಈ ಕಾರ್ಯಾಚರಣೆಗೆ ತಗಲಿದ ಒಟ್ಟು ಅವಧಿ ಮೂರು ಗಂಟೆ ನಲವತ್ತೈದು ನಿಮಿಷಗಳು. ಕೊನೆಗೂ ಮೂರು ಕಿಲೋಮೀಟರ್ ದೂರದಲ್ಲಿದ್ದ ಶಿಬಿರಕ್ಕೆ ಅದನ್ನು ಕರೆತಂದು ಅದಕ್ಕೆಂದೇ ಮೀಸಲಿರಿಸಿದ್ದ ಬಲಿಷ್ಠ ಮರಗಳಿಗೆ ಬಂಧಿಸಲಾಯಿತು.

ಇಷ್ಟೆಲ್ಲ ಮುಗಿದ ಮೇಲೆಯೇ ಕಾರ್ಯಾಚರಣೆಯಲ್ಲಿ ತೊಡಗಿದ ಜನಕ್ಕೆ ನೆಮ್ಮದಿ, ಸಮಾಧಾನ. ಇದು ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಇತಿಹಾಸದಲ್ಲಿ ಹೇಗೋ [illegible] ನನ್ನ ಜೀವನದಲ್ಲೂ ಒಂದು ಸ್ಮರಣೀಯ ದಿನ.

ತುಂಬಿಟ್ಟ ನೀರನ್ನು ಸಲಗ ಕುಡಿಯಲಾರದೇನೋ ಎಂಬ ಭಾವನೆಯಿಂದ ನೀರಿನ ಹೊಂಡವಿದೆಯೆಂಬ ಭ್ರಮೆ ಬರುವಂತೆ ಅದರ ಸಮೀಪವೇ ನೆಲದಲ್ಲೊಂದು ಪೀಪಾಯಿಯನ್ನು ಭೂಮಟ್ಟಕ್ಕೆ ಹುದುಗಿಸಿ ನೀರು ತುಂಬಲಾಗಿದೆ.

ಈ ಸಲಗವನ್ನು ಹಿಡಿದ ನಂತರ ಇದೇ ರೀತಿ ಇನ್ನೂ ಹಲವು ಕಾಡಾನೆಗಳನ್ನು ಹಿಡಿಯಲಾಯಿತೆಂದು ನಂತರ ನನಗೆ ಗೊತ್ತಾಯಿತು. ಈ ಪೈಕಿ ಆರು ಸಲಗಗಳು ಉಳಿದೆರಡು ದಂತರಹಿತ ಆನೆಗಳು. ಇವಕ್ಕೆ ಸಲಗಕ್ಕಿಂತಲೂ ಹೆಚ್ಚು ಬಲವಂತೆ. ಇವುಗಳಿಗೆ 'ಮಖನಾ' ಎಂದು ಹೆಸರು. ಸೋಜಿಗವೆಂದರೆ ಒಂದಾದರೂ ಹೆಣ್ಣಾನೆ ಅಥವಾ ಮರಿಯಾನೆ ಸಿಗದೆ ಹೋದುದು. ಹೆಣ್ಣಾನೆಯ ಸಂಖ್ಯೆ ಕಡಿಮೆಯಾಗುತ್ತಿರುವ ಸೂಚನೆ ಇದಾಗಿರಬಹುದೆ?

ಅಂದ ಹಾಗೆ ಸುಮ್ಮನಿರುವ ನನ್ನ ವರದಿಗಾರ ಮಿತ್ರನಿಗಷ್ಟು ಕೆಲಸ ಹಚ್ಚಿ ಕೊಡುವೆ.

★

ಈಗ ಮತ್ತೆ ವರದಿಗಾರನಾದ ನನ್ನ ಪಾಳಿ. ಕಟ್ಟೆಪುರದ ದೈತ್ಯನನ್ನು ಸಂರಕ್ಷಿತ ಸ್ಥಳಕ್ಕೆ ಕರೆದೊಯ್ದು ಅಲ್ಲಿ ಅವನಿಗೆ ಸ್ವಾತಂತ್ರ್ಯ ದೊರಕಿಸಿಕೊಡುವ ವ್ಯವಸ್ಥೆಯಲ್ಲಿದ್ದಾರೆ ಅರಣ್ಯ ಇಲಾಖೆಯ ಅಧಿಕಾರಿಗಳು. ಇಂದು ಅಂದರೆ 17 ಮಾರ್ಚ್ 1987 ಇವನ ಇತಿಹಾಸದ ಹೊಸ ಅಧ್ಯಾಯದ ಪ್ರಾರಂಭ.

ವಿಶೇಷವಾಗಿ ಭದ್ರಪಡಿಸಲಾಗಿರುವ ಟ್ರಕ್ಕಿನಲ್ಲಿ ಈ ದೈತ್ಯನನ್ನು ಸಂರಕ್ಷಿತ ಸ್ಥಳ ಅಂದರೆ ನಾಗರಹೊಳೆ ಅಭಯಾರಣ್ಯಕ್ಕೆ ಕರೆದೊಯ್ಯಲು ಸರ್ವಸಿದ್ಧತೆಗಳೂ ನಡೆದಿವೆ. ಪ್ರಯಾಣಕಾಲದಲ್ಲಿ ಮಾದಕ ಸ್ಥಿತಿಯಲ್ಲಿರಲು ಇವನಿಗೆ ಮತ್ತೊಂದು ಸೂಜಿಯನ್ನು ಕೊಟ್ಟ ನಂತರ ಕುಮ್ಕಿಗಳ ಸಹಾಯದಿಂದ ಇವನನ್ನು ಲಾರಿಗೆ ಸಾಗಿಸಲು ಅನುಕೂಲವಾಗುವಂತೆ ನಿರ್ಮಿಸಲಾಗಿರುವ ವಿಶೇಷ ದಿಬ್ಬದತ್ತ ಕರೆದೊಯ್ಯಲಾಗುತ್ತಿದೆ. ಅಲ್ಲಿ ಬಹು ಪ್ರಯಾಸದಿಂದ ಟ್ರಕ್ಕಿಗೆ ಸಾಗಿಸಲಾಗುತ್ತದೆ. ಇದರಲ್ಲಿ ವಿಶೇಷ ಶ್ರಮ ವಹಿಸಿದ ಇಲಾಖೆಯ ಕುಮ್ಕಿ 'ಭಾಸ್ಕರ'ನ ಸೇವೆಯಂತೂ ಅವಿಸ್ಮರಣೀಯ. ಹಾಗಾಗಿ

ಅವನು ಇಲಾಖೆಯ ಎಲ್ಲರ ಅಚ್ಚುಮೆಚ್ಚು. ಜನರ ಹರ್ಷೋದ್ಗಾರಗಳ ನಡುವೆ ಲಾರಿ ನಾಗರಹೊಳೆಯತ್ತ ನಿಧಾನವಾಗಿ ಚಲಿಸುತ್ತಿದೆ. ಅಂದಹಾಗೆ ಕಪಿಹೃದಯದ ನನ್ನ ಮಿತ್ರ ಮೂಕವಿಸ್ಮಿತನಾಗಿ ನಿಂತಿದ್ದಾನೆ. "ಏನು ಗೆಳೆಯ, ಏನು ಸಮಾಚಾರ?"

"ಅತ್ತ ನೋಡು ವನ್ಯ ಪ್ರಾಣಿಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿರುವ, ಅವುಗಳ ದಂತ ಚರ್ಮ ಇತ್ಯಾದಿಗಳಿಗಾಗಿ ಅವನ್ನು ಬೇಟೆಯಾಡುವ ನಮ್ಮನ್ನು ನಾವೇ ಮೊದಲು ಹಳಿದುಕೊಳ್ಳಬೇಕು. ಅಕೋ, ಅಲ್ಲಿ ದೂರದಲ್ಲಿ, ಇಲಾಖೆಯ ಚಿರಸಹಾಯಕರ ಆನೆಯೊಂದು ನಿಂತಿದೆ ಕಂಡಿತಾ? ಅದರ ಸುತ್ತ ಹಾಡಿಯ ಜನ ಕೈತಾಳ ತಟ್ಟುತ್ತಾ ಹಾಡುತ್ತಾ ಕುಣಿಯುತ್ತಾ ಸಂಭ್ರಮದಲ್ಲಿ ನಲಿಯುತ್ತಿದ್ದಾರೆ. ಅವರ ಸಂಭ್ರಮದಲ್ಲಿ ತಾನೂ ಪಾಲ್ಗೊಂಡಿದ್ದಾನೆ ಗಜರಾಜ".

★

ಗೆಳೆಯಾ, ಇಲಾಖೆ ಈಗ ಯಾವುದೇ ವನ್ಯಜೀವಿಯನ್ನು ನಿಶ್ಚೇಷ್ಟಿತಗೊಳಿಸಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಬಗ್ಗೆ ಅಚಲ ನಂಬಿಕೆಯುಳ್ಳದಾಗಿದೆ. ಮದಗಜಕ್ಕೊಂದು ಮರುವಸತಿ ದೊರಕಿಸಿಕೊಡುವಲ್ಲಿ ಯಶಸ್ವಿಯಾದ ಅರಣ್ಯಾಧಿಕಾರಿಗಳ ಸಿಬ್ಬಂದಿಯ ಕೆಲವೇ ಶ್ರಮಿಕರ ಹಾಗೂ ಕೆಲವೇ ಕುಮ್ಕಿಗಳ ಸಾಹಸ ಹಾಗೂ ಸಹಕಾರ ಅನನ್ಯ ಅನೂಪ್ಯ. ●

ಸರ್ವಾಧಿಕಾರಿಗಳು ಹುಲಿಯ ಮೇಲೆ ಸವಾರಿ ಮಾಡುವರು. ಅವರಿಗೆ ಕೆಳಗಿಳಿಯಲು ದಿಗಿಲು. ದಿನಕಳೆದಂತೆ ಹುಲಿಗೆ ಹಸಿವು ಹೆಚ್ಚುತ್ತಿರುತ್ತದೆ.

● ವಿನ್‌ಸ್ಟನ್ ಚರ್ಚಿಲ್

ಉಳಿತಾಯದ ಹಣ

ಅರಬ್ ಗಣರಾಜ್ಯದ ಪ್ರಥಮ ಅಧ್ಯಕ್ಷರಾಗಿದ್ದ ಹಜರತ್ ಅಬೂಬಕರ್ (ಕ್ರಿಸ್ತಶಕ 572-632) ಆ ಪದವಿಗೆ ಬರುವವರೆಗೂ ಬಟ್ಟೆ ಅಂಗಡಿಯ ವರ್ತಕರಾಗಿದ್ದರು. ಆ ನಂತರ ಈ ಕಸಬನ್ನು ತೊರೆದು ಜೀವನ ನಡೆಸುವುದಕ್ಕಾಗಿ ಸರಕಾರದ ಖಜಾನೆಯಿಂದ ಸಂಬಳ ಪಡೆಯುತ್ತಿದ್ದರು.

ಒಂದು ದಿನ ಹಜರತರ ಪತ್ನಿಗೆ ಬಾಸುಂದಿ ತಿನ್ನಬೇಕೆಂಬ ಆಸೆಯುಂಟಾಯಿತು. ಆಕೆ ಪತಿಯೊಂದಿಗೆ ತನ್ನ ಆಸೆಯನ್ನು ಈಡೇರಿಸಲು ಹೇಳಿದಾಗ ಹಜರತರು, "ಸಿಹಿ ತಿಂಡಿ ಮಾಡಿಸುವಷ್ಟು ಹೆಚ್ಚುವರಿ ಹಣ ನನ್ನಲ್ಲಿಲ್ಲವಲ್ಲ" ಎಂದರು ಅಸಹಾಯಕರಾಗಿ.

"ನಿಮ್ಮಲ್ಲಿಲ್ಲದಿದ್ದರೆ ಚಿಂತೆಯಿಲ್ಲ. ನೀವು ಮನೆ ಖರ್ಚಿಗೆ ಕೊಟ್ಟ ಹಣದಲ್ಲಿ ಸ್ವಲ್ಪ ಸ್ವಲ್ಪವೇ ಉಳಿಸಿ ಒಟ್ಟು ಮಾಡುತ್ತೇನೆ. ಆಮೇಲೆ ಬಾಸುಂದಿ ತಯಾರಿಸೋಣ" ಎಂದಳು ಆಕೆ. ಹಜರತ್ ಅದಕ್ಕೊಪ್ಪಿದರು.

ಕೆಲವು ದಿನ ಕಳೆಯುತ್ತಲೇ ಅವರ ಪತ್ನಿ ಒಟ್ಟುಮಾಡಿದ ಹಣವನ್ನು ಪತಿಯ ಕೈಗಿತ್ತು ಬಾಸುಂದಿ ತಯಾರಿಸಲು ಬೇಕಾದ ಸಾಮಗ್ರಿಗಳನ್ನು ತರುವಂತೆ ಹೇಳಿದಳು.

ಆಗ ಹಜರತ್ ಅಚ್ಚರಿಯಿಂದ "ಇದೇನು ಉಳಿತಾಯವಾಗುವಷ್ಟು ಹೆಚ್ಚು ಹಣವನ್ನು ಸರಕಾರದ ಖಜಾನೆಯಿಂದ ನಾನು ಪಡೆಯುತ್ತಿದ್ದೇನೆಯೆ? ಈ ಹಣ ಪ್ರಜೆಗಳಿಂದ ಬಂದದ್ದು. ನಾವದನ್ನು ಬಳಸಬಾರದು" ಎಂದವರೇ ಆ ಎಲ್ಲಾ ಹಣವನ್ನು ಖಜಾನೆಗೇ ಹಿಂತಿರುಗಿಸಿದರು.

-ಪ. ರಾಮಕೃಷ್ಣ ಶಾಸ್ತ್ರಿ



—ಡಾ॥ ಜಿ.ಎಸ್. ದೀಕ್ಷಿತ್

ಮಿಥಿಕ್ ಸೊಸೈಟಿಯ ಶ್ರೀಕಂಠಯ್ಯನವರು

ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಮಿಥಿಕ್ ಸೊಸೈಟಿ; ಇತಿಹಾಸ ಮತ್ತು ಸಂಸ್ಕೃತಿಗಳ ವಿದ್ಯಾರ್ಥಿಗಳಿಗೆ ಸುಪರಿಚಿತ. ಈ ವಿಷಯಗಳಿಗೆ ಸಂಬಂಧಪಟ್ಟ ಒಂದು ಸುಸಜ್ಜಿತ ಗ್ರಂಥಾಲಯ, ಉಪನ್ಯಾಸಗಳು ಮತ್ತು ಗೋಷ್ಠಿಗಳು ಮತ್ತು quarterly Journal of the Mythic Society ಎನ್ನುವ ತ್ರೈಮಾಸಿಕ ಇವುಗಳನ್ನು ನಡೆಸುವುದರ ಮೂಲಕ ಈ ಸಂಸ್ಥೆ ಭಾರತಾದ್ಯಂತ ಪ್ರಸಿದ್ಧ. ಸಂಸ್ಥೆಯನ್ನು ಈ ಸುಸ್ಥಿತಿಗೆ ತರಲು ಶ್ರಮಿಸಿದವರಲ್ಲಿ ಸಕಲೇಶಪುರದ ಶ್ರೀಕಂಠಯ್ಯನವರು ಅಗ್ರಗಣ್ಯರು. ಕನ್ನಡ ನಾಡಿನಲ್ಲೆಲ್ಲ ಮನೆಮಾತಾಗಿರುವ ಬಿ.ಎಂ. ಶ್ರೀಕಂಠಯ್ಯನವರು ಇವರ ಷಡ್ಡಕರು. ಅಲ್ಲದೆ ಸ್ನೇಹಿತರೂ ಆಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಬಿ.ಎಂ.ಶ್ರೀ. ಹೇಗೋ ಹಾಗೆ ಮಿಥಿಕ್ ಸೊಸೈಟಿಗೆ ಸಕಲೇಶಪುರದ ಶ್ರೀಕಂಠಯ್ಯನವರು. ಬಿ.ಎಂ.ಶ್ರೀ.ಯವರ ಅಶ್ವತ್ಥಾಮನ್ ನಾಟಕದ ಮೇಲೆ ಇಂಗ್ಲೀಷಿನಲ್ಲಿ ಅತ್ಯಮೂಲ್ಯ ವಿಮರ್ಶೆಯನ್ನು ಇವರು ಬರೆದಿದ್ದಾರೆ. ಪರಿಷತ್ತಿನ ಆಜೀವ ಸದಸ್ಯರಾಗಿದ್ದಲ್ಲದೆ, ಪರಿಷತ್ತಿಗೆ ಅನೇಕ ಪುಸ್ತಕಗಳನ್ನೂ ಬಿ.ಎಂ.ಶ್ರೀ.ಯವರ ಭಾವಚಿತ್ರವನ್ನೂ ಇವರು ದಾನವಾಗಿತ್ತಿದ್ದಾರೆ. ಬಿ.ಎಂ.ಶ್ರೀ.ಯವರು ಮಿಥಿಕ್ ಸೊಸೈಟಿಯಲ್ಲಿ ಕನ್ನಡ ಛಂದಸ್ಸು ಮತ್ತು ಕನ್ನಡ ನಾಟಕಗಳ ಮೇಲೆ ಭಾಷಣ ಮಾಡಿದ್ದರು. ಹೀಗೆ ಒಬ್ಬರ ಕೆಲಸದಲ್ಲಿ ಇನ್ನೊಬ್ಬರು ನೆರವಾಗುತ್ತಿದ್ದರು.

ಬಿ.ಎಂ.ಶ್ರೀಯವರ ಕನ್ನಡ ಸೇವೆಯನ್ನು ಮುಂದುವರಿಸಲು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವೆನ್ನುವ ಸಂಸ್ಥೆಯನ್ನು ಪ್ರೊ॥ ಎಂ.ವಿ. ಸೀತಾರಾಮಯ್ಯನವರು ಇತ್ತೀಚೆಗೆ ಸ್ಥಾಪಿಸಿದ್ದಾರೆ. ಈ ಸಂಸ್ಥೆಯವರೂ ಮಿಥಿಕ್ ಸೊಸೈಟಿ

ಯವರೂ ಕಲೆತು, ಮಿಥಿಕ್ ಸೊಸೈಟಿಯಲ್ಲಿ ಸಕಲೇಶಪುರದ ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವವನ್ನು 1986ರ ಅಕ್ಟೋಬರ್ 18-19ರಂದು ಆಚರಿಸಿದರು. ಆ ಸಂದರ್ಭದಲ್ಲಿ ವಿಜಯನಗರ ಇತಿಹಾಸದ ಮೇಲೆ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿದ್ದರು. ಈ ವಿಷಯವನ್ನು ಆರಿಸಲು ಕಾರಣ, ಅದರಲ್ಲಿ ಶ್ರೀಕಂಠಯ್ಯನವರು ನಿಷ್ಣಾತರಾಗಿದ್ದುದು. Founders of Vijayanagar ಎನ್ನುವ ಗ್ರಂಥ ಅವರ ಸಂಶೋಧನೆಯ ಫಲ. ಈ ಗ್ರಂಥದಲ್ಲಿ ಶ್ರೀಕಂಠಯ್ಯನವರು ವಿಜಯನಗರ ಸಾಮ್ರಾಜ್ಯವನ್ನು ವಿದ್ಯಾರಣ್ಯರ ಪ್ರೇರಣೆಯಿಂದ ಹರಿಹರ ಬುಕ್ಕರು ಸ್ಥಾಪಿಸಿದರೆಂದೂ ಮತ್ತು ಇವರು ಹೊಯ್ಸಳರ ಅಧಿಕಾರಿಗಳು ಮತ್ತು ವಾರಸುದಾರರೆಂದೂ ವಾದಿಸಿದ್ದಾರೆ.

ಶ್ರೀಕಂಠಯ್ಯನವರು ಹಾಸನ ಜಿಲ್ಲೆಯವರು. ಅರಕಲಗೂಡಿನಲ್ಲಿ ಜುಲೈ 18, 1886ರಂದು ಅವರ ಜನ್ಮ. ಅವರ ತಂದೆ ಮಂಜಯ್ಯನವರು ವಕೀಲರು. ಶ್ರೀಕಂಠಯ್ಯನವರ ವಿದ್ಯಾಭ್ಯಾಸ ಹಾಸನ, ಬೆಂಗಳೂರು, ಮದ್ರಾಸಿನಲ್ಲಿ ಆಯಿತು. 1907ರಲ್ಲಿ ಅವರು ಬೆಂಗಳೂರಿನಲ್ಲಿ ವಕೀಲಿಯನ್ನು ಆರಂಭಿಸಿದರು. ಅವರ ತಮ್ಮ ವೇಳೆಯನ್ನೆಲ್ಲಾ ಈ ವೃತ್ತಿಯಲ್ಲಿ ಕಳೆಯಲಿಲ್ಲ. ಅವರ ಆಸಕ್ತಿಗಳು ಅನೇಕ. ಇತಿಹಾಸದ ಅಧ್ಯಯನ ಅದರಲ್ಲಿ ಮುಖ್ಯ. ಹಾಸನ ಜಿಲ್ಲೆಯವರಾದುದರಿಂದ ಹೊಯ್ಸಳರ ಇತಿಹಾಸ ಅವರ ಮೊಟ್ಟ ಮೊದಲಿನ ಅಧ್ಯಯನದ ವಿಷಯವಾಯಿತು. 1909ರಲ್ಲಿ ಮಿಥಿಕ್ ಸೊಸೈಟಿಯನ್ನು ಫಾದರ್ ಟಬಾರ್ಡ ಮತ್ತು ಅವರ ಸ್ನೇಹಿತರು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಅದರ ಶೈಶವಾವಸ್ಥೆಯಲ್ಲಿ ಟಬಾರ್ಡರು ಅದನ್ನು ಪೋಷಿಸಿದರು. ಅವರು ಶ್ರೀಕಂಠಯ್ಯನವರ ಹೊಯ್ಸಳ ಇತಿಹಾಸದ ಮೇಲಿನ ವ್ಯಾಖ್ಯಾನಗಳನ್ನು ಮಿಥಿಕ್ ಸೊಸೈಟಿಯಲ್ಲಿ ಏರ್ಪಡಿಸಿದರು. ಮುಂದೆ ಅವನ್ನು ಮಿಥಿಕ್ ಸೊಸೈಟಿಯ ತ್ರೈಮಾಸಿಕದಲ್ಲಿ ಪ್ರಕಟಿಸಿದರು. ಈ ಲೇಖನಗಳು, ಅದರಲ್ಲಿಯೂ ಹಳೇಬೀಡಿನ ವಿಸ್ತೃತ ವರ್ಣನೆ, ಇವತ್ತಿಗೂ ಹೊಯ್ಸಳ ಇತಿಹಾಸದ ವಿದ್ಯಾರ್ಥಿಗಳಿಗೆ ಉಪಯುಕ್ತ. ಈ ವ್ಯಾಖ್ಯಾನಗಳ ಮತ್ತು ಲೇಖನಗಳ ಮೂಲಕ ಟಬಾರ್ಡ ಮತ್ತು ಶ್ರೀಕಂಠಯ್ಯನವರು ನಿಕಟರಾದರು. ಟಬಾರ್ಡರು ಶ್ರೀಕಂಠಯ್ಯನವರನ್ನು ಮಿಥಿಕ್ ಸೊಸೈಟಿಯ ಕಾರ್ಯ ನಿರ್ವಹಣೆಯಲ್ಲಿ ತೆಗೆದುಕೊಂಡರು. ಹೀಗೆ 1917ರಲ್ಲಿ ಪ್ರಾರಂಭವಾದ ಶ್ರೀಕಂಠಯ್ಯ ಮಿಥಿಕ್ ಸೊಸೈಟಿಗಳ ಸಂಬಂಧ 40 ವರ್ಷ ಅವ್ಯಾಹತವಾಗಿ ನಡೆಯಿತು. 1923 ರಿಂದ 1956ರ ವರೆಗೂ ಇವರು ಮಿಥಿಕ್ ಸೊಸೈಟಿಯ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿಯೂ ಸೊಸೈಟಿಯ ತ್ರೈಮಾಸಿಕ ಸಂಪಾದಕರಾಗಿಯೂ ಅದರ ಸರ್ವತೋಮುಖ ಬೆಳಗೆಯನ್ನು ಸಾಧಿಸಿದರು. ಈ ತ್ರೈಮಾಸಿಕದಲ್ಲಿ ಆಗಿನ ಕಾಲದ ದಕ್ಷಿಣ ಭಾರತದ ಮುಖ್ಯ ಇತಿಹಾಸಕಾರರಾದ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಆರ್. ನರಸಿಂಹಾಚಾರ್, ವಿ. ವೆಂಕಟಸುಬ್ಬಯ್ಯ, ಎಂ.ಎಚ್. ಕೃಷ್ಣ, ಕೆ.ವಿ. ಸುಬ್ರಹ್ಮಣ್ಯ ಅಯ್ಯರ್ ಮುಂತಾದವರ ಲೇಖನಗಳಿವೆ.

ಸಂಪಾದಕ ಶ್ರೀಕಂಠಯ್ಯನವರ ಲೇಖನಗಳು ಇನ್ನೆಲ್ಲರ ಲೇಖನಗಳಿಗಿಂತ ಸಂಖ್ಯೆಯಲ್ಲಿ ಹೆಚ್ಚಾಗಿವೆ. ಅವು ಇತಿಹಾಸ, ಸಂಸ್ಕೃತಿ ಮತ್ತು ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿವೆ. ಹೊಯ್ಸಳ ಮತ್ತು ವಿಜಯನಗರ ಇತಿಹಾಸಗಳ ಕುರಿತ ಇವರ ಲೇಖನಗಳ ಬಗೆಗೆ ಮೇಲೆ ಹೇಳಿದೆ. ಒಡೆಯರರ ಕಾಲದ ಇತಿಹಾಸಕ್ಕೂ ಅದರಲ್ಲಿಯೂ, ನಾಲ್ವಡಿ ಕೃಷ್ಣರಾಜರ ಇತಿಹಾಸದ ಅಧ್ಯಯನಕ್ಕೆ ಅನುಕೂಲವಾಗುವ ಲೇಖನಗಳೂ ಇವೆ. ಶ್ರೀಕಂಠಯ್ಯನವರು ಭಾರತೀಯ ಸಂಸ್ಕೃತಿಯ ಅಧ್ಯಯನಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ. ಅಶೋಕ, ಶಂಕರಾಚಾರ್ಯ, ವಿದ್ಯಾರಣ್ಯ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರವೀಂದ್ರನಾಥ ಠಾಕೂರ, ಅರವಿಂದ, ಶ್ರೀ ರಮಣ, ಮಹಾತ್ಮಗಾಂಧಿ, ರಾಧಾಕೃಷ್ಣನ್ ಇವರೆಲ್ಲರ ಬಗೆಗೆ ಆಧ್ಯಾತ್ಮಿಕವಾಗಿಯೂ ಸಾಂಸ್ಕೃತಿಕವಾಗಿಯೂ ಇವರು ಬರೆದಿದ್ದಾರೆ. ಕರ್ನಾಟಕದವರಾದ ಬಿ. ಶಾಮರಾವ್, ಸರ್ ಎಂ. ವಿಶ್ವೇಶ್ವರಯ್ಯ, ಆರ್. ನರಸಿಂಹಾಚಾರ್, ಎನ್.ಎಸ್. ಸುಬ್ಬರಾವ್, ಬಿ.ಎಂ.ಶ್ರೀ, ಎಂ.ಎಚ್. ಕೃಷ್ಣ ಮುಂತಾದವರ ಬಗೆಗೂ ಶ್ರೀಕಂಠಯ್ಯ ಬರೆದಿದ್ದಾರೆ.

ಪ್ರವಾಸ ಸಾಹಿತ್ಯಕ್ಕೆ ಇವರ ಕಾಣಿಕೆ ಅಷ್ಟಿಷ್ಟಲ್ಲ. ಹಳೇಬೀಡು, ಚಿತ್ರದುರ್ಗ ಮತ್ತು ಅನುರಾಧಾಪುರಗಳ ಬಗೆಗಿನ ಇವರ ಬರವಣಿಗೆ ಆ ಸ್ಥಳಗಳ ಕೈಪಿಡಿಗಳಾಗಬಲ್ಲವು. ಈ ದಿಶೆಯಲ್ಲಿ ಕೈಲಾಸ ಪರ್ವತ, ಮಾನಸ ಸರೋವರ ಬಗೆಗಿನ ಚಿಕ್ಕ ಹೊತ್ತಿಗೆ ಶ್ರೀಯುತರ ಪ್ರವಾಸ ಲೇಖನಗಳಲ್ಲೇ ಅತ್ಯುತ್ತಮವೆನ್ನಬಹುದು. ನಾಲ್ವಡಿ ಕೃಷ್ಣರಾಜ ಒಡೆಯರರು ತಮ್ಮ ಪರಿವಾರದೊಂದಿಗೆ, 1931ರಲ್ಲಿ ಈ ಪವಿತ್ರ ಸ್ಥಳಗಳ ಯಾತ್ರೆಯನ್ನು ಮಾಡಿದಾಗ, ಪರಿವಾರದವರು ಪ್ರವಾಸದ ವಿವರಗಳನ್ನು ಡೈರಿಯಲ್ಲಿ ಬರೆದಿಟ್ಟರು. ಈ ವಿವರಗಳನ್ನು ಶ್ರೀಕಂಠಯ್ಯನವರಿಗೆ ಕೊಟ್ಟು, ಅವರಿಂದ ಮಹಾರಾಜರು ಈ ಯಾತ್ರೆಯ ವರದಿಯನ್ನು ತಯಾರು ಮಾಡಿಸಿದರು. ಈ ಸ್ಥಳಗಳನ್ನು ಮೊದಲು ಸಂದರ್ಶಿಸಿದ ಸ್ವೆನ್ ಹೆಡಿನ್ ಮತ್ತು ಎಸ್.ಆರ್. ಕಶ್ಯಪ್ ಮುಂತಾದವರ ಬರವಣಿಗೆಗಳನ್ನು ತಮ್ಮ ವರದಿಯನ್ನು ಬರೆಯುವಾಗ ಶ್ರೀಕಂಠಯ್ಯನವರು ಬಳಸಿಕೊಂಡಿದ್ದಾರೆ. ದಾರಿಯಲ್ಲಿ ಸಿಗುವ ಊರುಗಳ, ಪಕ್ಷಿ ಪ್ರಾಣಿಗಳ ಮತ್ತು ಜನಗಳ ವರ್ಣನೆಗಳಿಂದ ಕೂಡಿದ ಈ ಪುಸ್ತಕ ಯಾತ್ರಿಕರಿಗೆ ಹಿಮಾಲಯದ ಯಾತ್ರೆಯನ್ನು ಮಾಡಿಸುತ್ತದೆ. ಮಾನಸ ಸರೋವರದ ಆಕರ್ಷಣೆ ಇವರ ಬರಹದಲ್ಲಿ ಎದ್ದು ನಿಲ್ಲುತ್ತದೆ.

ಶ್ರೀಕಂಠಯ್ಯನವರಿಗೆ ಸನಾತನ ಧರ್ಮದಲ್ಲಿ ಅಚಲ ವಿಶ್ವಾಸ. ಇವರು ಬರೆದ 'ಆದಿ ಶಂಕರಾಚಾರ್ಯ' ಹೊತ್ತಿಗೆಯನ್ನು ಮೆಚ್ಚಿ ಕಂಚಿ ಶಂಕರಾಚಾರ್ಯರು "ಐತಿಹಾಸಿಕ ರತ್ನ"ವೆಂಬ ಬಿರುದನ್ನು ಕೊಟ್ಟರು. ವಿಶ್ರಾಂತಿ ಅವಶ್ಯವೆನಿಸಿದಾಗ ಪಾಂಡಿಚೆರಿಯ ಅರವಿಂದಾಶ್ರಮಕ್ಕಾಗಲಿ, ತಿರುವಣ್ಣಾಮಲೆಯ ರಮಣ ಮಹರ್ಷಿಗಳ ಆಶ್ರಯಕ್ಕಾಗಲಿ ಹೋಗಿ ಕಾಂತಿಯುತರಾಗಿ ಹಿಂತಿರುಗುತ್ತಿದ್ದರು. ರಮಣ ಮಹರ್ಷಿಗಳ ಆಶ್ರಮದ ಧರ್ಮದರ್ಶಿಗಳು ಕೂಡ ಆಗಿದ್ದರು. ಗುಬ್ಬಿಯ ಚಿದಂಬರಾಶ್ರಮಕ್ಕೆ ಸರಕಾರದಿಂದ ಸಹಾಯವನ್ನು ದೊರಕಿಸಿ ಕೊಟ್ಟರು. ಮಲ್ಲಾಡಿ ಹಳ್ಳಿಯಲ್ಲಿ ರಾಘವೇಂದ್ರಸ್ವಾಮಿಗಳು ನಡೆಸುತ್ತಿರುವ ವಿದ್ಯಾಪ್ರಸಾರ ಕಾರ್ಯದಲ್ಲಿಯೂ ನೆರವಾದರು.

ಆಧ್ಯಾತ್ಮದಲ್ಲಿಯಷ್ಟೇ ಇವರಿಗೆ ಸಮಾಜಸೇವೆಯಲ್ಲಿಯೂ ಆಸ್ಥೆ. ಬೆಂಗಳೂರು ನಗರದ ಕೈಪಿಡಿಯೊಂದನ್ನು ಇವರು ಬರೆದಿದ್ದಾರೆ. ಬೆಂಗಳೂರು ಮುನಿಸಿಪಲ್ ಕಾರ್ಪೊರೇಷನ್ನಿಗೆ ಇವರು ಮೊದಲ ಕಾನೂನು ಸಲಹೆಗಾರರಾಗಿದ್ದರು. ಬಸವನಗುಡಿ ಸಹಕಾರಿ ಸಂಸ್ಥೆಯ ಅಧ್ಯಕ್ಷರು, ಮೈಸೂರು ದೇಶದ ಕೇಂದ್ರ ಸಹಕಾರಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಉಪಾಧ್ಯಕ್ಷರೂ ಆಗಿದ್ದರು. ಮೆಸಾನಿಕ ಲಾಜ್‌ನ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದರು. ಬೆಂಗಳುರು ಜಿಲ್ಲಾ ಬೋರ್ಡ್, ಪ್ರಜಾಪ್ರತಿನಿಧಿ ಸಭೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನ ಸದಸ್ಯರಾಗಿದ್ದರು. ಸೆನೆಟ್ಟಿನಲ್ಲಿ ಸದಸ್ಯರಾಗಿರುವಾಗ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮವಿರಬೇಕೆಂದು ಪ್ರತಿಪಾದಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರದ ಅಭ್ಯಾಸಕ್ಕೆ ಪ್ರತ್ಯೇಕ ವಿಭಾಗವಿರಬೇಕೆಂದು ಇವರು ಹೋರಾಡಿದರು. ಮೈಸೂರು ಲಾ ಜರ್ನಲ್‌ಗೆ ಇವರು ಸಂಸ್ಥಾಪಕ ಸಂಪಾದಕರು ಮತ್ತು ಮೈಸೂರು ಪತ್ರಿಕೋದ್ಯಮಿಗಳ ಸಂಘದ ಸಂಸ್ಥಾಪಕ ಉಪಾಧ್ಯಕ್ಷರೂ ಆಗಿದ್ದರು. "ತ್ರಿವೇಣಿ" "ಆರ್ಯನ್‌ಪಾತ್" ಮತ್ತು "ಮೈಸೂರು ವಿಶ್ವವಿದ್ಯಾನಿಲಯದ ಜರ್ನಲ್"ಗಳಿಗೆ ಇವರು ಲೇಖನಗಳನ್ನು ಬರೆದಿದ್ದಾರೆ. ಆಪತ್ಕಾಲದಲ್ಲಿ ಅವರು ಎಂದೂ ಹಿಂದುಳಿಯುತ್ತಿರಲಿಲ್ಲ. 1918ರಲ್ಲಿ ಬೆಂಗಳೂರಿನಲ್ಲಿ ಇನ್‌ಫ್ಲೂಯೆಂಜಾ ಹರಡಿದಾಗ, ಅದರ ನಿವಾರಣೆಗೆ ಇವರು ಬಹುವಾಗಿ ಶ್ರಮಿಸಿದರು. ಗಂಜೀ ವಿತರಣೆಯಲ್ಲಿ ಸ್ವತಃ ಭಾಗವಹಿಸಿದರು. 1928ರಲ್ಲಿ ಕಬ್ಬನ್ ಪಾರ್ಕಿನಲ್ಲಿ ಪ್ರದರ್ಶನ ನಡೆದಾಗ ಬೆಂಕಿಯ ಅನಾಹುತವಾಯಿತು. ಶ್ರೀಕಂಠಯ್ಯನವರು ರೆಸಿಡೆನ್ಸಿಯಿಂದ ಸೈನಿಕ ಸಹಾಯವನ್ನು ದೊರಕಿಸಿ, ಬೆಂಕಿಯನ್ನು ಆರಿಸುವುದಕ್ಕೆ ಏರ್ಪಾಡು ಮಾಡಿದರು. ಮತ್ತು ಪ್ರದರ್ಶನದಲ್ಲಿ ಅಂಗಡಿ ಇಟ್ಟವರನ್ನು ಮತ್ತು ಪ್ರದರ್ಶನವನ್ನು ನೋಡಲಿಕ್ಕೆ ಬಂದವರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸುವಲ್ಲಿ ತುಂಬ ಮುತುವರ್ಜಿ ವಹಿಸಿದರು.

ಇಂತಹ ಸಮಾಜ ಸೇವಕರಿಗೆ ಮತ್ತು ಪ್ರತಿಭಾನ್ವಿತ ಲೇಖಕರಿಗೆ ಅವರು ಕಟ್ಟಿದ ಸಂಸ್ಥೆಗಳನ್ನು ಬೆಳೆಸುವುದು ಮತ್ತು ಅವರು ಹಾಕಿಕೊಟ್ಟ ಪಾಠಗಳನ್ನು ಮರೆಯದಿರುವುದು ಯೋಗ್ಯ ಸ್ಮಾರಕಗಳು. ಶ್ರೀಕಂಠಯ್ಯನವರ ಕಾರ್ಯ ಕ್ಷೇತ್ರಕ್ಕೆ ಕೇಂದ್ರವಾದ ಮಿಥಿಕ್ ಸೊಸೈಟಿಯ ಸದ್ಯದ ಕಾರ್ಯ ನಿರ್ವಹಣೆ, ಅವರು ಅಪೇಕ್ಷಿಸಿದ ರೀತಿಯಲ್ಲೇ ಮುಂದುವರೆದಿರುವುದು ಸ್ತುತ್ಯಾರ್ಹ. ಈಗಿನ ಕಾರ್ಯಕರ್ತರು ಆ ಸೊಸೈಟಿಯ ಕಟ್ಟಡಕ್ಕೆ ಒಂದು ವಿಶಾಲವಾದ ಸಭಾಗೃಹವನ್ನು ಸೇರಿಸಿದ್ದಾರೆ. ಇದರ ಜೊತೆಗೆ ಸಂಶೋಧಕರು ಸೊಸೈಟಿಯ ಅಮೂಲ್ಯ ಪುಸ್ತಕ ಸಂಗ್ರಹದ ಲಾಭ ಪಡೆಯಲು ದೂರದಿಂದ ಬಂದಾಗ ಅವರಿಗೆ ವಾಸಿಸಲು ಅನುಕೂಲತೆಗಳು ಬೇಕು. ಇದಕ್ಕೆ ಪೂರಕವಾಗಿ ಒಬ್ಬ ವಿದ್ವಾಂಸರು ಅಲ್ಲಿಯೇ ವಾಸಿಸಲು ಸೌಕರ್ಯವೂ ಅವಶ್ಯ. ಇಂತಹ ವಿದ್ವಾಂಸರ ಮಾರ್ಗದರ್ಶನದಲ್ಲಿ ಮಿಥಿಕ್ ಸೊಸೈಟಿಯಲ್ಲಿ ಪಿ ಎಚ್ ಡಿ ಮಾಡಲು ಅವಕಾಶ ಸಿಗುವಂತಾದರೆ ಶ್ರೀಕಂಠಯ್ಯನವರ ಶ್ರಮ ಸಾರ್ಥಕ. ಇನ್ನೊಂದು ವಿಧದಲ್ಲಿ ಶ್ರೀಕಂಠಯ್ಯನವರ ಕೆಲಸವನ್ನು ನಾವು ಮರೆಯದಿರುವುದು ಅವಶ್ಯ. ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಅವರ ಬರವಣಿಗೆಯಲ್ಲಿಯ ಅತ್ಯುತ್ತಮವಾದುವನ್ನು ಪುನರ್ ಮುದ್ರಿಸಿದರೆ ಅವು ಮುಂದಿನ ಪೀಳಿಗೆಯವರಿಗೆ ಶಾಶ್ವತ ಕೊಡುಗೆಯಾಗಬಲ್ಲವು. ●

ಆಹಾರದಿಂದ ಮೈಗೆ ಶಕ್ತಿ, ವಿಹಾರದಿಂದ ಮನಸ್ಸಿಗೆ ಶಕ್ತಿ, ವಿಚಾರದಿಂದ ಬುದ್ಧಿಗೆ ಶಕ್ತಿ, ಆಚಾರದಿಂದ ಆತ್ಮಕ್ಕೆ ಶಕ್ತಿ.

ಆತ್ಮಗೌರವ ಅಭ್ಯುದಯದ ಮೆಟ್ಟಿಲು. ಆತ್ಮಶ್ಲಾಘನೆ ವಿನಾಶದ ತೊಟ್ಟಿಲು

ಶಬ್ದಾರ್ಥ ಚಿಂತಾಮಣಿ

• ಪಾ. ವೆಂ •

— 109 —

ಹೋಳಿಗೆಯ ಇತಿವೃತ್ತ-ಮೂದೇವಿಯ ಮೂಲ

ಹೋಳಿಗೆ ಕನ್ನಡಿಗರಿಗೆ ಎಷ್ಟು ಇಷ್ಟ ಮತ್ತು ಪರಿಚಿತವಾಗಿದೆಯೆಂದರೆ ಅದರ ವಂಶಾನುಕ್ರಮದ ಪ್ರಶ್ನೆಯೇ ಅವರ ತಲೆಗಳಲ್ಲಿ ಮೂಡದು. ಆದರೆ ಅದರ ಲಿಖಿತ ದಾಖಲೆ 12ನೇ ಶತಮಾನಕ್ಕಿಂತ ಹಿಂದೆ ಹೋಗುವುದಿಲ್ಲ. ವಾಸ್ತವಿಕವಾಗಿ ಹೆಚ್ಚಿನ ಕೋಶಗಳಲ್ಲಿ ಹೋಳಿಗೆ, ಹೋಳಿಗೆಗಳಿಗೆ ಇರುವ ಅರ್ಥ (ಮೈಯಲ್ಲಿ ಏಳುವ) ಗುಳ್ಳೆ, ಹುಗುಳು ಎಂದಲ್ಲದೆ ಸಿಹಿತಿಂಡಿಯೆಂದಲ್ಲ. ಚೆನ್ನಬಸವಣ್ಣನ ಒಂದು ವಚನದಲ್ಲಿ ಕಡುಬು, ಕಜ್ಜಾಯಗಳೊಡನೆ ಹೋಳಿಗೆಯೂ ಪ್ರಸ್ತಾಪಿಸಲ್ಪಟ್ಟಿದೆಯಾದ್ದರಿಂದ 12ನೇ ಶತಮಾನದಲ್ಲಿ ಅದು ಪ್ರಚಲಿತ ಖಾದ್ಯವಾಗಿತ್ತೆಂದು ಖಚಿತವಾಗುತ್ತದೆ. 13ನೇ ಶತಮಾನದ ಜೈನ ಕಾವ್ಯ ಶಾಂತೀಶ್ವರ ಪುರಾಣದಲ್ಲಿ ಅಂಗರ ಹೋಳಿಗೆಯ ಉಲ್ಲೇಖವಿದೆ. ಅಂಗರವೋಳಿಗೆ, ಅಂಗರವಳಿಗೆ, ಅಂಗರೋಳಿಗೆ ಎಂಬ ರೂಪಗಳಲ್ಲಿ ಕೂಡಾ ಅದು ಸಿಗುತ್ತದೆ. ಅದರ ಸಂಸ್ಕೃತ ರೂಪ ಅಂಗಾರ ಸ್ಫೋಟಿಕಾ, ಅಂದರೆ ಕೆಂಡದಲ್ಲಿ ಸುಟ್ಟ ಉಬ್ಬುರೊಟ್ಟಿ. ಸಂಸ್ಕೃತ ಕೋಶಗಳಲ್ಲಿ "ಅಂಗಾರ ಸ್ಫೋಟಿಕಾ" ಎಂಬ ತಿಂಡಿಯು ಸಿಕ್ಕಿಲ್ಲ. ಅಲ್ಲಿ ಕೂಡ "ಸ್ಫೋಟಿಕಾ" ಎಂದರೆ ಗುಳ್ಳೆ ಎಂದೇ ಅರ್ಥ. "ಅಂಗಾರ ಸ್ಫೋಟಿಕೆ" ಅಥವಾ "ಅಂಗರ ಹೋಳಿಗೆ" ಈಗಿನ ಪೂರಣದ ಸಿಹಿ ತಿಂಡಿಯೇ ಆಗುತ್ತೋ? ಬರಿ ಉಬ್ಬು ರೊಟ್ಟಿಯೋ ತಿಳಿಯದು. ಹುಗ್ಗಿಯೊಡನೆ ಬಂದ, ನಂತರ ಅದು ಬೆಳ್ಳಗೆ ಮತ್ತು ಮಂದವಾಗಿತ್ತೆಂಬುದು ಶಾಂತೀಶ್ವರ ಪುರಾಣದ ಹೇಳಿಕೆ. ಚೆನ್ನಬಸವಣ್ಣನ ಹೇಳಿಕೆಯಿಂದ ತಾನೇ ಅದು ಸಿಹಿ ಭಕ್ಷ್ಯವೆಂದು ಊಹಿಸಬೇಕಾಗುತ್ತದೆ.

ಸ್ಫೋಟಿಕಾ ಅಂದರೆ ಉಬ್ಬಿರುವ ಸುಟ್ಟು ಅಥವಾ ಕಾದು ಉಬ್ಬಿದ್ದು ಅದೇ ಪೋಳಿಗೆ, ಹೋಳಿಗೆ, ಓಳಿಗೆ. ಅದು ಮರಾಠಿಯ ಪೋಳಿ (ಉದಾ: ಶಂಕರ ಪೋಳಿ=ಶಾಕರ ಪೋಳಿ), ಪೋಡಿ (ಭಜಿ) ಇತ್ಯಾದಿಗಳ ಸಗೋತ್ರದು. ಬಂಗಾಲಿಯಲ್ಲಿ ಪೋಡಾ=ಸುಟ್ಟದ್ದು. ನಾದಿದ ಹಿಟ್ಟಿನ ಉಂಡೆಯೊಳಗೆ ಹೂರಣ ತುಂಬಿ ಲಟ್ಟಿಸಿ ಅಥವಾ ತಟ್ಟಿ ಹಂಚಿನಲ್ಲಿ ಬೇಯಿಸುವ ಉಪಾಯ ಎಂದೋ ಆಮೇಲೆ ಸೇರಿಕೊಂಡದ್ದು. ಹೂರಣ ಅಂದರೆ ಸಂಸ್ಕೃತದಲ್ಲಿ ಪೂರಣ (=ತುಂಬುವುದು). ಈ ಹೂರಣ ಎಳ್ಳು, ಸಕ್ಕರೆ, ಕಡಲೆ ಅಥವಾ ಹೆಸರು ಬೇಳೆಯದು, ರವಾಶಿರಾ, ತೆಂಗಿನ ತುರಿ-ಬೆಲ್ಲ ಇತ್ಯಾದಿ ಯಾವುದೇ ಆಗಬಹುದೆಂಬುದು ಪಾಕಶಾಸ್ತ್ರಜ್ಞರ ಆವಿಷ್ಕಾರ.

ಹೋಳಿಗೆಗೆ ಸಂಬಂಧಿಸಿದ ಶಬ್ದಗಳು ಸಂಸ್ಕೃತ ಪ್ರಾಕೃತ ಮೂಲವಾಗಿದ್ದರೂ ಅದರ ಬೆಳವಣಿಗೆಯೆಲ್ಲ ಕರ್ನಾಟಕದಲ್ಲಿ ಆದಂತೆ ಕಾಣುತ್ತದೆ. ಯಾಕಂದರೆ ನೆರೆಯ ಮರಾಠಿ ಮೊದಲಾದ ಭಾಷೆಗಳಲ್ಲಿ ಈ ಶಬ್ದಗಳಿಲ್ಲ. ತೆಲುಗಿಗೂ ಪೋಳಿ ಹೋಗಿದೆ. "ಪೋಳಿ" ಕನ್ನಡದಿಂದಲೇ ಬಂತೆಂದು ತೆಲುಗು ಕೋಶ ಹೇಳುತ್ತದೆ.

ಆದರೆ ಕರ್ನಾಟಕದ ಸೀಮೆಯೊಳಗೇನೇ ಹಳೇ ಮೈಸೂರಿನಲ್ಲಿ ಹೋಳಿಗೆಯನ್ನು ಹೋಲುವ ಒಬ್ಬಟ್ಟು ಇದೆ. ತೆಲುಗಿನಲ್ಲಿ ಕೂಡ ಒಬ್ಬಟ್ಟು ಸೇರಿದೆ. ಹೋಳಿಗೆ, ಒಬ್ಬಟ್ಟು ಒಂದೇ ಎಂದು ತೆಲುಗು ಕೋಶದ ಹೇಳಿಕೆ. ಇತರ ದ್ರಾವಿಡ ಭಾಷೆಗಳಲ್ಲಿ ಈ ಶಬ್ದವಿಲ್ಲ. ಅಲ್ಲದೆ ಈ ಶಬ್ದದ ನಿರುಕ್ತಿಯ ಬಗ್ಗೆ ಕನ್ನಡ ಕೋಶಗಳು ಮೌನವಾಗಿವೆ. ಥಾಲೀ ಪಟ್ಟು ಥಾಲೀಪಿಟ್ಟು ಶಬ್ದದಂತೆ ಅಂಗೈಯಿಂದ ತಟ್ಟಿ ತಯಾರಿಸಿದ ಚಪ್ಪಟೆ (=ಪಟ್ಟು) ಹೂರಣ ಭಕ್ಷ್ಯ ಎಂಬ ಅರ್ಥಕೊಡಬಹುದು. "ಒಬ್" ಎಂದರೆ ಬಹುಶಃ "ಉಬ್ಬು" ವಿನ ಒಂದು ರೂಪ.

ಪುರಿ ಬಾಸುಂದಿಯ ಸವಿ ಉತ್ತರ ಕರ್ನಾಟಕದಲ್ಲಿ ಸರ್ವವಿದಿತ. ಈಚೆಗಿನ ವರೆಗೆ, ಅಂದರೆ ಒಳ್ಳೇ ಹಾಲು ಪರಿಮಳದ್ರವ್ಯಗಳೂ ದುರ್ಮಿಳವಾಗುವವರೆಗೆ! ಅನೇಕ ಸಿಹಿ ತಿಂಡಿಗಳಂತೆ ಇದೂ ಕನ್ನಡಿಗರಿಗೆ ಹೊರಗಿಂದ ಬಂದದ್ದು. ಅದು ಹಿಂದಿಯ ಬಸೌಂಧೀ ಅಥವಾ ಬಾಸೌಂಧೀಯ ಅಪಭ್ರಂಶ. ಬಾಸ್ (=ಸಂಸ್ಕೃತ "ವಾಸ್") ಎಂದರೆ ವಾಸನೆ. (ಸು)ಗಂಧ+ದುಗ್ಧ (=ಹಾಲು). ಹಾಲು ಮರಳಿಸಿ ಮುದೆಯ ಮಟ್ಟಕ್ಕೆ ತಂದು ಸಕ್ಕರೆ, ಕೇಶರ ಬೆರೆಸಿ ತಯಾರಿಸಿದ್ದು ಬಾಸುಂದಿ- ಎಂದು ಗುಜರಾಥಿ ಕೋಶದ ಹೇಳಿಕೆ.

★ ★ ★

ಹೆಣ್ಣು ಮಕ್ಕಳನ್ನು ಮೂದೇವಿ ಎಂದು ಬಯ್ಯುವುದುಂಟಲ್ಲ. ಈ ಮೂದೇವಿ ಯಾರು? ಅವಳು ಮುದುದೇವಿ. ಮುದು ಎಂದರೆ ಹಳೆಯ, ಹಿಂದಿನ, ಮುಂಚಿನ, ಮೊದಲಿನ. ಮೊದಲಿನ ದೇವಿ ಅವಳು. ಇಲ್ಲಿ ದೇವಿ ಎಂದರೆ ಮಾ-ದೇವಿ, ಅರ್ಥಾತ್ ಲಕ್ಷ್ಮೀ, ಮಹಾಲಕ್ಷ್ಮಿ. ಅವಳಿಗೆ ಅಕ್ಕನಾದವಳು ಜ್ಯೇಷ್ಠಾದೇವಿ ಅಥವಾ ಜ್ಯೇಷ್ಠಾ ಲಕ್ಷ್ಮಿ. ಅವಳು ದಾರಿದ್ರ್ಯದ ದೇವತೆ. ಅಮಂಗಲ ದೇವಿ. ಅವಳ ಕಥೆ ಪುರಾಣಗಳಲ್ಲಿ (ಪದ್ಮ, ಭಾಗವತ) ಬರುತ್ತದೆ. ಅವಳು ಹೊಕ್ಕ ಮನೆ ಹಾಳು. ಹೀಗೆ ಮೂದೇವಿ ಎಂದರೆ ಮನೆಹಾಳಿ.

ಈ "ಮೂ", "ಮುದು", "ಮುನ್" ಎಂಬ ಬೇರಿನಿಂದ ಹಲವು ದ್ರಾವಿಡ ಶಬ್ದಗಳು ಹುಟ್ಟಿವೆ. "ಮುತ್ತಜ್ಜ" ಎಂದರೆ ಮೊದಲಿನ ಅಜ್ಜ ಅರ್ಥಾತ್ ಅಜ್ಜನಿಗಿಂತ ಹಿರಿಯ. "ಮುತ್ತಪ್ಪ" "ಮುತ್ತಯ್ಯ" ಇತ್ಯಾದಿ ಅಂಕಿತ ನಾಮಗಳೂ ಬಂದಿವೆ. ಹೆಸರುಗಳಿಗೂ ಮುತ್ತು (ಚುಂಬನ) ಅಥವಾ ಮುತ್ತು (ಒಂದು ಬೆಲೆಬಾಳುವ ರತ್ನ, ಸಂ. ಮುಕ್ತಾ) ಇವುಗಳಿಗೂ ಸಂಬಂಧವಿಲ್ಲ; "ಮುದುಕ" ಎಂದು ನಾವು ಸಾಮಾನ್ಯವಾಗಿ ತಿಳಿಯುವ ಅರ್ಥವೂ ಇಲ್ಲಿ ಅನ್ವಯಿಸುವುದಿಲ್ಲ. ಹಿರಿಯ, **ಶ್ರೇಷ್ಠ ಜ್ಯೇಷ್ಠ** ಎಂದು ತಾನೇ ಇಲ್ಲಿ ಗೌರವ ಪೂರ್ಣ ಅನ್ವಯ. ಬಹುಶಃ ನಮ್ಮ ವಚನ ಕಾರ್ತಿ ಮುಕ್ತಾಯಕ್ಕನ ಹೆಸರು "ಮುತ್ತಾಯಕ್ಕ" (ಮುನ್+ತಾಯ್+ಅಕ್ಕ) ಎಂಬುದರ ಸಂಸ್ಕೃತೀಕೃತ ರೂಪ. ಪ್ರಸಿದ್ಧ "ತಿರುಕನ ಕನಸು" ಎಂಬ ನೀತಿಪದದ ಕರ್ತೃ "ಮುಪ್ಪಿನ ಷಡಕ್ಷರ" ದೇವ; ಅವನು ಅನಂತರ ಬಂದ ಪ್ರಸಿದ್ಧ ಮಹಾಕವಿ ಷಡಕ್ಷರ ದೇವನಿಂದ ಭಿನ್ನ ಮತ್ತು ಹಿಂದಿನವ ಎಂದಷ್ಟೇ ತಾತ್ಪರ್ಯ ಹೊರತು ಮುಪ್ಪು ಬಂದವನೆಂದು ಅಲ್ಲ. ನಮ್ಮ ಪ್ರಸಿದ್ಧ ಸಂಗೀತ ಕೃತಿಗಳ ಕರ್ತರಾದ ಮುತ್ತಯ್ಯ ಭಾಗವತರು, ತಮಿಳುನಾಡಿನ ನವಕೋಟಿ ನಾರಾಯಣ ಮುತ್ತಯ್ಯ ಚೆಟ್ಟಿಯಾರ್ ಮೊದಲಾದವರ ಹೆಸರುಗಳು "ಮುತ್ತ"ರ ಬಗ್ಗೆ ಹಿಂದಿನ ಕಾಲದಲ್ಲಿದ್ದ ಗೌರವವನ್ನು ಸೂಚಿಸುತ್ತವಲ್ಲದೆ ತುಚ್ಛತೆಯನ್ನಲ್ಲ.

ಸಂಸ್ಕೃತದಲ್ಲಿ "ವೃದ್ಧ" ಎಂಬ ಶಬ್ದ ಕನ್ನಡದಲ್ಲಿ ಮೇಲೆ ಹೇಳಿದಂತೆ "ಮುಪ್ಪಿನ" ಶಬ್ದವು ಮಾಡುವ ಕೆಲಸವನ್ನೇ ಮಾಡುತ್ತದೆ. "ವೃದ್ಧಪರಾಶರ" ಎಂಬೊಬ್ಬ ಸ್ಮೃತಿಕಾರನಿದ್ದಾನೆ. ಅವನು ಪ್ರಸಿದ್ಧನಾದ ಪರಾಶರ ಋಷಿಗಿಂತ ಭಿನ್ನನೂ ಅವನಿಗಿಂತ ಪೂರ್ವಿಕನೂ ಆಗಿದ್ದಾನೆ.

ನಾವೀಗ "ವೃದ್ಧ" ಎಂದರೆ ವಯಸ್ಸು ಮೀರಿದವ ಎಂದು ತಿಳಿಯುತ್ತೇವೆ. ಆದರೆ ಆ ಶಬ್ದದ ಮೂಲ ಅರ್ಥ "ಬೆಳೆದವ" (ವೃಧ್=ಬೆಳೆ; ವೃದ್ಧಿ=ಬೆಳವಣಿಗೆ). "ಜ್ಞಾನವೃದ್ಧ" "ತಪೋವೃದ್ಧ" ಎಂಬ ಪದಗಳಲ್ಲಿ ವೃದ್ಧ ಶಬ್ದಕ್ಕೆ ಬೆಳೆದ, ಹಿರಿಯ (=ದೊಡ್ಡವ) ಎಂದು ಮಾತ್ರ ಅರ್ಥ. "ವಯೋವೃದ್ಧ" ಸಾಕಷ್ಟು ವಯಸ್ಸಾದವನನ್ನು ನಿರ್ದೇಶಿಸುತ್ತದೆ; ಆದರೂ ಇದು ಮುದುಕತನವನ್ನು ಸೂಚಿಸುವುದಕ್ಕಿಂತಲೂ ಗೌರವವನ್ನು (ಗೌರವ=ಗುರುತನ, ಹಿರಿಯತನ) ಅಭಿವ್ಯಂಜಿಸುತ್ತದೆ. ಸಂಸ್ಕೃತ "ವೃದ್ಧ" ವೇ ಪ್ರಾಕೃತದಲ್ಲಿ "ವಡ್ಡ"ನಾಗಿ ಕನ್ನಡಕ್ಕೂ ಬಂದಿದ್ದಾನೆ. "ವಡ್ಡ ವಣಿಯ" ಎಂದರೆ ಹಿರಿಯ ವರ್ತಕ; ಅವನು ವಯಸ್ಸಿನಲ್ಲಿ ಹಿರಿಯನಾಗಿರಬೇಕಿಲ್ಲ. "ಗ್ರಾಮವೃದ್ಧ" ನೇ "ಗಾಮುಂಡ"-"ಗಾವುಂಡ" "ಗೌಡ". ಇದು ಅಧಿಕಾರಸ್ಥಾನವನ್ನು ಸೂಚಿಸುವ ಶಬ್ದವಾಗಿ ರೂಪುಗೊಂಡಿತು.

ವೃದ್ಧ ಶಬ್ದವೇ ಹಿಂದಿಯಲ್ಲಿ ಬುಡ್ಢಾ, ಬುಢಾ ಆಗಿದೆ. ಇದು ಮಾತ್ರ ವಯಸ್ಸಿನಲ್ಲಿ ಮುಪ್ಪಾದವನನ್ನೇ ನಿರ್ದೇಶಿಸುತ್ತದೆ.

ಹಲ್ಲುಗಳಿಂದ ಕೊಲೆ ಪತ್ತೆ

●ಕೆ.ಎಸ್. ಕೆರಳೀಕರ.

ಶ್ರೀಮತಿ ರೋಸ್ ಎಂಬಾಕೆ ಇಂಗ್ಲೆಂಡಿನ ಗೋಲ್ಡ್‌ಮನ್ ಫೀಲ್ಡಿನಲ್ಲೊಂದು ವಸತಿಗೃಹದ ಒಡತಿ. ಕ್ಯಾರೋಲಿನ್ ವಾಲ್ಶ್ ಎಂಬ ಐರಿಶ್ ವೃದ್ಧೆಯನ್ನು ಆಕೆ ತನ್ನ ವಸತಿಗೃಹಕ್ಕೆ ಬಂದು ಇರುವಂತೆ ಮೇಲಿಂದ ಮೇಲೆ ವಿನಂತಿಸುತ್ತಲೇ ಇದ್ದಳು. ಆದರೆ ಕ್ಯಾರೋಲಿನ್ ವಾಲ್ಶ್ ಈ ವಿನಂತಿಯನ್ನು ನಯವಾಗಿಯೇ ನಿರಾಕರಿಸುತ್ತಿದ್ದಳಾದರೂ ರೋಸ್‌ಳ ಮೃದು ಮಾತು, ಆತ್ಮೀಯ ಕರೆ ಅವಳ ಮೇಲೆ ಗಾಢವಾದ ಪ್ರಭಾವವನ್ನು ಬೀರಿಬಿಟ್ಟವು. ಕೊನೆಗೆ 1831ರ ಆಗಸ್ಟ್ 19ರಂದು ಸಂಜೆ ಕ್ಯಾರೋಲಿನ್ ವಾಲ್ಶ್ ಶ್ರೀಮತಿ ರೋಸ್‌ಳ ವಸತಿಗೃಹಕ್ಕೆ ತನ್ನ ಹಾಸಿಗೆ ಮತ್ತು ಬುಟ್ಟಿಯ ಸಮೇತ ಬಂದಳು. ರಿಬ್ಬನ್ನು ಮತ್ತು ಇತರ ಚಿಕ್ಕ ಪುಟ್ಟ ವಸ್ತುಗಳನ್ನು ಆ ಬುಟ್ಟಿಯಲ್ಲಿಟ್ಟುಕೊಂಡು ಮಾರುವುದು ಕ್ಯಾರೋಲಿನ್ ವಾಲ್ಶ್‌ಳ ಉಪಜೀವನದ ದಾರಿಯಾಗಿತ್ತು. ಆದರೆ ವಸತಿಗೃಹಕ್ಕೆ ಬಂದ ರಾತ್ರಿಯೇ ಕ್ಯಾರೋಲಿನ್ ವಾಲ್ಶ್ ಒಮ್ಮೆಲೇ ನಾಪತ್ತೆಯಾದಳು.

ಮರುದಿನ ಅಂದರೆ ಆಗಸ್ಟ್ 20ರಂದು ಕಣ್ಮರೆಯಾದ ಅವಳನ್ನೇ ಹೋಲುವ ವೃದ್ಧೆಯೊಬ್ಬಳು ರೋಸ್‌ಳ ವಸತಿಗೃಹದ ಸಮೀಪದ ಓಣಿಯೊಂದರಲ್ಲಿ ಬಿದ್ದಿರುವುದು ಕಂಡುಬಂದಿತು. ಜೀರ್ಣವಾದ ದೇಹದ ಅವಳ ಬಟ್ಟೆ ಕೊಳೆಯಾಗಿತ್ತು. ಅವಳ ಸ್ಥಿತಿ ತುಂಬ ಕರುಣಾಜನಕವಾಗಿತ್ತು. ಆಕೆ ತನ್ನ ಹೆಸರು ಕ್ಯಾರೋಲಿನ್ ವಾಲ್ಶ್ ಎಂದೂ ತಾನೊಬ್ಬ ಐರಿಶ್ ಮಹಿಳೆಯೆಂದೂ ಹೇಳಿದಳು. ಸೊಂಟದ ಮೂಳೆ ಮುರಿದಿದ್ದರಿಂದ ಆಕೆಯನ್ನು ಉಪಚಾರಕ್ಕಾಗಿ ಲಂಡನ್ ಆಸ್ಪತ್ರೆಗೆ ಸೇರಿಸಿದ ದಿನವೇ ಕೊನೆಯುಸಿರೆಳೆದಳು. ಕ್ರೈಸ್ತ ಪದ್ಧತಿಗನುಸಾರವಾಗಿ ಅವಳನ್ನು ಹೂಳಲಾಯಿತು.

ಆದರೆ1831ರ ಆಗಸ್ಟ್ 19ರ ಸಂಜೆ ರೋಸ್‌ಳ ವಸತಿಗೃಹದಿಂದ ಕಣ್ಮರೆಯಾದ ಕ್ಯಾರೋಲಿನ್ ವಾಲ್ಶ್‌ಳ ಸಲುವಾಗಿ ಕೂಡಲೇ ಪೋಲೀಸರು ಶೋಧ ನಡೆಯಿಸಲಾರಂಭಿಸಿದರು. ಆಕೆ ಹೀಗೆ ನಿಗೂಢವಾಗಿ ಕಣ್ಮರೆಯಾದುದರಲ್ಲಿ ರೋಸ್‌ಳ ಕೈವಾಡವಿರಲೇಬೇಕೆಂಬುದು ಪೋಲೀಸರಿಗೆ ಬಲವಾದ ಸಂಶಯ. ರೋಸ್‌ಳ ಮಗನನ್ನು ಅವರು ಎಡೆಬಿಡದೆ ಪ್ರಶ್ನಿಸಲಾರಂಭಿಸಿದರು. ಕೊನೆಗೂ ಆತ ಬಾಯಿಬಿಟ್ಟ. ಆಗಸ್ಟ್ 19ರಂದು ಸಂಜೆ ಕ್ಯಾರೋಲಿನ್ ವಾಲ್ಶ್ ವಸತಿಗೃಹಕ್ಕೆ ಬಂದ ನಂತರ, ತನ್ನ ತಾಯಿ ವಾಲ್ಶ್‌ಳ ಬಾಯಿಯನ್ನು ಕೈಗಳಿಂದ ಗಟ್ಟಿಯಾಗಿ ಅದುಮಿ ಉಸಿರುಗಟ್ಟಿಸುವಂತೆ ಮಾಡಿದ್ದು, ಮರುದಿನ ವಾಲ್ಶ್‌ಳ ಮೃತದೇಹವನ್ನು ತಾನು ವಸತಿಗೃಹದ ನೆಲಮಾಳಿಗೆಯಲ್ಲಿ ನೋಡಿದ್ದು, ನಂತರ ತನ್ನ ತಾಯಿ ಭಾರವಾದ ಚೀಲದೊಂದಿಗೆ ಹೊರ ಬೀಳುತ್ತಿರುವುದನ್ನು ತಾನು ಕಂಡಿದ್ದು ಹೀಗೆ ಎಲ್ಲವನ್ನೂ, ಆತ ಸವಿಸ್ತಾರವಾಗಿ ಹೇಳಿದ.

ಪೋಲೀಸರು ರೋಸ್‌ಳನ್ನು ಬಂಧಿಸಿ ವಿಚಾರಿಸ ಲಾರಂಭಿಸಿದರು. ಲಂಡನ್ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟು ಸತ್ತು ಹೋದ ಕ್ಯಾರೋಲಿನ್ ವಾಲ್ಶ್‌ಳೇ ತನ್ನ ವಸತಿಗೃಹಕ್ಕೆ ಬಂದಿದ್ದ ವ್ಯಕ್ತಿ ಯೆಂದು ಹೇಳಿಬಿಟ್ಟಳು. ಆದರೆ ಈ ಹೇಳಿಕೆ ಪೋಲೀಸರನ್ನು ಸಮಾಧಾನ ಪಡಿಸ ಲಿಲ್ಲ. ಕ್ಯಾರೋಲಿನ್ ವಾಲ್ಶಳ ಕೊಲೆಗಾತಿ ಶ್ರೀಮತಿ ರೋಸಳೇ ಎಂದು ಸಿದ್ಧಮಾಡಬೇಕಾ ದರೆ ಆಗಸ್ಟ್ 19ರ ಸಂಜೆ ವಸತಿಗೃಹದಿಂದ ಕಣ್ಮರೆಯಾದಾಕೆ ಮತ್ತು ಮರುದಿನ ಲಂಡನ್ ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟು ಸತ್ತಾಕೆ ಬೇರೆ ಬೇರೆ ವ್ಯಕ್ತಿಗಳೇ ಎಂದು ಸಾಬೀತುಗೊಳಿಸುವ ಹೊಣೆ ಪೋಲೀಸರ ಮೇಲೆ ಬಿತ್ತು.

ಆಗಸ್ಟ್ 19ರ ಸಂಜೆ ವಸತಿಗೃಹದಿಂದ ಕಣ್ಮರೆಯಾದ ವ್ಯಕ್ತಿ ವಯಸ್ಸಾದ ಐರಿಶ್ ಮಹಿಳೆ. ಆಗಸ್ಟ್ 20ರಂದು ಆಸ್ಪತ್ರೆಯಲ್ಲಿ ಸತ್ತ ವ್ಯಕ್ತಿಯೂ ವಯಸ್ಸಾದ ಐರಿಶ್ ಮಹಿಳೆ ಯೇ. ಇಬ್ಬರ ಉಡಿಗೆ ತೊಡುಗೆಗಳೂ ಒಂದೇ ಇದ್ದುವು. ಇಬ್ಬರೂ ಬುಟ್ಟಿಗಳಲ್ಲಿ ಸಣ್ಣ ಪುಟ್ಟ ಸಾಮಾನುಗಳನ್ನು ಇಟ್ಟು, ಹೊತ್ತು ಮಾರುವ ವೃತ್ತಿಯವರೇ ಆಗಿದ್ದರು. ಹೀಗೆ ಇಬ್ಬರ ಉಡಿಗೆ, ತೊಡುಗೆ, ವ್ಯವಸಾಯ, ಹುಟ್ಟಿನ ಮೂಲಗಳು, ಒಂದೇ ಆಗಿ ಈ ಪ್ರಕರಣ ಕುತೂಹಲದ ಹಂತ ತಲುಪಿತು.

ಆದರೆ ಪೋಲೀಸರು ಕಣ್ಮರೆಯಾದ ಕ್ಯಾರೋಲಿನ್ ಮತ್ತು ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಕ್ಯಾರೋಲಿನ್ ಬೇರೆ ಬೇರೆ ವ್ಯಕ್ತಿ ಗಳೆಂದು ಸಿದ್ಧಪಡಿಸಲು ಯೋಚಿಸಿದರು. ಅವ ರಿಬ್ಬರಲ್ಲಿದ್ದ ವ್ಯತ್ಯಾಸಗಳು ಯಾವುವು ಎಂಬು ದನ್ನು ಅವರೀಗ ಹುಡುಕಿ ತೆಗೆಯಲು ಯತ್ನಿಸ ತೊಡಗಿದರು. ಇಬ್ಬರೂ ಐರಿಶ್ ಮಹಿಳೆ ಯರೇ. ಆದರೆ, ಐರ್ಲೆಂಡಿನ ಬೇರೆ ಬೇರೆ ಭಾಗಗಳಿಂದ ಬಂದವರು. ಆಗಸ್ಟ್ 19ರ ಸಂಜೆ ಕಣ್ಮರೆಯಾದಾಕೆ 84 ವರ್ಷ ವಯಸ್ಸಿ ನವಳು. ಮೈಬಣ್ಣ ಹಳದಿ, ನೆರೆತ ಕೂದಲು. ಆದರೆ ಆಗಸ್ಟ್ 20 ರಂದು ಬೀದಿಯಬದಿ ಯಲ್ಲಿ ಸಿಕ್ಕ ಮಹಿಳೆ ಸುಮಾರು 60 ವರ್ಷದವಳು. ಮೈ ಬಣ್ಣ ಕಪ್ಪು. ಆಗಸ್ಟ್ 19 ರಂದು ಕಣ್ಮರೆಯಾಗಿದ್ದ ವೃದ್ಧೆಯದು ದೃಢ ಕಾಯ, ಶುಭ್ರ ವ್ಯಕ್ತಿತ್ವ. ಆಗಸ್ಟ್ 20ರಂದು ಸತ್ತ ವೃದ್ಧೆ ಕ್ಷೀಣಕಾಯದ, ಮಲಿನ ವ್ಯಕ್ತಿ. ಅಲ್ಲದೆ ಅವಳ ಸೊಂಟದ ಮೂಳೆ ಮುರಿದಿತ್ತು.

ಅವರಿಬ್ಬರಲ್ಲಿ ವ್ಯತ್ಯಾಸಗಳಿಗಿಂತ ಸಾಮ್ಯಗಳೇ ಅಧಿಕವಾಗಿದ್ದುವು. ಹೀಗಾಗಿ ಅವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳೆಂದು ಕೋರ್ಟಿಗೆ ಮನ ವರಿಕೆಯುಂಟುಮಾಡುವಲ್ಲಿ ಪೋಲೀಸರು ಪೂರ್ಣ ಯಶಸ್ವಿಯಾಗಲಿಲ್ಲ. ಸಂಶಯದ ಲಾಭ ಅಪರಾಧಿಗೆ ದೊರಕಬೇಕಾದ್ದರಿಂದ ತಾನು ಕಾನೂನಿನ ಕಪಿಮುಷ್ಟಿಯಿಂದ ಪಾರಾ ಗಬಹುದೆಂದು ಶ್ರೀಮತಿ ರೋಸ್ ಬಗೆ ದಿದ್ದಳು. ಆದರೆ ತಾನು ಕೊಂದವಳ ಹಲ್ಲು ಗಳೇ ತನ್ನನ್ನು ಕಾರಾಗೃಹದ ಕಂಬಿಗಳನ್ನು ಎಣಿಸುವಂತೆ ಮಾಡಬಲ್ಲವೆಂದು ಆಗ ಆಕೆಗೆ ತಿಳಿದಿರಲಿಲ್ಲ.

ಲಂಡನ್ ಆಸ್ಪತ್ರೆಗೆ ಸೇರಿಸಲ್ಪಟ್ಟು ಸಾವನ್ನ ಪ್ಪಿದ ಕಾರೋಲಿನ್ ವಾಲ್ಶ್‌ಳ ಮೃತ ದೇಹ ವನ್ನು ಶವ ಪರೀಕ್ಷೆಗಾಗಿ ಗೋರಿಯಿಂದ ಹೊರ ತೆಗೆಯಲಾಯಿತು. ಕಣ್ಮರೆಯಾದ ಕಾರೋ ಲಿನ್ಳ ಇಬ್ಬರು ಮೊಮ್ಮಕ್ಕಳು ಆ ಶವವನ್ನು ನೋಡಿ ಅದು ತಮ್ಮ ಅಜ್ಜಿಯ ಶವವಲ್ಲವೆಂದು ಪ್ರಮಾಣಮಾಡಿ ಹೇಳಿದರು. ಶವದ ತಲೆ ಬುರುಡೆ ಮತ್ತು ದವಡೆಗಳನ್ನು ಕೋರ್ಟಿಗೆ ತರ ಲಾಯಿತು.

ಕಣ್ಮರೆಯಾದ ಕಾರೋಲಿನ್ಳಿಗೆ ಗಟ್ಟಿ ಮುಟ್ಟಾದ ಸುಂದರವಾದ ಬಾಚಿ ಹಲ್ಲುಗಳಿದ್ದ ವೆಂದು ಆಕೆಯನ್ನು ನೋಡಿದ್ದ ಅನೇಕರು ಸಾಕ್ಷಿ ಹೇಳಿದರು. ಕೋರ್ಟಿನ ಎದುರಿಗೆ ತಂದ, ಲಂಡನ್ ಆಸ್ಪತ್ರೆಯಲ್ಲಿ ಮರಣ ಹೊಂದಿದ ಕಾರೋಲಿನ್ಳ ದವಡೆಗಳನ್ನು ಪರೀಕ್ಷಿಸಿದಾಗ ಅವಕ್ಕೆ ಬಾಚಿ ಹಲ್ಲುಗಳಿರಲಿಲ್ಲ. ಬಾಚಿ ಹಲ್ಲು ಗಳಿದ್ದ ರಂಧ್ರಗಳು ಮುಚ್ಚಿಕೊಂಡಿದ್ದು ಅವು ಬಹಳ ದಿನಗಳ ಹಿಂದೆಯೇ ಬಿದ್ದುಹೋಗಿವೆ ಎಂದು ವೈದ್ಯರು ಹೇಳಿದರು.

ಕಣ್ಮರೆಯಾದ ಕಾರೋಲಿನ್ ಮತ್ತು ಆಸ್ಪತ್ರೆ ಯಲ್ಲಿ ಸತ್ತ ಕಾರೋಲಿನ್ಳರಲ್ಲಿ ಬೇರೆಲ್ಲ ವಿಷಯಗಳಲ್ಲಿ ಅನೇಕ ಸಾಮ್ಯಗಳಿದ್ದರೂ ಅವ ರಿಬ್ಬರ ಹಲ್ಲುಗಳಲ್ಲಿದ್ದ ವ್ಯತ್ಯಾಸದಿಂದ ಅವ ರಿಬ್ಬರೂ ಬೇರೆ ಬೇರೆ ವ್ಯಕ್ತಿಗಳೆಂಬುದು ಸಿದ್ಧ ವಾಯಿತು. ಇದು ಶ್ರೀಮತಿ ರೋಸ್ ಅಪರಾಧಿ ಯೆಂದು ಸಿದ್ಧಪಡಿಸಲು ಸಾಕಾಯಿತು. ಆಕೆಗೆ ಕಠಿಣ ಕಾರಾಗೃಹವಾಸದ ಶಿಕ್ಷೆಯಾಯಿತು. ●

ರೂಪಾಂತರ: ಲಕ್ಷ್ಮಣ, ಅಳವಂಡಿ



ಕಡಿದಾದ ಬೆಟ್ಟದ ತಪ್ಪಲಿನಲ್ಲಿ, ನಿಬಿಡ ಅರಣ್ಯದ ಮಧ್ಯ ನಾಲ್ಕೆಂಟು ಮನೆಗಳಿದ್ದ ಆ ಪುಟ್ಟ ಹಳ್ಳಿಯ ಹೆಸರು ಲಿಥೂನಿಯಾ.

ಅದೇ ಹಳ್ಳಿಯ ಚಳಿಗಾಲದ ಒಂದು ರಾತ್ರಿ. ಮೈಕೊರೆಯುವ ಚಳಿ. ದಟ್ಟ ಕತ್ತಲು. ಜೀಂಗುಡುವ ಕಾಡು ಗಾಳಿಯ ಮೊರೆತ ಹೊರತು ಪಡಿಸಿದರೆ ನಿಶ್ಶಬ್ದ ವಾತಾವರಣ.

ಅದೆ ಹಳ್ಳಿಯ ನಾಲ್ಕಾರು ಮನೆಗಳಲ್ಲಿ, ಕೊನೆಯದಾದ ಮನೆಯಲ್ಲಿ ತಾಯಿ-ಮಗಳು ಅಗ್ಗಿಷ್ಟಿಕೆಯ ಮುಂದೆ ಕುಳಿತು ಚಳಿಯನ್ನು ನಿವಾರಿಸಿಕೊಳ್ಳುವ ವ್ಯರ್ಥ ಪ್ರಯತ್ನ ನಡೆಸಿದ್ದರು. ತಾಯಿ ಮಧ್ಯ ವಯಸ್ಸಿನ ಮಹಿಳೆಯಾದರೆ ಮಗಳು ಆಗತಾನೇ ತಾರುಣ್ಯದ ಹೊಸ್ತಿಲಲ್ಲಿದ್ದಳು. ಅವರು ಮೌನವಾಗಿ ಕುಳಿತಿರುವಾಗಲೇ ಯಾರೋ ಬಾಗಿಲನ್ನು ತಟ್ಟಿದ ಹಾಗಾಯಿತು.

ತಾಯಿ ಮಗಳು ಪರಸ್ಪರ ಮುಖ ನೋಡಿಕೊಂಡರು. ಮನೆಯೊಡೆಯ ಇವಾನ್ ಇನ್ನೂ ಬರುವ ವೇಳೆಯಾಗಿರಲಿಲ್ಲ. ಬಂದರೂ ಆತ ಇಷ್ಟು ಮೃದುವಾಗಿ ಬಾಗಿಲನ್ನು ತಟ್ಟುವವನಲ್ಲ. ವೋಡ್ಕಾದ ಅಮಲಿನಲ್ಲಿ ಒರಟಾಗಿ ಮುರಿದುಹೋಗುವಂತೆ ಬಾಗಿಲನ್ನು ದಬದಬ ಬಡಿಯುತ್ತಿದ್ದ.

ಪಕ್ಕದ ಮೇಜಿನ ಮೇಲಿದ್ದ ಲಾಂದ್ರವನ್ನು ಕೈಗೆತ್ತಿಕೊಂಡು ತಾಯಿ ಬಾಗಿಲಿನತ್ತ ಸಾಗಿದಳು. ಮಗಳೂ ಹಿಂದೆ ನಡೆದಳು. ತೆರೆದ ಬಾಗಿಲಿನಿಂದ ಒಳನುಗ್ಗಿದ ಚಳಿಗಾಳಿಗೆ ಲಾಂದ್ರದ ಬೆಳಕು ಹೊಯ್ದಾಡಿತು. ಲಾಂದ್ರದ ಮಂದ ಬೆಳಕಿನಲ್ಲಿ ಬಾಗಿಲಿನಾಚೆ ಒಬ್ಬ ಯುವಕ ನಿಂತಿದ್ದುದು ಕಂಡು ಬಂತು.

ಆ ಯುವಕ [illegible]ಲಾಗಿದ್ದ ಬೆಲೆಬಾಳುವ ಉಡುಪನ್ನು ಧರಿಸಿದ್ದ. ಆದರೆ ಅದು ಧೂಳಿನಿಂದ ತುಂಬಿ ಹೊಲಸಾಗಿತ್ತು. ಕೈಯಲ್ಲೊಂದು ಚರ್ಮದ ಹ್ಯಾಂಡ್‌ಬ್ಯಾಗ್ ಹಿಡಿದಿದ್ದ.

ಯುವಕ "ಕ್ಷಮಿಸಿ, ನಾನೊಬ್ಬ ಪ್ರಯಾಣಿಕ. ಕಾಡಿನಲ್ಲಿ ದಾರಿತಪ್ಪಿದೆ. ದಣಿದಿದ್ದೇನೆ. ಈ ರಾತ್ರಿಯ ಮಟ್ಟಿಗೆ ಇಲ್ಲಿರಗೊಟ್ಟರೆ ಉಪಕಾರವಾಗುತ್ತದೆ" ಎಂದು ಹೇಳಿದ.

ಅವನ ವಿನಯದ ಮಾತಿಗೆ ತಲೆದೂಗಿ ಮನೆಯೊಡತಿ ಬಾಗಿಲನ್ನು ಅಗಲವಾಗಿ ತೆರೆದು ಪಕ್ಕಕ್ಕೆ ಸರಿದು, "ದಯವಿಟ್ಟು ಒಳಕ್ಕೆ ಬನ್ನಿ" ಎಂದಳು. ಅಪರಿಚಿತ ಒಳಬಂದ ನಂತರ ಪುನಃ ಬಾಗಿಲನ್ನು ಮುಚ್ಚಿದಳು. ಒಳಗಡೆ ಮತ್ತೆ ಬೆಚ್ಚನೆಯ ವಾತಾವರಣ ಮೂಡಿತು.

ಒಳಬಂದ ಆಗಂತುಕ ಮೇಜಿನ ಮೇಲೆ ಬ್ಯಾಗನ್ನಿಟ್ಟ. ಪಕ್ಕದ ಕುರ್ಚಿಯಲ್ಲಿ ಕುಳಿತು ಒಮ್ಮೆ ಸುತ್ತಲೂ ನೋಡಿದ.

ಹಳೆಯ ಆದರೆ ಭದ್ರವಾದ ಮನೆ. ಎಡಗಡೆ ಅಟ್ಟವನ್ನೇರಲು ಒಂದು ಏಣಿ. ಬೆನ್ನ ಹಿಂದಿನ ಗೋಡೆಯಲ್ಲಿದ್ದ ಕಿಟಕಿ ಅರ್ಧ ತೆರೆದಿತ್ತು. ಬಲ ತುದಿಯಲ್ಲಿ ಕಲ್ಲಿನ ಅಗ್ಗಿಷ್ಟಿಕೆ ಉರಿಯುತ್ತಿತ್ತು. ಅದರ ಪಕ್ಕದಲ್ಲಿಯೇ ಸ್ಟೂಲುಗಳ ಮೇಲೆ ತಾಯಿಮಗಳು ಕುಳಿತರು.

"ನೀವು ಬಹಳ ಬಳಲಿದಂತೆ ತೋರುತ್ತದೆ. ಮೊದಲ ಊಟ ಮಾಡಿ ನಂತರ ನಿಧಾನವಾಗಿ ಮಾತನಾಡೋಣ" ಎಂದು ನುಡಿದು ಮನೆಯೊಡತಿ ಒಳಕ್ಕೆ ಹೋಗಿ ಆಹಾರ ತುಂಬಿದ ತಟ್ಟೆಯನ್ನೂ ವೋಡ್ಕಾ ಮದ್ಯ ತುಂಬಿದ ಗಾಜಿನ ಲೋಟವನ್ನು ತಂದು ಮೇಜಿನ ಮೇಲಿಟ್ಟಳು.

ಹೆಚ್ಚು ಉಪಚರಿಸಿಕೊಳ್ಳದೇ ಆಗಂತುಕ ತಟ್ಟೆಗೆ ಕೈ ಹಾಕಿದ. ಆಗಾಗ ವೋಡ್ಕಾ ಹೀರುತ್ತಾ ಊಟಮುಗಿಸಿದ. ವೋಡ್ಕಾದ ಪ್ರಭಾವದಿಂದ ಮೈ ಮನ ಹಗುರವಾಯಿತು. ಆತ ಕೈ ತೊಳೆಯುತ್ತಾ "ನನಗೀಗ ಹೊಸ ಜೀವ ಮರಳಿ ಬಂದಂತಾಯಿತು. ದೇವರೇ ನನಗೆ ನಿಮ್ಮ ಮನೆಯ ದಾರಿತೋರಿದ. ಅಂದ ಹಾಗೆ ಮನೆಯೊಡೆಯನೆಲ್ಲಿ? ಇಂತಹ ನಿರ್ಜನ ಪ್ರದೇಶದಲ್ಲಿರಲು ನಿಮಗೆ ಹೆದರಿಕೆಯಾಗುವುದಿಲ್ಲವೇ?" ಎಂದು ಕೇಳಿದ.

"ಹೆದರಿಕೆ? ಎಂಥ ಹೆದರಿಕೆ? ನಮ್ಮಲ್ಲಾವ ಸಂಪತ್ತಿದೆ? ಅಕಸ್ಮಾತ್ ಕಳ್ಳಕಾಕ[illegible]ರಾ

(ರಾಬರ್ಟ್ ಬ್ರೂಕ್‌ನ ಮೂಲ ಇಂಗ್ಲೀಷ್ ಕಥಾಂಶದ [illegible])

ದರೂ ಬಂದರೆನ್ನಿ ಆಗ ಹೇಗೂ ನಮ್ಮ ಅನ್ನಾ ಅವರನ್ನು ವಿಚಾರಿಸಿಕೊಳ್ಳುತ್ತಾನೆ. ಅವಳೇನೂ ಯಾವ ಗಂಡಸಿಗೂ ಕಡಿಮೆ ಇಲ್ಲ" ಮನೆಯೊಡತಿ ಮಗಳತ್ತ ಹೆಮ್ಮೆಯಿಂದ ನೋಡುತ್ತ ನುಡಿದಳು.

"ಮೇಡಂ, ದುಡಿಯುವ ಯಜಮಾನ ಒಬ್ಬನೇ. ಸಂಸಾರವನ್ನು ನಿರ್ವಹಿಸುವದೇ ಕಷ್ಟ. ಅಂದಹಾಗೆ ನಿಮಗೆ ಗಂಡುಮಕ್ಕಳಿಲ್ಲವೇ?" ಆಗಂತುಕ ವಿಷಯಾಂತರ ಮಾಡುತ್ತ ಕೇಳಿದ.

ತಾಯಿಯ ಮುಖದ ಮೇಲೆ ವಿಷಾದದ ಗೆರೆ ಮೂಡಿತು. ಆಕೆ ಗದ್ಗದ ಸ್ವರದಲ್ಲಿ "ಹೌದು, ಒಬ್ಬ ಮಗನಿದ್ದ. ಏನು ಕಾರಣವೋ ಮನೆಬಿಟ್ಟು ಹೋದವ ಇನ್ನೂ ಮರಳಿಯೇ ಇಲ್ಲ. ಇಪ್ಪತ್ತು ವರ್ಷಗಳ ಕಾಲವಾಯಿತು" ಎಂದು ಹೇಳಿದಳು.

"ಈ ಪ್ರಶ್ನೆ ಕೇಳಿ ನಿಮಗೆ ದುಃಖವನ್ನುಂಟು ಮಾಡಿದೆ. ಕ್ಷಮಿಸಿ. ದೇವರ ದಯೆಯಿಂದ ಅವನು ಮರಳಿಬರಲಿ. ಬಂದರೆ ಸ್ವಾಗತಿಸುವಿರಾ?"

"ಅವನೀಗ ಜೀವದಿಂದಿರಲಾರ" ಅನ್ನಾ ಮಧ್ಯದಲ್ಲಿಯೇ ಬಾಯಿಹಾಕಿದಳು. ಹೊರಗಡೆ ಯಾರೋ ನಡೆದು ಬರುತ್ತಿರುವ ಸದ್ದಾಯಿತು.

"ಇವಾನ್ ಬಂದನೆಂದು ಕಾಣುತ್ತದೆ" ಎನ್ನುತ್ತ ತಾಯಿ ಬಾಗಿಲು ತೆರೆದಳು. ತೆರೆದ ಬಾಗಿಲಿನಿಂದ ಒಳಗೆ ಪ್ರವೇಶಿಸಿದ ಮಧ್ಯ ವಯಸ್ಸು ದಾಟಿದ ಇವಾನ್ ಆಗಂತುಕನನ್ನು ನೋಡಿ ತಟ್ಟನೇ ನಿಂತ. ಹೆಂಡತಿಯತ್ತ ನೋಡಿದ. ಆಗಂತುಕ ತಟ್ಟನೇ ಮೇಲೆದ್ದು ಅವನ ಕೈಕುಲುಕಿ "ಯಜಮಾನರೆ ತಮ್ಮ ಭೇಟಿ ಯಾದುದು ನನ್ನ ಸೌಭಾಗ್ಯ. ಕಾಡಿನಲ್ಲಿ ದಾರಿ ತಪ್ಪಿ ಅಲೆದಲೆದು ದಣಿದಿದ್ದ ನಾನು ನಿಮ್ಮವರ ಉಪಚಾರದಿಂದ ಚೇತರಿಸಿಕೊಂಡೆ" ಎಂದ.

"ಸರ್! ನಿಮ್ಮನ್ನು ನೋಡಿದರೆ ಶ್ರೀಮಂತರ ಹಾಗೆ ಕಾಣುತ್ತೀರಿ. ಈ ಕಾಡಿನಲ್ಲಿ ಕಾಲ್ನಡಿಗೆಯಲ್ಲಿ ಎಲ್ಲಿಗೆ ಹೊರಟಿದ್ದೀರಿ?" ಇವಾನ್ ಪ್ರಶ್ನಿಸಿದ.

"ಒಂದು ಸರಕಾರೀ ಕೆಲಸದ ನಿಮಿತ್ತ ಮೊಹಿಲಿವಿ ನಗರಕ್ಕೆ ಹೊರಟಿದ್ದೆ. ಕಾಡಿನಲ್ಲಿ ದಾರಿತಪ್ಪಿ ಇಲ್ಲಿಗೆ ಬಂದೆ".

"ಮೊಹಿಲಿವಿ ನಗರ ಇರುವುದು ಆ ದಿಕ್ಕಿಗೆ. ನೀವು ವಿರುದ್ಧ ದಿಕ್ಕಿಗೇ ಬಂದಿದ್ದೀರಿ, ಅದೂ ಈ ಭಾರವಾದ ಬ್ಯಾಗ್ ಹೊತ್ತು" ಬ್ಯಾಗನ್ನೇ ಕುತೂಹಲದಿಂದ ನೋಡುತ್ತಾ ಇವಾನ್ ಪ್ರಶ್ನಿಸಿದ.

"ಅಯ್ಯೋ ಬಿಡಿ. ಈ ಬ್ಯಾಗಿನಲ್ಲಿ ಏನಿದೆ? ಕೆಲವು ಕಾಗದ ಪತ್ರಗಳು, ಕೊಂಚ ಹಣ" ಬ್ಯಾಗನ್ನು ತೆರೆದು ಆಗಂತುಕ ಅದರಿಂದ ನೋಟಿನ ಕಂತೆಗಳನ್ನೆತ್ತಿ ಮೇಜಿನ ಮೇಲೆ ಹರಡಿದ. ಆ ಹಣದ ರಾಶಿಯನ್ನು ಎಲ್ಲರೂ ಆಸೆಯ ಕಣ್ಣುಗಳಿಂದ ನೋಡತೊಡಗಿದರು. ಆ ಕಂತೆಗಳನ್ನೆತ್ತಿ ಪುನಃ ಬ್ಯಾಗಿಗೆ ತುಂಬುತ್ತ ಆಗಂತುಕ

"ಇಷ್ಟು ಹಣವನ್ನು ಈ ಮೊದಲು ತಾವು ಕಂಡಿದ್ದುಂಟೆ?" ಎಂದ.

"ಇಲ್ಲ ರಾಯರೆ ಇಲ್ಲ. ಖಂಡಿತವಾಗಿಯೂ ಇಲ್ಲ" ಇವಾನ್ ತೊದಲಿದ.

"ಇಷ್ಟು ಹಣದೊಂದಿಗೆ ಕಾಡಿನಲ್ಲಿ ಒಂಟಿಯಾಗಿ ತಿರುಗುವುದು ಅಪಾಯಕರ" ಅನ್ನಾ ತನಗೆ ತಾನೇ ಹೇಳಿಕೊಂಡಳು.

"ನನ್ನ ಇಡೀ ದಿನದ ಅಲೆದಾಟದಲ್ಲಿ ಒಬ್ಬ ಮನುಷ್ಯನಾಗಲಿ ಒಂದು ಪ್ರಾಣಿಯಾಗಲಿ ಕಣ್ಣಿಗೆ ಬೀಳಲಿಲ್ಲ. ಕತ್ತಲೆಯಾವರಿಸತೊಡಗಿದಾಗ ದೂರದಲ್ಲಿ ಕಂಡ ಮಿಣುಕು ದೀಪವನ್ನೇ ಅನುಸರಿಸಿ ಇಲ್ಲಿಗೆ ಬಂದು ಸೇರಿದೆ" ಆಗಂತುಕ ನುಡಿದ.

"ಇಲ್ಲೇ ಕೆಳಗೆ ಕಣಿವೆಯಲ್ಲಿ ಮೂರು ನಾಲ್ಕು ಮನೆಗಳಿವೆ. ನಾಲ್ಕಾರು ನಿಮಿಷಗಳಲ್ಲಿ ಅಲ್ಲಿಗೆ ಹೋಗಿ ಸೇರಬಹುದು. ನಾನು ಅಲ್ಲಿಯೇ ಕೆಲಸಕ್ಕೆ ಹೋಗುವುದು". ಇವಾನ್ ನುಡಿದ.

"ಈಗ ಚಳಿಗಾಲ. ದುಡಿಮೆ ಕಡಿಮೆ. ತೊಂದರೆಯಾಗುವುದಿಲ್ಲವೇ?"

"ಹೌದು ಚಳಿಗಾಲ ಆಗಲೇ ಆರಂಭವಾಗಿದೆ" ಮನೆಯೊಡತಿ ಉದ್ಗರಿಸಿದಳು.

"ಚಳಿಗಾಲಕ್ಕೆಂದು ಸ್ವಲ್ಪ ಉಳಿತಾಯ ಮಾಡಿದರೆ ಚೆನ್ನಲ್ಲವೇ? ಇದರಿಂದ ಯಾವದಾದರೂ ಒಂದು ನಗರಕ್ಕೆ ಹೋಗಿ ದುಡಿಮೆಯನ್ನು ಹುಡುಕಿಕೊಳ್ಳಬಹುದು" ಆಗಂತುಕ ಸಲಹೆ ನೀಡಿದ.

"ಅದಕ್ಕೂ ದೇವರ ದಯೆ ಬೇಕು" ಇವಾನ್ ನಿರಾಸೆಯಿಂದ ಉದ್ಗರಿಸಿದ.

"ದಾರಿ ತಪ್ಪಿ ಅಲೆದು ದಣಿವಾಗಿದೆ. ಈಗ ಗಂಟೆ ಎಷ್ಟಾಗಿರಬಹುದು?" ಆಗಂತುಕ ಪ್ರಶ್ನಿಸಿದ.

"ಸುಮಾರು ಎಂಟುಗಂಟೆ".

ಆಗಂತುಕ ತನ್ನ ಕೋಟಿನ ಜೇಬಿಗೆ ಕೈ ಹಾಕಿ ಗಡಿಯಾರವನ್ನು ಹೊರತೆಗೆದ. ಲಾಂದ್ರದ ಮಂದ ಬೆಳಕಿನಲ್ಲಿ ಅದರ ಚಿನ್ನದ ಚೈನು ಥಳಥಳಿಸಿತು. ಅದರಲ್ಲಿ ವೇಳೆ ನೋಡಿಕೊಂಡು ಅದನ್ನು ಅಲ್ಲಿಯೇ ಕಂಬಕ್ಕೆ ನೇತುಹಾಕಿದ. ಉಳಿದ ಮೂವರ ಕಣ್ಣುಗಳೂ ಆ ಗಡಿಯಾರದಲ್ಲಿಯೇ ಕೀಲಿಸಿದವು.

"ನಿಮ್ಮ ಬಳಿ ಗಡಿಯಾರ ಇಲ್ಲ ಅಲ್ಲವೆ?" ಎಂದು ಕೇಳಿದ ಆಗಂತುಕ.

"ನನಗೀಗ ನಿದ್ರೆ ಬರುತ್ತಲಿದೆ. ಮಲಗಲೇ?" ಎಂದು ಪ್ರಶ್ನಿಸಿದ.

"ಬನ್ನಿ ಬನ್ನಿ ನಿಮಗೆ ಮಲಗುವ ಸ್ಥಳ ತೋರಿಸು ತ್ತೇನೆ". ಒಡತಿ ಲಾಂದ್ರವನೆತ್ತಿಕೊಂಡು ಮೇಲೆದ್ದಳು.

ಅವಳೊಂದಿಗೆ ಏಳುತ್ತ ಆಗಂತುಕ "ಗುಡ್ ನೈಟ್ ಅನ್ನಾ. ಗುಡ್‌ನೈಟ್ ಇವಾನ್. ಇಂದು ನೀವು ನೀಡಿದ ಸತ್ಕಾರಕ್ಕಾಗಿ ನಾಳೆ ನಿಮಗೆ ನನ್ನದೇ ಆದ ವಿಶಿಷ್ಟರೀತಿಯಲ್ಲಿ ಪ್ರತ್ಯುಪಕಾರ ಮಾಡುವೆ" ಎಂದು ಹೇಳಿ ಒಡತಿಯನ್ನು ಅನುಸರಿಸಿ ಅಟ್ಟವೇರಿ ಕೊಠಡಿಯನ್ನು ಸೇರಿಕೊಂಡ.

ಒಡತಿ ಕೆಳಗಿಳಿದು ಬಂದಾಗ ಅನ್ನಾ ಅಗ್ಗಿಷ್ಟಿಕೆಯ ಮುಂದೂ ಇವಾನ್ ಊಟದ ಮೇಜಿನ ಮುಂದೂ ಕುಳಿತಿದ್ದರು. ಮನೆಯೊಡತಿ ಮೌನವಾಗಿ ತಟ್ಟೆ ಇಟ್ಟು ಮಿಕ್ಕಿದ್ದನ್ನು ಬಡಿಸಿದಳು. ಇವಾನ್ ತಿನ್ನುತ್ತಿರುವಾಗಲೇ "ಇಂದಾದರೂ ಏನಾದರೂ ಸಿಕ್ಕಿತೇ?" ಎಂದು ಕೇಳಿದಳು.

"ಇಲ್ಲಿ, ಅರಣ್ಯವೇ ಬರದಾಗಿರುವಂತಿದೆ. ಒಂದು ಮೊಲವಾಗಲಿ, ಕೊನೆಗೆ ಒಂದು ಹಕ್ಕಿಯಾದರೂ ಸಿಗಲಿಲ್ಲ" ನಿರಾಸೆಯಿಂದ ತಲೆಯಾಡಿಸುತ್ತ ಇವಾನ್ ನುಡಿದ.

"ಹಾಗಾದರೆ ನಾವು ಚಳಿಗಾಲವನ್ನು ಹೇಗೆ ಕಳೆಯುವದು?"

"ನನಗೇನೋ ಈಗ ವಿಪರೀತ ಹಸಿವು. ಈ ದರಿದ್ರದ ಮನೆಯಲ್ಲಿ ಹೊಟ್ಟೆತುಂಬ ತಿನ್ನಲಿಕ್ಕಾದರೂ ಇಲ್ಲ" ಇವಾನ್ ಗೊಣಗಿದ.

"ಮನೆಯಲ್ಲಿ ಇದ್ದುದೆಲ್ಲವನ್ನೂ ಆ ಅತಿಥಿಗೆ ನೀಡಿದೆ. ಅವನು ಶ್ರೀಮಂತ. ನಮಗೆ ಒಂದು ವಾರಕ್ಕಾಗುವಷ್ಟನ್ನಾದರೂ ಕೊಟ್ಟಾನು".

"ಅದು ಸರಿ ನಂತರ?"

"ದೇವರ ನಡೆಸಿದಂತಾಗುತ್ತದೆ".

ತನ್ನ ಪಾಲಿನ ಆಹಾರ ಮತ್ತು ವೋಡ್ಕಾ ಅತಿಥಿಯ ಪಾಲಾಗಿದ್ದು ಅವನ ಸಿಡುಕಿಗೆ ಕಾರಣವಾಗಿತ್ತು. ಈ ಬಗೆಯ ಜೀವನದಿಂದ ರೋಸಿ ಹೋಗಿದ್ದೇನೆ. ನಾನೊಬ್ಬನೇ ನಗರಕ್ಕೆ ಹೋಗುತ್ತೇನೆ. ದುಡಿಯುತ್ತೇನೆ. ರಾಶಿರಾಶಿ ಗಳಿಸುತ್ತೇನೆ. ಹೊಟ್ಟೆ ತುಂಬಾ ಉಣ್ಣುತ್ತೇನೆ. ಮನದಣಿಯುವಂತೆ ವೋಡ್ಕಾ ಹೀರುತ್ತೇನೆ. ನಿಮ್ಮಿಬ್ಬರ ಹೊಟ್ಟೆಗೆ ಹಾಕಲು ನಾನೇಕೆ ಕತ್ತೆಯಂತೆ ದುಡಿಯಬೇಕು? ಆ ಚಿನ್ನದ ಗಡಿಯಾರ



ನೋಡು. ಅದರಿಂದ ನಮ್ಮೆಲ್ಲರ ಒಂದು ವರ್ಷದ ಹಸಿವು ನೀಗಿತಲ್ಲವೇ? ಅವನು ಯಾರು? ಅವನ ಬಳಿ ಅದು ಹೇಗೆ ಬಂದಿತು? 'ನಿನ್ನಬಳಿ ಗಡಿಯಾರವಿಲ್ಲ' ಎಂದವನು ನನ್ನ ಬಡತನವನ್ನೇಕ ಹಂಗಿಸಬೇಕು?" ಇವಾನ್ ರೊಚ್ಚಿನಿಂದ ಪ್ರಶ್ನೆಗಳ ಮಳೆಗರೆದ.

"ಕುಡಿದ ಅಮಲಿನಲ್ಲಿ ಅವನು ಹಾಗೆಂದಿರಬೇಕು. ಎಷ್ಟಾದರೂ ಅವನು ಶ್ರೀಮಂತ".

"ಕುಡಿದ ಮತ್ತಲ್ಲ. ನನಗೆ ಗೊತ್ತು. ಅವನೊಬ್ಬ ಹುಚ್ಚ. ಬುದ್ಧಿ ಇದ್ದ ಯಾರಾದರೂ ಇಷ್ಟೊಂದು ಹಣದೊಂದಿಗೆ ನಿರ್ಜನ ಪ್ರದೇಶ ದಲ್ಲಿ ಒಂಟಿಯಾಗಿ ಸಂಚರಿಸುತ್ತಾರೆಯೇ?"

"ಅವನು ಕಾಡಿನಲ್ಲಿ ಸುತ್ತುತ್ತಿರುವುದನ್ನು ಯಾರೂ ಕಂಡಿರಲಾರರು" ಇದುವರೆಗೂ ಸುಮ್ಮನಿದ್ದ ಅನ್ನಾ ನುಡಿದಳು.

"ಅವನು ಹುಚ್ಚನಿರಲಾರ. ಅವನ ನಡತೆ ನೋಟದ ಕಂತೆಗಳನ್ನು ನೋಡಿದಾಗ ಅವ ನೊಬ್ಬ ಕಳ್ಳನೆನ್ನುವ ಸಂದೇಹ ಬರುತ್ತದೆ. ಇಲ್ಲದಿದ್ದರೆ ಅವನೇಕೆ ಈ ಕಾಡಿಗೆ ಬರಬೇಕಾ ಗಿತ್ತು? ಬಹುಶಃ ಅವಿತುಕೊಳ್ಳಲೆಂದೆ ಬಂದಿರ ಬೇಕು" ಇವಾನ್ ನುಡಿದ. ಅನ್ನಾನ ತಲೆಯಲ್ಲಿ ಬೇರೆಯೇ ವಿಚಾರ ನಡೆದಿತ್ತು.

"ಅವನು ನಮ್ಮಲ್ಲಿಗೆ ಬಂದದ್ದು ಯಾರಿಗೂ ಗೊತ್ತಿಲ್ಲ" ಆಕೆ ದೃಢವಾಗಿ ನುಡಿದಳು.

ಇವಾನ್ ಕುಳಿತಲ್ಲಿಂದ ಎದ್ದು ಗೋಡೆಗೆ ತಗುಲಿಹಾಕಿದ ಗಡಿಯಾರದತ್ತ ಹೋದ. ಅದನ್ನು ಕೈಗೆತ್ತಿಕೊಂಡು ತಿರುಗಿಸಿ ತಿರುಗಿಸಿ ನಿಟ್ಟಿಸಿ ನೋಡುತ್ತ ತನ್ನಷ್ಟಕ್ಕೆ ತಾನೇ ಗೊಣಗಿಕೊಂಡ.

"ಈ ಚಿನ್ನದ ವಸ್ತು ಈ ಅಪಾರ ಹಣ ಇವುಗಳನ್ನು ಇಟ್ಟುಕೊಳ್ಳಲು ಅವನಿಗೆ ಯಾವ ಹಕ್ಕಿದೆ? ಅವುಗಳನ್ನು ಇವನು ಕದ್ದು ತಂದಿ ರಲೇ ಬೇಕು".

ಆದರೆ ಅವನು ಕುಳ್ಳನೆಯ ದುರ್ಬಲ ವ್ಯಕ್ತಿ" ಅನ್ನಾ ಉಸುರಿದಳು.

"ನಾನು ರಕ್ತ ಬೆವರು ಸುರಿಸಿ ದುಡಿಯುತ್ತೇನೆ. ಆದರೂ ಉಪವಾಸ ತಪ್ಪಿಲ್ಲ. ಏನೂ ದುಡಿ ಯದ ಈ ಕಳ್ಳನ ಬಳಿ ರಾಶಿ ರಾಶಿ ಹಣವಿದೆ. ದೇವರನ್ನು ವಂಚಿಸಿದ್ದರೆ ಹೀಗಾಗಲು ಸಾಧ್ಯ ವಿತ್ತೇ?"

"ಓ ದೇವರೇ!" ಮನೆಯೊಡತಿ ಉದ್ಗರಿಸಿ ದಳು.

"ಈ ಹಣವನ್ನು ಇಟ್ಟುಕೊಳ್ಳಲು ಅವನಿಗೆಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನನಗೂ ಇದೆ" ಇವಾನ್ ದರ್ಪದಿಂದ ನುಡಿದ.

"ಹುಶ್. ಮೆತ್ತಗೆ ಮಾತಾಡಿ. ಅವನಿಗೆ ಎಚ್ಚರವಾದೀತು" ಹೆಂಡತಿ ಎಚ್ಚರಿಸಿದಳು.

"ಆದರೆ ಆಗಲಿ" ಇವಾನ್ ನಿರ್ಲಕ್ಷ್ಯದಿಂದ ಎನ್ನುವಂತೆ ನುಡಿದರೂ ಅವನಿಗೇ ಅರಿವಿಲ್ಲ ದಂತೆ ಅವನ ಧ್ವನಿ ಇಳಿಯಿತು.

"ಅವನು ಗಾಢನಿದ್ರೆಯಲ್ಲಿರಬಹುದು" ಅನ್ನಾ ನುಡಿದಳು.

ತನ್ನ ಎರಡೂ ಕೈಗಳನ್ನು ಅಗ್ಗಿಷ್ಟಿಕೆಯ ಶಾಖಕ್ಕೆ ಒಡ್ಡಿ ಮನೆಯೊಡತಿ "ಈ ಚಳಿ ಯಿಂದ ಇಂದು ಪಾರಾಗದಿದ್ದರೆ ಮುಂದೆಂದೂ ಪಾರಾಗಲಾರೆವು". ಎಂದಳು. ತಾಯಿ-ಮಗಳು ಇಬ್ಬರೂ ಅರ್ಥಪೂರ್ಣವಾಗಿ ಪರಸ್ಪರ ಮುಖ ನೋಡಿಕೊಂಡರು. "ನೀವು ಹಾಗೇಕೆ ನನ್ನನ್ನು ನೋಡುತ್ತಿರುವಿರಿ? ಏನು ಯೋಚಿಸುತ್ತಿ ದ್ದೀರಿ?" ಎಂದು ಸಿಡಿಮಿಡಿಯಿಂದ ಇವಾನ್ ಕೇಳಿದ. ಅವನು ಸೂಕ್ಷ್ಮವಾಗಿ ಕಂಪಿಸುತ್ತಿದ್ದ.

"ಇವಾನ್ ನೀನೇಕೆ ನಡುಗುತ್ತಿರುವೆ?" ಹೆಂಡತಿ ಕೇಳಿದಳು.

ಇವಾನ್ ದೀರ್ಘವಾಗಿ ನಿಟ್ಟುಸಿರಿಟ್ಟ. ಅವನ ನೋಟ ಅಟ್ಟದ ಮೇಲಿನ ಕೊಠಡಿಯ ಮುಚ್ಚಿದ ಬಾಗಿಲಿನತ್ತ ಹರಿಯಿತು.

"ಹಿಂದೊಮ್ಮೆ ಕಾಳಗದಲ್ಲಿ ಒಬ್ಬನನ್ನು ಕೊಂದಿದ್ದೆ. ದೇವರೇ ಅದನ್ನೇ ನಾನೀಗ ಮಾಡಲಾರೆ. ಆ ಬಗ್ಗೆ ಆಲೋಚಿಸಬೇಕು ನಾಳೆ". ಆತ ಕೀರಲು ಧ್ವನಿಯಲ್ಲಿ ಹೇಳಿದ.

"ಈಗಲೇ" ಅನ್ನಾ ನುಡಿದಳು.

"ನಾಳೆ..." ಇವಾನ್ ಸಿಡುಕಿನಿಂದ ತೊದಲಿದ.

"ಇಲ್ಲ, ಈ ಕೂಡಲೇ" ಅನ್ನಾ ಹಟದ ಧ್ವನಿಯಲ್ಲಿ ಹೇಳಿದಳು.

"ಆದರೆ...ಆದರೆ ಅವನು ನಮ್ಮ ಅತಿಥಿ" ಇವಾನ್ ತಡವರಿಸಿದ.

"ಅವನು ಕಳ್ಳ" ಒಡತಿ ಮಧ್ಯ ನುಡಿದಳು.



"ಅವನೀಗ ಗಾಢ ನಿದ್ರೆಯಲ್ಲಿದ್ದಾನೆ. ನಾವಿಬ್ಬರೂ ಅವನನ್ನು ಗಟ್ಟಿಯಾಗಿ ಅಲುಗಾಡದಂತೆ ಹಿಡಿದುಕೊಳ್ಳುತ್ತೇವೆ. ಯಾರಿಗೂ ವಿಷಯ ಗೊತ್ತಾಗುವುದೇ ಇಲ್ಲ. ಆ ಚಿನ್ನ ಆ ಅಪಾರ ಹಣ ನಮ್ಮದೇ" ಉದ್ವೇಗದಿಂದ ಅನ್ನಾ ನುಡಿದಳು.

ಇವಾನ್ ಟೇಬಲ್ ಡ್ರಾಗೆ ಕೈಹಾಕಿ ಚೂರಿಯೊಂದನ್ನು ಎತ್ತಿಕೊಂಡ. ದೀಪದ ಮಂದಬೆಳಕಿನಲ್ಲಿ ಆ ಆಯುಧ ಫಳಫಳನೆ ಹೊಳೆಯಿತು. ಒಂದು ಕೈಯಲ್ಲಿ ಆಯುಧ ಇನ್ನೊಂದು ಕೈಯಲ್ಲಿ ದೀಪವನ್ನು ಎತ್ತಿಕೊಂಡು ಇವಾನ್ ಏಣಿಯತ್ತ ನಡೆದ. ತಾಯಿ-ಮಗಳು ಅವನನ್ನು ಹಿಂಬಾಲಿಸಿದರು.

"ನೀವಿಲ್ಲೇ ಇರಿ. ಭೀತಿಯಿಂದ ಬಿಳಿಚಿಕೊಂಡಿದ್ದೀರಿ" ಇವಾನ್ ಅವರಿಗೆ ಹೇಳಿ ಬೇಗ ಬೇಗ ನಿಶ್ಶಬ್ದವಾಗಿ ಏಣಿಯನ್ನೇರಿದ. ಉಸಿರು ಬಿಗಿಹಿಡಿದು ತಾಯಿ-ಮಗಳು ಅವನನ್ನೇ ನೋಡುತ್ತಿದ್ದರು. ಮೇಲೆ ಕೊಠಡಿಯಲ್ಲಿ ಕೊಂಚ ಸದ್ದಾಯಿತು. ಮರುಕ್ಷಣ ಇವಾನ್ ಕೆಳಗೆ ಇಳಿದುಬಂದ. ಅವನು ನಡುಗುತ್ತಿದ್ದ. ಮೈ ಬೆವೆತಿತ್ತು ಏದುಸಿರು ಬಿಡುತ್ತಿದ್ದ. ಮನೆಯೊಡತಿ ಅವನನ್ನೇ ನೋಡುತ್ತಿದ್ದಳು.

"ಚೂರಿ ಸ್ವಚ್ಛವಾಗಿದೆ" ಮಗಳು ಉದ್ಗರಿಸಿದಳು.

"ಪೂರೈಸಲಿಲ್ಲವೇ?" ತಾಯಿ ಕೇಳಿದಳು.

"ಇಲ್ಲ" ಕಂಪಿಸುತ್ತಿರುವ ಧ್ವನಿಯಲ್ಲಿ ಉತ್ತರಿಸುತ್ತ ಇವಾನ್ ಪಕ್ಕದ ಕುರ್ಚಿಯಲ್ಲಿ ಕುಸಿದು ಕುಳಿತ "ನನ್ನ ಮನಸ್ಸೇಕೋ ಇಂದು ಸರಿಯಾಗಿಲ್ಲ. ದಿನವೆಲ್ಲ ದುಡಿತ, ಸತ್ತಂತಾಗಿದ್ದೇನೆ. ಮೇಲೆ ಹೋದ ನನಗೆ ಏಕೋ ಕೊಠಡಿಯ ಒಳಗೆ ಹೋಗಲು ಕೂಡ ಸಾಧ್ಯವಾಗಲಿಲ್ಲ" ಆಸ್ತಮಾ ರೋಗಿಯಂತೆ ಇವಾನ್ ತೇಕತೊಡಗಿದ. ಕೆಮ್ಮಿದ.

"ನೀನು ಅದನ್ನು ಮಾಡಲೇಬೇಕು" ಹೆಂಡತಿ ಆಜ್ಞಾಪಿಸುವಂತೆ ಹೇಳಿದಳು.

"ಈ ಸ್ಥಿತಿಯಲ್ಲಿ ನನ್ನಿಂದದು ಸಾಧ್ಯವೇ ಇಲ್ಲ. ನಾನೀಗ ವೋಡ್ಕಾ ಹೀರಬೇಕು. ಅದರಿಂದ ಮಾತ್ರ ಅಷ್ಟಿಷ್ಟು ಧೈರ್ಯ ಬರಬಹುದು".

"ಇದ್ದ ಕೊಂಚ ವೋಡ್ಕಾವನ್ನು ಅವನೇ

ಕುಡಿದ". ಅನ್ನಾ ಕಟುಕಿದಳು. "ಇವಾನ್ ಮೇಲೆದ್ದು ಗೋಡೆಗೆ ತಗಲಿಹಾಕಿದ್ದ ತನ್ನ ಓವರ್ ಕೋಟನ್ನು ಧರಿಸುತ್ತಾ "ನನ್ನಲ್ಲಿ ಕೊಂಚ ಹಣ ಉಂಟು. ಹೆಂಡದಂಗಡಿಗೆ ಹೋಗಿ ವೋಡ್ಕಾ ಹೀರುತ್ತೇನೆ. ಅದರ ಅಮಲಿನಲ್ಲಿಯೇ ಧರ್ಮ, ದೇವರು, ನ್ಯಾಯಗಳನ್ನು ಮರೆಯುತ್ತೇನೆ. ಆಗ ಯಾರ ಎದೆಗೇ ಆಗಲಿ ಚೂರಿಹಾಕುವ ಸಾಮರ್ಥ್ಯ ಬರುತ್ತದೆ. ಅವನನ್ನು ಮುಗಿಸಿಯೇ ತೀರುತ್ತೇನೆ ಜೀಸಸ್‌ನ ಮೇಲಾಣೆ" ಅಂದು ಬಾಗಿಲನ್ನು ದಾಟುತ್ತ ಇವಾನ್ ಮತ್ತೆ ನುಡಿದ.

ಹೊರಗೆ ಹೋಗುತ್ತಿದ್ದ ಅವನ ಆಕೃತಿ-ಹೆಜ್ಜೆಯ ಸದ್ದುಗಳು ಕ್ರಮೇಣ ಕತ್ತಲಿನಲ್ಲಿ ಕರಗಿ ಹೋದವು. ಅನ್ನಾ ಹಾಗೂ ಒಡತಿ ಅಗ್ಗಿಷ್ಟಿಕೆಯ ಮುಂದೆ ಕುಳಿತು ಗಾಢವಾಗಿ ಆಲೋಚಿಸ ತೊಡಗಿದರು.

"ಡ್ಯಾಡ್ ಪುಕ್ಕಲು" ಅನ್ನಾ ವ್ಯಾಖ್ಯಾನಿಸಿದಳು.

"ಪುಕ್ಕನಲ್ಲ ಕೊಂಚ ಆಲೋಚಿಸುತ್ತಾನೆ. ಕುಡಿದರೆ ಸರಿಹೋಗುತ್ತಾನೆ". ಹೆಂಡತಿ ಅವನನ್ನು ಸಮರ್ಥಿಸಿಕೊಂಡಳು.

"ಒಂದು ವೇಳೆ ನಾನೇ ಯಾರನ್ನಾದರೂ ಕೊಲ್ಲಬೇಕಾಗಿ ಬಂದರೆ. ಅದಕ್ಕಾಗಿ ಎಂದೂ ಯೋಚಿಸುತ್ತ ಕುಳಿತುಕೊಳ್ಳುತ್ತಿದ್ದಿಲ್ಲ, ಹೀಗೆ ವೃಥಾಕಾಲಹರಣ ಮಾಡುತ್ತಿದ್ದಿಲ್ಲ" ಅನ್ನಾ ನುಡಿದಳು.

ಕೆಲಸಮಯ ಮೌನ ಆವರಿಸಿತು. ವಾತಾವರಣವೇ ನಿಗೂಢವಾಗಿತ್ತು. ಅಗ್ಗಿಷ್ಟಿಕೆಗೆ ಇನ್ನಷ್ಟು ಕಟ್ಟಿಗೆ ತುಂಡುಗಳನ್ನು ಹಾಕಿ ಸರಿಪಡಿಸುತ್ತ ಒಡತಿ ನುಡಿದಳು.

"ಇವಾನ್‌ನೇನೋ ಕೂಡಲೇ ಬರುವುದಾಗಿ ಹೇಳಿ ಹೋದ. ಆದರೆ ಈಗಲೆ ಬಹಳ ಹೊತ್ತಾಯಿತು. ನಮಗೋ ಅವನಿಗಾಗಿ ಕಾಯುವುದೇ ಕಷ್ಟವಾಗಿದೆ" ಎಂದು ಗೋಡೆಯ ಮೇಲಿನ ಚಿನ್ನದ ಗಡಿಯಾರವನ್ನು ನೋಡುತ್ತ "ಅವನು ನಿಜವಾಗಿಯೂ ಕಳ್ಳನಿರಬಹುದೇ?" ಎಂದು ಅನ್ನಾಳನ್ನು ಕೇಳಿದಳು.

"ಇರಬಹುದು ಇಲ್ಲದಿರಬಹುದು ಆದರೆ ಈ ಕೆಲಸ ಪೂರೈಸಿದರೆ ಮಾತ್ರ ನಾವು ಸುಖವಾಗಿರಬಹುದು" ಅನ್ನಾ ಹೇಳಿದಳು.

ಕಿಟಕಿಯಿಂದ ಹೊರಗೆ ಕತ್ತಲೆಯಲ್ಲಿ

ಜೊಲ್ಲು

ನಿನ್ನ ಗಲ್ಲ
ರಸಗುಲ್ಲಾ
ಎಂದ ಹುಡುಗನಿಗೆ
ಹಾಗಾದರೆ ಜೊಲ್ಲು
ಏನೆಂದು ಕೇಳಿದಳು?
ತುಂಟ ಹುಡಿಗಿ.

ಡಿ.ವಿ. ಬಡಿಗೇರ

ಇವಾನ್‌ನ ಬರವನ್ನು ನಿರೀಕ್ಷಿಸುತ್ತ ತಾಯಿ ಕೇಳಿದಳು.

"ಅವನು ನಮ್ಮಲ್ಲಿಗೆ ಬಂದದನ್ನು ಯಾರಾದರೂ ಕಂಡಿರಬಹುದೇ?"

"ಸಾಧ್ಯವೇ ಇಲ್ಲ" ಅನ್ನಾ ಮೊಟಕಾಗಿ ಉತ್ತರಿಸಿದಳು.

ಇವರು ಹೀಗೆ ಮಾತನ್ನಾಡುತ್ತಿರುವಾಗಲೇ ಮೇಲೆ ಅಟ್ಟದ ಕೊಠಡಿಯ ಬಾಗಿಲು ತೆರೆದುಕೊಂಡ ಸದ್ದಾಯಿತು ಅದರಿಂದ ಹೊರಬಂದ ಆಗಂತುಕ ಏಣಿಯ ಮೆಟ್ಟಲುಗಳನ್ನು ಇಳಿಯ ತೊಡಗಿದ. ಅವನನ್ನು ಕಂಡ ತಾಯಿ ಮಗಳ ಬ್ಬರ ಮುಖದ ಮೇಲೂ ಭೀತಿಯ ಛಾಯೆ ಇಣುಕಿತು.

"ರಾಯರೆ, ತಮಗೇನಾದರೂ ಬೇಕಿತ್ತೇ?" ಲಗುಬಗೆಯಿಂದ ಮೇಲೇಳುತ್ತ ತಾಯಿ ನುಡಿದಳು.

"ಇವಾನ್ ಇಲ್ಲವೆ? ಅವರೊಂದಿಗೆ ಒಂದೆರಡು ಮಾತುಗಳನ್ನಾಡಬೇಕಿತ್ತು".

"ಅವರು ಹೊರಗೆ ಹೋಗಿದ್ದಾರೆ. ಬರುವುದು ತಡವಾಗಬಹುದು ನಮ್ಮ ಮಾತುಗಳಿಂದ ನಿದ್ದೆ ಕೆಟ್ಟಿತೆ?" ತಾಯಿ ಆತಂಕದಿಂದ ಕೇಳಿದಳು.

"ಇಲ್ಲ ಇಲ್ಲ, ಇರಲಿ ಇವಾನ್‌ರೊಂದಿಗೆ ಹೇಳಬೇಕಾದ ಮಹತ್ವದ ವಿಷಯವನ್ನು ನಾಳೆಯೇ ಹೇಳಿದರಾಯಿತು" ಆಗಂತುಕ ನುಡಿದ.

"ಓಹ್! ಎಂಥ ಚಳಿ" ಎಂದು ಉದ್ಗರಿಸುತ್ತ ತಾಯಿ ಲಗುಬಗೆಯಿಂದ ಬೀದಿಯಕಡೆಯ

ಕಿಟಕಿಯ ಬಾಗಿಲನ್ನು ಮುಚ್ಚಿದಳು "ತಮಗೇನಾದರೂ ಬೇಕೆ? ನಮಗೆ ನಿದ್ರೆ ಬರುತ್ತಿದೆ".

"ಏನೂ ಇಲ್ಲ, ಆದರೆ ಇವಾನರಿಗೆ ಒಂದು ವಿಷಯ ಹೇಳುವುದಿತ್ತು". ಎಂದು ನುಡಿಯುತ್ತಲೇ ಆಗಂತುಕ ಮೆಟ್ಟಲುಗಳನ್ನು ಏರತೊಡಗಿದ.

"ನಾವು ಮಾತನಾಡುತ್ತಿದ್ದೆವು. ಅದರಿಂದೇನಾದರೂ ತಮಗೆ ಎಚ್ಚರವಾಯಿತೇ?" ತಾಯಿ ಸಂದೇಹದಿಂದ ಪ್ರಶ್ನಿಸಿದಳು.

"ಇಲ್ಲ. ಖಂಡಿತವಾಗಿಯೂ ಇಲ್ಲ"

"ಸರಿ, ನೀವು ಹಾಯಾಗಿ ನಿದ್ರಿಸಿ. ನಾವಿನ್ನು ಸದ್ದು ಮಾಡುವದಿಲ್ಲ". ಅನ್ನಾ ನುಡಿದಳು.

"ಕ್ಷಮಿಸಿ, ನಿಮಗೆ ತೊಂದರೆ ಕೊಟ್ಟೆ" ಅಟ್ಟದಿಂದ ಆಗಂತುಕ ನುಡಿದ "ನಾಳೆ ಬೆಳಿಗ್ಗೆ ನಿಮಗೆ ಒಂದು ಸಂತಸದ ವಾರ್ತೆ ಹೇಳುತ್ತೇನೆ" ಆಗಂತುಕ ತನ್ನ ಕೊಠಡಿಯ ಒಳಸೇರಿ ಬಾಗಿಲು ಮುಚ್ಚಿಕೊಂಡ.

ಅನ್ನಾ ಕುಳಿತ ಸ್ಥಳದಿಂದ ಮೇಲೆದ್ದು ತಾಯಿಯ ಬಳಿ ಬಂದಳು. ಮೆಲು ದನಿಯಲ್ಲಿ ನುಡಿದಳು.

"ಅವನೇಕೆ ಈಗ ಎದ್ದು ಬಂದ? ಹಾಗೇಕೆ ಹೇಳಿದ?"

"ನನಗೆ ತಿಳಿಯದು" ತಾಯಿ ಉತ್ತರಿಸಿದಳು. ಕೆಲವು ಕ್ಷಣ ಮೌನ ಆವರಿಸಿತು.

"ಅವನು ಪುನಃ ಕೆಳಗಿಳಿದು ಬರಬಹುದೇ?" ತಾಯಿ ಪ್ರಶ್ನಿಸಿದಳು. ಅವಳ ಮಾತಿಗೆ ಲಕ್ಷ್ಯಗೊಡದೇ ಅನ್ನಾ ತನ್ನಲ್ಲಿಯೇ "ಪ್ಯಾಟೀ ಹೋಗಿ ಗಂಟೆಗಳೇ ಕಳೆದವು" ಎಂದು ಗೊಣಗಿಕೊಂಡಳು.

"ಹೊರಗೆ ಅದೇನು ಸದ್ದು?" ತಾಯಿ ಆತಂಕದಿಂದ ಪ್ರಶ್ನಿಸಿದಳು.

"ಯಾವ ಸದ್ದೂ ಇಲ್ಲ. ನಿನಗೆ ಭ್ರಮೆ".

"ಈ ಸಲವೂ ಇವಾನ್ 'ಅದನ್ನು' ಮಾಡದಿದ್ದರೆ?"

"ಅವನು ಪುಕ್ಕ, ಹೇಡಿ". ಅಸಹನೆಯಿಂದ ಅನ್ನಾ ನುಡಿದಳು.

"ಇಲ್ಲ, ಈ ಸಲ ಹಾಗಾಗುವದಿಲ್ಲ ಅವನು ಕುಡಿದು ಬರುತ್ತಾನೆ. ಕೆಲಸ ಪೂರೈಸುತ್ತಾನೆ". ಅನ್ನಾ ಸ್ವಲ್ಪ ಹೊತ್ತು ಯೋಚಿಸಿದಳು ನಂತರ ಯಾವದೋ ನಿರ್ಧಾರಕ್ಕೆ ಬಂದಂತೆ ಮೇಲೆದ್ದು ಗೋಡೆಯ ಬಳಿ ಇದ್ದ ಪೆಟ್ಟಿಗೆಯತ್ತ ಸಾಗಿದಳು. ಅದರಲ್ಲಿ ಇದ್ದ ಕೊಡಲಿಗಳ ಪೈಕಿ ಒಂದನ್ನು ಕೈಗೆತ್ತಿಕೊಂಡಳು.

"ಅನ್ನಾ ಇದೇನು ಮಾಡುತ್ತಿರುವೆ?" ತಾಯಿ ಗಾಬರಿಯಿಂದ ಕೇಳಿದಳು.

"ಈ ಕೊಡಲಿ ಅಷ್ಟೊಂದು ಹರಿತವಾಗಿಲ್ಲವಾದರೂ ಸಾಕಷ್ಟು ಭಾರವಿದೆ".

"ನಿನ್ನ ಮಾತಿನ ಅರ್ಥವೇನು?"

"ಹುಶ್, ಇವಾನ್ ಮಾಡುವ ಕೆಲಸವನ್ನು ನಾವೇ ಮಾಡಿದರಾಯಿತು".

"ಕೂಡದು" ತಾಯಿ ಗಾಬರಿಯಿಂದ ಒಂದು ಹೆಜ್ಜೆ ಮುಂದೆ ಬಂದಳು.

"ಅವನೊಬ್ಬ ಕುಳ್ಳ ಅಶಕ್ತ ನಿನ್ನ ಸ್ಕರ್ಟೊಂದನ್ನು ತೆಗೆದುಕೋ. ಅದನ್ನು ಅವನ ಕತ್ತಿನವರೆಗೆ ಒಗೆದು ಅವನನ್ನು ಅಲುಗಾಡದಂತೆ ಹಿಡಿದುಕೋ. ಮಿಕ್ಕ ವಿಷಯ ನನಗಿರಲಿ".

ಅನ್ನಾ ಕೊಡಲಿಯನ್ನೆತ್ತಿಕೊಂಡಳು. ತಾಯಿ ಸ್ಕರ್ಟನ್ನೂ ದೀಪವನ್ನೂ ತೆಗೆದುಕೊಂಡಳು. ಏಣಿಯನ್ನೇರಿ ತಾಯಿ ಮಗಳಿಬ್ಬರೂ ನಿಶ್ಶಬ್ದವಾಗಿ ಕೊಠಡಿಯನ್ನು ಹೊಕ್ಕರು. ಕೊಠಡಿಯೊಳಗಿನಿಂದ ಸ್ವಲ್ಪ ಸೆಣಸಾಡಿದ ಹಾಗೂ "ಅಮ್ಮಾ" ಎಂದು ಹೃದಯ ವಿದ್ರಾವಕವಾದ ಚಿತ್ಕಾರದ ಸದ್ದು ಬಂದಿತು. ಹೊಡೆತದ ಸದ್ದುಗಳು ಕೇಳಿ ಬರುತ್ತಿದ್ದಂತೆಯೇ ಒಡತಿ ಕೊಠಡಿಯಿಂದ ಹೊರಬಂದು ತೂರಾಡುತ್ತ ಏಣಿಯನ್ನು ಇಳಿದಳು. ಕೆಳಕ್ಕೆ ಬಂದವಳೇ.

"ಅನ್ನಾ ಸಾಕುಮಾಡು. ಅನ್ನಾ ಸಾಕುಮಾಡು" ಎಂದು ಉದ್ವೇಗದಿಂದ ಕೂಗುತ್ತ ಸ್ಟೂಲಿನ ಮೇಲೆ ಕುಸಿದಳು. ಶರೀರ ಕಂಪಿಸುತ್ತಿತ್ತು. ಕೆಲವೇ ಕ್ಷಣಗಳ ನಂತರ ಕೈಯಲ್ಲಿ ರಕ್ತ ಸಿಕ್ತ ಕೊಡಲಿ ಹಾಗೂ ದೀಪವನ್ನು ಹಿಡಿದುಕೊಂಡು ಅನ್ನಾ ಕೆಳಗಿಳಿದು ಬಂದಳು. ಅವಳನ್ನೇ ತೀಕ್ಷ್ಣವಾಗಿ ನೋಡುತ್ತ ತಾಯಿ "ಹಾಗೇಕೆ ಹುಚ್ಚು ಹಿಡಿದವರಂತೆ ಮೇಲಿಂದ ಮೇಲೆ ಹೊಡೆದೆ?" ಎಂದು ಪ್ರಶ್ನಿಸಿದಳು.

"ಗೊತ್ತಿಲ್ಲ"

"ನಿನ್ನ ಮೊದಲ ಹೊಡೆತಕ್ಕೆ ಅವನ ಕಣ್ತೆರೆದು 'ಅಮ್ಮಾ' ಎಂದು ಕೂಗಿದ. ಏನನ್ನೋ ಹೇಳಲು



"ಭಾರತದ ವಿಜ್ಞಾನಿಗಳು ಸಂಶೋಧನೆ ಮಾಡುವುದಕ್ಕಿಂತ ಹೆಚ್ಚು ರಾಜಕೀಯದಲ್ಲಿ ಆಸಕ್ತಿ ತೋರಿಸುತ್ತಾರೆ' ಎಂಬ ಆರೋಪದಲ್ಲಿ ಸ್ವಲ್ಪ ಹುರುಳಿದೆಯೆಂದು ನನಗೆ ಈಗ ಅನ್ನಿಸುತ್ತಿದೆ!"

ತ್ತುತ್ತಿದ್ದ".

"ಇಲ್ಲ" ದುಃಖವಾದ ಸ್ವರದಲ್ಲಿ ಅನ್ನಾ ಹೇಳಿದಳು.

"ಖಂಡಿತವಾಗಿಯೂ ಅವನು 'ಅಮ್ಮಾ' ಎಂದು ಆಕ್ರಂದಿಸಿದ. ಅವನ ಕೂಗು ಬಹುಶಃ ಎಲ್ಲೋ ಇರಬಹುದಾದ ಅವನ ತಾಯಿಗೆ ಕೇಳಿರಲಾರದು. ಆದರೂ ನೀನು ಮಾತ್ರ ಅವನನ್ನು ಹೊಡೆಯುವುದನ್ನು ನಿಲ್ಲಿಸಲೇ ಇಲ್ಲ" ತಾಯಿ ವ್ಯಥೆಯಿಂದ ನುಡಿದಳು.

"ನನಗೆ ಆವೇಶ ಬಂದಿತ್ತು. ನಾನು ಏನನ್ನು ಮಾಡುತ್ತಿರುವೆನೊ ನನಗೇ ತಿಳಿದಿರಲಿಲ್ಲ". ಅನ್ನಾ ವಿಷಾದದಿಂದ ನುಡಿದಳು.

"ಅಬ್ಬಾ! ಆ ಸ್ಕರ್ಟನ್ನು ಇನ್ನೆಂದೂ ನಾನು ಉಪಯೋಗಿಸಲಾರೆ".

"ಅದರ ಅಗತ್ಯವೂ ಇನ್ನಿಲ್ಲ" ಅನ್ನಾ ನಿರ್ಲಿಪ್ತಳಾಗಿ ನುಡಿದಳು.

ತಾಯಿ ಟೇಬಲ್ ಸ್ವಚ್ಛಗೊಳಿಸುತ್ತಾ "ಅವನೀಗ ಕೊರಡು. ಮಿಸುಕಲಾರ. ರಾತ್ರಿ ಅವನ ಕಳೇಬರವನ್ನು ಕಾಡಿನಲ್ಲಿ ಹೂಳಬೇಕು ಮತ್ತು..." ಮಾತನಾಡುತ್ತಿರುವಂತೆಯೇ ಹೊರಗೆ ಯಾರೋ ನಡೆದು ಬರುತ್ತಿರುವ ಸದ್ದು ಕೇಳಿಬಂದಿದ್ದರಿಂದ, ಹಠಾತ್ತಾಗಿ ಮಾತು ನಿಲ್ಲಿಸಿ "ಇವಾನ್ ಬರುತ್ತಿರುವಂತಿದೆ" ಎಂದಳು. ಮಗಳು ಕೊಡಲಿಯನ್ನು ಅಡಗಿಸಿಟ್ಟಳು.

"ಕೆಲಸವಾಯಿತೆಂದು ಇವಾನ್‌ಗೆ ಹೇಳೋಣ. ನಾವಿನ್ನು ಬಡವರಲ್ಲ. ಹೊಟ್ಟೆ ತುಂಬಾ ಉಣ್ಣಬಹುದು. ರೇಷ್ಮೆ ತೊಡಬಹುದು. ನಗರಕ್ಕೂ ಹೋಗಬಹುದು", ಅನ್ನಾ ಸಂಭ್ರಮದಿಂದ ನುಡಿದಳು.

"ಸ್ವಲ್ಪ ತಡೆ ಅನ್ನಾ, ಬೇರೆ ಯಾರದೋ ಧ್ವನಿ ಕೇಳುತ್ತಿದೆ. ಇವಾನ್ ಯಾರನ್ನೋ ಕರೆತರುತ್ತಿರುವಂತಿದೆ. ಅವನಿಗೆ ಬುದ್ಧಿ ಸರಿಯಾಗಿದೆಯೋ ಇಲ್ಲವೊ?"

ಬಾಗಿಲು ತಟ್ಟಿದ ಸದ್ದು. ಧಾವಿಸಿದ ಅನ್ನಾ ಬಾಗಿಲು ತೆರೆದಳು. ತೂರಾಡುತ್ತ ಇವಾನ್ ಒಳಬಂದ. ಅವನ ಹಿಂದೆಯೇ ವೋಡ್ಕಾ ತುಂಬಿದ ಬಾಟಲಿಯೊಂದನ್ನು ಹಿಡಿದ ಹೆಂಡದಂಗಡಿ ಮಾಲೀಕನೂ ಅವನ ಮಗನೂ ಪ್ರವೇಶಿಸಿದರು. ಓಲಾಡುತ್ತಿರುವ ಇವಾನನನ್ನು ಅವರು ಬೀಳದಂತೆ ರಟ್ಟೆಯಲ್ಲಿ ಕೈ ಹಾಕಿ ಹಿಡಿದಿದ್ದರು.

"ನಿಮ್ಮ ಮನುಷ್ಯನನ್ನು ಸುರಕ್ಷಿತವಾಗಿ ಕರೆದು ತಂದಿದ್ದೇವೆ", ಮುಗುಳ್ನಗುತ್ತ ಮಾಲೀಕ ಹೇಳಿದ. "ಅವನು ಏನನ್ನೊ ಮಾಡಬೇಕಿತ್ತಂತೆ. ಸದ್ದಿಲ್ಲದೇ ಮನೆಗೆ ಹೋಗುವದಾಗಿ ಹೇಳಿದ. ನೋಡಿ ಹೇಗೆ ಸದ್ದಿಲ್ಲದೇ ಮನೆಗೆ ಬಂದಿದ್ದಾನೆ", ಮಾಲೀಕ ಗಹಗಹಿಸಿದ. ಇದ್ದಕ್ಕಿಂದಂತೆಯೇ ಇವಾನ್ 'ಹುಶ್' ಎಂದು ಏಣಿಯನ್ನು ಏರಲು ಹೋಗಿ ಕುಸಿದು ಕುಳಿತ.

"ಏನೂ ಭಯಪಡಬೇಡಿ, ಸ್ವಲ್ಪ ವೋಡ್ಕಾವನ್ನು ಹೆಚ್ಚಾಗಿಯೇ ಕುಡಿದಿದ್ದಾನೆ. ಅಷ್ಟೇ. 'ನಾನು ನಿಶ್ಶಬ್ದವಾಗಿ ಮನೆಗೆ ಹೋಗಬೇಕು' 'ನಾನು ಸುದೈವಿ' 'ಜೀಸಸ್ ಕೊನೆಗೂ ಕಣ್ಣುತೆರೆದ' ಎಂದು ಮಾತನಾಡುತ್ತಲೇ ಇದ್ದ. ನಿಮ್ಮ ಸುದೈವ ಯಾವದೆಂದು ನಮಗೆ ಗೊತ್ತು. ನೀವಿನ್ನು ಬಡವರಲ್ಲ. ಈ ಸಂತೋಷವನ್ನಾಚರಿಸಲು ಎಲ್ಲರೂ ವೋಡ್ಕಾ ಕುಡಿಯೋಣ" ಮಾಲೀಕ ಬಾಟಲಿಯಲ್ಲಿದ್ದ ವೋಡ್ಕಾವನ್ನು ಗ್ಲಾಸಿಗೆ ಸುರಿದ. ಇವಾನ್ ಮೇಲೆದ್ದು ಜೋಲಿ ಹೊಡೆಯುತ್ತ, ಕೈಬೀಸುತ್ತ ನುಡಿದ "ಮೆತ್ತಗೆ ಮೆತ್ತಗೆ ನಿಶ್ಶಬ್ದವಾಗಿ".

ಅಂಗಡಿಯ ಮಾಲೀಕನನ್ನು ಅವನ ಮಗ

ಕೇಳಿದ-

"ಅಲ್ಲಿಯೂ ಇವಾನ್ ಹೀಗೆಯೇ ಅನ್ನುತ್ತಿರಲಿಲ್ಲವೇ? ಸದ್ದಿಲ್ಲದೇ ಮಾಡಬೇಕಾಗಿದೆ". ಸದ್ದಿಲ್ಲದೇ ಪೂರೈಸಬೇಕಾಗಿದೆ ಎಂದು ಹೇಳಿದ. ಶಬ್ದವಾಗಬಾರದೆಂದು ತನ್ನ ಚಪ್ಪಲಿಗಳನ್ನು ಕಳಚಿ ಬಗಲಲ್ಲಿಟ್ಟುಕೊಂಡು ಅವನು ಕುಂಟನಂತೆ ಬರಲಿಲ್ಲವೇ ಡ್ಯಾಡ್?"

"ನಿಮಗೆ ಎಲ್ಲವೂ ಗೊತ್ತೇ? ಅನುಮಾನದಿಂದ ಒಡತಿ ಕೇಳಿದಳು.

"ನಿಜವಾಗಿಯೂ ಗೊತ್ತಿದೆ. ಮೇಡಂ" ಅಂಗಡಿ ಮಾಲೀಕ ಉತ್ತರಿಸಿದ.

"ಸರಿ ನಮಗೆ ದಕ್ಕಿದ ಭಾಗದಲ್ಲಿ ನಿಮಗೂ ಒಂದು ಪಾಲು" ಒಡತಿ ಹೇಳಿದಳು.

"ನನ್ನ ಪಾಲು ನನಗೀಗಲೇ ಸಿಕ್ಕಿದೆ" ಉತ್ಸಾಹದಿಂದ ಹೆಂಡದಂಗಡಿಯವ ನುಡಿದ. "ಇದು ನಿಜವಾಗಿಯೂ ಸುದಿನ. ಅವನೆಲ್ಲಿ?"

"ನಿಮಗೆಲ್ಲವನ್ನೂ ಇವಾನ್ ಹೇಳಿಬಿಟ್ಟನೆ?"

"ಹೌದು. ಈ ಹಳ್ಳಿಯಲ್ಲಿ ಅವನು ಮೊದಲು ಬಂದಿದ್ದೇ ನಮ್ಮ ಅಂಗಡಿಗೆ. ಇಪ್ಪತ್ತು ವರ್ಷಗಳ ನಂತರವೂ ಅವನು ನನ್ನನ್ನು ಚೆನ್ನಾಗಿಯೇ ಗುರುತಿಸಿದ. ತನ್ನ ಪರಿಚಯ ಹೇಳಿದ. ನಿಮ್ಮ ಬಗ್ಗೆ ಹೇಳುತ್ತಾ, "ನಾನೀಗ ಅಪರಿಚಿತನಂತೆ ಹೋಗುವೆ. ನಾಳೆ ಮುಂಜಾನೆ ನಿಜಸಂಗತಿ ಹೇಳಿ, ಅವರನ್ನು ಅಭಿನಂದಿಸಿ ಆಶ್ಚರ್ಯಪಡುವಂತೆ ಮಾಡುವೆ" ಎಂದ. ಕಳೆದು ಹೋದ ಮಗ ಮರಳಿ ಬಂದುದಕ್ಕೆ ಅವರು ನಿಜವಾಗಿಯೂ ಸಂತೋಷಪಡುವರೆಂದು ನಾನು ಪ್ರತಿಯಾಗಿ ಹೇಳಿದೆ".

"ಮಗೂ ನನ್ನ ಮಗೂ" ಎಂದು ರೋಧಿಸುತ್ತ ಶ್ರೀಮತಿ ಇವಾನ್ ಕುಸಿದಳು. ಅನ್ಯಾ ಗರ ಬಡಿದವಳಂತೆ ನಿಂತೇ ಇದ್ದಳು. ಮಾಲೀಕ ಹೇಳುವುದನ್ನು ಮುಂದುವರೆಸಿದ. ಇವಾನ್ ಕೈದೀಸುತ್ತ ಪಿಸು ಧ್ವನಿಯಲ್ಲಿ ಹುಚ್ಚನಂತೆ ನುಡಿಯುತ್ತಲೇ ಇದ್ದ.

"ಮೆತ್ತಗೆ... ಮೆತ್ತಗೇ... ನಿಶ್ಶಬ್ದವಾಗಿ....."

●

ಪ್ರಾರ್ಥನೆ

ಮಹಾಪೂರದಿಂದ ನದಿ ಉಕ್ಕಿದ್ದು ತುಂಬಿ ಹರಿಯುತ್ತಲಿತ್ತು. ದಡದ ಮೇಲೆ ನಿಂತು ಮಹಾಪೂರದ ರುದ್ರ ಸೌಂದರ್ಯವನ್ನು ವೀಕ್ಷಿಸುತ್ತಲಿದ್ದೆ. ಏನೇನೋ ತೇಲಿ ಬರುತ್ತಿದ್ದವು. ಬಂದ ಹಾಗೆ ಮುಂದೆಯೂ ಸಾಗುತ್ತಿದ್ದವು. ತುಂಬ ಅನಾಹುತ ಮಾಡಿತ್ತು ಪೂರ.

ಅರೆ! ಇದೇನು? ಯಾರೋ ಮನುಷ್ಯ ಜೀವಕ್ಕಾಗಿ ಹೋರಾಡುತ್ತಿದ್ದಾನೆ-ಪ್ರವಾಹ ಮಧ್ಯದಲ್ಲಿ. ಮುಳುಗುತ್ತ, ಏಳುತ್ತ, ತೇಲುತ್ತ ಪ್ರಾಣವುಳಿಸಿಕೊಳ್ಳಲು ಹೆಣಗುತ್ತಿದ್ದಾನೆ. ನನಗೋ ಈಜು ಬಾರದು ಏನು ಮಾಡಲಿ! ಮಾಡುವುದೇನು? ಬರಿದೆ ದೇವರಲ್ಲಿ ಪ್ರಾರ್ಥಿಸುವುದು. ಆಗಲಿ ಅದನ್ನಾದರೂ ಮಾಡುವ. ದೇವರಿಗೆ ಕರುಣೆ ಬಂದಲ್ಲಿ ಆತ ರಕ್ಷಿಸಲ್ಪಟ್ಟಾನು ಎಂದು ಯೋಚಿಸಿ ದೇವರಲ್ಲಿ ಆತನನ್ನು ಕಾಪಾಡಲು ಪ್ರಾರ್ಥಿಸಿದೆ. ವಿಧ ವಿಧವಾಗಿ ದೇವರನ್ನು ಬೇಡಿಕೊಂಡೆ.

ಆಶ್ಚರ್ಯ!! ದೇವರಿಗೆ ನನ್ನ ಪ್ರಾರ್ಥನೆ ಕೇಳಿಸಿತೇನೋ! ದೂರದಿಂದ ತೆಪ್ಪದಂತಹ ವಸ್ತು ತೇಲಿ ಬರುತ್ತಿದೆ. ಇವನತ್ತಲೇ ಬರುತ್ತಿದೆ. ಹೌದು. ಯಾವುದೋ ಹುಲ್ಲು ಮನೆಯ ಮಾಡು ಆತನ ಸನಿಹಕ್ಕೇ ಬರುತ್ತಲಿದೆ. ಆತನ ದೃಷ್ಟಿಯೂ ಅದರ ಮೇಲೆ ಬಿತ್ತು. ಅದರತ್ತ ಸಾಗಲು ಯತ್ನಿಸುತ್ತಿದ್ದಾನೆ. ಬಂದಿತು! ಬಂದಿತು!! ತೀರ ಸನಿಹಕ್ಕೇ ಬಂದಿತು!!! ಆತನ ಕೈಗೂ ಸಿಕ್ಕಿತು. ಕೈಗೆ ಸಿಕ್ಕಿದೊಡನೆಯೇ ಆತ ಅದನ್ನು ಹತ್ತಿ ಕುಳಿತುಕೊಂಡ. ಆತನ ಜೀವವುಳಿಯಿತು ಆದರೆ...

ಹತ್ತಿದ ರಭಸಕ್ಕೆ ಆ ಮಾಡಿನ ಮೇಲೆ ಅದನ್ನೇ ಆಶ್ರಯಿಸಿಕೊಂಡು ನಡುಗುತ್ತ ಕುಳಿತಿದ್ದ ಎರಡು ಎಳೆಯ ಮಕ್ಕಳು ನೀರಿಗೆ ಬಿದ್ದವು.

ಪ್ರಾರ್ಥನೆ ಫಲಿಸಿತ್ತು ಆದರೆ....

—ಕೃಷ್ಣಪ್ರಭ, ತಿಪಟೂರು.

ಈಕೆಗೆ 'ದಿವ್ಯ' ದೃಷ್ಟಿಯುಂಟೆ?



● ಅರುಣ

1978, ಸೆಪ್ಟಂಬರ್ ತಿಂಗಳಲ್ಲಿ ಒಂದು ಸಂಜೆ ಯುಕ್ರೈನಿನ (ಸೋವಿಯತ್ ರಶಿಯಾದ ಒಂದು ಗಣರಾಜ್ಯ) ದೊನೆತ್ಸ್ಕ್ ನಗರದ ಕಲ್ಲಿದ್ದಲು ಗಣಿಪ್ರದೇಶ ಪರಿಸರದಲ್ಲಿರುವ ಮರಮಟ್ಟು ತಯಾರಿಕೆಯ ಅಂಗಣದಲ್ಲಿ ದುರ್ಘಟನೆಯೊಂದು ಸಂಭವಿಸಿತು. ವಿದ್ಯುತ್ ಕಂಬವೊಂದರಿಂದ ತಂತಿ ತುಂಡಾಗಿ ಗಣಿ ಕೆಲಸದ ಕ್ರೈನ್ ಡ್ರೈವರ್ 37 ರ ಹರೆಯದ ಯೂಲಿಯಾ ವೊರೊಬ್ಯೊವಾಳ ತಲೆಗೆ ಬಡಿಯಿತು. 380 ವೋಲ್ಟಿನಷ್ಟು ಪ್ರಬಲ ವಿದ್ಯುತ್ ಹರಿಯುತ್ತಿದ್ದ ತಂತಿ ತಲೆಗೆ ಬಡಿದೊಡನೆಯೇ ಆಕೆ ಸ್ಮೃತಿ ತಪ್ಪಿ ಉರುಳಿದಳು. ಪ್ರಜ್ಞಾಹೀನಳಾದ ಅವಳನ್ನು ಪುನಶ್ಚೇತನಗೊಳಿಸುವ ವೈದ್ಯರ ಪ್ರಯತ್ನಗಳು ಫಲ ನೀಡಲಿಲ್ಲ. ಆಕೆಯ ದೇಹದಲ್ಲಿ ಜೀವ ಸಂಚಾರದ ಯಾವ ಚಿಹ್ನೆಯೂ ಗೋಚರಿಸಲಿಲ್ಲ. ಆಕೆ ಮೃತಪಟ್ಟಿದ್ದಾಳೆಂದು ನಿರ್ಧರಿಸಿ ವೈದ್ಯರು ಶವವನ್ನು ಸ್ಥಳೀಯ ಆಸ್ಪತ್ರೆಯ ಶವಾಗಾರಕ್ಕೆ ಒಯ್ಯಲು ಸೂಚಿಸಿದರು.

ದುರ್ಘಟನೆ ನಡೆದದ್ದು ಶನಿವಾರ ಸಂಜೆ. ವೊರೊಬ್ಯೊವಾಳ ಶವ ಸೋಮವಾರದ ವರೆಗೂ ಶವಾಗಾರದಲ್ಲಿತ್ತು. ಆ ದಿನ ದೊನೆತ್ಸ್ಕ್ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಶಸ್ತ್ರಚಿಕಿತ್ಸೆಯ ಪ್ರಾಯೋಗಿಕ ತರಬೇತಿಗಾಗಿ ಶವಾಗಾರಕ್ಕೆ ಆಗಮಿಸಿದರು. ವಿದ್ಯಾರ್ಥಿಯೊಬ್ಬ ಶಸ್ತ್ರಕ್ರಿಯೆಯ ಚಾಕು ಹಿಡಿದು ವೊರೊಬ್ಯೊವಾಳ ದೇಹದ ಸಮೀಪ ನಿಂತು ಪರೀಕ್ಷಿಸಿದಾಗ ಆಕೆಯ ಕಣ್ಣುರೆಪ್ಪೆಗಳು ಕಂಪಿಸುತ್ತಿರುವುದು ಗೋಚರಿಸಿತು. ಯೂಲಿಯಾ ವೊರೊಬ್ಯೊವಾ ಸತ್ತಿರಲಿಲ್ಲ. ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಒಯ್ಯಲಾಯಿತು. ಎರಡುವಾರಗಳ ಚಿಕಿತ್ಸೆಯ ನಂತರ ಆಕೆಗೆ ಪ್ರಜ್ಞೆ ಮರಳಿ ಮಾತನಾಡುವಷ್ಟು, ಎದ್ದು ಓಡಾಡುವಷ್ಟು ಶಕ್ತಿ ಬಂದಿತು. ಆದರೆ ಅನಂತರದ ಕೆಲವು ತಿಂಗಳು ಆಕೆ ಅವರ್ಣನೀಯ ಯಾತನೆ ಅನುಭವಿಸಬೇಕಾಯಿತು. ಆರು ತಿಂಗಳ ತನಕ ಆಕೆಗೆ ನಿದ್ರೆಯೇ ಬರಲಿಲ್ಲ. ತಲೆಯೊಳಗೆಲ್ಲ ಏನೋ ನಿರಂತರ ಚಲಿಸುತ್ತಿರುವ ಅನುಭವ.

ಒಮ್ಮೊಮ್ಮೆ ಅದು ಇದ್ದಕ್ಕಿದ್ದಂತೆ ಜ್ವಲಿಸಿ ಶರೀರದ ಅಂಗುಲ ಅಂಗುಲವೂ ಅಪಾರ ಯಾತನೆಯಿಂದ ಹಿಂಡಿದಂತಾಗುತ್ತಿತ್ತು. ಒಂದು ದಿನ ಆಕೆಗೆ ಇದ್ದಕ್ಕಿದ್ದಂತೆಯೆ ಗಾಢನಿದ್ರೆ ಆವರಿಸಿತು. ಆಕೆ ಎಚ್ಚರವಾದಾಗ ತಲೆ ನೋವು ಪೂರ್ತಿ ಕಣ್ಮರೆಯಾಗಿತ್ತು. ಆದರೆ ಮರುದಿನ ವಾಸ್ತವಿಕತೆಗೆ ಪೂರ್ತಿ ವಿರುದ್ಧವಾದ ವಿಸ್ಮಯಕಾರಿ ಅನುಭವ ವೊರೊಬ್ಯೊವಾಳಿ ಗಾಯಿತು. ಆ ಅನುಭವವನ್ನು ಆಕೆಯ ಮಾತುಗಳಲ್ಲಿಯೇ ಓದಿ:

"ಒಂದು ದಿನ ಬೇಕರಿಯತ್ತ ಹೋಗುತ್ತಿದ್ದಾಗ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಮಹಿಳೆಯನ್ನು ನೋಡಿದೆ. ಇದ್ದಕ್ಕಿದ್ದಂತೆ ಅದ್ಭುತ ಅನುಭವ ನನಗಾಯಿತು. ಆಕೆಯ ಶರೀರದೊಳಗಿನ ಅಂಗಾಂಗಗಳೆಲ್ಲವೂ ನನಗೆ ನಿಚ್ಚಳವಾಗಿ ಗೋಚರಿಸಿದುವು. ನನ್ನ ದೃಷ್ಟಿ ಆಕೆ ಧರಿಸಿದ ಬಟ್ಟೆ, ಆಕೆಯ ಚರ್ಮವನ್ನು ತೂರಿ ಒಳಗಿನ ಅಂಗಾಂಗಗಳ ಅತಿ ಸೂಕ್ಷ್ಮ ವಿವರಗಳನ್ನು ಗ್ರಹಿಸಿತು".

ಅಂದಿನಿಂದ ವೊರೊಬ್ಯೊವಾ ಜನರ ಶರೀರದ ಅಂತರ್ಯದಲ್ಲಿ ಜರುಗುವ ವಿದ್ಯಮಾನಗಳನ್ನು ಅಲ್ಲಿಯ ಪರಿಸ್ಥಿತಿಯನ್ನು ನೋಟಮಾತ್ರದಿಂದಲೇ ಗ್ರಹಿಸುವ ಸಾಮರ್ಥ್ಯವುಳ್ಳ ಎಕ್ಸ್‌ರೇ ಕಣ್ಣಿನ ಮಹಿಳೆ ಎಂದು ಹೆಸರಾದಳು. ಒಂದೇ ನೋಟದಲ್ಲಿ ಆಕೆ ರೋಗಿಯ ಶರೀರದ ಒಳಭಾಗದ ತಪಾಸಣೆ ನಡೆಸಿ ಆತ ಯಾವ ಕಾಯಿಲೆಯಿಂದ ನರಳುತ್ತಿದ್ದಾನೆ, ಶರೀರದೊಳಗೆ ಯಾವ ಭಾಗದಲ್ಲಿ ರೋಗ ಅಂಟಿದೆ ಎಂಬುದನ್ನು ನಿಖರವಾಗಿ ಹೇಳಬಲ್ಲವಳಾಗಿದ್ದಳು.

ಈಚೆಗೆ ಕೆಲವು ತಿಂಗಳ ಒಂದೆ ಪತ್ರಕರ್ತನೊಬ್ಬ ವೊರೊಬ್ಯೊವಾಳು ನಿಗೂಢ ಶಕ್ತಿಯ ಬಗ್ಗೆ ಅರಿತುಕೊಳ್ಳಲು ಪ್ರಯತ್ನಿಸಿ ಆಕೆಯ ಸಂದರ್ಶನ ಮಾಡಿದ.

"ನೀವು ಇಲ್ಲಿಗೆ ತಲುಪುವ ಮೊದಲು ಕೆಂಪ ಬಣ್ಣದ ಪಾನೀಯ ಬಹುಶಃ ಯಾವುದೊ ಹಣ್ಣಿನ ರಸ ಕುಡಿದು ಬಂದಿದ್ದೀರಿ ಅಲ್ಲವೆ?" ಎಂದು ವೊರೊಬ್ಯೊವಾ ಆ ಪತ್ರಕರ್ತನಿಗೇ ಮೊದಲ ಪ್ರಶ್ನೆ ಹಾಕಿದಳು.

ಪತ್ರಕರ್ತ ವಿಸ್ಮಯದಿಂದ ದಿಙ್ಮೂಢನಾದ. ವಾಸ್ತವವಾಗಿ ಆತ ಅಲ್ಲಿಗೆ ಬರುವ ಮೊದಲು ಸ್ಥಳೀಯ ಹೊಟೇಲೊಂದರಲ್ಲಿ ಹಣ್ಣಿನ ರಸ ಕುಡಿದು ಬಂದಿದ್ದ.

ದಿನವೂ ಸೋವಿಯತ್ ರಶಿಯಾದ ದೂರದೂರದ ನಗರಗಳಿಂದ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದಿಂದ ವೊರೊಬ್ಯೊವಾಳಿಗೆ ರೋಗಿಗಳಿಂದ ಪತ್ರಗಳು ತಲಪುತ್ತವೆ. ಕೆಲವರು ಆಕೆಯನ್ನು ಖುದ್ದುಭೇಟಿಯಾಗಿ ತಮ್ಮ ಸಮಸ್ಯೆಯನ್ನು ತೋಡಿಕೊಳ್ಳಲು ಆಶಿಸುತ್ತಾರೆ.

"ನಾನು ವೈದ್ಯಳೇನೂ ಅಲ್ಲ. ವೈದ್ಯಕೀಯ ವಿಜ್ಞಾನದ ಮೊದಲಕ್ಷರ ಮಾತ್ರ ನನಗೆ ಗೊತ್ತು. ಆ ಜ್ಞಾನಕೂಡಾ ತೀರ ಅಲ್ಪ" ಎನ್ನುತ್ತಾಳೆ ವೊರೊಬ್ಯೊವಾ. ಆದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ಆಕೆ ರೋಗಿಗಳಿಗೆ ನೆರವಾಗುತ್ತಾಳೆ. ತನ್ನ ಅಪೂರ್ವ ಶಕ್ತಿಯಿಂದ ರೋಗವನ್ನು ಪತ್ತೆ ಹಚ್ಚಲು ಸಹಕರಿಸುತ್ತಾಳೆ.

ಒಂದು ದಿನ ಮಧ್ಯ ವಯಸ್ಸು ದಾಟಿದ ಪುರುಷನೊಬ್ಬ ತನ್ನ ಸಮಸ್ಯೆಯನ್ನು ಹೇಳಿಕೊಳ್ಳಲು ವೊರೊಬ್ಯೊವಾಳ ಬಳಿಗೆ ಬಂದ. ಆತನ ಇಡೀ ಶರೀರದ ಮೇಲೆ ಒಮ್ಮೆ ದೃಷ್ಟಿ ಹಾಯಿಸಿದ ವೊರೋಬ್ಯೊವಾ "ನಿಮ್ಮ ಮೇದೋಜೀರಕ ಗ್ರಂಥಿ ಕೆಟ್ಟು ಹೋಗಿದೆ" ಎಂದಳು. ಅನಂತರ ಆತ ತಜ್ಞ ವೈದ್ಯರೊಬ್ಬರಿಂದ ತಪಾಸಣೆ ಮಾಡಿಸಿಕೊಂಡಾಗ ವೊರೊಬ್ಯೊವಾ ಹೇಳಿದ್ದು ಅಕ್ಷರಶಃ ನಿಜವಾಗಿತ್ತು. ಮಿತಿಮೀರಿದ ಮದ್ಯಪಾನದಿಂದ ಆತನ ಮೇದೋಜೀರಕ ಗ್ರಂಥಿ ಕೆಟ್ಟುಹೋಗಿತ್ತು.

ವೊರೊಬ್ಯೊವಾಳ ಮನೆಯಿಂದ ಸ್ವಲ್ಪ ದೂರದಲ್ಲಿ ನೆಲಸಿರುವ ಪ್ರತ್ರೋವಾ ಪೆತ್ರೋವಾಳ ಅನುಭವ ಬೇರೆ ತೆರನಾದದ್ದು. ಆಕೆ ಹೇಳುತ್ತಾಳೆ "ಒಮ್ಮೊಮ್ಮೆ ತೀವ್ರವಾದ ಮಲರೋಗ ನನ್ನನ್ನು ಸತಾಯಿಸುತ್ತದೆ. ಒಮ್ಮೆ ನಿತ್ರಾಣನಾದ ನನ್ನನ್ನು ಆಂಬುಲೆನ್ಸನಲ್ಲಿ ಆಸ್ಪತ್ರೆಗೆ ಸಾಗಿಸಿದಾಗ ಅಲ್ಲಿ ವೈದ್ಯರು ಆರು ಗಂಟೆಗಳವರೆಗೆ ತಪಾಸಣೆ ನಡೆಸಿ ನನಗೆ ಹೃದಯಾಘಾತವಾಗಿದೆ ಎಂದರು. ಸ್ವಲ್ಪ ಹೊತ್ತಿನ ಬಳಿಕ ನನಗೆ ಪ್ರಜ್ಞೆ ಮರುಕಳಿಸಿತು. ನನ್ನನ್ನು ಸತಾಯಿಸುವ ಸಮಸ್ಯೆಯ

ಮೂಲವನ್ನು ಪತ್ತೆ ಹಚ್ಚಲು ಶಕ್ತವಾಗಬಹುದು ಎಂಬ ನಂಬಿಕೆಯಿಂದ ಯೂಲಿಯಾಳನ್ನು ಇಲ್ಲಿಗೆ ಬರಹೇಳಿ ಎಂದೆ. ವೈದ್ಯರೊಡನೆ ಯೂಲಿಯಾ ಬಂದಳು. ನನ್ನ ತಪಾಸಣೆಯನ್ನು ನಡೆಸಿದಳು. ಜಠರವನ್ನು ಸಂಧಿಸುವ ಜಾಗದಲ್ಲಿ ಅನ್ನನಾಳ ಅತಿಯಾಗಿ ನಡೆತಗೊಂಡಿದೆ. ಎಂದಾಕೆ ಹೇಳಿದಳು. ಅನಂತರ ಎಕ್ಸ್ ರೇ ತೆಗೆದು ನೋಡಿದಾಗ ವೊರೊಬ್ಯೊವಾ ಹೇಳಿದ್ದು ಸರಿಯಾಗಿತ್ತು".

"ಯೂಲಿಯಾ ವೊರೊಬ್ಯೊವಾಳ ದೃಗ್‌ಸಾಮರ್ಥ್ಯ ನಿಜಕ್ಕೂ ಅತ್ಯಗಾಧ. ಒಂದೇ ಒಂದು ಬಾರಿಯೂ ಆಕೆಯ ತಪಾಸಣೆ ಸುಳ್ಳಾಗಿಲ್ಲ. ಅವಳಿಂದ ತಪಾಸಣೆಗೆ ಒಳಗಾದ ರೋಗಿಗಳು ನನ್ನ ಬಳಿಗೆ ಬಂದಾಗ ನಾನು ಅವರನ್ನು ಪರೀಕ್ಷಿಸಿದ್ದೇನೆ. ವೊರೊಬ್ಯೊವಾಳ ತಪಾಸಣೆಯ ಫಲಿತಾಂಶ ನಾನು ಮಾಡಿದ ತಪಾಸಣೆಯ ಫಲಿತಾಂಶಕ್ಕೆ ಸರಿ ಹೊಂದುತ್ತದೆ" ಎಂದು ಯೂಕ್ರೈನಿನ ದೊಡ್ಡ ಆಸ್ಪತ್ರೆಯ ವೈದ್ಯಕೀಯ ತಜ್ಞೆಯೊಬ್ಬಳು ಹೇಳುತ್ತಾರೆ.

ಮಕ್ಕಳನ್ನು ಕಾಡುವ ರೋಗದ ಮೂಲವನ್ನು ಪತ್ತೆ ಹಚ್ಚಲು ವೊರೊಬ್ಯೊವಾಳಿಗೆ ಬಹಳ ಆಸಕ್ತಿ. ರೋಗಿ ತಪಾಸಣೆಗಾಗಿ ಆಕೆ ರೋಗಿಗಳಿಂದ ಬಿಡಿಗಾಸನ್ನೂ ವಸೂಲು ಮಾಡುವುದಿಲ್ಲ. ಸರಕಾರ ನೀಡುವ ಪಿಂಚಣಿಯೊಂದರಿಂದಲೇ ಆಕೆಯ ಜೀವನ ಸಾಗುತ್ತದೆ. ಎರಡು ಗಂಡು ಒಂದು ಹೆಣ್ಣು ಮಗಳ ಪುಟ್ಟ ಕುಟುಂಬ ಆಕೆಯದು. ಎರಡನೇ ಮಗನಿಗೆ ಮಿಲಿಟರಿಯಲ್ಲಿ ಕೆಲಸ ದೊರಕಿದೆ. ವಿದ್ಯುತ್ ಆಘಾತದ ದುರ್ಘಟನೆ ಸಂಭವಿಸಿದ ಬಳಿಕ ಆಕೆಯ ಬದುಕು ಜರ್ಜರಿತವಾಗಿದೆ. ಬಿರುಗಾಳಿ ಮಳೆಯ ದಿನಗಳಲ್ಲಿ ಆಕೆ ಅಸಾಧ್ಯ ತಲೆನೋವನ್ನು ಅನುಭವಿಸುತ್ತಾಳೆ. ಅಂತಹ ಪರಿಸ್ಥಿತಿಯಲ್ಲೂ ತನ್ನ ಸಹಾಯ ಯಾಚಿಸಿ ಬರುವ ರೋಗಿಗಳ ಯಾತನೆಯನ್ನು ನಿವಾರಿಸಲು ನೆರವಾಗುತ್ತಾಳೆ.

ವೊರೊಬ್ಯೊವಾಳ ನಿಗೂಢ ಶಕ್ತಿಯ ರಹಸ್ಯವೇನು? 20ನೇ ಶತಮಾನದ ಇಂದಿನ ವೈಜ್ಞಾನಿಕ ಯುಗದಲ್ಲಿಯೂ ಇಂಥ ಪವಾಡಗಳು ನಡೆಯುತ್ತವೆಯೇ?

ವೊರೊಬ್ಯೊವಾಳ ತಲೆಗೆ ಪ್ರಬಲ ವಿದ್ಯುತ್ ಪ್ರವಾಹದ ಆಘಾತವಾಯಿತಷ್ಟೆ. ಆಗ ವಿದ್ಯುತ್ ಪ್ರವಾಹವು ಅವಳ ಮಿದುಳಿಗೆ ಶರೀರದ ಒಳಗಿನ ಅಂಗಾಂಗಗಳ ರಕ್ತವರ್ಣಾತೀತ ವಿಕಿರಣವನ್ನು (INFRARED RADIATION) ಗ್ರಹಿಸುವ ಸಾಮರ್ಥ್ಯವನ್ನು ನೀಡಿದೆ ಎಂದು ದೊನೆತ್ಸ್ಕ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಪ್ರೊಫೆಸರ್ ಎಲ್. ತರಾನೆಂಕೊ ಹೇಳುತ್ತಾರೆ.

ಆದರೆ ಮಾಸ್ಕೋದಲ್ಲಿರುವ ಆಲ್‌ಯೂನಿಯನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಆಫ್ ಜನರಲ್ ಅಂಡ್ ಫಾರೆನ್ಸಿಕ್ ಸೈಕಿಯಾಟ್ರಿ ಸಂಸ್ಥೆಯ ಮುಖ್ಯಸ್ಥ ಪ್ರೊಫೆಸರ್ ಎಸ್. ಕೊಂದ್ರಾತ್ಯೇವ್ ಇದನ್ನೊಪ್ಪುವುದಿಲ್ಲ. ಜಠರದೊಳಗಿನ ಘಟಕ ಗಳನ್ನು ಆ ಮೂಲಕ ನೋಟ ಮಾತ್ರದಿಂದಲೇ ಗ್ರಹಿಸಲು ಸಾಧ್ಯವಿಲ್ಲ. ಅದೇ ರೀತಿ ಎಕ್ಸ್-ರೇ ನೋಟದ ಮುಖಾಂತರ ಮೇದೋಜೀರಕ ಗ್ರಂಥಿಯ ಪರಿಸ್ಥಿತಿಯನ್ನು ಖಚಿತವಾಗಿ ನಿರ್ಧರಿಸಲು ಕೂಡ ಸಾಧ್ಯವಾಗದು. ಆದರೆ ವಿದ್ಯುತ್ ಆಘಾತದ ತರುವಾಯ ಕಾಣಿಸಿಕೊಳ್ಳುವ ರೋಗಸ್ಥಿತಿಯಲ್ಲಿ ವ್ಯಕ್ತಿಯ ಸ್ಪರ್ಶ ವಾಸನೆ ದೃಗ್ ಇಂದ್ರಿಯಗಳ ಚಟುವಟಿಕೆ ಸಾಮರ್ಥ್ಯ ಸ್ವಾಭಾವಿಕ ಮಿತಿಯನ್ನು ಮೀರಿ ತೀಕ್ಷ್ಣವಾಗುವ ಸಾಧ್ಯತೆಗಳಿವೆ. ಸ್ವಾಭಾವಿಕ ಆರೋಗ್ಯ ಸ್ಥಿತಿಯಲ್ಲಿರುವ ಅಂಗಗಳಿಗಿಂತಲೂ ರೋಗಗ್ರಸ್ತ ಅಂಗಗಳು ಹೆಚ್ಚಿನ ಉಷ್ಣತೆಯನ್ನು ಪ್ರಸರಿಸುತ್ತವೆ ಎಂಬುದು ವೈದ್ಯಕೀಯ ವಿಜ್ಞಾನ ಅಧ್ಯಯನ ಮಾಡಿದವರಿಗೆಲ್ಲಾ ಗೊತ್ತು. ಬೆರಳುಗಳಿಂದದ ಸ್ಪರ್ಶಿಸುವ ಮೂಲಕ ಈ ಉಷ್ಣತೆಯನ್ನು ಗುರುತಿಸುವ ಅಧಿಕ ಸಾಮರ್ಥ್ಯ ನಮಗಿದ್ದರೆ ಶರೀರದಲ್ಲಿ ರೋಗವಿರುವ ಸ್ಥಳವನ್ನು ಪತ್ತೆ ಹಚ್ಚಲೂ ನಮಗೆ ಸಾಧ್ಯವಾಗುತ್ತದೆ. ಆದರೆ ಉಷ್ಣತೆಯನ್ನು ಗ್ರಹಿಸುವ ಸಾಮರ್ಥ್ಯ ಸ್ಪರ್ಶಾನುಭವದಿಂದಲೇ ಸಾಧ್ಯವೇ ಹೊರತು ದೃಗ್ ಶಕ್ತಿಯಿಂದ ಸಾಧ್ಯವಿಲ್ಲ" ಎಂದು ಅವರು ಹೇಳುತ್ತಾರೆ. ಅದು ಹೇಗೇ ಇರಲಿ, ವೊರೊಬ್ಯೊವಾ ಸದ್ಯಕ್ಕಂತೂ ವಿಜ್ಞಾನಿಗಳಿಗೆ ಸವಾಲಾಗಿದ್ದಾಳೆ. ●

(ಕೃಪೆ: ಸ್ಪುಟ್ನಿಕ್)

ಅವುಗಳಲ್ಲಿರುವ ಅಂತರ ಕೇವಲ ಸೊನ್ನೆಯಷ್ಟೆ.
ಇಚ್ಛಿಸಿದಲ್ಲಿ ನೀವೂ ಸುಖವನ್ನು ಪಡೆಯಬಹುದು.

ಚಿಂತಾಯಾಕ್ಕ ಚಿತಾಯಾಕ್ಕ



— ನಾಗರತ್ನ

ಚಿತೆಗೂ ಚಿಂತೆಗೂ ಒಂದು ಸೊನ್ನೆಯಷ್ಟೆ ವ್ಯತ್ಯಾಸ. ಚಿತೆ ಸತ್ತಮೇಲೆ ಸುಟ್ಟರೆ ಚಿಂತೆ ಸಾಯುವ ಮೊದಲೇ ಸ್ವಲ್ಪ ಸ್ವಲ್ಪವಾಗಿ ಕೊಲ್ಲುತ್ತದೆ. ಖಿನ್ನತೆ, ವಿಷಣ್ಣತೆ, ಉದ್ವೇಗ, ಚಿಂತೆ ಇವೆಲ್ಲಾ ಚಿಂತೆಯ ಪರಿವಾರದ ಸದಸ್ಯರು. ಹಿಡಿಸಿಕೊಂಡರೆ ಇವೆಲ್ಲಾ ಪೆಡಂಭೂತಗಳು. ಬಿಡಿಸಿಕೊಂಡರೆ ನೆಮ್ಮದಿ. ಆದರೆ ಇವೆಲ್ಲವೂ ಮನುಷ್ಯರೇ ಕಲ್ಪಿಸಿಕೊಂಡ ಮಾನಸಿಕ ಸ್ಥಿತಿಗಳೇ ಹೊರತು ಬೇರೇನೂ ಅಲ್ಲ.

ಚಿಂತೆ:— ಯಾವುದಾದರೂ ಒಂದು ಸಣ್ಣ ವಿಷಯವೇ ಆಗಲಿ, ಅದರ ಬಗ್ಗೆ ಚಿಂತಿಸ ಹೊರಟರೆ ಮನಸ್ಸನ್ನು ಗುಂಗೆಹುಳುವಿನಂತೆ ಕೊರೆದು ತೂತು ಮಾಡಿ ಬಿಡುತ್ತದೆ. ಪುನಃ ಪುನಃ ಬೆಂಬಿಡದ ಭೂತದಂತೆ ಕಾಡುತ್ತಿರುತ್ತದೆ. ಸರಿಯಾಗಿ ನಿದ್ದೆಯನ್ನು ಮಾಡಗೊಡುವುದಿಲ್ಲ.

ನಮ್ಮ ಮನೆಯ ಹಿಂದಿನ ಮನೆಯಲ್ಲಿ ಒಬ್ಬರು ಅಜ್ಜಿಯಿದ್ದಾರೆ. ಅವರಿಗೆ ಮೂರು ಜನ ಗಂಡುಮಕ್ಕಳು, ನಾಲ್ವರು ಹೆಣ್ಣು ಮಕ್ಕಳು. ಹೆಣ್ಣು ಮಕ್ಕಳಲ್ಲಿ ಹಿರಿಯ ಮಗಳಿಗೆ ಮದುವೆಯಿಲ್ಲ. ಆಕೆ ಉಳಿದ ಮೂವರಿಗೆ ತಾನೇ ನಿಂತು ಓದಿಸಿ ಮದುವೆಯನ್ನೂ ಮಾಡಿದ್ದಾಳೆ. ತಮ್ಮಂದಿರೂ ಈಗ ಒಳ್ಳೆಯ ಕೆಲಸಗಳಲ್ಲಿದ್ದಾರೆ. ಆದರೆ ಆ ಅಜ್ಜಿಗೆ ಮಾತ್ರ ಈ ವಯಸ್ಸಿನಲ್ಲೂ ಚಿಂತೆ ತಪ್ಪಿಲ್ಲ. ಕಾರಣ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಆಕೆಯ ನಾಲ್ಕನೆಯ ಮಗ ಒಮ್ಮೆ ಸ್ಕೂಲಿಗೆ ಚಕ್ಕರ್ ಹೊಡೆದು ಯಾವುದೋ ಸಿನೇಮಾಗೆ ಹೋದ. ತಂದೆಗೆ ಯಾರಿಂದಲೋ ಆ ವಿಷಯ ತಿಳಿಯಿತು. ಆತ ಬರುತ್ತಿದ್ದಂತೆಯೇ ಒಂದು ಕೋಲು ತೆಗೆದುಕೊಂಡು ಕಾಲಿಗೆ ಎರಡು ಏಟು ಹಾಕಿದರು. ಮೊದಲೇ ಗಾಯವಾಗಿ ಕೀತುಕೊಂಡಿದ್ದ ಜಾಗಕ್ಕೆ ಏಟು ಬಿದ್ದುದರಿಂದ ರಕ್ತ ಸುರಿಯತೊಡಗಿತು. ಆ ಹುಡುಗ ಸುರಿಯುತ್ತಿದ್ದ ರಕ್ತವನ್ನೂ ಲೆಕ್ಕಿಸದೆ ಅಳುತ್ತಾ ಮನೆಯಿಂದ ಆಚೆಗೆ ಓಡಿದ. ಕೋಪದಿಂದಿದ್ದ ತಂದೆ, ಎಲ್ಲಿ ಹೋಗುತ್ತಾನೆ? ಸ್ವಲ್ಪ ಹೊತ್ತು ಬಿಟ್ಟು ಬರುತ್ತಾನೆ ಎಂದು ಉದಾಸೀನದಿಂದಿದ್ದರು. ರಾತ್ರಿ ಎಂಟಾಯಿತು, ಹತ್ತಾಯಿತು ಆತ ಬರಲೇ ಇಲ್ಲ. ಗಾಬರಿಯಿಂದ ಮನೆಯವರು ಊರೆಲ್ಲಾ ಹುಡುಕಿದರೂ ಆತ ದೊರೆಯಲಿಲ್ಲ. ಹೊರಗೆ ಹೋದವ ಮರಳಿ ಮನೆಗೆ ಬರಲೇಯಿಲ್ಲ.

ಈ ಘಟನೆಯ ನಂತರ ಮನೆಗೆ ಆಧಾರವಾಗಿದ್ದ ಆ ತಂದೆಗೆ ಮಂಕು ಕವಿಯಿತು. ಕುಳಿತಲ್ಲಿ, ನಿಂತಲ್ಲಿ ಆತನದೇ ಚಿಂತೆ. ಜ್ವರ ಬಂದು ಮಲಗಿದರೆ ರಕ್ತ ರಕ್ತ ಎಂದು ಕನವರಿಸತೊಡಗಿದರು. ಕ್ರಮೇಣ ಕಾಯಿಲೆ ವಾಸಿಯಾದರೂ ಮಂಕು ಬಿಡಲಿಲ್ಲ. ಮುಂದೆ ಬುದ್ಧಿಯ ಸ್ವಾಧೀನ ತಪ್ಪಿತು. ಈಗ ಯಾವ

ಮಕ್ಕಳನ್ನು ಕಂಡರೂ, ಅಯ್ಯೋ ಕಾಲಿಂದ ರಕ್ತ ಬರ್ತಾಯಿದೆ ಬಾರಪ್ಪ, ಬಾಯಿಲ್ಲಿ ಅಂತ ಕರೆಯುತ್ತಾರೆ. ಬೀದಿ ಬೀದಿ ಸುತ್ತುತ್ತಾರೆ.

ಆ ವ್ಯಕ್ತಿಗೆ ಮೊದಲೇ ಸ್ವಲ್ಪ ವಿವೇಚನೆಯಿದ್ದರೆ, ಮನಸ್ಸಿಗೆ ನೋವುಂಟುಮಾಡುವ ಘಟನೆ ನಡೆದ ಮೇಲೂ ಸ್ವಲ್ಪ ಸ್ಥಿತಪ್ರಜ್ಞತೆ ಬೆಳೆಸಿಕೊಂಡಿದ್ದರೆ, ತನ್ನ ಕರ್ತವ್ಯದ ಕಡೆ ಗಮನ ಕೊಟ್ಟಿದ್ದರೆ, ಆ ಒರಿಯ ಮಗಳ ಜೀವನವೂ ಸರಳವಾಗುತ್ತಿತ್ತು. ಅಜ್ಜಿಯೂ ಕಡೆಗಾಲದಲ್ಲಿ ನಾಲ್ಕುದಿನ ನೆಮ್ಮದಿಯಿಂದ ಇರಬಹುದಾಗಿತ್ತು.

ದುಃಖ ಯಾರಿಗೆ ತಾನೆ ಇರುವುದಿಲ್ಲ? ಜೀವನವೇನು ಸುಖದ ಸುಪ್ಪೊತ್ತಿಗೆಯೆ? ಬರುವ ತೊಂದರೆಗಳನ್ನು ಅನುಭವಿಸಲು ನಮ್ಮ ಮನಸ್ಸನ್ನು ನಾವೇ ಸಿದ್ಧಗೊಳಿಸಿ ಇಟ್ಟುಕೊಳ್ಳಬೇಕು. ಕಷ್ಟನಷ್ಟ ಉಂಟಾದಾಗ ಸಮಾಧಾನ ಚಿತ್ತರಾಗಿ ಯೋಚಿಸಿ, ಕರ್ತವ್ಯ ಜವಾಬ್ದಾರಿಗಳ ಕಡೆ ಗಮನ ಹರಿಸಿ ಬೇರೆಯವರಿಗೆ ಕೈಲಾದ ಸಹಾಯ ಮಾಡುತ್ತಾ ನಮ್ಮ ಕಷ್ಟನಷ್ಟಗಳನ್ನು ಮರೆಯುವುದನ್ನು ಕಲಿತರೆ ನಮಗೂ ಸುಖ, ನೆರೆಹೊರೆಯವರಿಗೂ ಸಹಾಯ, ಮನೆಯ ಇತರ ಸದಸ್ಯರಿಗೂ ನೆಮ್ಮದಿ.

ಖಿನ್ನತೆ:— ಚಿಂತೆಯ ಪರಿವಾರದ ಇನ್ನೊಬ್ಬ ಸದಸ್ಯ. ಚಿಂತೆ ಪ್ರೌಢರಲ್ಲೂ ಜವಾಬ್ದಾರಿ ಹೊತ್ತಿರುವವರಲ್ಲೂ ಹೆಚ್ಚಾಗಿದ್ದರೆ, ಖಿನ್ನತೆ 20 ವರ್ಷದ ಒಳಗಿನವರನ್ನು ಹೆಚ್ಚಾಗಿ ಕಾಡುತ್ತದೆ.

ಇಪ್ಪತ್ತರ ಒಳಗಿನವರಲ್ಲಿಯಾದರೆ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆಯಲ್ಲಿ ಒಂದು ಳಿಯುವ ಭಯ ಕಾಡಲು ಶುರುವಾಗಿ ಖಿನ್ನತೆ ಬರಬಹುದು. ಪೌಷ್ಟಿಕ ಆಹಾರದ ಕೊರತೆಯೂ ಕರ್ತವ್ಯದ ಕಡೆ ವಿಮುಖರಾಗುವಂತೆ ಮಾಡಬಹುದು. ದೈಹಿಕವಾಗಿ ಆಗುವ ಬದಲಾವಣೆಗಳೂ ಖಿನ್ನತೆಗೆ ಕಾರಣವಾಗಬಹುದು. ಶಿಕ್ಷಕರು ಅಥವಾ ಪೋಷಕರಿಂದ ಒದಗುವ ಕಹಿ ಪ್ರಸಂಗಗಳೂ ಇದಕ್ಕೆ ಕಾರಣವಾಗಬಹುದು.

ಸುರೇಶ ಸುಮಾರು 15 ವರ್ಷದ ಹುಡುಗ. ಎರಡು ವರ್ಷಗಳ ಹಿಂದೆ ಎಂಟನೆ ತರಗತಿಗೆ ಸೇರಿದಾಗ ಆತ ತುಂಬ ಲವಲವಿಕೆಯಿಂದ ಇದ್ದ. ಏಳನೇ ತರಗತಿಯ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದ. ಈಗ ಆತನಿಗೆ ಪಾಠಪ್ರವಚನಗಳಲ್ಲಿ ಆಸಕ್ತಿಯಿಲ್ಲ. ಮುಖ ಬಾಡಿದೆ. ಕಣ್ಣುಗಳು ಕಳಾಹೀನವಾಗಿವೆ. ಹದಿನೈದರ ಈ ವಯಸ್ಸಿನಲ್ಲೇ ನಿರ್ಲಿಪ್ತತೆಯನ್ನು ಬೆಳೆಸಿಕೊಂಡಿದ್ದಾನೆ. ಆದಿನ ಅವನು ತರಗತಿಗೆ ಹೋದಾಗ ಕಂಠಪಾಠ ಮಾಡಿದ್ದ ಪದ್ಯವನ್ನು ಒಪ್ಪಿಸಬೇಕಿತ್ತು. ತನ್ನ ಸರದಿ ಬಂದಾಗ ಕತ್ತು ಬಗ್ಗಿಸಿ ಸುಮಾರು ಐದು ಮುಕ್ಕಾಲು ಅಡಿಯ ದೇಹವನ್ನು ಕುಗ್ಗಿಸುವ ಪ್ರಯತ್ನ ಮಾಡುತ್ತಾ ನಿಂತುಕೊಂಡ. ಎಂದಿನಂತೆ 'ನಾಚ್ಕೆ ಆಗೋಲ್ವ? ಹೇಳಿದ್ದೊಂದು ಸಣ್ಣ ಕೆಲಸ ಮಾಡಿಕೊಂಡು ಬರೋಕ್ಕೆ ಆಗೋಲ್ವ? ಸುಮ್ಮನೆ ಬೆಳೆದು ಬಿಟ್ಟರೆ ಬಂತಾ?' ಎಂದು ನನ್ನಿಂದ ಬೈಸಿಕೊಂಡ. ತಕ್ಷಣ ಆತನ ಓರಗೆಯ ಹುಡುಗನೊಬ್ಬ ಕೈಯಿಂದ ಬಾಯಿ ಮುಚ್ಚಿಕೊಂಡು ಕಿಸಕ್ಕನೆ ನಕ್ಕ. ಸದಾ ನಿರ್ಲಿಪ್ತನಂತೆಯೇ ಇರುತ್ತಿದ್ದ ಆ ಹುಡುಗನ ಕಣ್ಣಲ್ಲಿ ಎರಡು ಹನಿ ನೀರು ತೊಟ್ಟಿಕ್ಕಿತು. ಆತನ ಖಿನ್ನತೆ ನನ್ನ ಮನಸ್ಸಿಗೆ ನೋವುಂಟುಮಾಡಿತು. ಆತನ ಖಿನ್ನತೆಗೆ ಇನ್ನೂ ಏನೋ ಕಾರಣವಿರಬೇಕು ಎಂದು ಯೋಚಿಸಿದೆ. ನಾನೊಬ್ಬಳೇ ಇದ್ದಾಗ ಆತನನ್ನು ಕರೆದು ಮಂಕಾಗಿರುವುದಕ್ಕೆ ಕಾರಣ ಕೇಳಿದೆ. ಆತನಿಂದ ನೇರವಾದ ಉತ್ತರ ಬರಲಿಲ್ಲ. 'ಯಾಕಪ್ಪ? ಏನು ತೊಂದರೆ? ಸ್ಕೂಲಿಗೆ ಬರಲು ನಿನಗೆ ಇಷ್ಟ ಇಲ್ವ?' ಎಂದು ಕೇಳಿದೆ. 'ಇಲ್ಲ' ಎನ್ನುವಂತೆ ತಲೆ ಅಲ್ಲಾಡಿಸಿದ. ಕಾರಣ ಕೇಳಿದಾಗ ಎಲ್ಲಾ ಹುಡುಗ್ರೂ ಲಂಬೂ ಅಂತ ಅಡಿಕೊಳ್ತಾರೆ. ಎಲ್ಲಾ ಟೀಚರುಗಳೂ 'ದಾನಾ ದಡಿಯನ ಹಾಗೆ ಬೆಳೆದಿದ್ದೀಯಾ ಹೋಂವರ್ಕ್ ಮಾಡಿಕೊಂಡು ಬರಲು ಆಗೋಲ್ವ' ಅಂತ ಹಂಗಿಸ್ತಾರೆ. ಮನೇಲೂ ಹಾಗೆ ಬಯ್ತಾರೆ. ಅದಕ್ಕೆ ಶಾಲೆಗೆ ಬರಲೂ ಇಷ್ಟವಿಲ್ಲ. ಮನೆಯಲ್ಲಿ ಇರಲೂ ಇಷ್ಟವಿಲ್ಲ. ಆದ್ದರಿಂದಲೇ "ನಾನು ಊರಿಂದ ಬರುವಾಗ ಹುಣಿಸೆ ತೋಪಿನಲ್ಲಿ ಹೆಚ್ಚು ಹೊತ್ತು ಕುಳಿತುಕೊಂಡಿರುತ್ತೇನೆ" ಎಂದೂ, ಊಟ ಕಡಿಮೆ ಮಾಡಿದರೂ ಬೆಳವಣಿಗೆ ಮಾತ್ರ ಕಡಿಮೆಯಾಗಿಲ್ಲ ಎಂದೂ ವ್ಯಥೆಪಟ್ಟ. ಆತನ ಉದ್ದವಾದ ದುರ್ಬಲ ಶರೀರವನ್ನು ನೋಡಿ ಕನಿಕರ

ವಾಯಿತು.

ಅವನ ತಂದೆ ತಾಯಿಗಳನ್ನು ಕರೆಸಿ ವಿಚಾರಿಸಿದೆ. ಸದಾ ಮಂಕಾಗಿರುತ್ತಾನೆ, ಊಟವನ್ನು ಸರಿಯಾಗಿ ಮಾಡುವುದಿಲ್ಲವೆಂದು ಹೇಳಿದರು. ಅವರಿಗೆ ಆತನ ಉದ್ದದ ಬಗ್ಗೆ ಬೇಸರವಾಗುವಂತೆ ಮಾತನಾಡಕೂಡದೆಂದು ವಿನಂತಿಸಿಕೊಂಡೆ. ಸರಿಯಾಗಿ ಊಟ, ತಿಂಡಿ ನೀಡಿ ಪ್ರೀತಿಯಿಂದ ನೋಡಿಕೊಳ್ಳುವಂತೆ ಹೇಳಿದೆ. ತರಗತಿಯಲ್ಲಿ ಇತರ ಹುಡುಗರೆದುರಿಗೆ ಆತನ ಉದ್ದವೇ ಆತನ ವೈಶಿಷ್ಟ್ಯ ಎಂಬಂತೆ ವರ್ಣಿಸಿದೆ. ಉದ್ದಕ್ಕೆ ತಕ್ಕ ದಪ್ಪವಿದ್ದರೆ ಚೆಂದ ಆದ್ದರಿಂದ ಸರಿಯಾಗಿ ಊಟ ಮಾಡು ಎಂದೂ ಅವನಿಗೆ ಉಪದೇಶಿಸಿದೆ. ಪ್ರಸಿದ್ಧ ಕ್ರಿಕೆಟ್ ಆಟಗಾರನಾದ ರವಿಶಾಸ್ತ್ರಿಯ ಉದಾಹರಣೆ ಕೊಟ್ಟು, ನೀನೂ ಚೆನ್ನಾಗಿ ಕ್ರಿಕೆಟ್ ಆಟ ಆಡಬಹುದೆಂದು ಪ್ರೋತ್ಸಾಹಿಸಿದೆ. ಕೇವಲ ಎಂಟೇ ದಿನಗಳಲ್ಲಿ ಆತನಲ್ಲಿ ಲವಲವಿಕೆ ಮೂಡಿತು. ಮೊದಲಿನಂತೆ ಪಾಠಪ್ರವಚನಗಳಲ್ಲಿ ಆಸಕ್ತಿ ಮೂಡಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿ ತೋರಿಸುವುದಾಗಿ ಈಗಾತ ಪಣ ತೊಟ್ಟಿದ್ದಾನೆ. ಹೀಗೆ ಖಿನ್ನತೆಯನ್ನು ಓರಿಯರು ಸಮಯೋಚಿತ ಮಾರ್ಗದರ್ಶನದಿಂದ ಪರಿಹರಿಸಬಹುದು.

ನಾಲ್ವತ್ತರ ನಂತರದ ಹೆಂಗಸರಲ್ಲಿ ಋತುಚಕ್ರ ನಿಲ್ಲುವ ಸಂದರ್ಭದಲ್ಲಿ, ಮಕ್ಕಳು ದೊಡ್ಡವರಾದಂತೆ ಮಕ್ಕಳು ಹಾಗೂ ಗಂಡನಿಗೆ ತನ್ನ ಅವಶ್ಯಕತೆ ಅಷ್ಟಾಗಿ ಇಲ್ಲವೆಂದು ಅನ್ನಿಸತೊಡಗಿದರೆ, ಭವಿಷ್ಯದ ಬಗ್ಗೆ ಇಲ್ಲದ್ದನ್ನು ಕಲ್ಪಿಸತೊಡಗಿದರೆ ಖಿನ್ನತೆ ಕಾಡಬಹುದು. ಇಂಥ ಸಂದರ್ಭಗಳಲ್ಲಿ ತರ್ಕಬದ್ಧವಾದ ಯೋಚನೆ ಹಾಗೂ ಸಮಯೋಚಿತ ವಿವೇಚನೆಗಳಿಂದ ಇದನ್ನು ತೊಲಗಿಸಬಹುದು. ಮಕ್ಕಳು ಹಾಗೂ ಗಂಡ ಕೈಗೊಂಡಿರುವ ಕಾರ್ಯಗಳು, ಅವರಿಗೆ ಇರುವ ಸಮಯಾಭಾವ ಹಾಗೂ ಮಕ್ಕಳು ತಮ್ಮ ಕಾಲ ಮೇಲೆ ತಾವು ನಿಲ್ಲುವುದು ಲೋಕಧರ್ಮ ಎಂಬುದನ್ನು ಮನಗಂಡು ತಮ್ಮ ಮನಸ್ಸನ್ನು ಯಾವುದಾದರೂ ಹವ್ಯಾಸದತ್ತ ತೊಡಗಿಸುವುದರಿಂದ ಇದನ್ನು ತಡೆಗಟ್ಟಬಹುದು.

ಮಧ್ಯ ವಯಸ್ಸಿನ ಗಂಡಸರನ್ನೂ ಇದು ಕಾಡುವುದಿದೆ. ಮಕ್ಕಳು ದೊಡ್ಡವರಾದಂತೆ ಇವರ ಜವಾಬ್ದಾರಿ ಹೆಚ್ಚಾಗುತ್ತದೆ. ಗಂಡು ಮಕ್ಕಳಿಗೆ ಕೆಲಸ ಕಾರ್ಯ ಕಲ್ಪಿಸಬೇಕು, ಹೆಣ್ಣು ಮಕ್ಕಳಿಗೆ ಮದುವೆ ಮಾಡಬೇಕು, ಮನೆ ಕಟ್ಟಿದ್ದರೆ ಬರುವ ಹಣದಲ್ಲಿ ಹೆಚ್ಚು ಪಾಲು ಸಾಲ ತೀರಿಸಲು ಹೋಗುವುದು. ಜೊತೆಗೆ ವಯಸ್ಸೂ ಆಗುತ್ತಿದೆ ನಿವೃತ್ತಿಯ ನಂತರ ಮುಂದೇನು? ಎನ್ನುವ ಯೋಚನೆಗಳು ಒಂದು ಕಡೆಯಾದರೆ ಇನ್ನೊಂದು ಕಡೆ ಮುಂದೆ ತಮ್ಮ ಭವಿಷ್ಯದ ತಳಹದಿ ಕುಸಿಯಬಹುದು ಎಂಬ ಮಾನಸಿಕ ವ್ಯಥೆಯೂ ಕಾಡತೊಡಗುತ್ತದೆ. ಕೆಲಸದ ಅಧಿಕ ಒತ್ತಡ ಹಾಗೂ ಮಾನಸಿಕ ಒತ್ತಡಗಳಿಂದ ವ್ಯಕ್ತಿ ನಿರ್ವಿಣ್ಣನಾಗುತ್ತಾನೆ. ಖಿನ್ನತೆ ದಾಳಿಯಿಡುತ್ತದೆ. ಆತ ಅಸಹಾಯಕನಂತೆ ವರ್ತಿಸತೊಡಗುತ್ತಾನೆ.

ಇವಕ್ಕೆಲ್ಲಾ ಒಳ್ಳೆಯ ಔಷಧಿ ನಮ್ಮ ವಿವೇಚನಾ ಶಕ್ತಿಯಲ್ಲೇ ಅಡಗಿದೆ. ಆಗುವುದನ್ನು ತಡೆಯಲು ನಾವು ಶಕ್ತರಲ್ಲ. ಆಗದಿರುವುದನ್ನು ಮಾಡಲೂ ಸಾಧ್ಯವಿಲ್ಲ. ಸಮತೋಲ ಕಾಯ್ದುಕೊಂಡು ನಮ್ಮ ಕರ್ತವ್ಯವನ್ನು ಅನೂಚಾನವಾಗಿ ಮಾಡಿ ಮುಗಿಸಿದರಾಯಿತು. ಕರ್ತವ್ಯ ಲೋಪವಾಗದಂತೆ ನಡೆದುಕೊಂಡದ್ದರಿಂದ ಮನಸ್ಸಿಗೆ ನೆಮ್ಮದಿಯೂ ದೊರೆಯುತ್ತದೆ. ಕರ್ತವ್ಯ ಮಾಡಿಯೂ ಕೈಗೂಡದಿರುವ ಕಡೆ ಸ್ಥಿತಪ್ರಜ್ಞತೆಯನ್ನು ಬೆಳೆಸಿಕೊಳ್ಳಬೇಕು. ಈ ಜೀವನವೇನು ಶಾಶ್ವತವೆ? ಹೇಗೊ ನಡೆಯುತ್ತದೆ ಎಂಬ ಮನೋಭಾವವನ್ನು ತಳೆಯಬೇಕು. ಇನ್ನು ಭವಿಷ್ಯದ ಬಗ್ಗೆ ಹೇಳಬೇಕೆಂದರೆ ಆದಾಯದ ಶೇಕಡಾ ಹತ್ತರಷ್ಟನ್ನಾದರೂ ವೃದ್ಧಾಪ್ಯಕ್ಕಾಗಿ ಕಾಯ್ದಿಡಬೇಕು. ಎಲ್ಲದಕ್ಕೂ ಮಕ್ಕಳು ಹಾಗೂ ಸೊಸೆಯಂದಿರನ್ನೇ ಅವಲಂಬಿಸಿರಬಾರದು. ನಿಮ್ಮಂತೆಯೇ ನಿಮ್ಮ ಮಕ್ಕಳಿಗೂ ಮುಂದೆ ತಮ್ಮ ಸಂಸಾರ ನಿಭಾಯಿಸುವುದೇ ಕಷ್ಟವಾಗಬಹುದು. ಅಂತಹ ಸಂದರ್ಭದಲ್ಲಿ ನೀವೂ ಸ್ವಲ್ಪ ಆರ್ಥಿಕ ಸಹಾಯ ನೀಡಿದರೆ ಅವರಲ್ಲಿ ಕೃತಜ್ಞತಾಭಾವವೂ ಬೆಳೆಯುತ್ತದೆ. ನಿಮ್ಮ ಬಗ್ಗೆ ಕಾಳಜಿಯೂ ಉಂಟಾಗುತ್ತದೆ. ಅಲ್ಲದೆ ಅವರ ಹೊರೆಯೂ ಕಡಿಮೆಯಾದಂತಾಗುತ್ತದೆ. ಹೀಗಾದಾಗ ನಿಮ್ಮನ್ನು ಖಿನ್ನತೆ ಕಾಡುವುದಿಲ್ಲ.

ವಿಷಣ್ಣತೆ:— ಇದೊಂದು ರೀತಿಯ ನಿರ್ಲಿಪ್ತತೆಯಿಂದ ಕೂಡಿದ ಉದಾಸೀನ ಮನೋಭಾವ. ಸತತವಾಗಿ ಪ್ರಯತ್ನಪಟ್ಟರೂ ಸೋಲನ್ನೇ ಕಂಡಾಗ ಈ ಸ್ಥಿತಿ ಒದಗುತ್ತದೆ. ಇದು ತಾತ್ಕಾಲಿಕವಾದದ್ದು. ಒಂದರ ಮೇಲೊಂದರಂತೆ ಪೆಟ್ಟಿನ ಮೇಲೆ ಪೆಟ್ಟೇ ಬೀಳುತ್ತಿದ್ದು ಗೆಲುವೆಂಬುದು ಇಲ್ಲವೇ ಇಲ್ಲ ಎಂಬ ತೀರ್ಮಾನಕ್ಕೆ ಬಂದರೆ, ವಿಷಣ್ಣಭಾವ ಶಾಶ್ವತವಾಗಿ ಉಳಿಯುವ ಸಾಧ್ಯತೆಯೂ ಇದೆ.

ರಮೇಶ 29ರ ಯುವಕ. ಎಂಎಸ್‌ಸಿ ಮಾಡಿದ್ದಾನೆ. ಮನೆಗೆ ಈತನೆ ಹಿರಿಯ ಮಗ. ತಂದೆಗೆ ಕೆಲಸದಿಂದ ವಿಶ್ರಾಂತಿ ದೊರೆತಿದೆ. ಇಬ್ಬರು ತಂಗಿಯರು ಬೆಳೆದು ನಿಂತಿದ್ದಾರೆ. ಇಬ್ಬರು ತಮ್ಮಂದಿರು ಇನ್ನೂ ಓದುತ್ತಿದ್ದಾರೆ. ಈತ ಡಿಗ್ರಿ ಮುಗಿಸಿ ನಾಲ್ಕು ವರ್ಷಗಳಿಂದ ಸತತವಾಗಿ ನೌಕರಿ ದೊರಕಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ. ಕಂಡ ಕಂಡಲ್ಲೆಲ್ಲಾ ಅರ್ಜಿ ಹಾಕಿ ಸಂದರ್ಶನ ಮಾಡಿ ಮಾಡಿ ಬೇಸತ್ತಿದ್ದಾನೆ. ಎಲ್ಲಾ ಕಡೆಯಿಂದಲೂ ನಿರಾಶೆಯ ಉತ್ತರವೇ ಬರುತ್ತಿದೆ. ವ್ಯಾಪಾರ ಮಾಡಲು ಹಣಕಾಸಿನ ಕೊರತೆ, ಅರ್ಜಿಯನ್ನು ಹಾಕಲೂ ತಂದೆಗೆ ಕೈ ಒಡ್ಡಬೇಕು. ಈತನನ್ನೆ ನಂಬಿದ್ದ ತಮ್ಮಂದಿರೂ ತಂಗಿಯರೂ ಈತನ ಬಗ್ಗೆ ಉದಾಸೀನ ತಾಳಿದ್ದಾರೆ. ಆಗೊಮ್ಮೆ ಈಗೊಮ್ಮೆ ತಾಯಿಯೂ ಉದಾಸೀನದಿಂದ ಮಾತನಾಡಲು ತೊಡಗಿದ್ದಾಳೆ. ಎಲ್ಲಾ ದಿಕ್ಕಿನಿಂದಲೂ ಈತ ಅಸಹಾಯಕ. ಜೀವನದ ಬಗ್ಗೆ ಕಾಳಜಿ ಹೊರಟು ಹೋಗಿದೆ. ಉಡುಪಿನ ಕಡೆಗೆ ಗಮನವೇ ಇಲ್ಲ. ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡು ಈಚೆಗೆ ಪೇಪರ್ ನೋಡಿ ಅರ್ಜಿ ಹಾಕುವುದನ್ನು ನಿಲ್ಲಿಸಿಬಿಟ್ಟಿದ್ದಾನೆ. ಆತನಿಗೆ ಊಟ, ತಿಂಡಿ ಯಾವುದರ ಮೇಲೂ ಗಮನವೇ ಇಲ್ಲ. ವಿದ್ಯಾವಂತ ಹುಡುಗರದು ಈ ಪರಿಯಾದರೆ ಹುಡುಗಿಯರ ಪಾಡು ಇನ್ನೊಂದು ಬಗೆಯದು.

ಶಶಿಕಲಾ 28ರ ಯುವತಿ. ದೊಡ್ಡ ಕುಟುಂಬದ ಕೆಳ ಮಧ್ಯಮ ವರ್ಗದ ಮೂರನೇ

ಹೆಣ್ಣುಮಗಳು ಈಕೆ. ಅಕ್ಕಂದಿರಿಬ್ಬರಿಗೂ ವರ ಹುಡುಕಿ ಹೇಗೋ ಸಾಗಹಾಕುವಷ್ಟರಲ್ಲಿ ಈಕೆಯ ತಂದೆಯ ಕೈ ಬರಿದಾಯಿತು. ಜೊತೆಗೆ ಕೆಲಸದಿಂದ ವಿಶ್ರಾಂತಿಯೂ ದೊರೆಯಿತು. ಸಾಧಾರಣ ರೂಪದ ಈಕೆಯ ವಿದ್ಯಾಭ್ಯಾಸವೂ ಹೇಳಿಕೊಳ್ಳುವಂತಿಲ್ಲ. ಜಾಸ್ತಿ ಓದಿಸಿದರೆ ಗಂಡು ಹುಡುಕಲು ತೊಂದರೆಯಾಗುತ್ತದೆ ಎಂದು ತಂದೆ ತಾಯಿಗಳು ಈಕೆಯ ಓದನ್ನು ಪಿ.ಯೂ.ಸಿ.ವರೆಗೆ ಮೊಟಕುಗೊಳಿಸಿದರು. ಕೆಲಸ ಹುಡುಕೋಣವೆಂದರೆ ಎಂತೆಂತಹ ಡಿಗ್ರಿ ಮಾಡಿರುವವರಿಗೇ ಕೆಲಸ ದ[illegible]ಗಿದ್ದ ಮೇಲೆ ಈಕೆಗೆ ಕೆಲಸ ದೊರೆಯ[illegible]? ತಂದೆ ತಾಯಿಗಳ ಗುಸುಗುಸು [illegible]ವೆಡೆ ಯಾದರೆ ಅತ್ತಿಗೆಯ 'ಶಶಿ ನನಗಿಂತ ಆರು ತಿಂಗಳಿಗೆ ದೊಡ್ಡವಳು ನನಗೆ ಮದುವೆಯಾಗಿ ಆಗಲೇ ದೀಪಾವಳಿಗೆ ನಾಲ್ಕು ವರ್ಷ ಕಳೆಯುತ್ತದೆ' ಎಂಬ ಅಣಕದ ಮಾತು. ಈ ಎಲ್ಲಾ ಮಾತುಗಳಿಗೆ ಮೊದಮೊದಲು ಪ್ರತಿಕ್ರಿಯಿಸುತ್ತಿದ್ದ ಈಕೆಗೆ ಈಗ ಯಾವುದರಲ್ಲೂ ಆಸಕ್ತಿ ಉಳಿದಿಲ್ಲ. ಪಕ್ಕದ ಬೀದಿಯಲ್ಲಿರುವ ಲೈಬ್ರರಿ ಪುಸ್ತಕಗಳನ್ನೆಲ್ಲಾ ಓದಿ ಮುಗಿಸಿಯಾಗಿದೆ. ಆ ಎಲ್ಲಾ ಕತೆಗಳಿಗಿಂತ ಈಕೆಯದೇ ಒಂದು ದೊಡ್ಡ ಕತೆಯಾಗಿದೆ. ಈಗ ಬಟ್ಟೆಬರೆ ನಯ ನಾಜೂಕಿನ ಕಡೆ ಗಮನ ಹೊರಟು ಹೋಗಿದೆ. ಊಟ ಮಾಡಿದರೂ ದಿನ ಕಳೆಯುತ್ತದೆ ಮಾಡದಿದ್ದರೂ ಕಳೆಯುತ್ತದೆ. ಆದರೆ ಮನೆಯ ರಾಶಿ ರಾಶಿ ಬಟ್ಟೆ, ಪಾತ್ರೆ ಕೆಲಸ ಮಾಡದಿದ್ದರೆ ಬಹುಶಃ ದಿನ ಕಳೆಯುವುದಿಲ್ಲ.

ಈ ವಿಷಣ್ಣತೆಯಿಂದ ಯುವ ಜನಾಂಗದ ಕರ್ತೃತ್ವ ಶಕ್ತಿ ವ್ಯರ್ಥವಾಗಿ ದೇಶದ ಅಭಿವೃದ್ಧಿಗೆ ತೊಡಕಾಗಿದೆ. ಇದನ್ನು ತೊಡೆದುಹಾಕುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಈಗಿನ ವಿದ್ಯಾಭ್ಯಾಸ ಪದ್ಧತಿ ಒಂದು ಕಡೆ ಇಂತಹ ಜನರನ್ನು ಸೃಷ್ಟಿಸುತ್ತಿದ್ದರೆ, ಹೆಣ್ಣು ಮಕ್ಕಳಿಗೆ ಸ್ವಾವಲಂಬನೆ ಕಲಿಸದೆ ಸಮಾಜವೂ ಪರೋಕ್ಷವಾಗಿ ಇಂತಹ ಜನಾಂಗದ ಸೃಷ್ಟಿಗೆ ಕಾರಣವಾಗಿದೆ. ಸಾಮಾಜಿಕ ಬದಲಾವಣೆ ಮತ್ತು ವಿದ್ಯಾಭ್ಯಾಸ ಕ್ರಮದ ಬದಲಾವಣೆಯಿಂದ ಮಾತ್ರ ಮುಂದಿನ ಪೀಳಿಗೆಯನ್ನು ತಿದ್ದಬಹುದಷ್ಟೆ. ಆದರೆ ಈಗಿರುವ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಈ ಜನರೇ ಸಮಾಜದ ಕಟ್ಟುಪಾಡು ಒಣಪ್ರತಿಷ್ಠೆ ಇವುಗಳನ್ನು ಬದಿಗೊತ್ತಿ ಮುನ್ನಡಿಯಿಡಲು ಈಗಲೂ ಕಾಲ ಮಿಂಚಿಲ್ಲ. ರಮೇಶನಂತಹ ಹುಡುಗರು ಕಡಿಮೆ ಬಂಡವಾಳದ ಹಣ್ಣಿನ ವ್ಯಾಪಾರ, ತರಕಾರಿ ವ್ಯಾಪಾರ, ಹೂವಿನ ವ್ಯಾಪಾರ, ಪೇಪರ್ ಹಾಕುವುದು, ಬೀದಿಗಳಲ್ಲಿ ಬಟ್ಟೆ ಮಾರುವುದು, ಮೀನುಗಾರಿಕೆ, ಗಾರೆಕೆಲಸ, ಮನೆಕಟ್ಟುವ ಕೆಲಸದ ಮೇಲ್ವಿಚಾರಣೆ, ಹುಡುಗರಿಗೆ ಪಾಠ ಹೇಳಿಕೊಡುವುದು ಮುಂತಾದ ಕೆಲಸಗಳಿಂದ ಬಹಳಷ್ಟಲ್ಲದಿದ್ದರೂ ಸ್ವಲ್ಪವಾದರೂ ಸಂಪಾದಿಸಿ ಲವಲವಿಕೆಯಿಂದ ಕಾಲ ಕಳೆಯಬಹುದು.

ಇನ್ನು ಹುಡುಗಿಯಾದರೆ ಬಟ್ಟೆ ಹೊಲಿಯುವುದು, ಬುಟ್ಟಿ ಹೆಣೆಯುವುದು, ಕಸೂತಿ ಕೆಲಸ, ಕೆತ್ತನೆ ಕೆಲಸ, ಮನೆ ತೋಟಗಳಲ್ಲಿ ತರಕಾರಿ ಬೆಳೆಯುವುದು, ಮಕ್ಕಳಿಗೆ ಪಾಠ ಹೇಳಿಕೊಡುವುದು, ಸ್ವೆಟರ್ ಹಾಕುವುದು, ಸಂಗೀತ ಹೇಳಿಕೊಡುವುದು ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ಮನಸ್ಸಿನ ವಿಷಣ್ಣತೆಯನ್ನು ಹೋಗಲಾಡಿಸುವುದರ ಜೊತೆಗೆ ಹಣ ಸಂಪಾದಿಸಿ ಸ್ವಾವಲಂಬಿಗಳೂ ಆಗಬಹುದು.

ಉದ್ವೇಗ:— ಸದಾ ಮನಸ್ಸನ್ನು ಕಳವಳಕ್ಕೀಡು ಮಾಡುವ ಒಂದು ಮಾನಸಿಕ ಸ್ಥಿತಿ. ಮಕ್ಕಳಿಂದ ಮುದುಕರವರೆಗೂ ಇದು ಕಾಡಬಹುದು. ಸಾಮಾನ್ಯವಾಗಿ ಜೀವನದಲ್ಲಿ ನೆಲೆ ನಿಂತಿರುವ ಪ್ರೌಢರಲ್ಲಿ ಇದು ಸ್ವಲ್ಪ ಕಡಿಮೆ ಎಂದು ಹೇಳಬಹುದು. 12 ರಿಂದ 15 ವಯಸ್ಸಿನ ಮಕ್ಕಳಲ್ಲಿ ತಂದೆ ತಾಯಿಗಳು ತನ್ನನ್ನು ಸರಿಯಾಗಿ ಪ್ರೀತಿಯಿಂದ ನೋಡಿಕೊಳ್ಳುತ್ತಿಲ್ಲ ಎಂಬ ಭಾವನೆ ಶುರುವಾದರೆ ಈ ಉದ್ವೇಗ ಉಂಟಾಗುತ್ತದೆ. ಈ ವಯಸ್ಸಿನಲ್ಲಿ ಮಕ್ಕಳಿಗೆ ಸೃಜನಶೀಲ ಕೆಲಸಗಳಲ್ಲಿ ಆಸಕ್ತಿಯಿರುತ್ತದೆ. ಪ್ರತಿಯೊಂದನ್ನೂ ಪ್ರಯೋಗಾತ್ಮಕವಾಗಿ ಮಾಡಿ ತಿಳಿಯುವ ಆಸಕ್ತಿಯಿರುತ್ತದೆ. ಇತ್ತ ಅವರು ದೊಡ್ಡವರೂ ಅಲ್ಲ, ಅತ್ತ ಚಿಕ್ಕವರೂ ಅಲ್ಲ. ಅಲ್ಲೂ ಸಲ್ಲದ, ಇಲ್ಲೂ ಸಲ್ಲದ ಸ್ಥಿತಿ. ಈ ಸಮಯದಲ್ಲಿ ಭವಿಷ್ಯದ ಬಗ್ಗೆ ಅವರಿಗೆ ಭರವಸೆ ಮೂಡಿಸಬೇಕು. ಸೃಜನಶೀಲ ಕೆಲಸಗಳಲ್ಲಿ ಅವರನ್ನು ತೊಡಗಿಸಬೇಕು. ಕಟುವಾದ ಟೀಕೆಯನ್ನಾಗಲೀ ಮಾತು ಮಾತಿಗೆ ಜರಿಯುವುದನ್ನಾಗಲಿ

ಮಾಡಬಾರದು. ಮೃದುವಾದ ಒಳ್ಳೆಯ ಮಾತು ಉದ್ವೇಗ ನಿವಾರಣೆಗೆ ತಕ್ಕುದಾದ ಮದ್ದು.

ಮೂರು ನಾಲ್ಕು ವಯಸ್ಸಿನ ಮಕ್ಕಳಲ್ಲಿ ಈ ಉದ್ವೇಗ ಹೆಚ್ಚು. ಪೋಷಕರು ಮಕ್ಕಳ ಮನಸ್ಸನ್ನು ತಿಳಿಯದೆ ಕಟುವಾಗಿ ವರ್ತಿಸು ವುದು, ಆ ಮಕ್ಕಳು ಮಾಡಿದ ಸಣ್ಣ ಪುಟ್ಟ ಕೆಲಸ ಗಳನ್ನು ಹೊಗಳಿ ಪ್ರೋತ್ಸಾಹಿಸದೆ ಅಸಡ್ಡೆ ಮಾಡುವುದು, ಹಾಸಿಗೆ ಒದ್ದೆ ಮಾಡುವ ತ್ತಾನೆ ಎಂಬ ಕಾರಣದಿಂದ ಆತನನ್ನು ಒಂಟಿ ಯಾಗಿ ದೂರ ಮಲಗಿಸುವದು, ಆಟವಾಡಿ ಕೊಂಡಿರಬೇಕಾದ ವಯಸ್ಸಿನಲ್ಲಿ ಶಾಲೆಗೆ ಸೇರಿಸಿ ನಿರ್ಬಂಧದಿಂದ ಒಂದೆಡೆ ಕೂರಿಸುವ ಪ್ರಯತ್ನ, ಹೋಂವರ್ಕ್‌ನ ಒತ್ತಡ, ಉಪಾ ಧ್ಯಾಯಿನಿಯರು ಶಿಸ್ತಿನ ನೆಪ ಒಡ್ಡಿ ಆ ಮಕ್ಕಳನ್ನು ಶಿಕ್ಷಿಸುವದು, ಇತರ ಮಕ್ಕಳೆದುರಿಗೆ ಹೊಡೆದು ಹೊರಗಡೆ ನಿಲ್ಲಿಸುವುದು, ಮುಂತಾ ದವುಗಳಿಂದ ಮಕ್ಕಳ ಮಾನಸಿಕ ಉದ್ವೇಗ ಜಾಸ್ತಿಯಾಗುತ್ತದೆ. ಇದರಿಂದ ಮಕ್ಕಳು ಮಾತ ನಾಡುವಾಗ ತೊದಲುತ್ತಾರೆ. ರಾತ್ರಿ ಮಲಗಿ ದಾಗ ಕನವರಿಸಿ ಬೆಚ್ಚಿ ಬೀಳುತ್ತಾರೆ. ಕತ್ತಲೆ ನೋಡಿ ಹೆದರುತ್ತಾರೆ. ಹಾಸಿಗೆ ಒದ್ದೆ ಮಾಡಲೂಬಹುದು. ಶಾಲೆಗೆ ಹೋಗುವುದಿಲ್ಲ ವೆಂದು ಹಟ ಮಾಡತೊಡಗುತ್ತಾರೆ. ಬೆಳಗಿ ನಿಂದ ಸಂಜೆಯವರೆಗೆ ಅತ್ತು ರಂಪಾಟ ಮಾಡುತ್ತಾರೆ. ಹೀಗೆ ಅನೇಕ ರೀತಿಗಳಿಂದ ತಮ್ಮ ಮನಸ್ಸಿನ ಉದ್ವೇಗ ತೋರಿಸಿಕೊಳು ತ್ತಾರೆ.

ಇಂತಹ ಸಂದರ್ಭದಲ್ಲಿ ಶಿಕ್ಷಕಿಯರು ಹಾಗೂ ಪೋಷಕರು ಬಹಳ ಎಚ್ಚರಿಕೆಯಿಂದ ವರ್ತಿಸ ಬೇಕು. ಮಕ್ಕಳ ಜೊತೆ ದೊಡ್ಡವರ ವರ್ತನೆ ಹಿತಮಿತವಾಗಿರಬೇಕು. ಅವರನ್ನು ಒಳ್ಳೆಯ ಮಾತು ಹಾಗೂ ಪ್ರೀತಿಯಿಂದ ನೋಡಿಕೊಳ್ಳ ಬೇಕು. ಅವರ ಇಚ್ಛೆಗೆ ಅನುಸಾರವಾಗಿ ಆಟ ವಾಡಲು ಬಿಡಬೇಕು. ಉದ್ವೇಗ ಜಾಸ್ತಿ ಯಾದಾಗ ಹಠಮಾರಿತನ ಶುರುವಾಗುವುದ ರಿಂದ ಹಠಮಾರಿತನಕ್ಕೆ ಹೆಚ್ಚು ಅವಕಾಶ ಕೊಡಬಾರದು. ಹೇಳಿದ್ದನ್ನೇ ಹೇಳಿ ಹೇಳಿ ಅವರ ಮನಸ್ಸಿಗೆ ಚುಚ್ಚಿ ಒಡಿಸಬಾರದು. ಮಕ್ಕಳ ಮನಸ್ಸು ಸೂಕ್ಷ್ಮವಾದುದರಿಂದ ಮನ ದಟ್ಟಾಗುವಂತೆ ಒಮ್ಮೆ ಹೇಳಿದರೆ ಸಾಕು ತಿಳಿದು ಕೊಳ್ಳುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಸುರಕ್ಷತೆಯ ವಿಶ್ವಾಸ ಮೂಡುವಂತೆ ಅವ ರೊಡನೆ ನಡೆದುಕೊಳ್ಳಬೇಕು. ಆಗ ಉದ್ವೇಗ ಕಡಿಮೆಯಾಗುತ್ತದೆ. ನಿಶ್ಚಿಂತೆ ಮೂಡುತ್ತದೆ. ಅವರ ಸರ್ವತೋಮುಖ ಬೆಳವಣಿಗೆಯಾಗು ತ್ತದೆ.

ಇನ್ನು ವಯಸ್ಸಾದವರ ವಿಷಯಕ್ಕೆ ಬಂದರೆ ಸಣ್ಣ ವಿಷಯಗಳಿಗೆಲ್ಲಾ ಇವರು ಉದ್ವೇಗ ಗೊಳ್ಳುತ್ತಾರೆ. ಲಕ್ಷ್ಮೀನಾರಾಯಣಯ್ಯನವರಿಗೆ ಈಗ 68 ವರ್ಷ. ಸರಿಯಾಗಿ ಕಣ್ಣು ಕಾಣುವು ದಿಲ್ಲ. ಈಗ ಓದುವಂತಿಲ್ಲ. ಒಬ್ಬರೇ ಹೊರಗೆ ತಿರುಗಾಡುವಂತೆಯೂ ಇಲ್ಲ. ಬೇಸರ ಬಂದು ಅಕಸ್ಮಾತ್ತಾಗಿ ಹೊರಗೆ ತಿರುಗಾಡಲು ಹೊರ ಟರೆ ಮಕ್ಕಳ ಉಪದೇಶ ಶುರುವಾಗುತ್ತದೆ. ಈಗೀಗ ಅವರು ಮಾತೆತ್ತಿದರೆ ರೇಗಾಡುತ್ತಾರೆ. ತಮ್ಮ ಮಾತಿಗೆ ಯಾರೂ ಬೆಲೆ ಕೊಡುತ್ತಿಲ್ಲ ವೆಂಬ ಭಾವನೆ ಅವರಿಗೆ. ಹೆಂಡತಿಗೆ ಒಂದು ಲೋಟ ನೀರು ಕೊಡಲು ಹೇಳುತ್ತಾರೆ ಎಂದಿಟ್ಟುಕೊಳ್ಳಿ. ಹೊರಗೆಲ್ಲೋ ಇದ್ದ ಆಕೆ ಸಾವಕಾಶವಾಗಿ ಬಂದು ನೀರು ಕೊಡುವಷ್ಟ ರಲ್ಲಿ ಇವರ ಗೊಣಗಾಟ ಶುರುವಾಗಿರುತ್ತದೆ. "ನನ್ನಿಂದ ಯಾರಿಗೇನು ಪ್ರಯೋಜನ. ವಯ ಸ್ಸಾದ ಮೇಲೆ ಹೆಚ್ಚು ದಿನ ಬದುಕಿರಬಾರದು. ಒಂದು ಲೋಟ ನೀರು ಕೊಡಲು ಉದಾಸೀನ. ಕೇಳಿ ಎಷ್ಟುಹೊತ್ತಾಯ್ತು?" ಮುಂತಾಗಿ ಉದ್ವೇಗದಿಂದ ಬೆವರುತ್ತಾರೆ. ರಕ್ತದ ಒತ್ತಡ ಜಾಸ್ತಿಯಾಗುತ್ತದೆ, ಸುಸ್ತಾಗುತ್ತಾರೆ.

ಮಕ್ಕಳೆಲ್ಲಾ ಟಿ.ವಿ. ನೋಡುತ್ತಾ ಕುಳಿತಿದ್ದಾಗ ಜೋರಾಗಿ ನಕ್ಕರೆ ಅಥವಾ ಏನಾದರೂ ವಿಷಯ ಮಾತನಾಡಿಕೊಂಡರೆ 'ಏನು ಅದು?' ಎಂದು ಕೇಳುತ್ತಾರೆ. ಏನಿಲ್ಲ ಟಿ.ವಿ. ಯಲ್ಲಿ ಏನೋ ಬಂತು ಎಂದರೆ ತನ್ನ ವಿಷಯವೇನೋ ಮಾತಾಡಿ ನಕ್ಕಿದ್ದಾರೆ ಎಂಬ ಅನುಮಾನ. ಇದೊಂದೆ ವಿಷಯವಲ್ಲ, ಪಾತ್ರೆ ಬಿದ್ದ ಸದ್ದಾ ದರೆ ಕುರ್ಚಿ ಅಥವಾ ಮೇಜಿನ ಶಬ್ದವಾದರೆ, ಗೇಟ್ ಶಬ್ದವಾದರೆ ಸೈಕಲ್ ಬೆಲ್ಲಾದರೆ ಏನು. ಏನು? ಎಂದು ಗಾಬರಿಯಾಗುತ್ತಾರೆ. ನಿದ್ರೆ ಮಾಡಲಾರರು. ಕುಳಿತಿರಲೂ ಶಕ್ತಿ ಸಾಲದು. ಹೊರಗೂ ಹೋಗಲಾರರು, ಸೊಸೆಯ

ರೊಂದಿಗೆ, ಮನೆ ಬಿಟ್ಟು ಹೋಗುವುದಾಗಿಯೋ, ವೃದ್ಧಾಶ್ರಮಕ್ಕೆ ಸೇರಿಕೊಳ್ಳುವುದಾಗಿಯೋ ಹೇಳಿ ಪಿರಿ ಪಿರಿ ಶುರು ಮಾಡುತ್ತಾರೆ.

ಇದಕ್ಕೆ ಮದ್ದೆಂದರೆ ಮಕ್ಕಳು ಹಾಗೂ ಸೊಸೆಯಂದಿರ ತಾಳ್ಮೆಯ ವರ್ತನೆ. ಯಾವುದಾದರೂ ಮದುವೆ ಮುಂಜಿ ಮಾಡಬೇಕಾದರೆ ಎಲ್ಲಾ ವಿಷಯ ತೀರ್ಮಾನ ಮಾಡಿ ನಂತರ ಅವರಿಗೆ ವಿಷಯ ತಿಳಿಸುವ ಬದಲು ಶುರು ಮಾಡುವ ಮೊದಲೇ ಆ ವಿಷಯವನ್ನು ಒಮ್ಮೆ ಅವರಿಗೆ ಅರ್ಥವಾಗುವಂತೆ ತಾಳ್ಮೆಯಿಂದ ತಿಳಿಸಿಬಿಡಬೇಕು. ಯಾರಾದರೂ ಮಾತನಾಡುವಾಗ ಏನೆಂದು ಕೇಳಿದರೆ ಸಹನೆಯಿಂದ ಅವರಿಗೆ ಕೇಳುವ ಹಾಗೆ ಆದಷ್ಟು ಗಟ್ಟಿಯಾಗಿ ಹೇಳಬೇಕು. ಮನೆಗೆ ಏನಾದರೂ ಹೊಸ ಸಾಮಾನು ತಂದರೆ ಮೊದಲು ಅವರಿಗೆ ತೋರಿಸಬೇಕು. ಮೊಮ್ಮಕ್ಕಳನ್ನು ಜೊತೆಮಾಡಿ ಸ್ವಲ್ಪ ದೂರ ಅಪಾಯ ಕಡಿಮೆಯಿರುವ ಕಡೆ ತಿರುಗಾಡಿಕೊಂಡು ಬರಲು ಅವಕಾಶ ಮಾಡಿಕೊಡಬೇಕು. ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಹೀಗೆ ಮಾಡುವುದರಿಂದ ಹಿರಿಯರ ಮನಸ್ಸಿನ ಉದ್ವೇಗ ಕಡಿಮೆಯಾಗಿ ಶಾಂತಿಯಿಂದ ವರ್ತಿಸುತ್ತಾರೆ. ಜೊತೆಗೆ ಮನೆಯಲ್ಲಿ ನೆಮ್ಮದಿಯೂ ನೆಲೆಸುತ್ತದೆ.

ಯೋಚನೆ:-ಚಿಂತೆಯು ಪರಿವಾರದ ಪ್ರಮುಖ ಸದಸ್ಯ. ಸಾಮಾನ್ಯವಾಗಿ ಇದು ಎಳೆ ವಯಸ್ಸಿನ ಉದ್ಯೋಗಸ್ಥ ಮಹಿಳೆಯರನ್ನು ಕಾಡುತ್ತದೆ. ಇವರು ಗಂಡ, ಮಕ್ಕಳು-ಮರಿ ಎಂದು ಮನೆಯಲ್ಲೂ ದುಡಿಯಬೇಕಾಗುತ್ತದೆ. ಅತ್ತ ಹೊರಗೂ ದುಡಿಯಬೇಕಾಗುತ್ತದೆ. ಬೆಳಗಾಗೆದ್ದರೆ ಕಾಫಿ, ತಿಂಡಿ, ಅಡಿಗೆ, ಮಕ್ಕಳ ಲಾಲನೆ-ಪಾಲನೆ, ನಂತರ ಬಸ್ಸು ಹಿಡಿದು ಕಛೇರಿಗೆ ತಲುಪುವುದು. ಅಲ್ಲಿ ಸಾಯಂಕಾಲದವರೆಗೆ ಎಡೆಬಿಡದೆ ಕೆಲಸ. ಮನೆಗೆ ಬಂದರೆ ಸಾಯಂಕಾಲದ ಅಡಿಗೆ, ಬೆಳಗಿನ ತಿಂಡಿಗೆ ವ್ಯವಸ್ಥೆ ಮಾಡಿಟ್ಟುಕೊಳ್ಳುವುದು, ನಾಳೆಗೆ ತರಕಾರಿ ಹೊಂದಿಸುವುದು, ಒಂದೇ ಎರಡೇ ಒಟ್ಟಿನಲ್ಲಿ ಯಾವುದಾದರೂ ಒಂದು ಯೋಚನೆ ಮನಸ್ಸನ್ನು ಕಾಡುತ್ತಲೇ ಇರುತ್ತವೆ.

ಸುಂದರಮ್ಮ ಒಂದು ಫ್ಯಾಕ್ಟರಿಯ ಉದ್ಯೋಗಸ್ಥೆ. 8 ಘಂಟೆಯಿಂದ ಸಂಜೆ ನಾಲ್ಕರವರೆಗೆ ಫ್ಯಾಕ್ಟರಿಯಲ್ಲಿ ಕೆಲಸ. ಈಕೆಗೆ ಎರಡು ಮಕ್ಕಳು. ಒಂದು ನಾಲ್ಕು ವರ್ಷದ್ದು, ಇನ್ನೊಂದಕ್ಕೆ ನಾಲ್ಕು ತಿಂಗಳು. ಆಕೆಯ ಪತಿಯೂ ಬೆಳಿಗ್ಗೆ ಮನೆ ಬಿಟ್ಟರೆ ಸಾಯಂಕಾಲಕ್ಕೆ ಮನೆ ತಲುಪುವುದು. ನಾಲ್ಕು ತಿಂಗಳ ಆ ಮಗುವನ್ನು ನೋಡಿಕೊಳ್ಳಲು ಮನೆಯಲ್ಲಿ ಯಾರೂ ಇಲ್ಲದೆ ಇರುವ ಕಾರಣದಿಂದ ಎಂಟು ಹತ್ತು ವರ್ಷದ ಒಂದು ಹುಡುಗಿಯನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾರೆ. ನಾಲ್ಕು ವರ್ಷದ ಸತೀಶನನ್ನು ಶಿಶುವಿಹಾರಕ್ಕೆ ಸೇರಿಸಿದ್ದಾರೆ. ಮಧ್ಯಾಹ್ನ ಎರಡು ಘಂಟೆಗೆ ಆತನ ಶಾಲೆ ಮುಗಿಯುತ್ತದೆ. ಮೊನ್ನೆ ಶಾಲೆಯಿಂದ ಬರುವಾಗ ಬಿದ್ದು ಹಣೆಗೆ ಪೆಟ್ಟಾಯಿತು. ನೋವಿಗೆ ಸ್ವಲ್ಪ ಜ್ವರವೂ ಬಂದಿದೆ. ಔಷಧಿ, ಮಾತ್ರೆ ಕೊಡಿಸಿ, ಮನೆಯಲ್ಲಿದ್ದರೆ ತುಂಟತನ ಮಾಡುತ್ತಾನೆಂದು ಶಾಲೆಗೆ ಹೋಗುವಂತೆ ಹೇಳಿ ಶೀತ, ನೆಗಡಿಯಾಗಿರುವ ನಾಲ್ಕು ತಿಂಗಳ ಪುಟ್ಟ ಮಗುವನ್ನು ಕೆಲಸದ ಹುಡುಗಿಯ ಹತ್ತಿರ ಬಿಟ್ಟು ಈಕೆ ಫ್ಯಾಕ್ಟರಿಗೆ ಬಂದಿದ್ದಾಳೆ. ಆಕೆ ದೈಹಿಕವಾಗಿ ಫ್ಯಾಕ್ಟರಿಯಲ್ಲಿದ್ದರೂ, ಮನಸ್ಸೆಲ್ಲಾ ಮನೆಯ ಕಡೆಗೇ. ಹೀಗಾಗಿ ಟೈಪಿಂಗ್‌ನಲ್ಲಿ ಒಂದೆರಡು ತಪ್ಪುಗಳು ನುಸುಳಿದ್ದವು. ಮೇಲಾಧಿಕಾರಿ, "ಏನಮ್ಮ ಇಷ್ಟು ತಪ್ಪು ಮಾಡಿದ್ರೆ ಹೇಗೆ?" ಎಂದು ಮೃದುವಾಗಿಯೇ ಕೇಳಿದರೆ, ಮೊದಲೇ ಇದ್ದ ಯೋಚನೆಗಳ ಜೊತೆಗೆ ಸಹೋದ್ಯೋಗಿಗಳ ಎದುರಿಗೆ ಮುಖಭಂಗ ಬೇರೆ. ಈ ಎಲ್ಲಾ ಯೋಚನೆಗಳ ಜಂಜಾಟದಲ್ಲಿ ರಾತ್ರಿಯೆಲ್ಲಾ ನಿದ್ದೆಯಿಲ್ಲ. ಬೆಳಗಾಗೆದ್ದರೆ ತನಗೆ ಮೈ ಬಿಸಿಯಾಗಿದೆ. ರಜೆ ಹಾಕಿ ಹಾಯಾಗಿ ಮನೆಯಲ್ಲಿ ರೋಣವೆಂದರೆ ರಜೆಯೆಲ್ಲಾ ಮುಗಿದೇ ಹೋಗಿದೆ. ಎಲ್ಲವೂ ಮೇಲುನೋಟಕ್ಕೆ ಅದೇನು ಮಹಾ ಎಂದು ತಳ್ಳಿ ಹಾಕಬಹುದಾದ ವಿಷಯಗಳೇ. ಆದರೆ ಆಕೆಗೆ ಮಾತ್ರ ಪ್ರತಿದಿನ ಒಂದಲ್ಲಾ ಒಂದು ಯೋಚನೆ ಕಾಡುತ್ತಲೇ ಇರುತ್ತದೆ. ಸಣ್ಣಪುಟ್ಟ ವಿಷಯಗಳನ್ನು ತಲೆಗೆ ಹಚ್ಚಿಕೊಳ್ಳುತ್ತಾರೆ, ಕೊರಗುತ್ತಾರೆ. ಈಗೀಗ ಮನೆಯಲ್ಲಿ ಪಾತ್ರೆ ಪರಡೆ ಎತ್ತಿ ಹಾಕುವುದು, ಮಕ್ಕಳನ್ನು ಹೊಡೆಯುವುದು, ಗಂಡನ ಮೇಲೆ ರೇಗಾಡುವುದು ಜಾಸ್ತಿಯಾಗಿದೆ. ಮಾತು ಮಾತಿಗೂ ರೇಗುತ್ತಾರೆ. ಹೀಗೆ ಮುಂದುವರೆದರೆ ಒಂದಲ್ಲ ಒಂದು ದಿನ ಆಕೆ ಮಾನಸಿಕ

ರೋಗಿಯಾಗಲೂಬಹುದು. ಈ ರೀತಿ ಮನಸ್ಸನ್ನು ಕಾಡುತ್ತಿರುವ ಯೋಚನೆಗಳಿಂದ ಬಿಡುಗಡೆ ಹೊಂದಲು ಆಕೆಗೆ ಪ್ರತಿದಿನ ಒಂದೆರಡು ಗಂಟೆಗಳ ಅವಕಾಶವಾದರೂ ಬೇಕು. ಆದರೆ ಮನೆಯ ಜವಾಬ್ದಾರಿಯನ್ನು ಒಂದೆರಡು ಗಂಟೆಗಳವರೆಗಾದರೂ ಆಳುಕಾಳುಗಳಿಗೆ ವಹಿಸಿ ನೆಮ್ಮದಿಯಿಂದಿರಲು ಸಾಧ್ಯವೇ?.

ಸ್ವಲ್ಪ ನಿಧಾನವಾಗಿ ಯೋಚಿಸಿದರೆ, ಈ ಮೇಲಿನ ಎಲ್ಲಾ ಜಂಜಾಟಕ್ಕೂ ಆ ಮಹಿಳೆಯರೇ ಕಾರಣ ಎಂಬುದು ಹೊಳೆಯುತ್ತದೆ. ಸಾಮಾನ್ಯವಾಗಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಸ್ವತಂತ್ರವಾಗಿ ತಮ್ಮ ಗಂಡ ಮತ್ತು ಮಕ್ಕಳೊಡನೆ ಇರಬಯಸುತ್ತಾರೆ. ತಾವಿಬ್ಬರೂ ಬೆಳಗಿನಿಂದ ಸಂಜೆಯವರೆಗೆ ದುಡಿದು ಸಂಪಾದಿಸಿದ ಹಣವನ್ನು ಇತರರಿಗಾಗಿ ವ್ಯಯಿಸಲು ಇಷ್ಟ ಪಡುವುದಿಲ್ಲ. ಅತ್ತೆ-ಮಾವಂದಿರ ಜವಾಬ್ದಾರಿ ಮುಂದೆ ಹೊರೆಯಾಗಬಹುದು ಎಂಬ ಯೋಚನೆ ಕೆಲವರಿಗಾದರೆ, ಸದಾ ಮನೆಯಲ್ಲಿಯೇ ಇರುವ ಅತ್ತೆಯಿಂದ ಕಿರುಕುಳ ಶುರುವಾಗಬಹುದು ಎಂಬುದು ಕೆಲವರ ಯೋಚನೆ. ಈ ಎಲ್ಲಾ ದೂರಾಲೋಚನೆಗಳು, ಅವರು ಕಟ್ಟಿದ ಕನಸುಗಳು ಅವರು ನೆನೆಸಿದಂತೆಯೇ ನಡೆದರೆ ಸುಂದರ, ಸುಗಮ. ಆದರೆ ಹಾಗಾಗಬೇಕಲ್ಲ.

ಅತ್ತೆ ಮಾವಂದಿರನ್ನು ತಮ್ಮ ಬಳಿಯೇ ಇಟ್ಟುಕೊಳ್ಳುವುದರಿಂದ ಅಥವಾ ಓದು ಮುಗಿಸಿ ಕೆಲಸ ಹುಡುಕುತ್ತಿರುವ, ಮದುವೆಗಿರುವ ನಾದಿನಿಯರನ್ನು ಮನೆಯಲ್ಲಿ ಇಟ್ಟುಕೊಳ್ಳುವುದರಿಂದ ಈ ಎರಡೂ ಸಾಧ್ಯವಾಗದಿದ್ದರೆ ಮನೆ ತಪ್ಪಿದ ನಿಮ್ಮ ಸಂಬಂಧದ ಯಾವುದಾದರೂ ಹೆಂಗಸನ್ನು ಮನೆಯಲ್ಲಿ ಇಟ್ಟುಕೊಳ್ಳುವುದರಿಂದ ನಿಮ್ಮ ಯೋಚನೆಗಳಿಗೆ, ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಅವರಿಗೂ ಆಧಾರ ದೊರೆಯುತ್ತದೆ. ವಯಸ್ಸಾದ ತಂದೆ ತಾಯಿಗಳನ್ನು ತಮ್ಮೊಡನೆ ಇಟ್ಟುಕೊಳ್ಳುವುದರಿಂದ ನಿಮ್ಮ ಯಜಮಾನರ ಜೊತೆಗೆ ವೃದ್ಧಾಪ್ಯದಲ್ಲಿ ನೀವು ಅವರಿಗೆ ಆಧಾರವಾಗಿದ್ದೀರಿ ಎಂಬ ಕಾರಣದಿಂದ ನಿಮಗೂ ಸಮಾಜದಿಂದ ಮೆಚ್ಚುಗೆ ದೊರೆಯುತ್ತದೆ.

ಹೀಗೆ ಮಾಡುವುದು ಆರ್ಥಿಕವಾಗಿ ದುಬಾರಿಯಾಗುತ್ತದೆಂಬ ಚಿಂತೆ ಬೇಡ. ಏಕೆಂದರೆ ಕೆಲಸದವಳಿಗೆ, ಆಯಾಳಿಗೆ ಕೊಡುವ ಹಣ ಉಳಿಯುತ್ತದೆ. ಸದಾ ಅನೇಕ ಯೋಚನೆಗಳಿಂದ ಜರ್ಜರಿತರಾಗಿ ಅನಾರೋಗ್ಯದತ್ತ ಸಾಗುತ್ತಿರುವ ನೀವು ಡಾಕ್ಟರಿಗೆ ತೆರುವ ಹಣ ಉಳಿಯುತ್ತದೆ. ನಿಮ್ಮ ಗಂಡ ಮಾನಸಿಕ ನೆಮ್ಮದಿ ಇಲ್ಲದೆ ಡಾಕ್ಟರರಿಗೆ ತೆರುವ ಹಣ ಉಳಿಯುತ್ತದೆ. ದಿನ ದಿನವೂ ನಿಗಾ ಸಾಲದೆ ಅನಾರೋಗ್ಯದಿಂದ ಮಕ್ಕಳು ಬಳಲುವಾಗ ಡಾಕ್ಟರರಿಗೆ ತೆರಬೇಕಿದ್ದ ಹಣ ಉಳಿಯುತ್ತದೆ. ಹೀಗೆ ಉಳಿದ ಹಣದಿಂದ ಅವರ ಖರ್ಚನ್ನು ನೀವು ನಿಭಾಯಿಸಬಹುದು. ಇನ್ನು ಅಜ್ಜ ಅಜ್ಜಿಯರಿಗೆ ಮೊಮ್ಮಕ್ಕಳೇ ಆಧಾರ. ಮೊಮ್ಮಕ್ಕಳಿಗೆ ಮುದ್ದು ಮಾಡುವ, ಕಥೆ ಹೇಳುವ ಅಜ್ಜಂದಿರೇ ಮಕ್ಕಳಿಗೆ ಅಚ್ಚುಮೆಚ್ಚು. ಸ್ವಲ್ಪವೇ ಸಹನೆ, ಸ್ವಲ್ಪವೇ ಹೊಂದಾಣಿಕೆಯಿಂದ ನಿಮಗೂ ನೆಮ್ಮದಿ, ಅತ್ತೆ ಮಾವಂದಿರಿಗೆ ನಿಶ್ಚಿಂತೆ, ನಿಮ್ಮ ಗಂಡ ಮಕ್ಕಳಿಗೂ ಸುಖ, ಯೋಚನೆಗೂ ಪರಿಹಾರ.

ಚಿಂತೆ, ಖಿನ್ನತೆ, ವಿಷಣ್ಣತೆ, ಉದ್ವೇಗ, ಯೋಚನೆ ಮುಂತಾದುವು ನೇರವಾಗಿ ಮನಸ್ಸಿಗೆ ದಾಳಿಯಿಡುವ ಶತ್ರುಗಳು. ಸ್ವಲ್ಪ ತಾಳ್ಮೆಯಿಂದ ಯೋಚಿಸಿದರೆ ನೀವು ಇವೆಲ್ಲವುಗಳಿಂದಲೂ ದೂರ ಇರಬಹುದು. ●

ಮಾಸ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅಭಿನಂದಿಸಿ ಬಂದ ಸುಮಾರು ಏಳುನೂರ ಐವತ್ತು ಕಾಗದಗಳಿಗೆ ಅವರೇ ಕೈಯಿಂದ ಉತ್ತರ ಬರೆದರು. ಈ ಕೆಲಸ ಮಾಡಲು ಅವರಿಗೆ ಸುಮಾರು ಮೂರು ತಿಂಗಳು ಹಿಡಿಯಿತು. ಅಚ್ಚಾದ ಕಾರ್ಡುಗಳನ್ನು ಕಳಿಸಿ ತಮ್ಮ ಕೃತಜ್ಞತೆಯನ್ನು ಕೃತಕವಾಗಿಸಲು ಅವರು ಇಷ್ಟಪಡಲಿಲ್ಲ. ಅವರ ಉತ್ತರಗಳೂ ಬಗೆ ಬಗೆಯಾಗಿರುತ್ತಿದ್ದವು.

–ಹಾ.ಮಾ. ನಾಯಕ್

('ಮಾಸ್ತಿ ಸ್ಮರಣೆ' ಪುಸ್ತಕದಿಂದ)

ಕಮ್ಯೂನಿಸಂ ಬಗ್ಗೆ ಹಾಸ್ಯ

ಕಬ್ಬಿಣದ ಪರದೆಯ ದೇಶಗಳಲ್ಲಿ ವಾಸಿಸುತ್ತಿದ್ದರೂ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿನ ಜನ ಹಾಸ್ಯಪ್ರಜ್ಞೆಯಿಂದ ಹೊರತಾಗಿಲ್ಲ ಎನ್ನುವುದಕ್ಕೆ ಆ ದೇಶಗಳಲ್ಲಿ ಪ್ರಚಲಿತವಿರುವ ಈ ಹಾಸ್ಯಪ್ರಸಂಗಗಳೇ ಸಾಕ್ಷಿ.

ಸರಸ್ವತಿ ಭೂಷಣ್

ನಾಯಿಯೊಂದು ರಶಿಯದಿಂದ ಭಾರತಕ್ಕೆ ಓಡಿ ಬಂತು. ಭಾರತದ ನಾಯಿಯೊಂದು ಅದನ್ನು ವಿಚಾರಿಸಿತು:

"ಎಲ್ಲಿಂದ ಬಂದೆ?"

"ರಶಿಯಾದಿಂದ".

"ಅಲ್ಲಿ ಆಹಾರ ಸಿಗಲಿಲ್ಲವೆಂದು ಇಲ್ಲಿಗೆ ಬಂದೆಯಾ?"

"ಆಹಾರವೇ! ಹುಳಿತು ಹೋಗುವಷ್ಟು ಅದೆ ಅಲ್ಲಿ".

"ಮತ್ತೆ ಇಲ್ಲಿಗೇಕೆ ಬಂದೆ? ಇಲ್ಲಿಯಾದರೋ ಹೊಟ್ಟೆಗಾಗಿ ಪರದಾಡಬೇಕು".

ರಶಿಯದ ನಾಯಿಯೆಂದಿತು, "ಅಪ್ಪಾ, ಅಲ್ಲಿ ಯಾವ ರೀತಿಯಲ್ಲೂ ಹೊಟ್ಟೆಗಾಗಿ ಪರದಾಡಬೇಕಿರಲಿಲ್ಲ.

ಆದರೆ ಹುಟ್ಟಿದಾರಭ್ಯ ಒಮ್ಮೆಯಾದರೂ ಬೊಗಳುವ ಆಸೆಯಿತ್ತು. ಆದ್ದರಿಂದ ಇಲ್ಲಿಗೆ ಬಂದೆ".

★ ★ ★

● ಪೂರ್ವ ಬರ್ಲಿನ್ನಿನಲ್ಲಿ ಪ್ರಜಾಪ್ರಭುತ್ವ ದೇಶದಿಂದ ಬಂದಿದ್ದ ಛಾಯಾಗ್ರಾಹಕನಿಗೆ ಪೊಲೀಸಿನವನೊಬ್ಬ ಫೋಟೋಗಳನ್ನು ತೆಗೆಯಬಾರದೆಂದು ತಡೆದ. "ಆದರೆ ಇದು ಸ್ವತಂತ್ರವಾಗಿರುವ ಬರ್ಲಿನ್" ಎಂದ ಛಾಯಾಗ್ರಾಹಕನಿಗೆ ಪೋಲೀಸಿನವ ಹೇಳಿದ. "ಆದ್ದರಿಂದಲೇ ಇಲ್ಲಿ ಯಾವುದನ್ನೂ ಕ್ಯಾಮರಾದಲ್ಲಿ ಸೆರೆಹಿಡಿಯಬಾರದು".

● ದೇಶದಲ್ಲಿ ಏನೇ ರಾಜಕೀಯ ಘಟನೆಗಳು ನಡೆಯುತ್ತಿದ್ದರೂ ಝೆಕೋಸ್ಲಾವಾಕಿಯಾದ ಜನ ಹಾಸ್ಯಪ್ರವೃತ್ತಿಯನ್ನು ಕಳೆದುಕೊಂಡಿಲ್ಲ. ಅವರಲ್ಲಿ ಪ್ರಚಲಿತ ಹಾಸ್ಯವೊಂದು ಹೀಗಿದೆ:

ಒಬ್ಬ ಮನುಷ್ಯ ಪ್ರಾಗ್‌ನ ಒಂದು ಪೊಲೀಸ್ ಠಾಣೆಗೆ ಹೋಗಿ ಸ್ವಿಸ್ ಸೈನಿಕರಿಬ್ಬರು ಸೋವಿಯತ್ ಗಡಿಯಾರವನ್ನು ಕದ್ದೊಯ್ದರೆಂದು ದೂರಿದ.

"ನೀನು ಇಬ್ಬರು ಸೋವಿಯತ್ ಸೈನಿಕರು ನಿನ್ನ ಸ್ವಿಸ್ ಗಡಿಯಾರವನ್ನು ತೆಗೆದುಕೊಂಡು ಹೋದರೆಂಬ ಅರ್ಥದಲ್ಲಿ ಹೇಳುತ್ತಿರುವೆ ತಾನೇ?" ಎಂದ ಪೊಲೀಸರವನು.

"ನೀವು ಹಾಗೆ ಹೇಳಿದಿರಿ, ನಾನು ಹೇಳಲಿಲ್ಲ" ಎಂದ ಆ ಬಡಪಾಯಿ.

★ ★ ★

●ಅಲ್ಲಿನ ಅಧಿಕಾರಿ ವರ್ಗದವರು ಯಾವುದೇ ಪ್ರಸಂಗದಲ್ಲೂ ತಮ್ಮ ಅಭಿಪ್ರಾಯವನ್ನು ಬಿಟ್ಟುಕೊಡುವುದಿಲ್ಲವೆಂಬುದಕ್ಕೆ ನೋಡಿ ಈ ಹಾಸ್ಯಪ್ರಸಂಗವನ್ನು:

ಪ್ರಾಗ್‌ನಲ್ಲಿ ಒಂದು ದಿನ ಲೇಖಕ ಜೋಸೆಫ್ ವೆಚ್ಸ್‌ಬರ್ಗ್ ಝೆಕೋಸ್ಲೋವಾಕಿಯದ ಒಬ್ಬ ದೊಡ್ಡ ಅಧಿಕಾರಿಯ ಜೊತೆ ಮಾತನಾಡುವಾಗ ಆ ಅಧಿಕಾರಿ ಝೆಕೋಸ್ಲಾವಿಯಾದಲ್ಲಿ ಸಂಪೂರ್ಣ ವ್ಯಕ್ತಿ ಸ್ವಾತಂತ್ರ್ಯವಿದೆ ಎಂದು ವಾದಿಸಿದ. ವೆಚ್ಸ್‌ಬರ್ಗ್ ಹೇಳಿದ

● ಎಷ್ಟೇ ಕಟ್ಟುನಿಟ್ಟಿನಲ್ಲಿದ್ದರೂ ಮಾನವನ ಸಹಜ ಸ್ವಭಾವ ಹಾಸ್ಯ ಒಮ್ಮೊಮ್ಮೆ ಅಪ್ರಯತ್ನವಾಗಿ ಹೊರಬಂದೇ ತೀರುವುದು. ಇದಕ್ಕೆ ಉದಾಹರಣೆಯಾಗಿ ಈ ಹಾಸ್ಯ ನೋಡಿ:

ರಶಿಯದ ಒಬ್ಬ ಅಧಿಕಾರಿ ಯುಕ್ರೇನ್ ಪ್ರದೇಶದ ಹಳ್ಳಿಗಳಲ್ಲಿ ಸಂಚರಿಸುತ್ತಿದ್ದ. ಆಗ ರಶಿಯಾದಲ್ಲೆಲ್ಲ ಭಾರೀ ಕ್ಷಾಮವಿತ್ತು. ಅಧಿಕಾರಿ ಸ್ಟೆಫಾನ್ ಸ್ಟೆಪಾನೋವಿಚ್ ಕೋಳಿ ಕೇಂದ್ರಕ್ಕೆ ಬಂದ.

"ಸುತ್ತಮುತ್ತಲ ಪ್ರದೇಶದಲ್ಲೇ ಅತ್ಯುತ್ತಮ

"ಅಮೆರಿಕನ್ ಹಾಗೂ ಬ್ರಿಟಿಶ್ ವಾರ್ತಾ ಕಚೇರಿಗೆ ಭೇಟಿ ಮಾಡುವ ನಿಮ್ಮ ದೇಶದ ನಾಗರಿಕರಲ್ಲಿ ಕೆಲವರು ನಾಪತ್ತೆಯಾದರೆಂದು ಕೇಳಿದ್ದೇನೆ" ಎಂದ.

"ಇದೆಲ್ಲಾ ಪಶ್ಚಿಮ ದೇಶಗಳವರ ಅಪಪ್ರಚಾರ" ಎಂದು ಅಬ್ಬರಿಸಿದ ಅಧಿಕಾರಿ ಕೋಪದಿಂದ.

ವೆಚ್ಸ್‌ಬರ್ಗ್ ಆ ಅಧಿಕಾರಿಯ ಕಚೇರಿಯನ್ನು ಬಿಟ್ಟು ಬ್ರಿಟಿಷ್ ವಾರ್ತಾ ಕಚೇರಿಗೆ ಹೋದ. ಅಲ್ಲಿ ಸ್ವಲ್ಪ ಹೊತ್ತು ಕುಳಿತು 'ಪಂಚ್' ಪತ್ರಿಕೆಯನ್ನು ತಿರುವಿಹಾಕಿದ. ಮತ್ತೆ ತಾನಿಳಿದುಕೊಂಡಿದ್ದ ಹೊಟೇಲ್ ಕಡೆಗೆ ನಡೆದ. ಇಬ್ಬರು ಗುಪ್ತಚರ ದಳದವರು ಅಲ್ಲಿಯ ನಾಗರಿಕರಂತೆಯೇ ಬಟ್ಟೆ ಧರಿಸಿದ್ದ ಅವನನ್ನು ಬಂಧಿಸಿದರು. ವೆಚ್ಸ್‌ಬರ್ಗ್‌ನ ಬಳಿಯಲ್ಲಿ ಅಮೆರಿಕನ್ ಪಾಸ್‌ಪೋರ್ಟ್ ಇರಲಿಲ್ಲವಾಗಿ ಅವನನ್ನು ಮುಖ್ಯ ಕಾರ್ಯಾಲಯಕ್ಕೆ ಕರೆದೊಯ್ದರು. ಕೊನೆಗೆ ಫೋನ್ ಮುಂಖಾಂತರ ಅವನು ಅಮೆರಿಕನ್ ಎಂಬುದಕ್ಕೆ ಪುರಾವೆ ಸಿಕ್ಕಿತು. ಅನಂತರ ಅವನಿಂದ ಯಾವ ಕ್ಷಮೆಯನ್ನೂ ಬೇಡದೆ ಹೊರಹಾಕಿದರು.

ವೆಚ್ಸ್‌ಬರ್ಗ್ ತನ್ನ ಆ ಮಿತ್ರ ಅಧಿಕಾರಿಯ ಬಳಿ ಬಂದು ನಡೆದ ಘಟನೆಯನ್ನೆಲ್ಲಾ ಹೇಳಿದ. ಅಧಿಕಾರಿ ಪೊಲೀಸ್ ಕಾರ್ಯಾಲಯಕ್ಕೆ ಫೋನು ಮಾಡಿದ. ವೆಚ್ಸ್‌ಬರ್ಗ್ ಹೆಸರಿನ ಯಾರೂ ಅಲ್ಲಿ ಬಂದಿರಲಿಲ್ಲ ಎಂಬ ಉತ್ತರ ಅಲ್ಲಿಂದ ಬಂತು. "ನೋಡು, ಎಲ್ಲಾ ಪಶ್ಚಿಮದವರ ಅಪಪ್ರಚಾರ" ಎಂದು ಅಧಿಕಾರಿ ಗುಡುಗಿದ.

★ ★ ★

ಕೊಬ್ಬಿದ ಕೋಳಿಗಳನ್ನು ನೀನು ಸಾಕಿರುವೆ ಎಂದು ಕೇಳಿದ್ದೇನೆ" ಎಂದ ಆ ಅಧಿಕಾರಿ.

"ಹೌದು ಸಾರ್" ಎಂದ ಈತ.

"ನೀನು ಇವಕ್ಕೆ ಏನು. ಆಹಾರ ಕೊಡುತ್ತಿಯ?"

"ಒಳ್ಳೆಯ ರೊಟ್ಟಿಗಳು"

"ಏನು! ದೇಶದಲ್ಲೆಲ್ಲಾ ಆಹಾರ ಕ್ಷಾಮವಿರುವಾಗ ಮನುಷ್ಯರು ತಿನ್ನುವ ರೊಟ್ಟಿಗಳನ್ನು ಕೋಳಿಗಳಿಗೆ ಹಾಕಿ ನಷ್ಟ ಮಾಡುತ್ತಿರುವೆಯಾ? ನಿನಗೆ ಪತ್ತು ವರ್ಷ ಸೈಬೀರಿಯಾಕ್ಕೆ ಹೋಗುವ ಶಿಕ್ಷೆ ವಿಧಿಸಿದ್ದೇನೆ" ಎಂದು ಕೋಪದಿಂದ ಗರ್ಜಿಸಿದ ಅಧಿಕಾರಿ.

ಈ ಸುದ್ದಿ ಸುತ್ತಮುತ್ತಲ ಪ್ರದೇಶದಲ್ಲೆಲ್ಲಾ ಹರಡಿತು. ಜನ ಹುಷಾರಾದರು. ನಂತರ ಆ ಅಧಿಕಾರಿ ಇವಾನ್ ಇವಾನೋವಿಚ್ ಬಳಿ ಬಂದ. ಈತ ತುಂಬಾ ಎಚ್ಚರದಿಂದ ಮಾತನಾಡಿದ.

"ನಿನ್ನ ಬಳಿ ಇರುವ ಕೋಳಿಗಳು ಚೆನ್ನಾಗಿ ತಿಂದು ಕೊಬ್ಬಿವೆ. ಏನು ಹಾಕುತ್ತಿ ಇವುಗಳಿಗೆ?"

"ಏನಿಲ್ಲ ಸ್ವಲ್ಪ ಬಾರ್ಲಿ ಮಾತ್ರ".

"ಏನು? ದೇಶದಲ್ಲಿ ಕ್ಷಾಮವಿರುವಾಗ ಜನರು ತಿನ್ನುವ ಬಾರ್ಲಿಯನ್ನು ಕೋಳಿಗಳಿಗೆ ಹಾಕಿ ದೇಶಕ್ಕೆ ಹಾನಿ ಮಾಡುತ್ತಿರುವೆಯಾ? ನಿನಗೆ ಹತ್ತು ವರ್ಷ ಸೈಬೀರಿಯಾ ಶಿಕ್ಷೆ" ಎಂದ, ಆ ಅಧಿಕಾರಿ. ಬಾರ್ಲಿ ಹಾಗೂ ರೊಟ್ಟಿಗಳು ಕೋಳಿಗಳಿಗೆ ಹಾಕುವ ಪದಾರ್ಥಗಳಲ್ಲ ಎಂಬ ವಿಚಾರ ಎಲ್ಲೆಲ್ಲೂ ಹರಡಿತು.

ಅಧಿಕಾರಿ ಅಜ್ಜಿಯ ಮನೆಗೆ ಬಂದ. ಮಾತು ಸ್ವಲ್ಪ ತಿರುವನ್ನು ಕಂಡಿತು. "ನಿನ್ನಲ್ಲಿರುವುದು ಒಳ್ಳೆಯ ಬಲಿತ ಕೋಳಿಗಳು. ಏನು ಒದಗಿಸುವೆ ಇವುಗಳ ಆಹಾರಕ್ಕೆ?"

"ಅವುಗಳಿಗೆ ಪ್ರತಿಯೊಂದಕ್ಕೂ ಬೆಳಿಗ್ಗೆ ಎದ್ದ ಕೂಡಲೆ ಒಂದೊಂದು ರೂಬಲ್ ಕೊಟ್ಟು ತಮ್ಮ ಆಹಾರವನ್ನು ತಾವೇ ಕೊಂಡು ತಿನ್ನುವಂತೆ ಹೇಳುವೆ".

★ ★ ★

● ರಶಿಯದಲ್ಲಿ ಕಮ್ಯುನಿಸ್ಟ್ ಸರಕಾರ ಬಂದು ಕೆಲವೇ ತಿಂಗಳುಗಳಾಗಿದ್ದವು. ಕ್ರುಶ್ಚೇವ್ ವಿಹಾರಕ್ಕಾಗಿ ಗುಡ್ಡಗಾಡುಗಳ ಪ್ರಾಂತಕ್ಕೆ

ರೋನಾಲ್ಡ್ ರೀಗನ್ನರು ಹೇಳಿದ ಜೋಕು:

ಗೋರ್ಬಚೇವ್‌ರಿಗೆ ಮಾಸ್ಕೋದಲ್ಲಿಯ ಸಂಚಾರಿ ವ್ಯವಸ್ಥೆ ಅಸಮರ್ಪಕವೆನಿಸಿತಂತೆ. ಹೀಗಾಗಿ ತಾವೇ ಒಮ್ಮೆ ಅದನ್ನು ಖುದ್ದಾಗಿ ಪರೀಕ್ಷಿಸಲು ಕಾರಿನಲ್ಲಿ ಚಾಲಕನನ್ನು ಹಿಂದೆ ಕುಳ್ಳಿರಿಸಿ ಸ್ವತಃ ಗಾಡಿಯನ್ನು ನಡೆಸಿಕೊಂಡು ಹೊರಟರು. ಸಂಚಾರಿ ವ್ಯವಸ್ಥೆಯ ದೀಪ ನಿಲುಗಡೆಯನ್ನು ಸೂಚಿಸುತ್ತಿದ್ದರೂ ಗೊರ್ಬಚೇವ್ ತಡೆಯಲಿಲ್ಲ. ಆದರೆ ಅವರನ್ನು ಯಾರೂ ತರಾಟೆಗೂ ತೆಗೆದುಕೊಳ್ಳಲಿಲ್ಲ. ಮತ್ತೊಂದು ಕಡೆಯೂ ಇದೇ ಪುನರಾವರ್ತಿಸಲ್ಪಟ್ಟಿತು. ಆದರೂ ಅವರನ್ನು ತಡೆದು ನಿಲ್ಲಿಸುವ ಗೋಜಿಗೆ ಯಾವ ಪೊಲೀಸನೂ ಹೋಗಲಿಲ್ಲ. ಮುಂದೊಂದು ಕಡೆ ಬೇಕೆಂದೇ ತಪ್ಪು ಜಾಗದಲ್ಲಿ ಕಾರನ್ನು ಓಡಿಸಿದರು. ಊಹುಂ, ಪೊಲೀಸ ನೋಡಿಯೂ ನೋಡದವನಂತೆ ಇದ್ದುಬಿಟ್ಟ. ಗೊರ್ಬಚೇವ್‌ರಿಗೆ ಸಿಟ್ಟು ಬಂತು. ಕಾರು ನಿಲ್ಲಿಸಿ ಇಳಿದು, "ಸಂಚಾರಿ ಕಾಯ್ದೆ ಉಲ್ಲಂಘಿಸಿದರೂ ನನ್ನನ್ನೇಕೆ ನೀನು ಸುಮ್ಮನೆ ಬಿಟ್ಟೆ? ನಾನು ಯಾರೆಂಬುದು ಗೊತ್ತಿರುವುದರಿಂದಲೆ? ಈ ಸಮಾಜವಲ್ಲಿ ಕಾನೂನಿನ ಎದುರು ಎಲ್ಲರೂ ಸಮಾನರೆಂಬುದು ನಿನಗೆ ಗೊತ್ತಿಲ್ಲವೆ?" ಎಂದು ಆ ಪೊಲೀಸನನ್ನು ಬೈದರು. ಆಗ ಪೊಲೀಸ ಉತ್ತರಿಸಿದ: "ಹೌದು, ನೀವು ಯಾರೆಂದು ನನಗೆ ಗೊತ್ತು. ಆದರೆ ನಿಮ್ಮನ್ನು ಸುಮ್ಮನೇ ಬಿಟ್ಟಿರುವುದಕ್ಕೆ ಸರ್ವಥಾ ಅದು ಕಾರಣವಲ್ಲ. ಆದರೆ ನನಗೆ ಹೆದರಿಕೆಯಿರುವುದು ಗೊರ್ಬಚೇವ್‌ರನ್ನೇ ಚಾಲಕನನ್ನಾಗಿ ಇಟ್ಟುಕೊಂಡಿರುವ ಕಾರಿನಲ್ಲಿ ಹಿಂದೆ ಕೂತವನದು"!

ಹೋದರು. ಅಲ್ಲಿ ಒಬ್ಬ ಮುದಿ ರೈತನನ್ನು ಕಂಡರು. ಹರಿದ ಕೋಟು ಪ್ಯಾಂಟ್ ಧರಿಸಿದ್ದ ಆತನನ್ನು ಮಾತನಾಡಿಸುತ್ತ

"ಏನಪ್ಪಾ ನಿನ್ನಲ್ಲಿ ಈಗ ಎಷ್ಟು ಜೊತೆ ಬಟ್ಟೆಗಳಿವೆ?"

"ಒಂದೇ ಜೊತೆ ಸ್ವಾಮಿ" ಎಂದ ಮುದುಕ.

"ಸರಿ. ನಮ್ಮ ಕಮ್ಯುನಿಸ್ಟ್ ಸರಕಾರ ಬರುವ ಮೊದಲು ನಿನ್ನಲ್ಲಿ ಎಷ್ಟು ಜೊತೆ ಬಟ್ಟೆಗಳಿದ್ದವು?"

"ಎರಡು ಜೊತೆ" ಎಂದ ರೈತ.

ಕೃಶ್ಚೇವರಿಗೆ ಮುಜುಗರವಾಯಿತು. ಆದರೂ ತೋರಗೊಡದೆ, "ನೋಡಪ್ಪಾ ನಮ್ಮ ಕಮ್ಯುನಿಸ್ಟ್ ರಾಷ್ಟ್ರದಲ್ಲಿ ಸಮಾನತೆ ಇದೆ. ಪ್ರತಿಯೊಬ್ಬ ಪ್ರಜೆಗೂ ಹೊಟ್ಟೆತುಂಬಾ ಆಹಾರ, ಹೊದೆಯಲು ಸಾಕಷ್ಟು ಬಟ್ಟೆ ಕೊಡುವುದೇ ನಮ್ಮ ಗುರಿ. ಭಾರತ ಮೊದಲಾದ ದೇಶಗಳಲ್ಲಿ ಜನ ಬರಿಮೈಯಲ್ಲಿ ಓಡಾಡುತ್ತಾರೆ. ಅವರಿಗೆ ಹೊದೆಯಲು ಬಟ್ಟೆ ಸಹ ಇಲ್ಲ. ನಮ್ಮ ಪಕ್ಷ ಬಹಳಷ್ಟು ಸಾಧಿಸಿದೆ".

ಮುದುಕ ಅಂದ "ಓಹೋ ಹಾಗಾದರೆ ಅಲ್ಲಿ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದು ಬಹಳ ವರ್ಷಗಳೇ ಕಳೆದಿರಬೇಕು".

● ಒಬ್ಬ ರೈತ ರಶಿಯದಲ್ಲಿ ಒಂದು ಗಿಣಿಯನ್ನು ಮಾರಾಟ ಮಾಡಲು ಸಂತೆಗೆ ತಂದು, "ಮಾತನಾಡುವ ಗಿಳಿಯಿದೆ. ಬಂದು ಕೊಂಡುಕೊಳ್ಳಿ" ಎಂದು ಕೂಗುತ್ತಿದ್ದ. ಯಾರೋ ಬಂದು ಕೊಂಡರು. ನಂತರ ಕೇಳಿದರು "ಈ ಗಿಳಿ ನಿಜಕ್ಕೂ ಮಾತನಾಡುತ್ತದೆಯೆ?

"ಮಾತೇನೋ ಆಡುತ್ತದೆ. ಆದರೆ ಅದರ ಬಾಯಿಯಿಂದ ಬರುವ ಯಾವ ಅಭಿಪ್ರಾಯಗಳೇ ಆಗಲಿ ಅದರ ಸ್ವಂತದ್ದೇ ಹೊರತು ನನ್ನ ಬಾಯಿಯಿಂದ ಬಂದವಲ್ಲ" ಎಂದ ಆ ಮಾರಾಟಗಾರ.

★ ★ ★

● ಸರಕಾರದ ಆಜ್ಞೆಗಳು ಎಷ್ಟು ಪ್ರಭಾವಶಾಲಿಯೆಂಬುದಕ್ಕೆ ಈ ಹಾಸ್ಯ ಉದಾಹರಣೆಯಾಗಬಹುದು:

ಒಮ್ಮೆ ಪೀಕಿಂಗ್‌ನಲ್ಲಿ ಒಬ್ಬ ಹೋಟೆಲಿಗೆ ಹೋಗಿ ಕುದುರೆ ಮಾಂಸ ತಿನ್ನುವ ಆಸೆಯಾಗಿ ಆರ್ಡರ್ ಕೊಟ್ಟ. ಆದರೆ ಬಂದದ್ದು ರಬ್ಬರ್‌ಟೈರಿನ ಚೂರುಗಳು. ಮಾಣಿಯನ್ನು ಕರೆದು, ಆಶ್ಚರ್ಯದಿಂದ ವಿಚಾರಿಸಿದ. ಮಾಣಿ ಹೇಳಿದ. "ಸ್ವಾಮಿ ನಾವು ಎಲ್ಲರೂ ಸರಕಾರದ

ಆಜ್ಞೆಯಂತೆ ನಡೆದುಕೊಳ್ಳುತ್ತೇವೆ. ಕುದುರೆಗಳನ್ನು ಬಳಸುವಲ್ಲೆಲ್ಲಾ ವಾಹನಗಳನ್ನು ಉಪಯೋಗಿಸಬೇಕೆಂದು ಆಜ್ಞೆಯಾಗಿದೆ".

★ ★ ★

● ರಶಿಯನ್ ಅಧಿಕಾರಿಯನ್ನು 'ದಡ್ಡ' ಎಂದು ಬೈಯ್ದಿದ್ದಕ್ಕೆ ಅಲ್ಲಿಯ ಸರಕಾರ ನಾಗರೀಕನೊಬ್ಬನಿಗೆ 20 ವರ್ಷಗಳ ಸೈಬೀರಿಯಾ ಶಿಕ್ಷೆವಿಧಿಸಿತು. 5 ವರ್ಷ ಅಧಿಕಾರಿಯನ್ನು ಅಪಮಾನಗೊಳಿಸಿದ್ದಕ್ಕಾದರೆ 15 ವರ್ಷ ದೇಶದ ರಹಸ್ಯವನ್ನು ಬಯಲು ಮಾಡಿದ್ದಕ್ಕೆ.

★ ★ ★

● ಅಲ್ಲಿಯ "ಸಮಾನತೆ" ಎಂಬುದು ಸಹ ಹಾಸ್ಯಕ್ಕೆ ಒಂದು ವಿಷಯವಾಗಿದೆ. ಜನರು ಅದನ್ನು ನೂರೆಂಟು ಬಗೆಯಲ್ಲಿ ಆಡಿಕೊಳ್ಳುವುದೂ ಉಂಟು:

ಒಬ್ಬ ಫ್ರೆಂಚ್‌ರವನು ಬಂಡವಾಳಶಾಹೀ ರಾಜ್ಯವೆಂದರೆ ಉರಿದು ಬೀಳುತ್ತಿದ್ದ. ಅವನು ತನ್ನ ರಜಾ ದಿನಗಳನ್ನೆಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಸಭೆಗೆ ಹೋಗಲು ವಿನಿಯೋಗಿಸುತ್ತಿದ್ದ. ಅವನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ ಕಾರ್ಖಾನೆಯ ಮಾಲೀಕರಿಗೆ ಇದು ಸರಿ ಬೀಳಲಿಲ್ಲ. ಆದರೆ ಅವನು ಅತ್ಯುತ್ತಮ ಕೆಲಸಗಾರನೆಂದು ಖ್ಯಾತನಾಗಿದ್ದರಿಂದ ಅವನನ್ನು ಕೆಲಸದಿಂದ ತೆಗೆಯಲೂ ಆಗುತ್ತಿರಲಿಲ್ಲ.

ಆ ಮನುಷ್ಯ ಇದ್ದಕ್ಕಿದ್ದಂತೆ ಕಮ್ಯುನಿಸ್ಟ್ ಪಾರ್ಟಿಯ ಸಭೆಗಳಿಗೆ ಹೋಗುವುದನ್ನು ನಿಲ್ಲಿಸಿದ. ಏಕೆಂದು ಕೇಳಲು ಅವನು ಉತ್ತರಿಸಿದ "ಕಳೆದ ಸಭೆಯಲ್ಲಿ ದೇಶದ ಎಲ್ಲಾ ಸಂಪತ್ತನ್ನೂ ಎಲ್ಲರಿಗೆ ಸಮನಾಗಿ ಹಂಚಿದರೆ ಪ್ರತಿಯೊಬ್ಬರಿಗೂ 2000 ಫ್ರಾಂಕ್‌ಗಳು ಬರುತ್ತವೆ ಎಂದು ಸಮರ್ಥನೆ ಮಾಡಲಾಯಿತು". ಅವನ ಸ್ನೇಹಿತರು "ಅದಕ್ಕೆ ಏನಾಯಿತೀಗ?" ಎಂದರು.

"ಆದರೆ ನನ್ನಲ್ಲಿ 5000 ಫ್ರಾಂಕ್‌ಗಳಿವೆ" ಎಂದುತ್ತರಿಸಿದ ಆ ಮನುಷ್ಯ.

★ ★ ★

● ಕಮ್ಯುನಿಸ್ಟ್ ಅಧಿಕಾರಿಗಳು ಮಾತಿನಲ್ಲಿ ಚಾಣಾಕ್ಷರು ಯಾವುದೇ ಸಂದರ್ಭದಲ್ಲೂ ತಮ್ಮತನವನ್ನು ಬಿಟ್ಟುಕೊಡುವುದಿಲ್ಲ. ಹಾಗೆಯೇ ಉತ್ತರವನ್ನು ಸಿದ್ಧಪಡಿಸಿಕೊಂಡು ಧೈರ್ಯದಿಂದ ಹೇಳಿ ಕೇಳಿದವರನ್ನೇ ದಂಗುಪಡಿಸುವುದೂ ಉಂಟು. ಈ ಸಂದರ್ಭದ ಒಂದು ಹಾಸ್ಯ ನೋಡಿ:

ಒಮ್ಮೆ ಕೊಸಿಗಿನ್ ವಾಷಿಂಗ್‌ಟನ್ನಿಗೆ ಭೇಟಿ ನೀಡಿದರು. ಅಲ್ಲಿ ಅವರಿಗೆ ಪೆಂಟಗಾನಿನಲ್ಲಿ ಒಂದು ಕಂಪ್ಯೂಟರನ್ನು ತೋರಿಸಲಾಯಿತು. ಆ ಯಂತ್ರ ಮುಂದೆ ಆಗಬಹುದಾದ ಘಟನೆಗಳನ್ನು ತಿಳಿಸುತ್ತಿತ್ತು. ಯಾರೋ ಒಬ್ಬರು "ಅಮೆರಿಕಾ ದೇಶಕ್ಕೆ ಮುಂದಿನ ಐವತ್ತು ವರ್ಷಗಳಲ್ಲಿ ಏನಾಗುತ್ತದೆ?" ಎಂದು ಪ್ರಶ್ನಿಸಿದರು.

ಆ ಯಂತ್ರ ಒಂದು ನಿಮಿಷದಲ್ಲಿ ಸರಿಯಾದ ಉತ್ತರವನ್ನು ಕಾರ್ಡಿನ ಮೇಲೆ ಮುದ್ರಿಸಿ ಹೊರ ಹಾಕಿತು.

ಕೊಸಿಗಿನ್ ಈ ಬಾರಿ ಪ್ರಶ್ನಿಸಿದರು "ಸೋವಿಯತ್ ಒಕ್ಕೂಟಕ್ಕೆ ಐವತ್ತು ವರ್ಷಗಳಲ್ಲಿ ಏನಾಗುತ್ತದೆ?"

ಒಂದು ನಿಮಿಷದಲ್ಲಿ ಉತ್ತರ ಬಂತು. ಕೊಸಗಿನ್‌ರ ಮುಖ ಚಿಕ್ಕದಾಯಿತು. "ಏನು ಹೇಳಿತು ಕಂಪ್ಯೂಟರ್?" ಎಂದು ಯಾರೋ ಪ್ರಶ್ನಿಸಿದರು.

"ನನಗೆ ಓದಲು ಆಗುವುದಿಲ್ಲ; ಅದು ಚೀನೀ ಭಾಷೆಯಲ್ಲಿದೆ" ಕೊಸಗಿನ್ ಉತ್ತರಿಸಿದರು.

ಎಷ್ಟೇ ಬಿಗಿಯಾದ ವಾತಾವರಣವಿದ್ದರೂ ಅಸ್ವತಂತ್ರರಾದ ಆ ಜನರನ್ನೂ ಹಾಸ್ಯ ಎಂಬುದು ಬಿಟ್ಟಿಲ್ಲ. ತಮ್ಮ ಆ ನಿರ್ದಿಷ್ಟ ವಾತಾವರಣ, ಕಾನೂನುಗಳಿಗೆ ಬದ್ಧರಾಗಿ ನಡೆಯುತ್ತಿದ್ದರೂ ಕೆಲವು ಮೋಜಿನ ಪ್ರಸಂಗಗಳು ದಿನನಿತ್ಯ ನಡೆಯುತ್ತಲೇ ಇರುತ್ತವೆ. ನಮ್ಮಂಥ ಪ್ರಜಾಪ್ರಭುತ್ವದ ಜನರಿಗೆ ಅಲ್ಲಿಯ ಜನರ ಆ ರೀತಿಯ ಅಸ್ವತಂತ್ರ ಜೀವನವೇ ನಗುತರಿಸುವಂತಹದು. ಅದು ನಮ್ಮ ಹಾಸ್ಯಕ್ಕೆ ಅನೇಕ ವಿಷಯಗಳನ್ನು ಒದಗಿಸುತ್ತದೆ ಕೂಡ●



ಮೂಲ: ಸುಧಾಮೂರ್ತಿ

ಸಂಗ್ರಹ: ಸುಮತಿ ಗ. ಯಾದಪ್ಪನವರ್

ಅತಿರಿಕ್ತೆ

ಈ ದಶಕದಲ್ಲಿ ಕನ್ನಡದಲ್ಲಿ ಬಂದ ಒಳ್ಳೆಯ ಕಾದಂಬರಿಗಳಲ್ಲಿ ಶ್ರೀಮತಿ ಸುಧಾ ಮೂರ್ತಿ ಅವರ 'ಅತಿರಿಕ್ತೆ'ಯೂ ಒಂದು. ಪ್ರತಿ ವ್ಯಕ್ತಿಯ ಜೀವನದ ಸಾರ್ಥಕತೆ ಇರುವುದು ಅವನು ತನಗೆಂದು ಕಂಡುಕೊಂಡ ಮೌಲ್ಯಗಳ ಸಾಧನೆಯಲ್ಲೇ. ಈ ಮೌಲ್ಯಗಳ ಘರ್ಷಣೆಯನ್ನೇ ವಸ್ತುವಾಗಿರಿಸಿಕೊಂಡ ಈ ಕಥೆ 21ನೆಯ ಶತಮಾನದತ್ತ ದಾಪುಗಾಲಿಕ್ಕ ಬಯಸುವ ನಮ್ಮ ಇಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. 'ಅತಿರಿಕ್ತೆ'ಯ ನಾಯಿಕೆ ಶ್ರೀಮತಿಯನ್ನೇ ಕೇಂದ್ರವಾಗಿರಿಸಿಕೊಂಡು ಶ್ರೀಮತಿ ಸುಮತಿ ಗ. ಯಾದಪ್ಪನವರ್ ಕಸ್ತೂರಿ ಓದುಗರಿಗಾಗಿ ಕಾದಂಬರಿಯನ್ನು ಸಂಗ್ರಹಿಸಿದ್ದಾರೆ.

ಶ್ರೀಮತಿಗೆ ಈ ಸರ್ತಿ ಆಶ್ಚರ್ಯದ ಸಮಾಚಾರವು ಕಾದಿತ್ತು. ಮಳೆಗಾಲದ ನೀರಸ ದಿನಗಳಲ್ಲಿ ಬಂದ ಶ್ರೀಕಾಂತ ತನ್ನ ಅಮೇರಿಕ ಪ್ರವಾಸವನ್ನೂ ಅದರೊಂದಿಗೆ ಶ್ರೀಮತಿಯೂ ಬರುವುದು ಎಂದು ಹೇಳಿದಾಗ ಅವಳು ಸಂಭ್ರಾಂತಳಾಗದೇ ಇರಲಿಲ್ಲ.

ಕೆಲಸದಲ್ಲಿ ಉತ್ತಮ, ಏಕಾಗ್ರಚಿತ್ತನಾದ ಶ್ರೀಕಾಂತನನ್ನು ಒಂದು ವರ್ಷದ ತರಬೇತಿಗಾಗಿ ಅಮೇರಿಕದ ಲಾಸ್ ಏಂಜಲ್ಸಿಗೆ ಕಳಿಸುವವರಿದ್ದಾರೆ. ಕಾಲಾವಧಿ ಬಹಳ ಇದ್ದುದರಿಂದ ಪತ್ನಿಯನ್ನೂ ಜತೆಗೆ ಕರೆದೊಯ್ಯುವ ಅನುಮತಿಯನ್ನು ಕಂಪನಿ ಕೊಟ್ಟಿದೆ, ಶ್ರೀಕಾಂತನ ಮೇಲಿನ ಮಮತೆಯಿಂದ. ಇದರಲ್ಲಿ ಅವನ ಅಧಿಕಾರಿ ವಿಶ್ವಾಸ ಕೇಳ್ಕರನ ಪಾತ್ರವಿದೆ. ಅಲ್ಲಿ ಅವನಿಗಾಗಿ ಮನೆ ಮತ್ತು ಸಂಬಳವೂ ಇದೆ. ಇಂಥ ಸುವರ್ಣಾವಕಾಶದಿಂದ ಶ್ರೀಕಾಂತ, ಶ್ರೀಮತಿ ಬಹಳ ಉತ್ಸಾಹಗೊಂಡಿದ್ದರು. ಅದಕ್ಕೆ ಅವರವರದೇ ಕಾರಣಗಳಿವೆ. ಶ್ರೀಮತಿ ತಾನು ಇತಿಹಾಸ ತಜ್ಞ ಪ್ರೊ|| ಮೈಕ್ ಕಾಲಿನ್ಸ್‌ರನ್ನು ಕಾಣಬಹುದೆಂದುಕೊಂಡಳಾದರೆ ಶ್ರೀಕಾಂತ ಹೊಸ ಕಂಪ್ಯೂಟರನ್ನು ನೋಡಲು ಅವಕಾಶ ಎಂದುಕೊಂಡ.

★

ಶ್ರೀಮತಿಗೆ ಇದು ಪ್ರಥಮ ವಿಮಾನ ಪ್ರವಾಸ. ಶ್ರೀಕಾಂತನಿಗೆ ಪ್ರಥಮ ವಿದೇಶ ಪ್ರವಾಸ. ಅಮೇರಿಕದ ಲಾಸ್ ಏಂಜಲ್ಸಿನಲ್ಲಿ ಅವರ ಮನೆ ಎಷ್ಟೇ ಪುಟ್ಟದಾಗಿದ್ದರೂ ಮುಂಬಯಿಯ ಮನೆಗಿಂತ ಚೆನ್ನಾಗಿದೆ. ಶ್ರೀಕಾಂತನಿಗೆ ಸಂತೋಷವೋ ಸಂತೋಷ. ವಾರದ ಎಲ್ಲ ದಿನಗಳಲ್ಲಿ ಕೆಲಸ ಮಾಡುವ. ದಿನದ ಒಂದು ಕ್ಷಣವನ್ನು ನೀರಸವಾಗಿ ಕಳೆಯುವುದಿಲ್ಲ. ಮಾತನಾಡಲು ವೇಳೆಯೇ ಇಲ್ಲದಷ್ಟು ಕೆಲಸ. ಉತ್ತಮ ಜ್ಞಾನ ಪಡೆಯಲು ಇದು ಸದವಕಾಶ. ಶ್ರೀಕಾಂತ ಇನ್ನೊಂದು ವರ್ಷ ಇಲ್ಲಿಯೇ ಇದ್ದರೆ ಮುಂದಿನ ವರ್ಷ ತಾನು ಮತ್ತೆ ಕಾಲೇಜಿಗೆ ಸೇರಬೇಕೆಂದು ಅವಳಿಗೆ ಆಸೆ.

ಶ್ರೀಮತಿ ತನ್ನ ದೇಶದ ಇತಿಹಾಸದಂತೆ ಅಮೇರಿಕದ ಇತಿಹಾಸದ ಬಗ್ಗೆಯೂ ವಿಚಾರ ಮಾಡುತ್ತಿದ್ದಳು. ಭಾರತದ ಇತಿಹಾಸ ಎಂದರೆ ಕೇವಲ ಉತ್ತರ ಭಾರತದ ಇತಿಹಾಸವಲ್ಲ; ಆದರೆ ಜನಸಾಮಾನ್ಯರ ತಿಳುವಳಿಕೆ ಹಾಗಿದೆ. ಪಠ್ಯಪುಸ್ತಕಗಳೂ ಅದನ್ನೇ ಸಮರ್ಥಿಸುತ್ತಿವೆ. ಆದ್ದರಿಂದ ಮೊಘಲರವರೆಗಿನ ಇತಿಹಾಸವೆಂದರೆ ಭಾರತದ ಇತಿಹಾಸ. ಅದೇ ಕಾಲಕ್ಕೆ ಇದ್ದ ದ್ರಾವಿಡರ ಇತಿಹಾಸಕ್ಕೆ ಮಹತ್ವವೇ ಇಲ್ಲವಾಗಿದೆ. ಸಮಗ್ರ ಭಾರತದ ಇತಿಹಾಸವೆಂದರೆ ದಕ್ಷಿಣ ಮತ್ತು ಉತ್ತರದ ಸಮಾಂತರ

ಸಂಪೂರ್ಣ ಇತಿಹಾಸ. ಎಷ್ಟು ಜನರಿಗೆ ಹರ್ಷ ಚಕ್ರವರ್ತಿಯನ್ನು ಸೋಲಿಸಿದ ಚಾಲುಕ್ಯ ದೊರೆ ಪರಮೇಶ್ವರ ಪುಲಿಕೇಶಿಯ ಹೆಸರು ಗೊತ್ತಿದೆ? ಅದರಂತೆ ಮುಸಲ್ಮಾನರ ಆಳಿಕೆಗೆ ತಲೆವೊಡ್ಡದೆ ಅವರ ಅಭ್ಯುದಯಕ್ಕೆ ಅಡ್ಡನಿಂತ ವಿಜಯನಗರ ವೀರ ಸಾಮ್ರಾಜ್ಯದ ಅರಿವು ಎಷ್ಟು ಜನರಿಗಿದೆ? ಇದೇ ತರಹ ಅಮೇರಿಕದ ಇತಿಹಾಸವೆಂದರೆ ಕೇವಲ ಎರಡು ನೂರು ವರ್ಷಗಳ ಹಿಂದೆ ಮೇಫ್ಲವರಿನಿಂದ ಬಂದ ಬಿಳಿಯರ ಇತಿಹಾಸವಲ್ಲ. ಇದೇ ನಾಡಿನಲ್ಲಿ ಇದ್ದ ಮೂಲ ನಿವಾಸಿಗಳಾದ ರೆಡ್ ಇಂಡಿಯನ್ನರ ಇತಿಹಾಸವೇ ಇಂದಿನ ಅಮೇರಿಕದ ಇತಿಹಾಸದ ತಳಪಾಯ. ನಾಡಿನ ಮೂಲ ಜನರೇಕೆ ಇಂಥ ಇತಿಹಾಸಕ್ಕೆ ಹೊರಗಾಗಾಬೇಕು?.

ಮೈಕ್ ಕಾಲಿನ್ಸ್‌ರನ್ನು ಶ್ರೀಮತಿ ಕಂಡಾಗ ಈ ಪ್ರಶ್ನೆಯನ್ನು ಕೇಳಬೇಕೆಂದುಕೊಂಡಳು. ಮುಂದಿನ ತಿಂಗಳು ಅವಳು ರೋಮ್, ಇಟಲಿಗೆ ಹೋಗುವವಳಿದ್ದಳು. ಶ್ರೀಕಾಂತ ಅವಳ ಯಾವ ಪ್ರವಾಸಕ್ಕೂ ಬೇಡ ಎಂದು ಅನ್ನುವುದಿಲ್ಲ. ಅವನಾಯಿತು, ಅವನ ಕೆಲಸವಾಯಿತು.

ಅಷ್ಟರಲ್ಲಿ ಶ್ರೀಕಾಂತನ ಫೋನು ಶ್ರೀಮತಿಯನ್ನು ಕಂಗೆಡಿಸಿತು. ಭಾರತದಿಂದ ಅವನಿಗೆ ಅದೀಗಷ್ಟೆ ಸಮಾಚಾರ ಬಂದಿದೆ. ವಿಶ್ವಾಸ ಕೇಳ್ಕರ ಹೃದಯಾಘಾತದಿಂದ ನಿನ್ನೆ ತೀರಿಹೋಗಿದ್ದ ಕಾರಣ ಶ್ರೀಕಾಂತ ಕೂಡಲೇ ತಿರುಗಿ ಹೋಗಬೇಕು. ಚಿಕ್ಕ ವಯಸ್ಸಿನಲ್ಲಿ ಹಿರಿಯ ಹುದ್ದೆಯಲ್ಲಿದ್ದ ವಿಶ್ವಾಸನಿಗೆ ಈ ಮೊದಲು ಒಂದು ಸಾರಿ ಎದೆಯ ನೋವು ಬಂದು ಹೋಗಿತ್ತು. ಅವನು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡಿದ್ದರೆ ಹೀಗಾಗುತ್ತಿರಲಿಲ್ಲವೋ ಏನೋ?.

ಶ್ರೀಕಾಂತನನ್ನು ಕಂಪನಿ ಈಗ ಏಕೆ ಕರೆಸುತ್ತಿರಬಹುದು? ಇದರ ಬಗ್ಗೆ ಶ್ರೀಕಾಂತನಿಗೂ ಕುತೂಹಲ ಇದೆ. ಬರಿದಾದ ಕೇಳ್ಕರನ ಖಾಲಿ ಕುರ್ಚಿಯನ್ನು ತುಂಬಲೇ? ಹಾಗಿದ್ದರೆ ಅವನಿಗೆ ಇದೊಂದು ಅಪೂರ್ವ ವಿಜಯವೆ? ತನ್ನ ಹೊರತು ಈ ಸ್ಥಳಕ್ಕೆ ಬೇರೆ ಯಾರಾದರೂ ಇದ್ದಾರೆಯೇ? ಆತ ಮನಸ್ಸಿನಲ್ಲಿಯೇ ಲೆಕ್ಕ ಹಾಕುತ್ತಿದ್ದ.

ಸಿಕ್ಕ ಸುಸಂಧಿಯನ್ನು ಶ್ರೀಕಾಂತ ಬಿಡುವವನೇ ಅಲ್ಲ. ವಿಶ್ವಾಸನ ಕೋಣೆಯಲ್ಲಿ ಕುಳಿತಾಗ ಅವನು ವ್ಯವಹಾರದಲ್ಲಿ ಹೇಳುತ್ತಿರುವ ಹಿತವಚನಗಳ ನೆನಪೂ ಬರುವದು. ವಿಶ್ವಾಸನ ಮಾತುಗಳು ಅನುಭವದಿಂದ, ಕಟುಸತ್ಯದಿಂದ ಬಂದಂಥವು. ಶ್ರೀಕಾಂತ ಅದನ್ನು ಮತ್ತೆ ಮನನ ಮಾಡಿದ.

ಯಶಸ್ಸಿನ ದೇವತೆ ನಿಮ್ಮ ಅದೃಷ್ಟದ ಬಾಗಿಲನ್ನು ಎಂದಿಗೂ ಎರಡೆರಡು ಬಾರಿ ತಟ್ಟುವುದಿಲ್ಲ: ಒಮ್ಮೆ ನೀವು ಅವಕಾಶ ಕಳೆದುಕೊಂಡರೆ ಅದು ಇನ್ನೆಂದಿಗೂ ಬರುವುದಿಲ್ಲ. ಯಶಸ್ಸು ಕೇವಲ ಜ್ಞಾನಾವಲಂಬಿಯಲ್ಲ. ಅದು ಕೆಲವು ಸಲ ದೈವ, ಹಲವು ಸಲ ಮಾನವ ನಿರ್ಮಿತ ಜಾಲಗಳ ಮೇಲೆಯೂ ನಿಲ್ಲುತ್ತದೆ. ಮುಖ್ಯವಾಗಿ ಅವಿರತ ಶ್ರಮ, ಅದನ್ನು ಮೇಲಧಿಕಾರಿಗಳು ಗಮನಿಸುವಂತೆ ಮಾಡುವುದರ ಮೇಲೆ ಇದೆ. ದಿನಕ್ಕೆ ಲೆಕ್ಕಹಾಕಿ ಎಂಟು ಗಂಟೆ ದುಡಿಯುವ ವ್ಯಕ್ತಿ ಎಂದಿಗೂ ಕಂಪನಿಯ ವರಿಷ್ಠನಾಗಲಾರ. ಸದಾಕಾಲವೂ ತನ್ನ ವೈಯಕ್ತಿಕ ಸುಖವನ್ನು ಬಯಸದೇ ಎಲ್ಲ ಕಡೆಗೂ ಕೆಲಸದಲ್ಲಿ ಗಮನ ವಿಟ್ಟು ಇಪ್ಪತ್ತುನಾಲ್ಕು ಗಂಟೆ ದುಡಿಯುವವನೇ ಮುಂದುವರೆಯುವ.

ಶ್ರೀಕಾಂತ ಮತ್ತೆ ಏಕಾಗ್ರಚಿತ್ತದಿಂದ ಈ ನಿರ್ವಹಣೆಗೆ ತಲೆ ಒಡ್ಡುತ್ತಾನೆ. ಧನುರ್ಧಾರಿ ಏಕಲವ್ಯನಂತೆ ತನ್ನ ಬಾಳಗುರಿಯನ್ನು ಮುಟ್ಟಲು ಇದರಲ್ಲಿ ಯಶಸ್ಸು ಗಳಿಸಲೇಬೇಕು. ವಿಶ್ವಾಸನ ಮರಣ ಅವನಿಗೊದಗಿದ ಸುವರ್ಣಾವಕಾಶವಾಗಿದೆ.

ಬರಿದಾದ ವಿಶ್ವಾಸನ ಸ್ಥಳದಲ್ಲಿ ಶ್ರೀಕಾಂತ ಕಾಲಿರಿಸಿದಂದಿನಿಂದ ಯಶಸ್ಸಿನ ಮೆಟ್ಟಿಲನ್ನು ಏರುತ್ತಲೇ ಹೋಗಿದ್ದ. ಒಂದು ಯಶಸ್ಸು ಇನ್ನೊಂದಕ್ಕೆ ದಾರಿಮಾಡಿಕೊಟ್ಟಂತೆ ಆಗಿದೆ. ಅದರೊಂದಿಗೆ ಅವನ ಆತ್ಮವಿಶ್ವಾಸವೂ ಏರಿದೆ. ವೇಳೆಯ ಅಭಾವವೂ ಆಗುತ್ತಿದೆ. ಅವನ ಜೀವನದೊಂದಿಗೆ ಅವಳ ಜೀವನವೂ ಬೇರೆಯಾಗುತ್ತ ಬಂದಿದೆ. ಅವನ ಯೋಗ್ಯತೆಗೆ ತಕ್ಕಂಥ ಅತಿಥಿಗಳ ನಿರ್ವಹಣೆಯ ಜವಾಬ್ದಾರಿ ಅವಳ ಮೇಲೆ ಬಿದ್ದಿದೆ. ಶ್ರೀಕಾಂತನ ಕೆಲಸದ ಒತ್ತಡವು ಹೆಚ್ಚುತ್ತ ಹೋದಂತೆ ಅವಳು ಅವನಿಗಾಗಿ ಟೈಪಿಂಗ್, ಕಾರ್ ಡ್ರೈವಿಂಗ್ ಕಲಿತಿರುವಳು. ಅವನ ಮಹತ್ವದ ಕಾಗದ ಪತ್ರಗಳನ್ನು ಅವಳೇ ನೋಡಿಕೊಳ್ಳುತ್ತಾಳೆ. ಹೀಗಾಗಿ ಅವರಿಬ್ಬರಿಗೆ ಮುಂಚಿನಂತೆ ಮಾತನಾಡಲು ವೇಳೆಯೇ ಸಿಗುತ್ತಿಲ್ಲ.

ರಾತ್ರಿ ತಾವಿಬ್ಬರೇ ಇದ್ದಾಗ ಶ್ರೀಮತಿಯ ಖಿನ್ನ ಮೌನವನ್ನು ಶ್ರೀಕಾಂತ ಗಮನಿಸಿದ.

"ಶ್ರೀಮತಿ ಯಾಕೆ?"

"ಏನಿಲ್ಲ ಶ್ರೀ, ನಿಮ್ಮ ಅವ್ವ ನನಗ ಇನ್ನೂ ಚುಚ್ಚಿ ಮಾತಾಡ್ತಾರ"

ಶ್ರೀಕಾಂತ ಅವಳಿಗೆ ಹೇಳಿದ "ಶ್ರೀಮತಿ, ನಿರರ್ಥಕ ಮಾತಿನಿಂದ ಖಿನ್ನಳಾಗುವ ಬದಲು ನೀನು ಕಂಪ್ಯೂಟರ್ ಪ್ರೋಗ್ರಾಂ ಯಾಕೆ ಕಲಿಯಬಾರದು? ನನಗೂ ಅದರಿಂದ ಸಹಾಯವಾಗುವುದು".

"ಶ್ರೀ, ನೀನೇಕೆ ಇತಿಹಾಸ ಕಲಿಯಬಾರದು? ಅದು ನನಗೆ ಸೇರುತ್ತದೆ. ಶ್ರೀ, ಆರ್ಥಿಕ ದೃಷ್ಟಿಯಿಂದ ಅನುಕೂಲವಾಗಲು, ಅದಕ್ಕೆ ಬೇಕಾಗುವ ಪದವಿಯನ್ನು ಪಡೆಯುವ ಮನಸ್ಸು ನನ್ನದಾಗಿದ್ದರೆ ನಾನು ಒಂದೆಯೇ ಹೇಳಿದಂತೆ ಬೇರೆ ಪದವಿ ಪಡೆಯುತ್ತಿದ್ದೆ. ಮನೆಯಲ್ಲಿ ಕಂಪ್ಯೂಟರ್ ತಜ್ಞ ನೀನು ಇದ್ದೀಯೆಂದು ನಾನು ಕಂಪ್ಯೂಟರ್ ಕಲಿಯಲಾರೆ. ಹಗ್ಗ ಇದೆಯೆಂದು ಎಮ್ಮೆ ಕೊಳ್ಳುವರೇ? ನನ್ನ ಪ್ರಕಾರ ವಿದ್ಯೆಯಲ್ಲಿ, ಮದುವೆಯಲ್ಲಿ ಯಾವ ಆಸೆಗೂ ಯಾರ ಪ್ರಭಾವಕ್ಕೂ ಒಳಗಾಗದೇ ತನ್ನ ನಿರ್ಧಾರವನ್ನು ತಾನೇ ತೆಗೆದುಕೊಳ್ಳಬೇಕು. ನನ್ನ ಜೀವನದಲ್ಲಿ ಈ ಎರಡೂ ನಿರ್ಧಾರ ನಾನೇ ಮಾಡಿರುವೆ. ಶ್ರೀ, ಅಮೇರಿಕದಂತಹ ಮುಂದುವರೆದ ದೇಶದಲ್ಲಿ ಇಂತಹ ವಿಚಾರಗಳಲ್ಲಿ ಏನಾದರೂ ಬದಲಿಸಲು ಸಮಾಜವು ಅವಕಾಶ ಕೊಡುತ್ತದೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಇಲ್ಲ".

ಶ್ರೀಕಾಂತನ ಮುಂದಿನ ಮಾತನ್ನು ಅವಳು ತುಂಡು ಮಾಡಿದಳು.

★

ಅಮೇರಿಕದ ಕಂಪ್ಯೂಟರ್ ಕಂಪನಿಯೊಂದರ ಪ್ರೆಸಿಡೆಂಟ್ ಮತ್ತು ಅವರ ಪತ್ನಿ ಜಾಕೋಬ್ ಲೈಲ್ಸ್ ಮತ್ತು ಪಾಲಿ ಲೈಲ್ಸ್ ಭಾರತಕ್ಕೆ ಬಂದಿದ್ದಾರೆ. ಶ್ರೀಕಾಂತ ಅಮೇರಿಕಕ್ಕೆ ಹೋದಾಗ ಅವರಲ್ಲಿ ಹೋಗುತ್ತಾನೆ. ಅಲ್ಲದೇ ಅವರ ಉಪಯೋಗ ಇವನ ಕಂಪನಿಗೆ ಆಗುತ್ತದೆ. ಇಂಥ ವ್ಯವಹಾರದಲ್ಲಿ ಸಾಮಾಜಿಕ ಗೌರವವನ್ನು ಕಾಯುವುದು ಅತ್ಯಂತ ಮಹತ್ವವಾಗಿದ್ದರಿಂದ ಶ್ರೀಕಾಂತ ಒಂದು ಸಂಜೆ ನಾರಿಮನ್ ಪಾಯಿಂಟಿನಲ್ಲಿ ಸಮುದ್ರಕ್ಕೆ ಇದಿರಾದ ಓಬೇರಾಯ್ ಟಾವರ್ಸ್‌ನಲ್ಲಿಯ 'ಲಾಜಕೋಂದ್'ದಲ್ಲಿ ಸಂತೋಷಕೂಟ ಏರ್ಪಡಿಸಿದ. ಈ ಸಮಾರಂಭಕ್ಕೆ ಪತ್ನಿ ಸಮೇತರಾಗಿ ವರಿಷ್ಠ ಅಧಿಕಾರಿಗಳು ಬರುವುದು ಶಿಷ್ಟಾಚಾರ. ಅಂತೆಯೇ ಕೆಲಸಕ್ಕೆ ಅನುಕೂಲವಾಗುವಂಥವರನ್ನೆಲ್ಲಾ ಕರೆದಿದ್ದ. ಊಟದ ಸೊಗಸಿಗಿಂತ ಆಡಂಬರದ ಅಬ್ಬರವೇ ಬಹಳವಾದ ಇಂಥ ಕೂಟವೂ ಕಂಪನಿಯ ಮಾನದಂಡವಾಗಿರುತ್ತದೆಯಲ್ಲ.

ಸಾಯಂಕಾಲ 'ಲಾಜಕೋಂದ್' ಕೂಟಕ್ಕೆ ಬರಬೇಕು ಎನ್ನುವ ಬಿನ್ನಹ ಪತ್ರಿಕೆಗಳಿಗೆ ಶ್ರೀಕಾಂತ ಮತ್ತು ಶ್ರೀಮತಿ ಹಸ್ತಾಕ್ಷರ ಹಾಕಿ ಆತ್ಮೀಯತೆಯನ್ನು ಅತಿಥಿಗಳಿಗೆ ತೋರಿಸಿದರು. ಶ್ರೀಕಾಂತನ ಯಾವುದೋ ಮಹತ್ವದ ಪೇಪರ್ ಹುಡುಕುತ್ತಿದ್ದಾಗ ಶ್ರೀಮತಿಗೆ ರವಿಯ ಪತ್ರ ಸಿಕ್ಕಿತು. ಅದನ್ನು ಅವಳು ಮತ್ತೆ ಓದಿದಳು.

ರವಿಯ ಕಾಗದ ಓದಿದಾಗಿನಿಂದ ಶ್ರೀಮತಿ ಯೋಚನೆಗೆ ಈಡಾಗಿದಳು. ರವಿಯು ನಿಜವಾದ ಗುರಿಯನ್ನು ಮುಟ್ಟಿದ್ದಾನೆ. ಆದರೆ ಕಾಗದದಲ್ಲಿ ಅವನು, ಶ್ರೀಮತಿ ಹೇಗೆ ತನ್ನ ಗುರಿಯನ್ನು ತಿಳಿದಿದ್ದಳು ಎಂದು ಹೇಳಿದನಲ್ಲ. ಅದು ಸತ್ಯವೇ? ಮಿಥ್ಯವೇ? ತಾನು ತನ್ನ ಸಾಧನೆ ಮಾಡಿದ್ದರೆ ಇಂದಿನ ತಳಮಳಕ್ಕೆ ಕಾರಣವಿರಲಿಲ್ಲ. ತನ್ನದೇನು ಸಾಧನೆ? ಅಂದು ಇದ್ದ ಸ್ಥಿರವಾದ ಶುದ್ಧವಾದ ವಿಚಾರಶಕ್ತಿ ಅವಳಲ್ಲಿ ಈಗಲೂ ಇದೆಯೇ? ಶ್ರೀಮತಿಗೆ ಇಂದಿನ ಪಾರ್ಟಿಯು ನೆನಪು ಆಯಿತು. ಇಂದು ಅವಳಿಗೆ ಆ ಪಾರ್ಟಿಗೆ ಹೋಗುವ ಇಚ್ಛೆಯಿಲ್ಲ. ಆದರೆ ಇಚ್ಛೆಯ ವಿರುದ್ಧವಾಗಿ ಅವಳು ಮಾಡುತ್ತಿರುವುದು ಕರ್ತವ್ಯವಾಗಿದೆ. ಕರ್ತವ್ಯ ಮತ್ತು ಇಚ್ಛೆಗಳ ಈ ತಾಕಲಾಟವೇ ಅವಳಿಗೆ ಮಾನಸಿಕವಾಗಿ ದಣಿವನ್ನು ಉಂಟು ಮಾಡುವುದು.

ಇಂದು ಪಾರ್ಟಿಗೆ ಹೋಗುವ ಉದ್ದೇಶವೇನು? ಉದ್ದೇಶರಹಿತವಾದ ಇಂಥ ಸಮಾರಂಭದಲ್ಲಿ ಅವಳೇಕೆ ವೇಳೆಯ ಅಪವ್ಯಯ ಮಾಡಬೇಕು? ಅವಳೇನು ಯಂತ್ರವಲ್ಲವಲ್ಲ. ಶ್ರೀಕಾಂತನಿಗೆ ಇದರಿಂದ ವ್ಯಾಪಾರಿ ದೃಷ್ಟಿಯಿಂದ ಲಾಭವಿರಬಹುದು. ಆದರೆ ಅವಳಿಗೆ ಇದರಲ್ಲಿ ಭಾಗವಹಿಸುವುದು ಬೇಡವಾಗಿದೆ. ನಿನ್ನೆ ಶ್ರೀಕಾಂತ ರವಿಯ ಕಾಗದ ನೋಡಿ ಟೆಲಿಫೋನ್ ನಂಬರ್ ಬರೆದಿಡಲು ಮಾತ್ರ ಹೇಳಿದ.

ಶ್ರೀಮತಿಯ ಬಗ್ಗೆ ರವಿ ಬರೆದ ಯಾವುದೇ ವಾಕ್ಯದ ವಾಕ್ಯಾರ್ಥ ಮಾಡಲಿಲ್ಲ. ಎಷ್ಟೆ ಆದರೂ ಶ್ರೀಕಾಂತ ತನಗೆ ಏನಾದರೂ ಮೆಚ್ಚುಗೆಯ ಮಾತುಗಳನ್ನು ಹೇಳಬಹುದು, ಹೇಳಲಿ ಎಂದು ಶ್ರೀಮತಿಯ ಇಚ್ಛೆಯಾಗಿತ್ತು. ಆದರೆ ಮನಸ್ಸು ಕೋಪದಿಂದ ಕುದಿಯಿತು. ಇಂದು ಅವಳು ಅವನ ಅಪಾಯಿಂಟ್‌ಮೆಂಟ್ ಡೈರಿ ತೆಗೆದು ನೋಡದಿದ್ದರೆ ಈ ಪಾರ್ಟಿಯ ವಿಷಯವೇ ಅವಳಿಗೆ ತಿಳಿಯುತ್ತಿರಲಿಲ್ಲ. ಆದರೆ ರೂಢಿಯ ಬಲದಿಂದ ಪ್ರತಿದಿನ ಬೆಳಗ್ಗೆ ಅವನ ಡೈರಿ ತೆಗೆಯುವುದು ಅವಳಿಗೆ ಅಭ್ಯಾಸವಾಗಿದೆ. ಅತಿ ದಕ್ಷತೆಯೂ ಒಂದು ಅವಗುಣವಂತೆ.

ಮಧ್ಯಾಹ್ನದ ವೇಳೆಯಲ್ಲಿ ಶ್ರೀಮತಿಗೆ ಎಲ್ಲಿಗೋ ದೂರ ದೂರ ಬಹುದೂರ ಎಲ್ಲರನ್ನೂ ಬಿಟ್ಟು ಹೋಗಬೇಕೆನಿಸಿತು. ಆದರೆ ಎಲ್ಲಿ? ರವಿಯ ಕಾಗದದ ನೆನಪು ಅವಳ ಚಿತ್ತವನ್ನು ಕಲಕಿ ರಾಡಿಮಾಡಿದೆ. ಮನೆಯಲ್ಲಿ ಕುಳಿತಿರುವುದು ಬೇಡವಾಗಿದೆ. ಗ್ಯಾರೇಜಿನಿಂದ ಕಾರ್ ಹೊರತೆಗೆದಳು. ವಿಚಾರದಿಂದ ಕೂಡಿದವಳಾದರೂ ಕಾರನ್ನು ಜುಹೂ ಸಮುದ್ರ ತೀರಕ್ಕೆ ತಂದಳು. ಒಂದರ ಮೇಲೊಂದು ಅಲೆಗಳು ಬೇಸರವಿಲ್ಲದೇ ಬರುತ್ತಿದ್ದವು. ನೆನಪಿನ ಅಲೆಗಳೂ ಅದರೊಂದಿಗೆ ಬಿಚ್ಚುತ್ತಿದ್ದವು. ಬಂದು ಮನಸ್ಸಿಗೆ ಅಪ್ಪಳಿಸುತ್ತಿದ್ದವು.

ಶ್ರೀಮತಿ ಶ್ರೀಕಾಂತನನ್ನು ಕರ್ನಾಟಕ ವಿಶ್ವವಿದ್ಯಾಲಯದ ಬೊಟಾನಿಕಲ್ ಗಾರ್ಡನ್ನಿನಲ್ಲಿ ಭೇಟಿಯಾಗುತ್ತಿದ್ದಳು. ವಾರದಲ್ಲಿ ಮೂರು ನಾಲ್ಕು ದಿನ ಮಾತ್ರ ಕ್ಲಾಸಿದ್ದರೂ ಅವನಿಗಾಗಿ ಅವಳು ಆರು ದಿನವೂ ಹೋಗುತ್ತಿದ್ದಳು. ಅವರಿಬ್ಬರ ಮಾತು ಕತೆಗೆ ಅಂತ್ಯವೇ ಇರಲಿಲ್ಲ. ಸ್ವಭಾವತಃ ಕಡಿಮೆ ಮಾತನಾಡುವವಳು ಅವಳು. ಆದರೆ ಶ್ರೀಕಾಂತ ವಾಚಾಳಿಯಾಗಿದ್ದ. ಈಗ ಅವರಿಬ್ಬರ ಸ್ವಾಭಾವ ತಿರುಗು ಮುರುಗಾಗಿದೆ.

ಅವರಿಬ್ಬರೂ ವಿದ್ಯಾರ್ಥಿಗಳಾಗಿದ್ದರಿಂದ ಆರ್ಥಿಕ ಅನುಕೂಲವೇ ಇರಲಿಲ್ಲ. ಆದರೆ ಆಗಿನ ಆ ಸಂತೋಷ, ನಲಿವು, ಅಂತಃಕರಣ ಇಂದಿನ ಶ್ರೀಕಾಂತನ ಯಾವುದೇ ವೈಭವಕ್ಕೆ ಸಾಟಿಯಿಲ್ಲ. ಎಷ್ಟು ಸುಂದರವಾಗಿತ್ತು ಆ ಜೀವನ? ಜೀವನವೆಲ್ಲಾ ಹೀಗೆಯೇ ಎಂದು ಶ್ರೀಮತಿ ಆಗ ತಿಳಿದಿದ್ದಳು. ಅದು ಕೇವಲ ಸ್ವಪ್ನ, ಅದರ ವಾಸ್ತವಿಕತೆಯೇ ಬೇರೆಯಾಗಿತ್ತೆಂದು ಆಗ ಅವಳಿಗೆ ತಿಳಿದಿರಲಿಲ್ಲ. ಯಾವ ಶ್ರೀಕಾಂತನಿಗಾಗಿ ಶ್ರೀಮತಿ ಪ್ರಿಯ ವಿಷಯವನ್ನು ಬಿಟ್ಟು ಅನೇಕ ಮಾನಸಿಕ ಕಷ್ಟನಷ್ಟ ಅನುಭವಿಸಿದರೂ ಅವನಿಗಾಗಿ ಬಂದಳೋ ಅಂಥ ಶ್ರೀಕಾಂತ ಈಗ ಎಲ್ಲಿದ್ದಾನೆ? ಅವಳನ್ನು ಇಂದು ಇಲ್ಲಿ ಬಿಟ್ಟು ಮಾಯವಾಗಿದ್ದಾನೆ. ಕೇವಲ ಅಧಿಕಾರ ದಾಹದಲ್ಲಿ ಯಶಸ್ಸಿನ ಮೆಟ್ಟಿಲನ್ನು ಏರುತ್ತ ತನ್ನ ಪ್ರಿಯ ಪತ್ನಿಯನ್ನು ಮರೆತು ವ್ಯವಧಾನವಿಲ್ಲದ ವ್ಯವಹಾರದಲ್ಲಿ ಮುಳುಗಿ ಪ್ರೇಮದ ಆರ್ದ್ರತೆಯನ್ನು ಕಳೆದುಕೊಂಡು ರುಗ್ಣವಾದ ಶ್ರೀಕಾಂತ ಮಾತ್ರ ಉಳಿದಿದ್ದಾನೆ. ಈ ಶ್ರೀಕಾಂತ ಅವಳಿಗೆ ಅಪರಿಚಿತ. ಆ ಶ್ರೀಕಾಂತನನ್ನು ಅವಳು ಈಗ ಎಲ್ಲಿ ಹುಡುಕಬೇಕು?

★

ಶ್ರೀಮತಿ ಒಬೆರಾಯ್ ಟಾವರ್‌ಗೆ ಬಂದಾಗ ಅತಿಥಿಗಳಲ್ಲಿ ಕೆಲವರು ಆಗಲೇ ಬಂದಿದ್ದರು. ಶ್ರೀಮತಿ ತಡವಾಗಿ ಬಂದದ್ದಕ್ಕೆ ಶ್ರೀಕಾಂತ ಕಿರುಗಣ್ಣಿನಿಂದ ನೋಡಿ ಆಕ್ಷೇಪಿಸಿದ. ಸಂತೋಷಕೂಟದಲ್ಲಿ ಶ್ರೀಮತಿಗೆ ಗೊತ್ತಿದ್ದ ಕೆಲವರೂ ಗೊತ್ತಿರದ ಹಲವರೂ ಬಂದಿದ್ದರು. ನಟನೆಯ ಸಂತೋಷವನ್ನು ಅತಿಥಿಗಳು ಸೇರಿ ನಾಟಕೀಯತೆಯಿಂದ "ನಿಮ್ಮನ್ನು ಭೇಟಿಯಾಗಿ ಬಹಳ ಸಂತೋಷವಾಯಿತು" ಎಂದು ಹೇಳುತ್ತಿರುವಾಗ ಶ್ರೀಮತಿಗೆ "ಇಲ್ಲ, ನನಗೆ ಮಾತ್ರ ನಿಮ್ಮನ್ನು ಭೇಟಿಯಾಗಿದಕ್ಕೆ, ನಿಮ್ಮೊಡನೆ ವೇಳೆ ಹಾಳು ಮಾಡುತ್ತಿರುವುದಕ್ಕೆ ದುಃಖವೆನಿಸುತ್ತದೆ" ಎಂದು ಹೇಳಬೇಕೆನಿಸಿತು. ಇಂಥ ಸಮಾರಂಭದಲ್ಲಿ ಮಾತಿನ ಮಹತ್ವವೇ ಬಹಳ. ಊಟವು ಕೇವಲ ಔಪಚಾರಿಕವಾದದ್ದು. ಈ ಊಟ ಉಪಚಾರದ ಹಿಂದೆ ಕೇವಲ ಲಾಭ ಹಾನಿಗಳ ಲೆಕ್ಕ ಹೊರತು ಮತ್ತೇನಿಲ್ಲ.

ಇಂದೇಕೋ ಅವಳಿಗೆ ಯಾರೊಡನೆಯೂ ಮಾತು ಬೇಡವಾಗಿದೆ. ಕೇವಲ ತನ್ನೊಳಗೆ ತಾನು ಇರಬೇಕೆಂಬ ಇಚ್ಛೆ. ತನ್ನ ಜೀವನದ ಮೂಲ ಉದ್ದೇಶವು ಯಾವುದು? ತಾನು ಅದೇ ದಾರಿಯಲ್ಲಿ ಸಾಗುತ್ತಿದ್ದೇನೆಯೇ? ಅಥವಾ ಯಾರೋ ತನಗೆ ತಿಳಿಯದಂತೆ ತನ್ನನ್ನು ಕುಣಿಸುತ್ತಿದ್ದಾರೆಯೇ?

ಅಷ್ಟರಲ್ಲಿ ಮುಖ್ಯ ಅತಿಥಿಗಳಾದ ಜೇಕಬ್ ಲೈಲ್ಸ್ ಮತ್ತು ಡಾಲಿ ಲೈಲ್ಸ್ ಬಂದರು. ಜೇಕಬ್‌ನ ಪತ್ನಿ

ಇಂಥ ಎಲ್ಲ ಪಾರ್ಟಿಗಳಿಗೆ ಹೇಳಿ ಮಾಡಿಸಿದಂಥ ವ್ಯಕ್ತಿ. ಡಾಲಿ ನಾಜೂಕಿನಿಂದ ಬಳಕುತ್ತ "ಶ್ರೀಮತಿ, ನಿನ್ನ ಇತಿಹಾಸದ ಜ್ಞಾನ ಚೆನ್ನಾಗಿದೆಯೆಂದು ಜೇಕಬ್ ನನಗೆ ಹೇಳುತ್ತಿದ್ದ. ನೀನು ಇತಿಹಾಸದಲ್ಲಿ ಪಿ.ಎಚ್.ಡಿ.ಯಂತೆ" ಎಂದಳು.

"ಇಲ್ಲ, ನಾನು ಕೇವಲ ಎಂ.ಎ. ಮಾಡಿರುವೆ".

"ಓಹ್ ಓಗೋ? ಇಷ್ಟು ಜ್ಞಾನವನ್ನು ನೀನು ಸಂಪಾದಿಸಿರಬೇಕಾದರೆ ನಮ್ಮ ಅಮೇರಿಕದಲ್ಲಿಯೇ ಓದಿರಬೇಕು".

"ಇಲ್ಲ, ನಾನು ಈ ದೇಶದಲ್ಲಿಯೇ ನಮ್ಮ ಊರಿನಲ್ಲಿಯೇ ಓದಿರುವೆ".

"ಹೋ, ಓಗೇನು? ನೀನು ನಮ್ಮ ದೇಶದ ಇತಿಹಾಸವನ್ನು ಓದಿರುವೆಯಾ? ಅದೆಷ್ಟು ಸುಂದರ ಪುರಾತನ ಸಂಸ್ಕೃತಿ ಎನ್ನುವುದು ನಿನಗೆ ತಿಳಿದೀತು".

"ಕ್ಷಮಿಸು, ಡಾಲಿ ನಿಮ್ಮ ದೇಶದ ಇತಿಹಾಸವು ಪುರಾತನವಲ್ಲ. ಅದು ವೈಭವಯುತವೂ ಅಲ್ಲ. ನೀವು ಕೇವಲ ಯಂತ್ರಯುಗದಲ್ಲಿ ಹುಟ್ಟಿ ಬೆಳೆದು ಮುಂದುವರಿದವರೇ ಹೊರತು ಇತಿಹಾಸದಿಂದಲ್ಲ. ನಿಮ್ಮ ಸರಕಾರವು ಐತಿಹಾಸಿಕ ಗುರುತುಗಳನ್ನು ಬಹಳ ಚೆನ್ನಾಗಿ ಕಾಪಾಡಿಕೊಂಡು ಬಂದಿದೆ. ನಮ್ಮಂತೆಯಲ್ಲ".

ಶ್ರೀಮತಿಯ ಶೀತಲವಾದ ಕಠೋರವಾದ ಮಾತನ್ನು ಕೇಳಿ ಶ್ರೀಕಾಂತನ ಕಿವಿಗಳು ನಿಮಿರಿದವು. ಶ್ರೀಮತಿಯ ಮೇಲೆ ಆತನಿಗೆ ಅಸಾಧ್ಯ ಕೋಪ ಬಂದಿತು. ಈ ಸಂತೋಷಕೂಟದ ನಿಜವಾದ ಉದ್ದೇಶವನ್ನೇ ಈಕೆ ಹಾಳು ಮಾಡುವವಳು ಎಂದೂ ಅನಿಸಿತು. ಶ್ರೀಮತಿ ಮತ್ತು ಡಾಲಿಯರ ಸಂಭಾಷಣೆಯಲ್ಲಿ ಶ್ರೀಕಾಂತನೂ ಭಾಗವಹಿಸಿದ.

"ಹಲೋ ಡಾಲಿ, ಹೇಗಿತ್ತು ನಿಮ್ಮ ಜಯಪುರದ ಪ್ರವಾಸ?"

ಶ್ರೀಕಾಂತನ ಆಗಮನ ಶ್ರೀಮತಿಗೆ ಸೂಚನೆಯಂತಿತ್ತು. ಶ್ರೀಮತಿ ಅದನ್ನು ತಿಳಿದೂ ತಿಳಿಯದವಳಂತೆ ಸುಮ್ಮನಾದಳು.

"ಓಹ್, ಶ್ರೀಕಾಂತ್, ಸುಂದರವಾಗಿತ್ತು. ನಾನಂತೂ ಎಲ್ಲ ಬೆಳ್ಳಿಯ ಆಭರಣಗಳನ್ನು ಕೊಂಡೆ. ಶ್ರೀಕಾಂತ್, ಭಾರತದಲ್ಲಿಯ ಜನರು ಎಷ್ಟು ಬುದ್ಧಿವಂತರು. ಈ ಕೋಣೆಯ ಹೆಸರನ್ನೂ ಹೇಗೆ ನಮ್ಮ ಕಡೆಯ ಹೆಸರಿನಂತೆ ಇಟ್ಟಿದಾರೆ?".

ಶ್ರೀಮತಿ ತಡೆಯಲಾರದೇ, "ಡಾಲಿ ಅವು ಯಾರ ಹೆಸರೂ ಅಲ್ಲ. ರಹಸ್ಯ ಮುಗುಳ್ನಗೆಯ ಅತ್ಯದ್ಭುತ ಚಿತ್ರವೆನಿಸಿದ ಮೋನಾಲಿಸಾನ ಫ್ರೆಂಚ್ ಹೆಸರು 'ಲಾಜಕೋಂದ' ಅಷ್ಟೆ" ಎಂದಳು.

ಶ್ರೀಮತಿಯ ಈ ಮಾತಿನಿಂದ ಶ್ರೀಕಾಂತ ಚಕಿತನಾದರೆ, ಡಾಲಿ ಅಪಮಾನದಿಂದ ಕೆಂಪಾದಳು. ಶ್ರೀಮತಿಯ ಪ್ರತಿ ಉತ್ತರ ವೈರಿಯನ್ನು ಮಾತಿನಲ್ಲಿ, ವಾದದಲ್ಲಿ ಸೋಲಿಸುವಂತೆ ಇದ್ದಿತೆ ಹೊರತು ಔಪಚಾರಿಕವಾಗಲಿ, ಸ್ನೇಹಪೂರ್ಣವಾಗಲಿ, ಕೊನೆಗೆ ಕೇವಲ ವ್ಯಾವಹಾರಿಕವಾಗಲೀ ಇರಲಿಲ್ಲ. ಪ್ರಸಿದ್ಧ ಅಮೇರಿಕನ್ ಕಂಪನಿಯ ನಿಜವಾದ ಒಡತಿಯಾದ ಡಾಲಿ ಇದನ್ನು ಹೇಗೆ ಸಹಿಸಿಯಾಳು?

ಅಧಿಕಾರದಲ್ಲಿದ್ದರೆ ಅಜ್ಞಾನ ಮುಚ್ಚಿ ಹೋಗುವದು. ಶ್ರೀಮತಿಯ ಈ ಕಹಿ ಉತ್ತರ ಶ್ರೀಕಾಂತನ ಮನೋಸ್ವಾಸ್ಥ್ಯವನ್ನೇ ಕೆಡಿಸಿತು. ಇನ್ನು ಡಾಲಿಯ ಕಂಪನಿ ಅಂದರೆ ಜೇಕಬ್‌ನ ಕಂಪನಿಯಿಂದ ಕಾಂಟ್ರಾಕ್ಟ್ ಸಿಗುವುದು ದುಸ್ತರವೇ.

ರಾತ್ರಿಯಲ್ಲಿ ಮನೆಗೆ ಬರುವಾಗ ಶಾಂತನಾಗಿರುತ್ತಿದ್ದ ಶ್ರೀಕಾಂತ ಇಂದು ಕೋಪಗೊಂಡಿದ್ದ.

"ಶ್ರೀಮತಿ, ಏನಾಗಿದೆ ನಿನಗೆ? ನೀನು ಯಾಕೆ ಡಾಲಿಯೊಂದಿಗೆ ಜಗಳದ ರೀತಿಯಲ್ಲಿ ಮಾತನಾಡಿದೆ? ಯಾವ ಹೆಸರು ತೆಗದುಕೊಂಡು ನಾವೇನು ಮಾಡುವದು? ನಿನ್ನ ಇತಿಹಾಸದ ಜ್ಞಾನವನ್ನು ತೋರಿಸಲು ಅದು ವೇಳೆಯೂ ಅಲ್ಲ, ಸ್ಥಳವೂ ಅಲ್ಲ".

"ಶ್ರೀ, ನಾನು ನನ್ನ ಜ್ಞಾನ ಪ್ರದರ್ಶನಕ್ಕೆ ಬಂದಿರಲೂ ಇಲ್ಲ. ಅಲ್ಲದೇ ಅಲ್ಲಿಯದು ಅಂತಹ ಜ್ಞಾನವಂತರ ಸಮ್ಮೇಳನವೂ ಅಲ್ಲ. ಅವಳ ಅತೀ ಡಂಭಾಚಾರ, ನಾಟಕೀಯತೆ ನೋಡಿ ಹಾಗಂದೆ. ನಾವೆಂದರೆ ಕೀಳು, ತಮ್ಮಿಂದಲೇ ನಾವು ಎಲ್ಲವನ್ನೂ ಕಲಿತಿದ್ದೇವೆ ಎನ್ನುವ ಅತಿ ಅಹಂಕಾರ ನೋಡು. ನಿಜವಾಗಿ ಬುದ್ಧಿವಂತರೂ, ವಿಚಾರವಂತರೂ ಆದ ಪ್ರೊಫೆಸರ್ ಮೈಕ್ ಕಾಲಿನ್ಸ್‌ರಾಗಲೀ, ಜಗತ್ತನ್ನೇ

ಹಲವು ಬಾರಿ ಸುತ್ತಿದ್ದ ಡೊರೊಥಿಯಾಗಲೀ ಎಷ್ಟು ಕುತೂಹಲದಿಂದ ನಮ್ರತೆಯಿಂದ ಪ್ರಶ್ನೆ ಕೇಳುತ್ತಾರೆ. ಅವರ ದೃಷ್ಟಿ ಈ ಹೆಂಗಸಿನಂತೆ ಇಲ್ಲ. ಎಲ್ಲಿ ವಿದ್ಯೆ ಇಲ್ಲವೋ ಅಲ್ಲಿ ವಿನಯವು ಹೇಗೆ ಇದ್ದೀತು?"

"ಸಾಕು ಮಾಡು. ಶ್ರೀಮತಿ ನೀನು ಹೇಳುವುದು ಕೇವಲ ಗೊಡ್ಡು ಇತಿಹಾಸದ ವಿಷಯ. ಅದನ್ನು ಬಿಟ್ಟು ವ್ಯವಹಾರದ ಬೇರೆ ಜಗತ್ತಿದೆ. ನೀನು ಕೇವಲ ಇತಿಹಾಸದ ವಿದ್ಯಾರ್ಥಿಯಲ್ಲ. ನನ್ನ ಪತ್ನಿ ಎನ್ನುವುದನ್ನು ಮರೆಯಬೇಡ. ನಿನ್ನ ಇಂದಿನ ಉದ್ಧಟ ವರ್ತನೆಯಿಂದ ನನಗೆ 'ಶ್ರೀಕಾಂತನ ಪತ್ನಿಗೆ ಮ್ಯಾನರ್ಸ್' ಇಲ್ಲ ಎನ್ನುವ ಅಪವಾದ ಬರುತ್ತದೆ. ಇಷ್ಟಾಗಿ ನೀನು ಅಷ್ಟೊಂದು ಹೇಳಿಕೊಳುವ ಈ ಭಾರತದಲ್ಲಿ, ಅದರ ಇತಿಹಾಸದಲ್ಲಿ ಏನಿದೆ?"

ಶ್ರೀಮತಿಯೂ ಅವನಂತೆಯೇ ವ್ಯಗ್ರಳಾಗಿದ್ದಳು. ಶ್ರೀಕಾಂತ ಅವಳ ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಕರಾರು ಹಾಕುತ್ತಾನೆ. "ಶ್ರೀಮತಿ ನೀನು ಕೇವಲ ಇತಿಹಾಸದ ವಿದ್ಯಾರ್ಥಿಯಲ್ಲ, ಶ್ರೀಕಾಂತ ದೇಶಪಾಂಡೆಯ ಹೆಂಡತಿ" ಎನ್ನುತ್ತಾನೆ. ಹಾಗೆಯೇ ತಾನೂ ಹೇಳಬಹುದಲ್ಲ. "ಶ್ರೀ ನೀನು ಲಾಭ ಹಾನಿಯಿಂದ ಅಳೆಯುತ್ತಿರುವ ನಿಮ್ಮ ಕಂಪನಿಯ ಜನರಲ್ ಮ್ಯಾನೇಜರ್ ಮಾತ್ರವಲ್ಲ, ಭಾವನಾ ಪ್ರಿಯ ಇತಿಹಾಸಪ್ರಿಯ ಶ್ರೀಮತಿಯ ಪತಿ ಎನ್ನುವುದನ್ನು ಮರೆಯಬೇಡ" ಎಂದು. ಆದರೆ ಅವಳು ಹಾಗೆ ಎಂದೂ ಅನ್ನುವದಿಲ್ಲ. ಅವನಷ್ಟೆ ಬುದ್ಧಿಶಾಲಿಯಾದ ಅವಳ ಸ್ಥಾನ ಯಾವುದು? ಅಲ್ಲದೆ ಅವನು ಇಂದು ಮಾತನಾಡಿದ ರೀತಿ ಅವಳ ಮೃದು ಭಾವನೆಗೇ ಕೊಡಲಿ ಏಟಿನಂತೆ ಇದೆ.

ಶ್ರೀಕಾಂತ ಓದುತ್ತಿರುವ ಪತ್ರಿಕೆಯನ್ನು ಕಿತ್ತೆಸೆದು ಶ್ರೀಮತಿ ಅವನನ್ನು ಕೇಳಿದಳು. "ಎಲ್ಲಿಯ ಮಾತು ಎಲ್ಲಿಯವರೆಗೆ ಹೋಗುವದು? ಈಗ ಹೇಳು ಶ್ರೀ. ನೀನು ನನಗೆ ಹೇಳಬಯಸುವದಾದರೂ ಏನು? ನಿನ್ನ ಮರ್ಯಾದೆಯನ್ನು ತೆಗೆಯುವಂಥ ಏನನ್ನೂ ನಾನು ಇನ್ನೂ ಮಾಡಿಲ್ಲ".

ಶಾಂತವಾಗಿದ್ದ ಶ್ರೀಮತಿ ಬೆಂಕಿಹಿಡಿದ ಪಟಾಕಿಯಂತೆ ಸಿಡಿದೆದ್ದಳು. ಅವಳಿಗೆ ವ್ಯತಿರಿಕ್ತವಾಗಿ ಶ್ರೀಕಾಂತ ಅವಳ ಕೈಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡು ರೂಢಿಸಿಕೊಂಡ ಮನೋಬಲದಿಂದ ಹೇಳಿದ.

"ಶ್ರೀಮತಿ, ಹಾಗಿದ್ದರೆ ಕೇಳು. ಇಂದು ನಮಗೆ ಬೇಕಾಗಿರುವುದು ಭಾರತದ ಗತವೈಭವವಲ್ಲ. ಹಿಂದೆ ಹಂಪಿಯಲ್ಲಿ ಮುತ್ತು ರತ್ನಗಳನ್ನು ದಾರಿಯಲ್ಲಿ ಮಾರುತ್ತಿದ್ದರಂತೆ. ಬಾದಾಮಿಯಲ್ಲಿ ಚಕ್ರವರ್ತಿಯ ಒಡ್ಡೋಲಗ ವೈಭವದಿಂದ ಮೆರೆಯುತ್ತಿತ್ತಂತೆ. ನಾಲಂದಾದಲ್ಲಿ ಪ್ರವೇಶ ಪರೀಕ್ಷೆಯನ್ನು ದ್ವಾರ ಪಾಲಕರೇ ತೆಗೆದುಕೊಳ್ಳುತ್ತಿದ್ದರಂತೆ. ಈ ಎಲ್ಲ ಅಂತೆಕಂತೆಗಳ ಕಥೆ ಸಾಕು. ಈಗ ನಮಗೆ ಬೇಕಾಗಿರುವುದು ಆರ್ಥಿಕ ಪ್ರಗತಿ, ಔದ್ಯೋಗೀಕರಣ. ಹಿಂದಿನ ಸಿರಿಯಲ್ಲ. ನಾವು ಸಾಧಿಸಿರುವುದಾದರೂ ಏನು? ಯುರೋಪಿನಲ್ಲಿ ಯಂತ್ರ ಆವಿಷ್ಕಾರ ನಡೆದಾಗ ಭಾರತದಲ್ಲಿ ನಡೆದಿದ್ದೇನು? ಸತಿ, ಕನ್ಯಾಬಲಿಗಳಂಥ ಮೂಢ ಆಚರಣೆಗಳು! ವಿಜ್ಞಾನದಿಂದ ಪಾಶ್ಚಿಮಾತ್ಯರಲ್ಲಿ ಕ್ರಾಂತಿಯಾಗಿ ಆರ್ಥಿಕ ಪ್ರಗತಿಯಾಗುತ್ತಿರುವ ವೇಳೆಯಲ್ಲಿ ನಾವು ಮಾಡುತ್ತಿರುವುದಾದರೂ ಏನು? ಚೌಕಲಾಗಿ, ಸೀಮಂತ, ಜಾವಳ ಮುಂತಾದ ಅರ್ಥವಿಹೀನ ಹುಚ್ಚಾಟಗಳು. ಪರಸ್ಪರ ಮನವು ಹೊಂದದೇ ಇರುವಾಗ ಕುಂಡಲಿ ಕೂಡಿಸಿ ಲಗ್ನ ಮಾಡುವ ರೂಢಿ.

"ಹಿಂದಿನದು ಏನೇ ಇರಲಿ, ಈಗಾಗಿರುವುದಾದರೂ ಏನು? ನಮ್ಮ ಸಮಾಜ ನಮಗೇನು ಮಾಡುತ್ತಿದೆ? ನಮಗೆ ಯಾವ ತರಹದ ಔದ್ಯೋಗೀಕರಣದ ಅವಶ್ಯಕತೆಯಿದೆ? ಯಾವ ರೀತಿಯಿಂದ ದುಡಿದರೆ ನಮ್ಮ ಏಳ್ಗೆಯಾಗುವುದು? ಯಾವ ತರಹದ ನವೀನ ವೈಜ್ಞಾನಿಕ ಉಪಕರಣ ಕಂಪ್ಯೂಟರ್‌ಗಳಿಂದ ಲಾಭವಿದೆ ಎನ್ನುವುದನ್ನು ತಿಳಿಯದೇ ಅಶೋಕ ಚಕ್ರವರ್ತಿಯ ಕಾಲದಲ್ಲಿ ಹೀಗಿತ್ತು ಭಾರತ ಎನ್ನುವುದರಲ್ಲಿ ಏನು ಅರ್ಥವಿದೆ?

"ಶ್ರೀಮತಿ, ನೀನು ಇಷ್ಟು ಹೇಳಿಕೊಳ್ಳುವ ಆ ನಿನ್ನ ಅಶೋಕ ತನ್ನ ಹೆಸರನ್ನು ಅಜರಾಮರವಾಗಿಸಲು ಪ್ರಯತ್ನಪಟ್ಟಿದ್ದರಿಂದಲೇ ಅವನು ಅಹಿಂಸಾ ತತ್ವವನ್ನು ಪಾಲಿಸುತ್ತಾ ತನ್ನ ಸೈನ್ಯದ ಯೋಚನೆ ಮಾಡದ್ದರಿಂದ ಅವನ ತರುವಾಯ ಸೈನ್ಯವು ದುರ್ಬಲವಾಗಿ ಸಾಮ್ರಾಜ್ಯವು ಹೇಳಹೆಸರಿಲ್ಲದಂತೆ ಆಯಿತಲ್ಲ!"

ಶ್ರೀಕಾಂತ ಪ್ರಥಮ ಬಾರಿಗೆ ಶ್ರೀಮತಿಯ ಅತ್ಯಂತ ಪ್ರಿಯವಾದ ಇತಿಹಾಸದ ಟೀಕೆಮಾಡಿದ. ಅದು

ಇತಿಹಾಸದ ಮೇಲಿನ ದ್ವೇಷವಲ್ಲ. ಆ ಸಂಜೆ ತನ್ನ ಜೀವನದ ಉಸಿರಂತಿದ್ದ ಪಾರ್ಟಿಯಲ್ಲಿ ಮಾತನಾಡಿ ಅದನ್ನು ಹಾಳುಮಾಡಿದ್ದಕ್ಕೆ ಅವನು ಶ್ರೀಮತಿಯ ಮೇಲೆ ಕೋಪಗೊಂಡು, ಅವಳ ಮೇಲಿನ ತಿರಸ್ಕಾರವನ್ನು ಇತಿಹಾಸದ ಮೇಲೆ ತಿರುಗಿಸಿದ. ಯಾವುದೇ ವ್ಯಕ್ತಿಯನ್ನು ನೇರವಾಗಿ ಅವಮಾನಿಸುವುದಕ್ಕಿಂತ ಅವನಿಗೆ ಅಥವಾ ಅವಳಿಗೆ ಪ್ರಿಯವಾದ ವಿಷಯವನ್ನು ತಿರಸ್ಕರಿಸುವುದೇ ಉಚಿತ. ಇದು ವ್ಯವಹಾರವು ಅವನಿಗೆ ಕಲಿಸಿದ ಪಾಠ!

ಶ್ರೀಮತಿಯ ಕೋಪ ಅವನ ಈ ಮಾತಿನಿಂದ ಮತ್ತಷ್ಟು ಏರಿತು.

"ಶ್ರೀ. ನೀನು ಹೇಳಲು ಬಯಸುವುದಾದರೂ ಏನು? ಇತಿಹಾಸವು ಸತ್ತವರ ವಿಷಯವೆಂದೋ ಅಥವಾ ಕಳೆದುಹೋದ, ಗತಿಸಿದ ಜನರ ಕಥೆಯನ್ನು ಹೇಳುವುದೂ ಕೇಳುವುದೂ ಅಪ್ರಯೋಜಕವೆಂದೋ ಅಥವಾ ಪಾಶ್ಚಿಮಾತ್ಯರಂತೆ ನಾವೇಕೆ ಮುಂದುವರೆದಿಲ್ಲವೆಂದೋ? ನೀನು ಕೇವಲ ಅಶೋಕನ ಉದಾಹರಣೆಯನ್ನು ಕೊಟ್ಟೆಯಲ್ಲ, ಅದರ ಸಾರಾಸಾರ ವಿಚಾರ ಮಾಡಿರುವಿಯಾ? ಅಶೋಕನು ತನ್ನ ಹೆಸರನ್ನು ಅಮರಗೊಳಿಸಲು ಪ್ರಯತ್ನಿಸಲಿಲ್ಲ. ತನ್ನ ಅನುಪಮ ಕೃತಿಯಿಂದ ಅವನು ಅಮರನಾದನು. ಅಶೋಕನ ಸಾಮ್ರಾಜ್ಯವು ಹಾಳಾಗಲು ಕಾರಣಗಳು ಅನೇಕ. ಅವನಷ್ಟು ಯೋಗ್ಯತೆಯ ಅರಸರು ಅವನ ನಂತರ ಬಂದಿರಲಾರರು. ಅವನಿಗಿಂತ ಬೇರೆ ಅನೇಕ ಅರಸರು ಕೇವಲ ಬಾಹುಬಲದಿಂದ ರಾಜ್ಯವನ್ನು ಕಟ್ಟಿದರೂ ಅವೇಕೆ ಹಾಳಾಗಿ ಹೋದವು? ಅಲ್ಲಾವುದ್ದೀನ್ ಖಿಲ್ಜಿಯು ಹಿಮಾಲಯದಿಂದ ರಾಮೇಶ್ವರದವರೆಗೆ ಕೇವಲ ಬಾಹುಬಲದಿಂದ ಸಾಮ್ರಾಜ್ಯ ಸ್ಥಾಪಿಸಿದರೂ ಅವನು ಗತಿಸಿದ ನಾಲ್ಕೇ ವರ್ಷದಲ್ಲಿ ಅವನ ಸಾಮ್ರಾಜ್ಯವು ಮಣ್ಣು ಮುಕ್ಕಿದ್ದೇಕೆ? ಶಿವಾಜಿಯಂಥ ಮುತ್ಸದ್ದಿ ಶೂರ ಅರಸ ಸ್ಥಾಪಿಸಿದ ರಾಜ್ಯ ಅವನ ಮಕ್ಕಳ ಕಾಲದಲ್ಲಿಯೇ ನಿರ್ಬಲವಾಯಿತಲ್ಲ. ಸಾಮ್ರಾಜ್ಯಗಳು ನಿರ್ಬಲವಾಗಲು ಅನೇಕ ಪ್ರತಿಕೂಲ ಪರಿಸ್ಥಿತಿಗಳೇ ಕಾರಣ. ಇಂತಹದೇ ಒಂದು ಕಾರಣ ಎಂದು ಎತ್ತಿ ಹೇಳುವುದು ತಪ್ಪು.

"ಶ್ರೀ. ನೀನೂ ನನ್ನ ಜೊತೆಗೆ ಬಾಸ್ಟನ್ ನಗರ ನೋಡಿರುವಿಯಲ್ಲ. ಕೇವಲ ಎರಡುನೂರು ವರ್ಷಗಳ ಇತಿಹಾಸವಿದ್ದ ಈ ನಗರವು ನಮ್ಮ ಹುಬ್ಬಳ್ಳಿಗಿಂತ ಹಳೆಯದಾಗಿರಲಿಕ್ಕಿಲ್ಲ. ಜಾಗತಿಕ ಇತಿಹಾಸದಲ್ಲಿ ಅಮೇರಿಕದ ಇತಿಹಾಸ ಅರ್ಧ ಪುಟವಷ್ಟು ಮಾತ್ರ. ಆದರೆ ಅಲ್ಲಿಯ ಸರಕಾರಕ್ಕೆ ಇತಿಹಾಸ ಪ್ರಜ್ಞೆ ಇರುವುದರಿಂದ ಈ ಪುರಾತನ ನಗರವನ್ನು ಎಷ್ಟು ಚೆನ್ನಾಗಿ ಕಾಯ್ದಿರಿಸಿದ್ದಾರೆ. ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ ಮುಖ್ಯರ ಮನೆ, ಭಾಷಣದ ಚೌಕು ಎಲ್ಲವನ್ನೂ ಕೆಂಪು ಇಟ್ಟಿಗೆಯಿಂದ ಜೋಡಿಸಿ 'ಫ್ರೀಡಂ ಟ್ರೇಲ್' ಎಂದು ಅಭಿಮಾನದಿಂದ ತೋರಿಸುತ್ತಾರೆ. ಯುರೋಪಿನ ದೇಶಗಳು ತಮ್ಮ ಐತಿಹಾಸಿಕ ಮಹತ್ವದಿಂದ ಅನೇಕ ತರಹದ ಪ್ರವಾಸಿಗರನ್ನು ಆಕರ್ಷಿಸಿ ಹೇರಳ ವಿದೇಶಿ ವಿನಿಮಯ ಗಳಿಸುತ್ತಿವೆ. ಗ್ರೀಸ್ ಮತ್ತು ಇಟಲಿಯ ಮಹತ್ವವನ್ನು ನೀನೇ ಹೇಳಿದಂತೆ ಆರ್ಥಿಕ ಪ್ರಗತಿಯಿಂದ ಅಳೆಯುವದಲ್ಲ. ಬದಲು ಪುರಾತನವಾದ ಅವರ ಸಂಸ್ಕೃತಿಯಿಂದ ಅಳೆಯುತ್ತಾರೆ. ಬ್ರಿಟಿಷ್ ರಾಣಿಯ ಅರಮನೆ ಹೇಗಿದೆ? ಪ್ರತಿದೇಶವೂ ತನ್ನದೇ ಆದ ಇತಿಹಾಸವನ್ನು ಅವಶೇಷಗಳನ್ನು ಅಭಿಮಾನದಿಂದ ಕಾಯ್ದು ರಕ್ಷಿಸುತ್ತದೆ. ಅಂದರೆ ನಾವು ಒಂದು ವಿಶಿಷ್ಟ ಸಂಸ್ಕೃತಿಗೆ ಸಂಬಂಧಪಟ್ಟವರು ಎಂದು ನಮ್ಮ ಎತ್ತಿತೋರಿಸುತ್ತದೆ. ಅಂತೆಯೇ 2-3 ಸಾವಿರ ವರ್ಷ ಹಿಂದಿನ ನಮ್ಮ ಇತಿಹಾಸವನ್ನು ನಾವು ಕಾಯ್ದಿಡುವುದರಲ್ಲಿ ಏನು ತಪ್ಪಿದೆ? ಎಲ್ಲ ಸಂಸ್ಕೃತಿಗಳು ಪುರಾತನವಾಗುತ್ತ ಬೆಳೆದಂತೆ ಅಲ್ಲಿ ಕೆಲ ಗೊಡ್ಡು ಅಂಧಶ್ರದ್ಧೆಗಳಿವೆ. ಅಂಧಶ್ರದ್ಧೆಗಳು ಸಮಾಜದ ಅಂಗವಾಗಿರುವುದರಿಂದ ಅಂಥಲ್ಲಿ ಬೆಳವಣಿಗೆ ಕುಂಠಿತವಾಗುವುದು ಸಾಮಾನ್ಯ. ಅಮೇರಿಕದಲ್ಲಿ ಇಂಥಮುಗ್ಧ ಅಂಧತೆ ಇಲ್ಲದಿರುವುದಕ್ಕೆ ಈಗ ಅಂಬೆಗಾಲಿಕ್ಕಿರುವ ಶಿಶುವಿನಂತಿರುವ ಅದರ ಸಂಸ್ಕೃತಿಯೇ ಕಾರಣ. ಅದರಿಂದಲೇ ಅಲ್ಲಿ ಬೆಳವಣಿಗೆಯು ಬರುವದು. ಹೇಗೆ ಮಾನವನಿಗೆ ಪಲಿತವು ಸಹಜವೋ ದೇಶಕ್ಕೆ ಸಂಸ್ಕೃತಿಗೆ ಕೂಡ".

ಶ್ರೀಮತಿ ಮಾತನ್ನು ನಿಲ್ಲಿಸಿ ಶ್ರೀಕಾಂತನ ಕಡೆಗೆ ನೋಡಿದಳು. ಅವನು ಅವಳನ್ನು ಎಂದೂ ನೋಡಿರದಂತೆ ನೋಡುತ್ತಿದ್ದ. ಮತ್ತೆ ಅವಳಿಗೆ ಅವನು ಕೊಟ್ಟ ಚಾಟಿ ಏಟಿನ ನೆನಪು ಬಂದಿತು.

"ನೀನು ಹೇಳುತ್ತಿರುವ ಪಾಶ್ಚಿಮಾತ್ಯ ದೇಶದಲ್ಲಿಯೂ ಅಂಧಶ್ರದ್ಧೆ ಇಲ್ಲದೇ ಇಲ್ಲ. ಪ್ರಜಾಪ್ರಭುತ್ವದ ತವರು ಮನೆಯಾದ ಇಂಗ್ಲೆಂಡ್ ಇಂದಿಗೂ ರಾಜರಾಣಿಯರನ್ನು ಏಕೆ ಇಟ್ಟಿದೆ? ಆರ್ಥಿಕ ಮುಗ್ಗಟ್ಟಿನ ದಿನಗಳಲ್ಲಿಯೂ ಅದು ರಾಜ ರಾಣಿಯರ ಮದುವೆಯನ್ನು ಅಷ್ಟೊಂದು ಸಂಭ್ರಮದಿಂದ

ಏಕೆ ಆಚರಿಸುತ್ತದೆ? ನಾವೇನಾದರೂ ಇಂತಹದನ್ನು ಮಾಡಿದರೆ ಜಗತ್ತೇ ನಗುತ್ತದೆ. ಆದರೆ ಅಲ್ಲಿಯ ಇಂಥ ಪ್ರಸಂಗಕ್ಕೆ ಬೇರೆ ಬೇರೆ ದೇಶಗಳ ಪ್ರತಿನಿಧಿಗಳು ಬಂದು ಶುಭಾಶಯ ಕೋರುತ್ತಾರೆ".

"ನಾವು ಯಾವ ಕಾರಣಕ್ಕಾಗಿ ಹಿಂದುಳಿದಿದ್ದೇವೆ, ನೀನು ತಾರ್ಕಿಕವಾಗಿ ವಿಚಾರ ಮಾಡು. ಪಶ್ಚಿಮದಲ್ಲಿ ಔದ್ಯೋಗಿಕ ಕ್ರಾಂತಿಯಾದಾಗ ನಾವು ಪರರ ಗುಲಾಮರಾಗಿದ್ದೆವು. ಮಲತಾಯಿ ಸವತಿಯ ಮಕ್ಕಳನ್ನು ಎಂದಿಗಾದರೂ ಚೆನ್ನಾಗಿ ನೋಡುವಳೇ? ಆಳರಸರು ಗುಲಾಮರ ಹಿತಾಹಿತಗಳನ್ನು ಗಮನಿಸುವರೇ? ಹೀಗಾಗಿ ನಾವು ಹಿಂದುಳಿದೆವು. ಶ್ರಿ, ಔದ್ಯೋಗೀಕರಣವೇ ದೇಶಕ್ಕೆ ಆರ್ಥಿಕ ದೃಷ್ಟಿಯಿಂದ ನಿಜವಾದ ಸಹಾಯವೆಂದು ತಿಳಿಯಬೇಡ. ಔದ್ಯೋಗೀಕರಣವು ಸಮಾಜದ ಬಂಧನವನ್ನು ಸಡಿಲುಗೊಳಿಸಿ ಮನೋವಿಕಾರಕ್ಕೆ ದಾರಿ ಮಾಡಿಕೊಡುತ್ತದೆ. ತನ್ನ ಜೊತೆಗೆ ಅನೇಕ ಕೌಟುಂಬಿಕ ಸಮಸ್ಯೆಗಳನ್ನು ತರುತ್ತದೆ".

ಮತ್ತೆ ಮಾತನಾಡದಂತೆ ಶ್ರೀಕಾಂತ ಸುಮ್ಮನಾದ. ಶ್ರಿಮತಿ ಹೊರಗೆ ನೋಡುತ್ತ ಶ್ರಿಕಾಂತನನ್ನು ಮತ್ತೆ ಕರೆದಳು.

"ಮತ್ತೇನಿಲ್ಲ ಶ್ರೀ, ನೀನು ಧರಿಸಿರುವ ಈ ವೇಷಭೂಷಣವನ್ನು ನೋಡು, ನೀನು ಆಡುತ್ತಿರುವ ಆಂಗ್ಲಭಾಷೆ, ಬ್ರಿಟಿಷರು ಭಾರತವನ್ನು ಬಿಟ್ಟು ಮೂವತ್ತು ವರ್ಷಗಳಾದರೂ ಅವರ ಗುಲಾಮತನಕ್ಕೆ ಸಾಕ್ಷಿಯಾಗಿ ನಿಂತಿದೆ".

ಶ್ರಿಕಾಂತ ಚಕಿತನಾದ. ಶ್ರಿಮತಿ ಇಷ್ಟೊಂದು ಬಿಚ್ಚು ಮಾತಿನಿಂದ ಚುಚ್ಚುತ್ತಾಳೆಂದು ಅವನು ಎಣಿಸಿರಲಿಲ್ಲ. ಅವಳ ನಿಖರವಾದ, ಸ್ಪಷ್ಟವಾದ ಬುದ್ಧಿಶಕ್ತಿಯ ಕಲ್ಪನೆಯಿದ್ದರೂ, ಅವಳು ತನಗೆ ಹೀಗೆ ಹೇಳಬಹುದು ಎಂದು ಅವನಿಗೆ ಅನಿಸಿರಲಿಲ್ಲ. ಕಾಣದ ಆಕಾಶದಲ್ಲಿ ನಕ್ಷತ್ರ ಎಣಿಸುತ್ತ ಶ್ರಿಕಾಂತ ನಿಂತಿದ್ದರೆ, ಶ್ರಿಮತಿ ಅವನು ಅಲ್ಲಿರುವುದನ್ನು ಗಮನಕ್ಕೆ ತಾರದೇ ಸಮುದ್ರ ನೋಡುತ್ತ ನಿಂತಳು. ಇಂದು ಅವರು ಪ್ರಪ್ರಥಮಬಾರಿ ಒಂದೇ ಸೂರಿನ ಕೆಳಗೆ ಇರುವ ಇಬ್ಬರು ಅಪರಿಚಿತರಂತೆ ಆಗಿದ್ದಾರೆ.

ಶ್ರಿಕಾಂತ ತನ್ನ ಬಟ್ಟೆಯ ಕಪಾಟನ್ನು ತೆರೆದು ಕೆಳಗಿಟ್ಟ. ಬ್ಯಾಗ್ ಮೇಲೆ ಎತ್ತಿದ. ನಿಶ್ಚಲವಾಗಿ ನಿಂತ ಶ್ರಿಮತಿಯ ಕಡೆಗೆ ಬೇಕೆಂತಲೇ ನೋಡದೆ " ಶ್ರಿಮತಿ, ಒಂದು ತಿಂಗಳು ಸಾಕಾಗುವಷ್ಟು ಬಟ್ಟೆ ಹಾಕು. ನನ್ನ ಎರಡೂ ಬಿಜಿನೆಸ್ ಡೈರಿ ತೆಗೆದಿಡು," ಎಂದ.

"ಶ್ರಿ, ನೀನು ಎಲ್ಲಿಗೆ ಹೊರಟಿದ್ದೀ?"

'ಶ್ರಿಮತಿ, ನಾನು ಇಲ್ಲಿಂದ ಮೊದಲು ದಿಲ್ಲಿಗೆ ನಂತರ ಕಲ್ಕತ್ತಾ ಅಲ್ಲಿಂದ ಸಿಂಗಾಪುರ. ಬಹುಶಃ ಸಿಂಗಪುರದಿಂದ ನ್ಯೂಯಾರ್ಕ್."

"ಶ್ರಿಕಾಂತ ಆದರೆ..."

"ಆದರೆ ಏನು? ನನಗೆ ವೇಳೆ ಇಲ್ಲ ಬೇಗನೆ ಹೇಳು"

"ಶ್ರಿ ನೀನು ಈ ವಾರ ರಜೆಯ ಮೇಲೆ ಇರ್ತಿಯಲ್ಲ? ನೀನು ನನಗೆ ತಿಂಗಳ ಹಿಂದೆಯೇ ಹಾಗೆ ಹೇಳಿದ್ದೆ. ಅದಕ್ಕೆಂದೇ ನಾನು ನಮ್ಮ ಲಡಾಖ ಪ್ರವಾಸದ ಟಿಕೆಟ್ ಬುಕ್ ಮಾಡಿಸಿದ್ದೇನೆ".

"ಶ್ರಿಮತಿ ಆ ಟಿಕೆಟ್ಸ್ ಕ್ಯಾನ್ಸಲ್ ಮಾಡು. ನನಗೆ ಮಾತನಾಡಲೂ ವೇಳೆ ಇಲ್ಲ".

"ಶ್ರಿ ನಿನ್ನ ಈ ಪ್ರವಾಸ ಮುಂದೂಡಲಾರೆಯಾ? ನನಗಾಗಿ" ಶ್ರಿಮತಿಗೆ ಶ್ರಿಕಾಂತನ ಸ್ವಭಾವವು ಗೊತ್ತಿದ್ದರೂ ಅತ್ಯಂತ ನಿರಾಶೆಯಿಂದ ಕೇಳಿದಳು. ಶ್ರಿಕಾಂತ ಅನಿರೀಕ್ಷಿತವಾಗಿ ಸಿಟ್ಟಿಗೆದ್ದ. ಈ ಸಿಟ್ಟು ಶ್ರಿಮತಿಯ ಮೇಲಿರಲಿಲ್ಲ. ಅವನ ಕಂಪನಿಗೆ ಲೈಸನ್ಸ್ ನೀಡದಿದ್ದ ಸರಕಾರದ ಮೇಲೆ ಇತ್ತು.

"ಇಲ್ಲ ನನ್ನ ಪ್ರವಾಸವನ್ನು ಕ್ಯಾನ್ಸಲ್ ಮಾಡಲು ಆಗುವುದಿಲ್ಲ. ಅಲ್ಲದೇ ಲಡಾಖಿಗೆ ಇನ್ನೊಮ್ಮೆ ಹೋಗಬಹುದು. ಶ್ರಿ ಮತ್ತು ಶ್ರಿಮತಿ ಅತುಲ ಶರ್ಮಾ ಬರುತ್ತಾರೆ. ಅವರಿಗಾಗಿ ನಮ್ಮ ಸ್ವಂತ ಕಾರು ಕೊಡು. ನಮ್ಮಲ್ಲಿಯೇ ಉಳಿಯುತ್ತಾರೆ. ಅವ್ವನ ಪತ್ರ ಬಂದೀತು. ಅವಳು ಗೋಕರ್ಣಕ್ಕೆ ಶಿವರಾತ್ರಿಯ ಮುಡಿಪು ಕೇಳಿದರೆ ಅವಳು ಕೇಳಿದಷ್ಟು ಹಣ ಕೊಡು. ನಮ್ಮ ಸ್ವಂತ ಕಾರನ್ನು ಸರ್ವಿಸ್ ಮತ್ತು ರಿಪೇರಿ ಮಾಡಿಸಿಡು. ನಾನು ಎಂದು ಬರುತ್ತೇನೆ ಗೊತ್ತಿಲ್ಲ. ನಾನು ನಿನಗೆ ತಿಳಿಸುವವರೆಗೆ ಯಾರಿಗೂ ಅಪಾಯಿಂಟ್‌ಮೆಂಟ್ ಕೊಡಬೇಡ".

ಶ್ರಿಕಾಂತ ತಿರುಗಿ ನೋಡದೇ ಯಾಂತ್ರಿಕವಾಗಿ ಶ್ರಿಮತಿಗೆ ಕೆಲಸಗಳನ್ನು ಹೇಳಿದ. ಅವನ ಈ ಮಾತು

ಕೇಳಿ ಶ್ರೀಮತಿ ಜ್ವಾಲಾಮುಖಿಯಂತೆ ಸಿಡಿದೆದ್ದಳು. ಕಳೆದ ಹಲವಾರು ದಿನಗಳಿಂದ ಲಡಾಖಿಗೆ ಹೋಗುವುದೆಂದು ಅವಳು ಎಷ್ಟೊಂದು ಸಂಭ್ರಮದಲ್ಲಿದ್ದಳು! ಶ್ರೀಕಾಂತ ಕೇವಲ ಅವಳಿಗಾಗಿ ರಜೆ ತೆಗೆದುಕೊಳ್ಳುತ್ತೇನೆ ಅಂದಾಗ ಮರುಭೂಮಿಯಲ್ಲಿ ವಿಹರಿಸುವ ಅವಳಿಗೆ 'ಓಯಸಿಸ್' ಕಂಡಂತೆ ಆನಂದವಾಗಿತ್ತು. ಒಣಗಿಹೋದ ಅವಳ ಮನವು ತಾತ್ಕಾಲಿಕವಾಗಿ ಚಿಗಿತಿತ್ತು. ಇಲ್ಲ, ಶ್ರೀಕಾಂತ ತಾನು ತಿಳಿದಂತೆ ಅಷ್ಟೊಂದು ಯಾಂತ್ರಿಕನಾಗಿಲ್ಲ. ತನಗಾಗಿ ಅವನು ಇನ್ನೂ ವೇಳೆ ಇರಿಸಿದ್ದಾನೆಂಬ ಸಮಾಧಾನ ಮೂಡಿತ್ತು. ಆದರೆ ಇಂದಿನ ಅವನ ಈ ಮಾತು ಈ ವರ್ತನೆ ಮತ್ತೆ ಅವಳನ್ನು ನಿರಾಶೆಯ ಕೂಪಕ್ಕೆ ತಳ್ಳಿದವು. ಮನವು ಸೋಲಿನಿಂದ ಸಿಡಿದೆದ್ದಿತು. ಇಲ್ಲ ಶ್ರೀಕಾಂತ ಅವಳಿಗಾಗಿ ಇಲ್ಲ ಕೇವಲ ಅವನಿಗಾಗಿಯೇ ಇದ್ದಾನೆ. ಅತ್ಯಂತ ಸ್ವಾರ್ಥಿಯಾಗಿ ಕೇವಲ ತನ್ನ ಕೆಲಸಕ್ಕಾಗಿ ತನ್ನನ್ನು ಉಪಯೋಗಿಸುತ್ತಾನೆ. ಅದು ಅವನ ಸ್ವಭಾವವಾಗಿದೆ. ಶ್ರೀಮತಿ ಅವನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡದೆ ಕೋಪದಿಂದ ಅವನ ಎದುರಿಗೆ ಬಂದು ನಿಂತಳು.

"ಶ್ರೀ, ಇಂದು ನೀನು ಎಲ್ಲಿಗೂ ಹೋಗುವ ಹಾಗಿಲ್ಲ. ಎಂದಾದರೂ ನಾನು ಒಬ್ಬ ಮನುಷ್ಯಳು, ನನಗೂ ಭಾವನೆಗಳಿವೆ ಎಂದು ವಿಚಾರ ಮಾಡಿರುವೆಯಾ? ನೀನು ನಿನ್ನ ಮರ್ಯಾದೆಯ, ನಿನ್ನ ಸ್ಥಾನದ ನಿನ್ನ ತಾಯಿಯ ವಿಚಾರ ಮಾತ್ರ ಮಾಡುತ್ತಿ? ನಾನಿಲ್ಲಿರುವೆ, ಕೇವಲ ನಿನಗಾಗಿ, ನಿನ್ನ ದಾರಿ ಕಾಯುತ್ತ ಇರುವೆ ಎನ್ನುವ ವಿಚಾರವೂ ನಿನ್ನಲ್ಲಿ ಸುಳಿಯುವುದಿಲ್ಲ. ನೀನು ಒಂದು ತಿಂಗಳು ಊರಿಗೆ ಹೋದರೆ ನೀನಿಲ್ಲದಾಗ ನಿನ್ನ ಅತಿಥಿಗಳನ್ನು ನಿನ್ನ ಸಮಾಧಾನ ಅಂತಸ್ತುಗಳಿಗೆ ತಕ್ಕಂತೆ ಉಪಚಾರ ಮಾಡುತ್ತ ಕೂಡಲು,ನಿನ್ನ ಕಾಗದ ಪತ್ರ ನೋಡಲು ನಾನೇನು ನಿನ್ನ ಸೆಕ್ರೆಟರಿಯಲ್ಲ, ಕರಣಿಕಳಲ್ಲ. ನಾನು ನಿನ್ನ ಪತ್ನಿ. ಎಲ್ಲರಿಗೂ ಅಪಾಯಿಂಟ್‌ಮೆಂಟ್ ಕೊಡುತ್ತಿ. ನನಗೆ ಇಲ್ಲವೇ? ನನಗಾಗಿ ನಿನ್ನ ಯಾವುದೇ ಕರ್ತವ್ಯವಿಲ್ಲವೇ? ನೀನು ಮಾನಸಿಕವಾಗಿ ದೈಹಿಕವಾಗಿ ದಿನದ ಇಪ್ಪತ್ತುನಾಲ್ಕು ಗಂಟೆಗಳನ್ನು ನಿನಗಾಗಿ ನಿನ್ನ ಕಂಪ್ಯೂಟರಿಗಾಗಿ ಕಳೆಯುತ್ತಿ. ನನಗಾಗಿ ಏನು ಮಾಡುತ್ತಿ? ಸುಳ್ಳು ಆಶ್ವಾಸನೆ ಕೊಟ್ಟು ಅದನ್ನು ನಂಬುವಂತೆ ಮಾಡುತ್ತಿ. ನಿಮ್ಮ ತಾಯಿಗೆ ಹಣ ಕಳಿಸಲು ನಾನು ಪೋಸ್ಟ್ ಆಫೀಸ್ ಅಲ್ಲ, ಬ್ಯಾಂಕ್ ಅಲ್ಲ. ಅವರು ನಿನ್ನಿಂದ ತಾನೇ ಸಂಬಂಧ! ನೀನೆ ಸಂಬಂಧವಿಲ್ಲದಂತೆ ಇರುವಾಗ ಅವರೆಲ್ಲಿಂದ ಸಂಬಂಧ? ಶ್ರೀ, ಈಗ ಹೇಳು ಇಂದೇ ಒರೆಗಲ್ಲಿಗೆ ಹಚ್ಚು. ನಾನು ಹೆಚ್ಚೋ, ನಿನ್ನ ಕೆಲಸ ಹೆಚ್ಚೋ? ಮನುಷ್ಯನ ನಿಜವಾದ ಮೌಲ್ಯಗಳು ಅವನ ಕ್ರಿಟಿಕಲ್ ವೇಳೆಯಲ್ಲಿಯೇ ತಿಳಿಯುತ್ತವೆ. ಇಂದು ಇದರ ನಿರ್ಧಾರವಾಗಲೇಬೇಕು. ನೀನು ಇದರ ಉತ್ತರವನ್ನು ಈ ಕ್ಷಣದಲ್ಲಿಯೇ, ಇಲ್ಲಿಯೇ ನಿರ್ಧರಿಸು".

"ಶ್ರೀಮತಿ, ಇಂಥ ಅವಿವೇಕದ ಪ್ರಶ್ನೆಗೆ ನಾನು ಉತ್ತರಿಸಲಾರೆ. ನಾನು ಇಷ್ಟೆಲ್ಲ ಕೆಲಸ ಮಾಡುವುದು ಕೇವಲ ನಿನಗಾಗಿ, ನಮಗಾಗಿ. ನನಗೂ ಉದ್ಯೋಗವಿದೆ, ಆತಂಕವಿದೆ. ನನಗೆ ಈ ಪ್ರವಾಸವು ಅನೈತಿಕವಾದರೂ ಅತ್ಯಗತ್ಯವಿದೆ. ಅತುಲ ಶರ್ಮಾ ನಾನಿಲ್ಲದಾಗ ಬಂದರೆ ಅವರನ್ನು ನೋಡಿಕೊಳ್ಳುವುದು ಗೃಹಿಣಿಯಾದ ನಿನ್ನ ಕರ್ತವ್ಯವಾಗಿದೆ. ನೀನು ಭಾವನೆಗಳನ್ನು ಕೆರಳಿಸಿಕೊಂಡು ಇಂಥ ನಿರುಪಯೋಗಿ ಪ್ರಶ್ನೆಗಳನ್ನು ಹಾಕಿ ನಿನ್ನ ವೇಳೆಯನ್ನು ಅಪವ್ಯಯ ಮಾಡುವದಷ್ಟೇ ಅಲ್ಲ, ಅಮೂಲ್ಯವಾದ ನನ್ನ ವೇಳೆಯನ್ನೂ ಅಪವ್ಯಯ ಮಾಡುತ್ತಿರುವೆ. ನನಗೆ ಇನ್ನೂ ಸಾವಿರಾರು ಕೆಲಸಗಳಿವೆ. ವಿಮಾನದ ಹೊತ್ತಾಗುತ್ತ ಬಂತು ಶ್ರೀಮತಿ ದಾರಿ ಬಿಡು".

ನಿರಾಶೆಯಿಂದ, ನಿಸ್ಸಹಾಯಕತೆಯಿಂದ ಶ್ರೀಕಾಂತನ ಕೆಟ್ಟ ಉತ್ತರದಿಂದ ಶ್ರೀಮತಿ ಮನಸ್ಸಿನ ಸಮತೋಲನ ಕಳೆದುಕೊಂಡಳು. ಅವಳೆಷ್ಟು ದಿನ ಇಂಥ ಅಶಾಂತಿಯಲ್ಲಿ ಬೇಯಬೇಕು? ನಿರಾಶೆಯಲ್ಲಿ ತೊಳಲಬೇಕು? ಈ ಮದುವೆಯಲ್ಲಿ ಅವನದೂ ಪಾಲಿದೆ. ಅವನಿಗೂ ಈ ಸಂಸಾರದ ಅಶಾಂತಿಯ ಝಳ ತಟ್ಟಲಿ ಎಂದುಕೊಂಡಳಾಕೆ.

"ಶ್ರೀ, ಇಂದು ನಿನ್ನದು ಯಾವುದೇ ಕೆಲಸವಿದ್ದರೂ ಅದು ನನ್ನ ಮನಃಶಾಂತಿಗಿಂತ ಹಿರಿದಾದಲ್ಲ. ಇದೇನು ವಸತಿಗೃಹವಲ್ಲ-ನಿನಗೆ ಬೇಕಾದಾಗ ಬಂದು ಹೋಗಲು. ಬೇಕಾದಾಗ ನಾನು ನನ್ನ ಗೃಹಿಣೀ ಕರ್ತವ್ಯ ಮಾಡಬೇಕೆಂದೇ ನೀನು ಅಪೇಕ್ಷಿಸಿದರೆ ನೀನು ನಿನ್ನ ಗೃಹಸ್ಥ ಕರ್ತವ್ಯವನ್ನು ಮಾಡುತ್ತಿದ್ದೀಯಾ? ನಿನ್ನ ತಾಯಿ ಮನೆ ಹಿರಿಯರ ಕರ್ತವ್ಯ ಮಾಡುತ್ತಾರೆಯೇ? ಶ್ರೀ, ನಿನಗೆ ಸಂಬಳ ಕೊಡುವ ಕಂಪನಿಗೆ ಹೇಗೆ ದುಡಿದು ಋಣ ಸಂದಾಯ ಮಾಡುತ್ತೀಯೋ ಹಾಗೆಯೇ ಕೈ ಹಿಡಿದ ಪತ್ನಿಯ ಋಣ ಹೇಗೆ

ಮುಟ್ಟಿಸುತ್ತೀ ಹೇಳು? ಶ್ರೀ, ಏನೆನ್ನುವದನ್ನು ಇಂದು ನಿರ್ಧರಿಸಿಯೇ ತೀರಬೇಕು. ಇಲ್ಲವಾದರೆ ನಾನು ಇನ್ನು ಇಲ್ಲಿರುವದಿಲ್ಲ".

ಶ್ರೀಮತಿ ಹಟದಿಂದ ಅವನ ಕೈ ಹಿಡಿದಳು. ಅವಳ ಈ ವರ್ತನೆ ಶ್ರೀಕಾಂತನಿಗೆ ಆಶ್ಚರ್ಯ ತಂದಿತು. ಕೈಯಲ್ಲಿ ವಾಚು ಆಗಲೇ ಅರ್ಧಗಂಟೆಯಾಗಿದೆ ಮನೆಗೆ ಬಂದು ಎಂದು ಸೂಚಿಸುತ್ತಿತ್ತು. ಇಲ್ಲಿಯೇ ಈ ರಸಕಸಿ ವಾಗ್ವಾದದಲ್ಲಿ ನಿರರ್ಥಕವಾಗಿ ವೇಳೆ ಕಳೆದರೆ ಇನ್ನೂ ಆಫೀಸಿಗೆ ಹೋಗಿ ಮಾಡುವ ಕೆಲಸ, ಅಲ್ಲಿಂದ ದಿಲ್ಲಿಯ ವಿಮಾನದ ವೇಳೆ ಎಲ್ಲವೂ ತಪ್ಪೀತಲ್ಲಾ. ಇದರಿಂದ ಒಂದು ದಿನವೇ ನಷ್ಟವಾದೀತು. ಆತ ಶ್ರೀಮತಿಯ ಕೈ ಬಿಡಿಸುತ್ತ, "ಶ್ರೀಮತಿ, ನಾನು ಹೇಳಿದ್ದೆಲ್ಲ ಹೇಳಿಯಾಗಿದೆ. ನಿನ್ನ ಹಟಕ್ಕೆ ಉತ್ತರಿಸಲಾರೆ. ನಿನ್ನ ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ನಾನು ಬಂದ ಮೇಲೆ ಹೇಳುತ್ತೇನೆ. ಹಣಕಾಸಿನಲ್ಲಿ ಏನೂ ಕಡಿಮೆ ಮಾಡುತ್ತಿಲ್ಲ. ನನಗಿಂತ ನೀನು ಹೆಚ್ಚು ಬುದ್ಧಿಶಾಲಿಯಲ್ಲವೇ? ನಿನಗೆ ತಿಳಿದಂತೆ ನೀನು ಮಾಡು. ಸಧ್ಯ ನನಗೆ ಹೋಗಲು ದಾರಿ ಬಿಡು," ಎಂದ.

ಶ್ರೀಮತಿ ದಾರಿ ಬಿಟ್ಟಳು. ರೂಢಿಯಿಂದ. ದಿಗ್ಭ್ರಮೆಯಿಂದ ಶ್ರೀಮತಿ ಬಾಲ್ಕನಿಗೆ ಬಂದಳು. ಕಾರಿನಲ್ಲಿ ಏರುತ್ತಿದ್ದ ಶ್ರೀಕಾಂತನನ್ನು ನೋಡಿ ತನಗರಿಯದಂತೆ ತಿರಸ್ಕಾರದಿಂದ ಕೂಗಿದಳು.

"ಶ್ರೀ, ನಾನೂ ಒಂದು ತಿಂಗಳು ಊರಿನಲ್ಲಿ ಇರುವದಿಲ್ಲ".

ಅವನಿಗೆ ನೂರಕ್ಕೆ ನೂರರಷ್ಟು ಗೊತ್ತು, ಶ್ರೀಮತಿ ಹಾಗೆ ಹೇಳಿದರೂ ಅತ್ಯಂತ ಸಿನ್ಸಿಯರ್ ಆದ ಅವಳು ಕರ್ತವ್ಯ ಪ್ರಜ್ಞೆಯಿಂದ ಇಲ್ಲಿಯೇ ಇರುತ್ತಾಳೆ. ಇಂದು ತಾನು ಹೇಳಿದ ಕೆಲಸವನ್ನೂ ಮಾಡುತ್ತಾಳೆ ಎಂದು.

★

ಶ್ರೀಮತಿ ದುಃಖದಿಂದ ದಿಗ್ಭ್ರಮೆಯಿಂದ ಬಾಲ್ಕನಿಯಿಂದ ಸಮುದ್ರವನ್ನು ನೋಡಿದಳು. ಅವಳ ಮನಸ್ಸಿನ ದುಃಖದ ಸಮುದ್ರವು ಮೊರೆಯುತ್ತಿತ್ತು. ಅವಳು ಎಷ್ಟೇ ಕೂಗಿ, ಚೀರಿ, ಹಟ ಹಿಡಿದರೂ ಶ್ರೀಕಾಂತ ಶಾಂತವಾಗಿ ತನ್ನ ನಿರ್ಣಯ ಹೇಳಿಹೋಗಿದ್ದ. ಶ್ರೀಮತಿಯ ದುಃಖದ ಕಟ್ಟೆ ಒಡೆಯಿತು. ಅವಳು ಬಿಕ್ಕಿ ಬಿಕ್ಕಿ ಅತ್ತಳು. ತನ್ನ ಗುರಿ ಯಾವುದು? ತನ್ನ ಶ್ರದ್ಧೆ ಯಾವುದು? ತಾನು ಜೀವನದಲ್ಲಿ ಸಾಧಿಸಿದ್ದೇನು? ಶ್ರೀಕಾಂತನಿಗಾಗಿ ತಾನು ಮಾಡಿದ ತ್ಯಾಗದ ಬೆಲೆಯನ್ನು ಅವನು ಕಟ್ಟಲೇ ಇಲ್ಲವಲ್ಲ! ಯಾರಿಗಾಗಿ ಈ ಒದ್ದಾಟ? ಯಾರನ್ನು ಅವಳು ಗಾಢವಾಗಿ ಪ್ರೀತಿಸಿ, ಅವನಿಗಾಗಿ ಈ ಎಲ್ಲ ಕೆಲಸಗಳನ್ನು ಮಾಡುತ್ತಿದ್ದಳೋ ಅವನೇ ಉದಾಸೀನನಾಗಿದ್ದಾನೆ ಆದಮೇಲೆ ಅವಳ ದಾರಿ ಈಗ ಯಾವುದು?

ಕಾಲ ಸರಿದಂತೆ ಶ್ರೀಕಾಂತ ತನ್ನ ರಂಗದಲ್ಲಿ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾಗುವನು. ಅವಳೇನು ಆಗಬಲ್ಲಳು? ಏನೂ ಇಲ್ಲ. ಕೇವಲ ಶ್ರೀಕಾಂತನ ಪತ್ನಿ. ಬೇರೆ ಯಾವುದೇ ಸ್ವತಂತ್ರ ವ್ಯಕ್ತಿತ್ವ ಅವಳಿಗಿಲ್ಲ. ಇಂಥದನ್ನು ಅವಳು ಊಹಿಸಿದಾಗ ಮತ್ತೆ ಕಣ್ಣು ತುಂಬಿಬಂದವು. ಪತಿಯ ಅಧಿಕಾರ ಸ್ಥಾನಮಾನದಿಂದ ಮೇಲೆ ಏರುವ ಪತ್ನಿಯ ಪರಾವಲಂಬೀ ಪಾತ್ರವನ್ನು ಅವಳು ಎಂದಿನಿಂದಲೂ ದ್ವೇಷಿಸುತ್ತಿದ್ದಳು. ಪರ ಪ್ರಕಾಶದಿಂದ ಮಿನುಗುವ ಗ್ರಹದಂತೆ. ಸ್ವಪ್ರಕಾಶದಿಂದ ಬೆಳಗುವ ನಕ್ಷತ್ರವೆಲ್ಲಿ, ಈ ಗ್ರಹವೆಲ್ಲಿ? ಶ್ರೀಮತಿಗೆ ಅದಕ್ಕಿಂತ ಸಾವೇ ಸಾವಿರಪಾಲು ಉತ್ತಮ ಎನಿಸಿತು. ಅದರೊಂದಿಗೆ ಅವಳಿಗೆ ಹಿಂದಿನ ನೆನಪುಗಳು ಮತ್ತೆ ಮತ್ತೆ ನುಗ್ಗಿ ಬರುತ್ತಿವೆ. ಅವಳು ಶ್ರೀಕಾಂತನಿಗಿಂತ ಹೆಚ್ಚು ಕುಶಾಗ್ರಮತಿ ಎನ್ನುವುದರಲ್ಲಿ ಸಂಶಯವೇ ಇರಲಿಲ್ಲ. ಆದರೆ ನಿಜ ಜೀವನದಲ್ಲಿ ಅವಳು ಸಾಧಿಸಿದ್ದಾದರೂ ಏನು? ಏನೂ ಇಲ್ಲ. ಬರಿಯ ಶೂನ್ಯ. ಅವರಿಗೆ ಮಕ್ಕಳು ಆಗಿದ್ದರೆ ಇಂಥ ಪ್ರಸಂಗ ಬರುತ್ತಿರಲಿಲ್ಲವೆಂದಲ್ಲ, ಬಂದರೂ ಕೇವಲ ಮಕ್ಕಳಿಗಾಗಿ ಎಂದು ಬದುಕುವ ಆಸೆ ಇರುತ್ತಿತ್ತಲ್ಲ. ಇಂಥ ನೀರಸ, ನಿಷ್ಕ್ರಿಯ, ಪರಾವಲಂಬೀ ಬಾಳನ್ನು ಸವೆಸುವುದಕ್ಕಿಂತ ತನ್ನದೇ ಆದ, ಕೇವಲ ತಾನಾದರೂ ಸಂತೋಷ ಪಡುವಂತಹ ಬದುಕನ್ನು ಒಂಟಿಯಾಗಿದ್ದರೂ ಬಾಳಬೇಕು. ಕಾಲೇಜು ದಿನಗಳಲ್ಲಿ ಅವಳು ಅತ್ಯಂತ ಸುಸಂಸ್ಕೃತ ಪ್ರತಿಭಾನ್ವಿತ ವಿದ್ಯಾರ್ಥಿನಿ ಎಂದೇ ಹೆಸರುಗಳಿಸಿದ್ದಳು. ಬಿ.ಎ. ಮತ್ತು ಎಂ.ಎ. ಪದವಿಗಳಲ್ಲಿ ಎರಡು ಚಿನ್ನದ ಪದಕಗಳನ್ನೂ ಗಳಿಸಿದ್ದಳು. ಪ್ರೊ॥ ಮೈಕ್ ಕಾಲಿನ್ಸ್‌ರೂ ಅವಳಿಗೆ ಶಿಷ್ಯವೃತ್ತಿ ನೀಡಿ ಆಹ್ವಾನಿಸಿದ್ದರು. ಶ್ರೀಮತಿ ಅವನ್ನೆಲ್ಲಾ ನಿರ್ಲಕ್ಷಿಸಿದ್ದಳು. ಶ್ರೀಕಾಂತನ ಮೇಲಿನ ಅಪರಿಮಿತ

ಪ್ರೇಮದಿಂದ ಅದನ್ನೆಲ್ಲ ತಿರಸ್ಕರಿಸಿದ್ದಳು. ಅವಳು ಕುಶಾಗ್ರಮತಿಯಾದರೂ ಮಹತ್ವಾಕಾಂಕ್ಷಿಯಾಗಿರಲಿಲ್ಲ. ಅಕಸ್ಮಾತ್ ಅವಳು ಆ ದಾರಿಯಲ್ಲಿಯೇ ಮುಂದುವರೆದಿದ್ದರೆ ಅವಳೀಗ ಉತ್ತಮ ಇತಿಹಾಸಕಾರ್ತಿಯಾಗಿರುತ್ತಿದ್ದಳು ಎನ್ನುವುದರಲ್ಲಿ ಸಂಶಯವೇ ಇರಲಿಲ್ಲ.

ಎಷ್ಟಾದರೂ ರಕ್ತವು ನೀರಿಗಿಂತ ಹೆಚ್ಚು ಗಟ್ಟಿ ಉಳ್ಳದ್ದರಿಂದ ಶ್ರೀಕಾಂತನಿಗೆ ತನ್ನ ಮನೆಯವರ ತಪ್ಪು ಯಾವುದೂ ಕಾಣುವುದಿಲ್ಲ. ಶ್ರೀಕಾಂತನ ಪ್ರೇಮವು ಕಾಲಾಂತರದಲ್ಲಿ ಮಾಯವಾದಾಗ, ಅವನ ಮನೆಯವರು ತನ್ನನ್ನು ಎಂದೂ ಪ್ರೀತಿಸುವುದಿಲ್ಲ ಎಂದಾಕೆಗೆ ಮನವರಿಕೆಯಾದಾಗ ಆವಿಯಾದ ನೀರು ಉಳಿಸುವ ಖಾಲಿ ಬಟ್ಟಲಂತೆ ಅವಳಿಗೆ ತನ್ನ ಭವಿಷ್ಯ ಜೀವನದ ಭೀಕರತೆಯ ಕಲ್ಪನೆ ಬರುತ್ತಿತ್ತು. ಗಂಗಕ್ಕ ಮಗಳಿಗೆ ಐದುನೂರು ರೂಪಾಯಿಯ ಸೀರೆ ತಂದರೂ, ಸೊಸೆಗೆ ಎರಡು ರೂಪಾಯಿಯ ಬ್ಲೌಜ್‌ಪೀಸು ಸಹ ತರುವುದಿಲ್ಲ. ಉಡುಗೊರೆಯೆಂದರೆ ಹಣವಲ್ಲ, ಅದರ ಹಿಂದೆ ಇರುವ ಪ್ರೇಮದ ಭಾವನೆ. ಗಂಗಕ್ಕ ಶ್ರೀಮತಿಯ ಐಶ್ವರ್ಯವನ್ನು ಕಂಡು ಕರುಬುತ್ತಾಳೆಯೇ ಹೊರತು ಸೊಸೆಯ ಏಕಾಂಗಿತನದ ನೀರಸ ಬಾಳನ್ನು ನೆನೆಯುವುದಿಲ್ಲ. ಶ್ರೀಕಾಂತನೇ ಅವಳ ಭಾವನೆಗೆ ಬೆಲೆ ಕೊಡದಿರುವಾಗ ಯಾರಿಂದಲೇನು ಆಗಬಹುದು?

ಶ್ರೀಮತಿ ಮತ್ತೆ ತನ್ನೊಳಗೆ ವಿಚಾರ ಮಾಡುತ್ತಿದ್ದಳು. ಶ್ರೀಕಾಂತ ಅವಳಿಗೆ "ನಿನಗೆ ತಿಳಿದಂತೆ ಮಾಡು" ಎನ್ನುವದರ ಜೊತೆ "ನೀನು ನನಗಿಂತ ಹೆಚ್ಚು ಬುದ್ಧಿಶಾಲಿಯಲ್ಲವೇ?" ಎಂದು ನಂಜು ನುಡಿದಿದ್ದ. ಶ್ರೀಮತಿ ಇಂದಿನವರೆಗೆ ಆ ರೀತಿ ಶ್ರೀಕಾಂತನಿಗೆ ಎಂದೂ ಅಂದಿರಲಿಲ್ಲ. ತೋರಿಸಿ ಕೊಟ್ಟಿರಲಿಲ್ಲ. ಏನು ತನ್ನ ಶ್ರೀಕಾಂತನೂ ಉಳಿದ ಪುರುಷರಂತೆ ಅವರಿಗಿಂತ ಬುದ್ಧಿಶಾಲಿಯಾದ ಪತ್ನಿಯನ್ನು ಹೀಯಾಳಿಸುತ್ತಾನೆಯೇ ಎನಿಸಿತು. ತಾನಿಲ್ಲಿ ಇರುವ ಹಾಗೆ ಇರದಿರುವಿನ ನಡುವಿನ ಅಂತರದತ್ತ ಶ್ರೀಕಾಂತ ಗಮನವನ್ನೇ ಹರಿಸುವುದಿಲ್ಲವೆಂದಾಗ ತಾನೇಕೆ ಇಂಥಲ್ಲಿ ಇರಬೇಕು? ಎಲ್ಲಿ ಅವಳ ಅಸ್ತಿತ್ವಕ್ಕೆಯೇ ಬೆಲೆ ಇಲ್ಲವೋ ಅಲ್ಲಿಯ ಬಾಳು ಬಾಳಲ್ಲ. ಇಲ್ಲಿಂದ ಎಲ್ಲಿಯಾದರೂ ಹೊರಟು ಹೋಗಬೇಕು. ಆದರೆ ಎಲ್ಲಿ? ಅವಳು ಹೊರ ಹೊರಟರೆ ಅವಳಿಗೆ ಮರ್ಯಾದೆಯಿದೆಯೇ? ಅವಳು ವಿದ್ಯಾರ್ಥಿನಿಯಾಗಿದ್ದಾಗ ಅವಳ ಬಾಳೆಷ್ಟು ಉದ್ದೇಶಪೂರ್ಣವಾಗಿತ್ತು. ಅವಳು ಹೊರಟರೆ 'ಇವಳೇ ನೋಡು, ಶ್ರೀಮತಿ ದೇಶಪಾಂಡೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿಯೇ ಅತಿ ಉತ್ತಮ ವಿದ್ಯಾರ್ಥಿನಿ' ಎಂದು ಉಳಿದವರು ಮಾತನಾಡುತ್ತಿದ್ದರೆ ಅವಳ ಒಳಮನಸ್ಸಿಗೆ ಸಂತೋಷವಾಗದೇ ಇರುತ್ತಿರಲಿಲ್ಲ. ಹೌದು, ಅವಳು ಮತ್ತೆ ವಿದ್ಯಾರ್ಥಿನಿಯಾಗಬೇಕು. ಆ ಜೀವನಕ್ಕಾಗಿ ಶ್ರದ್ಧೆಯಿಂದ ದುಡಿಯಬೇಕು. ಉತ್ತಮ ಪ್ರಬಂಧಗಳನ್ನು ಬರೆಯಬೇಕು. ಆ ಬಾಳನ್ನು ಆಕೆ ಮತ್ತೆ ಮತ್ತೆ ನೆನೆಯುತ್ತಿದ್ದಳು. ಇಂದಿಗೂ ಅವಳ ಇತಿಹಾಸ ಪ್ರೇಮವು ಮಾಯವಾಗಿಲ್ಲ. ಭಾರತದ ಸಮಗ್ರ ಇತಿಹಾಸವು ಅವಳ ಬಾಯಿಯಲ್ಲಿಯೇ ಇದೆ. ಆರ್ಯ, ದ್ರಾವಿಡರಿಂದ ಬ್ರಿಟಿಶರವರೆಗೆ, ಅಲೆಕ್ಸಾಂಡರನಿಂದ ಡಾಲ್‌ಹೌಸಿಯವರೆಗಿನ ದಂಡಯಾತ್ರೆಗಳು ಅವಳ ಕಣ್ಣ ಮುಂದೆ ಇದೆ. ಯಾವುದು ಇತಿಹಾಸ, ಯಾವುದು ಪುರಾಣ ಎಂದು ಅವಳು ಕನಸಿನಲ್ಲಿಯೂ ವಿಂಗಡಿಸುವ ಸಾಮರ್ಥ್ಯವುಳ್ಳವಳು. ಈಗ ಮತ್ತೆ ಆ ಜೀವನಕ್ಕಾಗಿ ಕೇವಲ ತನಗಾಗಿ ಆಕೆ ಇನ್ನೂ ದುಡಿಯಬೇಕು.

ಶ್ರೀಮತಿಗೆ ಮೈಕ್ ಕಾಲಿನ್ಸ್‌ರ ನೆನಪೂ ಬಂದಿತು. ಸೂಕ್ಷ್ಮವಾಗಿ ಅವಳ ಜೀವನವನ್ನು ನೋಡಿದ ಅವರಿಗೆ ಅವಳ ನಿರಾಶೆಯ ಅರ್ಥವೂ ಆಗಿರಬಹುದು. ಅವರಿಗೆ ಕಾಗದ ಹೇಗೆ ಬರೆಯಬೇಕು? ಕೊನೆಗೆ ದೃಢ ಮನಸ್ಸಿನಿಂದ ಮೈಕ್ ಕಾಲಿನ್ಸ್‌ರಿಗೆ ಬರೆಯುವಾಗ ಪತ್ರವು ಎರಡು ಪುಟಗಳನ್ನು ಮೀರಿತು. ಅವಳು ಕಾಗದದಲ್ಲಿ:

"ನಿಮ್ಮಂಥವರ ಕೈಯಲ್ಲಿ ಕಲಿಯುವುದು ನನ್ನ ಭಾಗ್ಯವೇ. ಈ ಬಾರಿ ನೀವು ಹಿಂದೆ ಹೇಳಿದ ಅಧ್ಯಯನವನ್ನು ಮಾಡಲು ಸಿದ್ಧಳಿದ್ದೇನೆ. ಬುದ್ಧಿಶಾಲಿಗಳೊಂದಿಗೆ ಬೆರೆತು ಮತ್ತೆ ಉತ್ತಮ ವಿದ್ಯಾರ್ಥಿನಿಯಾಗಲು ಪ್ರಯತ್ನಿಸುತ್ತೇನೆ.

ಆದರೆ ಸರ್, ನನ್ನದೊಂದು ಬಯಕೆ. ಆರ್ಥಿಕ ಸ್ವಾತಂತ್ರ್ಯ ಇಲ್ಲದಿದ್ದರೆ ಅದು ನಿಜವಾದ ಸ್ವಾತಂತ್ರ್ಯವಲ್ಲ. ಆದ್ದರಿಂದ ಮುಂದಿನ ಅಧ್ಯಯನ ಮುಂದುವರೆಸಲು ನನಗೆ ಶಿಷ್ಯವೃತ್ತಿಯ ಅವಶ್ಯಕತೆ ಇದೆ. ನೀವು ಯಾವ ವಿಚಾರಕ್ಕೂ ಕಾಗದ ಬರೆಯಿರಿ.

ನಿಮ್ಮ ಕಾಗದದ ನಿರೀಕ್ಷೆಯಲ್ಲಿರುವ,

ನಿಮ್ಮ ವಿದ್ಯಾರ್ಥಿನಿ,
ಶ್ರೀಮತಿ.

ಕಾಗದವನ್ನು ಅವಳೇ ಹೋಗಿ ಪೋಸ್ಟ್ ಮಾಡಿ ಬಂದಳು.

ಕಳೆದ ಒಂದು ತಿಂಗಳಿಂದ ಶ್ರೀಮತಿಯ ಚಿತ್ತ ಸ್ವಸ್ಥವಾಗಿಲ್ಲ. ಪ್ರೊ|| ಮೈಕ್ ಕಾಲಿನ್ಸರು ನಿಜವಾಗಿಯೂ ಶಿಷ್ಯವೃತ್ತಿಯನ್ನು ಕೊಡಿಸುವರೇ? ಹತ್ತು ವರ್ಷಗಳ ನಂತರ ಅವಳು ವಿದ್ಯಾರ್ಥಿನಿಯಾಗಲು ಬಯಸಿರುವುದರಿಂದ ಹೊಸ ವಿದ್ಯಾರ್ಥಿಗಳ ನಡುವೆ ಪ್ರವೇಶ ಸಿಗಬಲ್ಲದೆ? ಸಿಕ್ಕರೂ ಮುಂಚಿನಂತೆ ಅವಳ ಮನಸ್ಸು ಕೇವಲ ಓದಿನಲ್ಲಿಯೇ ಕೇಂದ್ರೀಕೃತವಾಗಬಲ್ಲದೇ? ಈ ನಿರ್ಣಯವನ್ನು ತಾನು ಕೋಪದಲ್ಲಿ ತೆಗೆದುಕೊಂಡಾಗಿದೆಯೇ? ನಿಜವೆ? ಸರಿಯೆ? ಹೀಗೆ ನೂರಾರು ಪ್ರಶ್ನೆಗಳು ಅವಳ ತಲೆಯಲ್ಲಿ ಏಳುತ್ತವೆ. ಪ್ರತಿದಿನ ಕಾಲಿನ್ಸ್‌ರ ಉತ್ತರದ ದಾರಿಯನ್ನು ಆತಂಕದಿಂದ ಕಾಯುತ್ತಿದ್ದಳು. ಕಾಲಿನ್ಸ್‌ರು ಏಕೆ ಉತ್ತರ ಬರೆದಿರಲಿಕ್ಕಿಲ್ಲ? ಬಹುಶಃ ಅಪ್ರಿಯವಾದ ಉತ್ತರ ಬರೆಯುವ ಬದಲು ಸುಮ್ಮನಿರಬಹುದೇ? ಅಥವಾ ತನ್ನ ಕಾಗದವೇ ಅವರಿಗೆ ತಲುಪಿರಲಿಕ್ಕಿಲ್ಲವೇ? ಹೀಗೆ ಅನೇಕ ಶಂಕೆಗಳೂ ಅವಳಲ್ಲಿ ಬಂದು ಅವಳನ್ನು ಮತ್ತಷ್ಟು ನಿರ್ವೀರ್ಯಳನ್ನಾಗಿಸುತ್ತಿದ್ದವು.

ಒಂದು ದಿನ ಮಾನಸಿಕವಾಗಿ ಇಂಥ ಸ್ಥಿತಿಯಲ್ಲಿದ್ದಾಗ ಕೆಲಸದ ಹುಡುಗಿ ಚಂಪಾ ಅವಳಿಗೆ ಕಾಗದ ಒಂದನ್ನು ತಂದು ಕೊಟ್ಟಳು. ಅದು ಕಾಲಿನ್ಸ್‌ರ ಕಾಗದ. ಶ್ರೀಮತಿ ಅತ್ಯಾತುರದಿಂದ ತೆಗೆದು ಓದಿದಳು.

"ನಿನ್ನಂಥ ಮೇಧಾವಿಯು ವಿದ್ಯಾರ್ಥಿನಿಯಾಗಲು ಬಯಸುವುದು ಅತ್ಯಂತ ಸಹಜವೇ. ನಿನಗೆ ನಿಂಚಿತ ಶಿಷ್ಯವೃತ್ತಿ ಸಿಗುತ್ತದೆ. ಅದಕ್ಕೆ ನಾನೇ ಶಿಫಾರಸು ಪತ್ರ ಬರೆದಿರುವೆ. ಹಳೆಯ ಜ್ಞಾನವೆಂದು ಹಿಂದೆ ಬರೆದಿರುವ ಪ್ರಬಂಧಗಳನ್ನು ಎಸೆಯದೇ ತೆಗೆದುಕೊಂಡು ಬಾ. ನೀನು ಹೊಂದಿಕೊಂಡು ಹೋಗುವ ವರೆಗೆ ನಿನಗೆ ನನ್ನ ಮನೆಯಲ್ಲಿ ಸುಸ್ವಾಗತ.

ನಿನ್ನಂಥ ಏಕಾಗ್ರಚಿತ್ತದ ವಿದ್ಯಾರ್ಥಿನಿ, ವಯೋವೃದ್ಧನಾದ ನನಗೆ ಸಂಶೋಧನೆಯಲ್ಲಿ ಸಹಾಯ ಮಾಡಲು ಸಿಗುತ್ತಾಳೆಂದರೆ ನಾನೇ ಭಾಗ್ಯಶಾಲಿ ಎಂದು ತಿಳಿಯುವೆ. ಶ್ರೀಮತಿ, ವಿದ್ಯೆಗೆ ವಯಸ್ಸಿನ ಪರಿಮಿತಿ ಇಲ್ಲ. ಅದನ್ನು ಗಳಿಸುವ ದಾಹ ಬೇಕಷ್ಟೇ. ಆದ್ದರಿಂದ ನಿನಗಾವ ಶಂಕೆಯೂ ಬೇಡ.

ನನಗೆ ಮೈಯಲ್ಲಿ ಸರಿ ಇಲ್ಲದ್ದರಿಂದ ಕಾಗದ ಬರೆಯಲು ತಡವಾಯಿತು. ನೀನು ಬಂದ ನಂತರ Assistantship ಅನ್ನು Fellowship ಆಗಿ ಪರಿವರ್ತಿಸಬಹುದು.

ನೀನು ಯಾವುದಕ್ಕೂ ಕಾಗದ ಬರೆ.

ನಿನ್ನ ಮೈಕ್.

ಶ್ರೀಮತಿ ಕಾಗದವನ್ನು ಸಂಭ್ರಾಂತಳಾಗಿ ಮತ್ತೆ ಮತ್ತೆ ಓದುತ್ತಿದ್ದಳು. ಕಣ್ಣಿನಿಂದ ನಂಬಲಾಗದಂತಹ ಸತ್ಯವು ಅವಳೆದುರಿಗಿದೆ. ಯಾವುದನ್ನು ಒಂದು ಕಾಲದಲ್ಲಿ ಮನಃಪೂರ್ವಕವಾಗಿ ಪ್ರೀತಿಸುತ್ತಿದಳೋ ಅದನ್ನು ಮತ್ತೆ ಕಲಿಯಲು ಅವಳಿಗೆ ದೈವವು ಬಾಗಿಲು ತೆರೆದು ನಿಂತಂತೆ ಅನಿಸಿತು. ಆದರೆ ಈ ಸಲದ ನಿರ್ಧಾರ ಕೇವಲ ಬುದ್ಧಿವಂತಿಕೆಯಿಂದಲೇ ಆಗಬೇಕೆ ಹೊರತು ಹೃದಯದಿಂದಾಗಲೀ ಭಾವನೆಯಿಂದಾಗಲೀ ಆಗಬಾರದೆಂದು ಶ್ರೀಮತಿ ಯೋಚಿಸುತ್ತಿದ್ದಳು.

ಈಗೀಗ ಶ್ರೀಮತಿ ಕನಸು ಕಾಣುವಳು. ಅವಳು ವಿಶ್ವವಿದ್ಯಾಲಯದಲ್ಲಿ ನಿಂತಿದ್ದಾಳೆ. ಸುತ್ತಮುತ್ತಲೂ ಪುಸ್ತಕಗಳ ರಾಶಿಯೇ ರಾಶಿ. ಎಲ್ಲೆಲ್ಲಿಯೂ ವಿದ್ಯಾರ್ಥಿಗಳು, ವಯೋವೃದ್ಧ, ಜ್ಞಾನವೃದ್ಧರಾದ ಪ್ರಾಧ್ಯಾಪಕರು. ಅಲ್ಲಿ ಕೇವಲ ಜ್ಞಾನಕ್ಕೆ ಮಹತ್ವವಿದೆ. ಅಲ್ಲಿ ಸುಳ್ಳು ಮಾತು, ಡಂಭಾಚಾರ, ಹಣ, ವ್ಯಾವಹಾರಿಕ ಮಾತಿಗೆ ಬೆಲೆಯಿಲ್ಲ. ಅವಳು ಮತ್ತೆ ಸೆಮಿನಾರ್ ಮಾಡುತ್ತಾಳೆ. ಆಹಾ ಅದೆಷ್ಟು ಸುಂದರ ಜೀವನ! ಈ ಬಗ್ಗೆ ಹಿಂದೆ ಅವಳೆಂದೂ ಈ ವಿಚಾರವನ್ನೇ ಮಾಡಿರಲಿಲ್ಲ. ಯಾಕೆ ಮಾಡಿರಲಿಲ್ಲ?.

ಜೀವನದಲ್ಲಿ ಯಾವುದು ಶಾಶ್ವತ? ಸೌಂದರ್ಯವೆ? ಅಧಿಕಾರವೆ? ಯಾವುದು ನಿರಂತರ? ಯಾವುದರಿಂದ ಮನವು ತೃಪ್ತಿಯಾಗಿ ಆನಂದ ಪಡೆಯುವದೋ ಅದುವೇ ನಿಜವಾದ ಸಂಪತ್ತು. ಕಳೆದ ಅನೇಕ ವರ್ಷಗಳಿಂದ ಅವಳು ಅದರಿಂದ ವಂಚಿತಳಾಗಿದ್ದಾಳೆ. ಮೀನು ನೀರಿಗೆ ಇಳಿಯುವಂತೆ, ಇನ್ನು ಅವಳು ತನ್ನ ಸ್ಥಾನವನ್ನು ಸೇರುವಳು.

ಮರುಕ್ಷಣವೇ ಅವಳು ನಿರಾಶೆಯಿಂದ ಮುದುಡಿದಳು. ಅವಳು ಹೀಗೆ ಹೋದರೆ ಶ್ರೀಕಾಂತನನ್ನು ಯಾರು ನೋಡುವರು? ಅವನಿಗೆ ಮನೆಯ ಯಾವ ವಸ್ತುವಿನ ಪರಿಚಯವೂ ಇಲ್ಲ. ಹಣದ ಲೆಕ್ಕವೂ ಇರುವುದಿಲ್ಲ. ಚೆಕ್ ಸಹಿಮಾಡಿ ಎಲ್ಲಿಯಾದರೂ ಇಟ್ಟುಬಿಡುತ್ತಾನೆ. ಅವನಿಗೆ ಅನ್ನ ಸೇರುವುದಿಲ್ಲ. ತಾನು ಮಾಡುವುದು ಸರಿಯೆ? ತಪ್ಪೆ? ಎನ್ನುವ ದ್ವಂದ್ವದಿಂದ ತೊಳಲುವಳು. ಮನಸ್ಸು ಎರಡೂ ಕಡೆಗೆ ಎಳೆದರೂ ಅವಳು ಮತ್ತೆ ಮತ್ತೆ ಅದನ್ನು ದೃಢಮಾಡಿಕೊಳ್ಳುವಳು. ಅವಳದು ಮಾಡುವುದಾದರೂ ಏನು? ಶ್ರೀಕಾಂತ ತನ್ನ ಕೆಲಸದಲ್ಲಿ ಮಗ್ನನಾಗಿ ಪಡೆಯುವ ಆನಂದವನ್ನು ತಾನು ಪಡೆಯಲು ಯತ್ನಿಸುತ್ತೇನೆ. ಪ್ರಾಯಶಃ ಅವಳ ತಾಯಿಯಂತೆ ಅವಳ ಮನೋಭಾವವಿದ್ದರೆ ಈ ಪ್ರಸಂಗ ಬರುತ್ತಿರಲಿಲ್ಲವೇನೋ? ಅಥವಾ ಮಕ್ಕಳಿದ್ದರೆ ಇಂತಹ ವಿಭಿನ್ನ ಭಾವನೆಗಳು ಪರಸ್ಪರವಿದ್ದರೂ ಎದ್ದು ಕಾಣಲಾರದೇ ಮಕ್ಕಳಿಗಾಗಿ ಎಂದು ಮರೆತು ಹೋಗುವುದು. ಇನ್ನು ಕೆಲವರು ಪತಿಗಿಂತ ಹೆಚ್ಚು ಮಹತ್ವಾಕಾಂಕ್ಷಿಯಾಗಿ ಅವನ ಕೆಲಸದಲ್ಲಿ ಅಷ್ಟೇ ಸಕ್ರಿಯವಾಗಿ ಭಾಗವಹಿಸಿ ಅವನಿಗಿಂತ ಯಶಸ್ವಿಯಾದವರೂ ಇದ್ದಾರೆ. ಆದರೆ ಇದೆಲ್ಲ ಅವರವರ ವೈಯಕ್ತಿಕ ಜೀವನದ ಗುರಿಯ ಮೇಲೆ ಅವಲಂಬಿಸಿದೆಯಲ್ಲ. ಹೊರತು ಮತ್ತಾವ ಸ್ವಾರ್ಥದಿಂದಲೂ ಹೊರಗೆ ಹೋಗುತ್ತಿಲ್ಲ. ಕೇವಲ ತನ್ನ

ವ್ಯಕ್ತಿತ್ವಕ್ಕಾಗಿ ಹೋಗುತ್ತೇನೆ ಹೊರತು ಬೇರಾವ ಪ್ರಲೋಭನದಿಂದಲ್ಲ. ಎಲ್ಲರಿಗೂ ಅವರ ಶಕ್ತಿಯ ಸಹನೆಯ ಪರಿಮಿತಿ ಇರುತ್ತದೆ.

ಶ್ರೀಮತಿ ಇನ್ನು ತಾನು ಇದನ್ನೂ ಶ್ರೀಕಾಂತನಿಗೆ ಹೇಗೆ ಹೇಳಬೇಕು? ಎನ್ನುವ ವಿಚಾರದಲ್ಲಿ ಬಿದ್ದಳು. ಶ್ರೀಕಾಂತ, ನಿನ್ನೆ ಮನೆಗೆ ಬಂದಾಗಿನಿಂದಲೂ ಶ್ರೀಮತಿಯನ್ನು ಸರಿಯಾಗಿ ಗಮನಿಸಿಯೇ ಇಲ್ಲ. ರಾತ್ರಿ ಬಂದಾಗ ಬಹಳ ಹೊತ್ತಾಗಿತ್ತು. ಪ್ರವಾಸದ ದಣಿವೂ ಸೇರಿತ್ತು. ಶ್ರೀಮತಿ ಊಟದ ತಟ್ಟೆ ಇರಿಸಿದಾಗ "ಶ್ರೀಮತಿ ಊಟ ಬೇಡ ಫ್ಲೈಟಿನಲ್ಲಿ ಆಗಿದೆ. ಬರೀ ಹಾಲು ಸಾಕು" ಎಂದಿದ್ದ. ಶ್ರೀಕಾಂತ ಬೆಳಿಗ್ಗೆ ತನ್ನ ಆಫೀಸಿನ ತಯಾರಿಯಲ್ಲಿದ್ದಾಗ ಶ್ರೀಮತಿ ಕೇಳಿದಳು, "ಶ್ರೀಕಾಂತ ನಿನ್ನೊಡನೆ ಸ್ವಲ್ಪ ಮಾತನಾಡ ಬೇಕಾಗಿದೆ".

"ಶ್ರೀಮತಿ ನನಗೀಗ ವೇಳೆಯಿಲ್ಲ. ಸಂಜೆ ಮಾತನಾಡಿದರೆ ಆಗುವುದಿಲ್ಲವೆ?"

"ಸಂಜೆ ನೀನು ಬರುವದು ಬಹಳ ಹೊತ್ತಾದರೆ?"

"ಓಹ್, ನಾನು ಇಂದು ಬೇಗನೆ ಬರುವೆ".

ಶ್ರೀಕಾಂತ ಹೊರಟು ಹೋದ. ಶ್ರೀಮತಿ ಉದ್ವಿಗ್ನಳೂ ಅಧೀರಳೂ ಆದಳು. ಅವಳಿಂದು ತನ್ನ ಜೀವನದ ಮಹತ್ವದ ನಿರ್ಣಯವೊಂದನ್ನು ಅವನಿಗೆ ತಿಳಿಸಬೇಕಾಗಿದೆ. ತನ್ನ ವಿಚಾರಶಕ್ತಿಗೂ ಕ್ರಿಯಾಶಕ್ತಿಗೂ ವಿಷ್ಟು ಅಂತರವಿದೆಯೆಂದು ಶ್ರೀಮತಿ ಮತ್ತೆ ಅಧೀರಳಾದಳು.

ಶ್ರೀಕಾಂತ ಆಫೀಸಿನಿಂದ ತಿರುಗಿ ಬಂದಾಗ ಶ್ರೀಮತಿ ಸೋಫಾದ ಮೇಲೆ ವಿಚಾರ ಮಗ್ನಳಾಗಿದ್ದುದನ್ನು ಕಂಡರೂ ಆತ ತನ್ನ ಉತ್ಸಾಹದಲ್ಲಿ ಅದನ್ನು ಗಮನಿಸುವ ಸ್ಥಿತಿಯಲ್ಲಿ ಇಲ್ಲ.

"ಶ್ರೀಮತಿ, ಇಂದು ಎಲ್ಲರಿಗಿಂತ ಮೊದಲು ನೀನು ನನ್ನನ್ನು ಅಭಿನಂದಿಸಲೇಬೇಕು. ಇಲ್ಲಿಯವರೆಗೆ ನಾನು ಎಷ್ಟೆ ಕೆಲಸ ಮಾಡಿದರೂ ಕೇವಲ ಕೆಲಸಗಾರ ಎಂದಿದ್ದೆ. ಇಂದಿನಿಂದ ನಾನು ಈ ಕಂಪನಿಯ ಪಾಲುಗಾರನಾಗಿರುವೆ. ಈ ಕಂಪನಿಯ ಲಾಭದಲ್ಲಿ ಇನ್ನು ಮೇಲೆ ನನಗೂ ಪಾಲಿದೆ. ಅಂದರೆ ಎಂತಹ ಮರ್ಯಾದೆ! ಶ್ರೀಮತಿ, ಇನ್ನು ನೀನು ಕೇವಲ ಜನರಲ್ ಮ್ಯಾನೇಜರನ ಪತ್ನಿಯಲ್ಲ, ಕಂಪನಿಯ ಡೈರೆಕ್ಟರನ ಪತ್ನಿ ಎಂದರೆ ಎಷ್ಟೊಂದು ಮರ್ಯಾದೆ? ನಾವು ಇನ್ನು ಈ ಬಾಂದ್ರಾದ ಮನೆಯನ್ನು ಬಿಟ್ಟುಬಿಡೋಣ. ನಮ್ಮ ಯೋಗ್ಯತೆಗೆ ತಕ್ಕಂಥ ಮನೆಯನ್ನು ಕಫ್ ಪರೇಡಿನಲ್ಲಿಯೋ, ಮರೀನ್ ಡ್ರೈವಿನಲ್ಲಿಯೋ ಕೊಳ್ಳೋಣ. ಅದು ನಿನ್ನ ಆಸೆಯಂತೆ ಸಮುದ್ರಕ್ಕೆ ಇದಿರಾಗಿ . ಆ ಹೊತ್ತು ನಾನು ಹಟಮಾಡಿ ಸಂಗಾಪುರಕ್ಕೆ ಹೋಗದಿದ್ದರೆ ಇಂದಿನ ಈ ವಿಜಯವು ಸಿಗುತ್ತಿರಲಿಲ್ಲ. ಮಹತ್ವಾಕಾಂಕ್ಷೆ, ಗುರಿ ಇಲ್ಲದ ಮಾನವನ ಜೀವನ ನಿರರ್ಥಕ. ನನ್ನ ಮಹತ್ವಾಕಾಂಕ್ಷೆ ಒಂದಿಲ್ಲೊಂದು ದಿನ ಡೈರೆಕ್ಟರ್ ಆಗುವುದೇ ಆಗಿತ್ತು. ಶ್ರೀಮತಿ, ಕೇವಲ ನಿನಗಾಗಿ ನಾನು ಎರಡು ದಿನ ರಜೆ ತೆಗೆದುಕೊಳ್ಳುವೆ ನಿನಗೆ ಎಲ್ಲಿಗೆ ಬೇಕೋ ಅಲ್ಲಿಗೆ ಹೋಗೋಣ."

ಶ್ರೀಕಾಂತ ಮಾತು ನಿಲ್ಲಿಸಿ ಈಗ ಶ್ರೀಮತಿಯ ಕಡೆಗೆ ನೋಡಿದ. ಅವನ ಈ ದೀರ್ಘ ಮಾತಿಗೆ ಶ್ರೀಮತಿಯ ಪ್ರತಿಕ್ರಿಯೆಯೇ ಇಲ್ಲ. ಬೋರ್ಗಲ್ಲ ಮೇಲೆ ನೀರು ಸುರಿದಂತೆ ಆಗಿದೆ. ಇಲ್ಲವಾದರೆ ಈವರೆಗೆ ಅವನ ಪ್ರತಿಯೊಂದು ಬಡ್ತಿಗೆ ಶ್ರೀಮತಿ ಅದು ತನಗೆ ದೊರೆತಂತೇ ಸಂತೋಷಪಡುತ್ತಿದ್ದಳು. ಆದರೆ ಇಂದು ತೀರ ಅಪರಿಚಿತಳಂತೆ ಆಗಿದ್ದಾಳೆ. ಏನು, ಶ್ರೀಮತಿಯ ಸಿಟ್ಟು ಇನ್ನೂ ಇಳಿದಿಲ್ಲವೆ? ಕಾಲವು ಕೋಪಕ್ಕೆ ಔಷಧವೆಂದು ಶ್ರೀಕಾಂತ ತಿಳಿದದ್ದು ತಪ್ಪಾಯಿತೆ ?

ಶ್ರೀಮತಿ ಮಾತನಾಡದೇ ಎದ್ದು ನಿಂತಳು.

"ಶ್ರೀ ಇದೆಲ್ಲಾ ಮನೆಯ ಕೀಲಿಕೈ, ಪಾಸಬುಕ್, ಲೆಕ್ಕದ ಕಾಗದ, ಶೇರ್ ಸರ್ಟಿಫಿಕೆಟ್ ಸರಿಯಾಗಿ ಯಾವುದು ಎಲ್ಲ ನೋಡಿಕೋ."

ಶ್ರೀಕಾಂತನಿಗೆ ಹಿಂದಿನದು ಮುಂದಿನದು ತಿಳಿಯಲಿಲ್ಲ.

"ಶ್ರೀಮತಿ, ಇವೆಲ್ಲ ನನಗೆ ಯಾಕೆ? ನೀನು ಎಲ್ಲಿಗಾದರೂ ಹೊರಟಿರುವೆಯಾ?"

ಶ್ರೀಮತಿಯ ಉತ್ತರ ಪ್ರಾಯಶಃ ಅವಳೆಲ್ಲ ಇಚ್ಛಾಶಕ್ತಿಯನ್ನೂ ರೂಢಿಸಿಕೊಂಡು ಬಂದಿತು.

"ಹೌದು ಶ್ರೀ, ನಾನು ಹೊರಟಿದ್ದೇನೆ. ಈ ಸರ್ತಿ ತಿರುಗಿ ಬರುವ ವಿಚಾರವು ಇರದ್ದರಿಂದ ನಿನ್ನ ಮನೆಯ ಜವಾಬ್ದಾರಿಯನ್ನು ನಿನಗೆ ವಹಿಸಿಕೊಟ್ಟು, ಹೋಗುತ್ತಿದ್ದೇನೆ. ಶ್ರೀ, ನನಗೆ ಅಮೇರಿಕದ ಇಲಿ

ನಾಯ್ಸ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಡಾಕ್ಟರೇಟ್ ಮಾಡಲು ಶಿಷ್ಯವೃತ್ತಿ ದೊರೆತಿದೆ. ಅದರೊಂದಿಗೆ ಮೈಕ್ ಕಾಲಿನ್ಸ್‌ರಿಗೆ ಸಂಶೋಧನೆಯಲ್ಲಿಯೂ ಸಹಾಯಮಾಡಬೇಕು. ಶ್ರೀ, ಕೇವಲ ನೀನು ಬರುವುದಕ್ಕಾಗಿ ಕಾಯ್ದಿದ್ದೆ. ನೀನು ಇಲ್ಲದಾಗ ಹೇಳಿದ್ದಂತಹ ಎಲ್ಲ ಕರ್ತವ್ಯಗಳನ್ನೂ ನನಗೆ ತಿಳಿದಂತೆ ನಾನು ನಿರ್ವಹಿಸಿದ್ದೇನೆ. ನಿನ್ನ ಪರ್ಸನಲ್ ಮತ್ತು ಆಫೀಸಿನ ಎರಡೂ ಡೈರಿಗಳನ್ನು ನೀನು ಹೇಳಿದಂತೆ ಬೇರೆ ಬೇರೆಯಾಗಿ ಬರೆದಿಟ್ಟಿರುವೆ.

"ಶ್ರೀ, ನಾನು ಬರುವಾಗ ಏನೇನೂ ತಂದಿಲ್ಲ, ಹೋಗುವಾಗಲೂ ಏನೂ ಒಯ್ಯುತ್ತಿಲ್ಲ. ನನ್ನ ಪ್ರಯಾಣ ಇಂದೇ ರಾತ್ರಿ ಇರುವುದರಿಂದ, ನೀನು ಬರದೇ ಇದ್ದರೆ ನನ್ನ ಕರ್ತವ್ಯದ ಕೊನೆಯ ನಿರ್ವಹಣೆಯನ್ನು ಹೇಗೆ ಮಾಡುವುದು ಎಂದು ವಿಚಾರಮಾಡುತ್ತಿದ್ದೆ. ಕೊನೆಗೂ ನೀನು ಬಂದೆಯಲ್ಲಾ".

ಶ್ರೀಕಾಂತನ ಉತ್ಸಾಹವೆಲ್ಲ ಝರ್ರನೆ ಇಳಿದು ಹೋಯಿತು. ಅವನಿಗೆ ಈ ಹೊಸ ಪರಿಸ್ಥಿತಿಯ ಸರಿಯಾದ ಅರಿವು ಆಗುತ್ತಿಲ್ಲ. ಕೈಲಾಸ ಶಿಖರದಿಂದ ಪ್ರಪಾತಕ್ಕೆ ಎಸೆದ ಅನುಭವ.

"ಶ್ರೀಮತಿ, ನೀನು ಪಿ.ಎಚ್.ಡಿ.ಗಾಗಿ ಹೋಗುತ್ತೀಯಾ? ಯಾವಾಗ ತಿರುಗಿ ಬರುತ್ತಿ? ನೀನು ಈ ಎಲ್ಲ ನಿರ್ಧಾರ ಎಂದು ಮಾಡಿದೆ? ನನಗೇಕೆ ತಿಳಿಸಲಿಲ್ಲ? ನಿನಗೇನು ಇಲ್ಲಿ ಕಡಿಮೆಯಾಗಿದೆ?" ಎಂದೆಲ್ಲ ಮಾತನಾಡುತ್ತಿರುವಾಗಲೇ ದಣಿದಂತಾಗಿ ನಿಷ್ಕ್ರಿಯನಾಗಿ ಅವಳೆಡೆಗೆ ನೋಡಿದ.

ಶ್ರೀಮತಿ ತನ್ನ ಬ್ಯಾಗ್ ಹಿಡಿದು ಹೊರಟು ನಿಂತಿದ್ದಳು. ಅಂದರೆ ಅವಳು ಹೇಳಿದ್ದೆಲ್ಲಾ ನಿಜವಿತ್ತು!

"ಶ್ರೀ, ನಿನ್ನ ಇಚ್ಛಾಶಕ್ತಿ, ನಿನ್ನ ಕಠಿಣ ಪರಿಶ್ರಮ, ಏಕಾಗ್ರ ಚಿತ್ತದಿಂದ ಮಾಡುವ ಕೆಲಸ ಇವುಗಳ ಫಲವಾಗಿ ಇಂದು ನೀನು ಇಂತಹ ಸ್ಥಾನಕ್ಕೆ ಏರಿರುವೆ. ಜೀವನದ ಮಹತ್ವದ ಅಮೂಲ್ಯ ವೇಳೆಯನ್ನು ನೀನು ನಿನ್ನ ಗುರಿಗಾಗಿ ಧಾರೆ ಎರೆದಿರುವೆ. ಇದು ಸುಲಭದ ಮಾತಲ್ಲ. ನಿನ್ನ ಜೊತೆಯವರಾದ ಪರೀಶ, ರವಿ, ರಘು ಯಾವ ಮೆಟ್ಟಲಲ್ಲಿ ಇದ್ದಾರೆ? ಅವರಿಗಿಂತ ಹತ್ತಾರು ಪಟ್ಟು ನೀನು ಮೇಲೆ ಹೋಗಿರುವೆ. ಯಾವ ಸ್ಥಿತಿಯಲ್ಲಿ ನೀನು ಈ ಕೆಲಸಕ್ಕೆ ಸೇರಿದೆ ಎಂಬುದನ್ನು ಊಹಿಸಲಾರದಂತಹ ಯಶಸ್ಸಿನ ಶಿಖರದ ತುತ್ತ ತುದಿಯನ್ನು ಏರಿರುವೆ. ಒಂದಿನ ಕಾಲದಲ್ಲಿ ಯಾವುದಕ್ಕೆ ತಪಸ್ಸು ಎನ್ನುತ್ತಿದ್ದರೋ, ಯಾವುದನ್ನು ಸಾಧಿಸಲು ಅರಣ್ಯಕ್ಕೆ ಹೋಗಿ ಏಕಾಂತವನ್ನು ಬಯಸುತ್ತಿದ್ದರೋ ಅದನ್ನು ನೀನು ಈ ಸಂಸಾರದ ಮಧ್ಯದಲ್ಲಿಯೇ ಸಾಧಿಸಿರುವೆ. ಜೀವನದ ಎಲ್ಲ ಸುಖದುಃಖವನ್ನು ಮೀರಿ ನಿಂತ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡರೆ ಅದನ್ನು ಸಾಧಿಸುವವರು ಕೇವಲ ಕೆಲವರು ಮಾತ್ರ. ಆದರೆ ಪ್ರತಿವಸ್ತುವಿಗೆ ಅದರ ಬೆಲೆ ಇದ್ದೇ ಇದೆ. ಶ್ರೀ, ಈ ದ್ವಂದ್ವದಲ್ಲಿ ನೀನು ಬೇರೆ ಯಾರನ್ನೂ ಅಲ್ಲ, ನಿನ್ನ ಪತ್ನಿಯನ್ನೂ ಮಾನಸಿಕವಾಗಿ ಕಳೆದುಕೊಂಡಿರುವೆ. ಶ್ರೀ ನಾನು ಇನ್ನು ಇಂಥ ಸುಳ್ಳು ಮೌಲ್ಯದ ಜಗತ್ತಿನಲ್ಲಿ ಇರಲಾರೆ. ನನಗೂ ಸ್ವಚ್ಛ ಹವೆ ಬೇಕು, ಉಸಿರಾಟ ಬೇಕು, ಕೇವಲ ಶ್ರೀಮತಿ ದೇಶಪಾಂಡೆ ಎನಿಸಿಕೊಂಡು ಕರ್ತವ್ಯದ ದೃಷ್ಟಿಯಿಂದ ಮಾಡುವ ಉಪಚಾರ ಮಂದಹಾಸಗಳು ನನಗೆ ಬೇಕಿಲ್ಲ. ಇದು ನಿರರ್ಥಕ ಬದುಕು ಪ್ರಾಯಶಃ ನನಗೆ ವಿಚಾರಶಕ್ತಿಯು ಇರದಿದ್ದರೆ ನಾನಿಂದು ಇಂಥ ಏಕಾಕಿತನಕ್ಕೆ ಕೊರಗುತ್ತಿರಲಿಲ್ಲ. ನಿನಗೆ ಹೇಗೆ ಬದುಕಿನಲ್ಲಿ ಶ್ರದ್ಧೆಗಾಗಿ ದುಡಿಯುವ ಇಚ್ಛೆಯಿದೆಯೋ ಹಾಗೆ ನನಗೂ ನನ್ನ ಜೀವನದಲ್ಲಿ ನಿಜವಾದ ಶ್ರದ್ಧೆ ಯಾವುದು? ನನ್ನ ಜೀವನದ ಗುರಿ ಯವುದು ಎನ್ನುವ ಮೂಲಪ್ರಶ್ನೆ ಕೇಳುತ್ತಿದೆ.

"ಶ್ರೀ, ನಾನು ಇತಿಹಾಸವನ್ನು ಪ್ರೀತಿಸಿದೆ. ನೀನು ವ್ಯಾವಹಾರಿಕ ಜಗತ್ತಿನಲ್ಲಿ ಪ್ರೇಮದ ಅರ್ಥವನ್ನು ತಿಳಿಯದಂತಿದ್ದ ನಿನ್ನ ಕೆಲಸದ ಗಡಿಬಿಡಿಯಲ್ಲಿ ಯಶಸ್ಸಿನ ಬೆನ್ನು ಹತ್ತಿ ನಿನ್ನ ಮೊದಲಿನ ಭಾವನೆಯನ್ನು ಕಳೆದುಕೊಂಡಾಗ ನನಗೆ ಇತಿಹಾಸದ ಹೊರತು ಮತ್ತೇನು ಉಳಿಯಲಿಲ್ಲ. ಈ ಮನೆ, ಈ ಕಾರು, ಈ ಪಂಚತಾರಾ ಹೋಟೆಲ್, ಈ ವೈಭವ ಎಲ್ಲವೂ ಕ್ಷುಲ್ಲಕವೆನಿಸಿತು. ಶ್ರೀ, ನೀನೆ ಹೇಳು, ನಿನ್ನ ಮನಸ್ಸಿಗೆ ಕೇಳು, ನನ್ನ ಪರಿಸ್ಥಿತಿಯಲ್ಲಿ ನೀನಿದ್ದರೆ ಏನು ಮಾಡುತ್ತಿದ್ದೆ? ಅದನ್ನೇ ನಾನು ಇಂದು ಮಾಡುತ್ತಿರುವೆ.

"ಒಂದೆ ನೀನು ಹುಬ್ಬಳಿಯಲ್ಲಿಯೇ ಏಕೆ ನೌಕರಿ ಹಿಡಿಯಬಾರದೆಂದು ನಿಮ್ಮ ಅಪ್ಪ ಹಟ ಹಿಡಿದಾಗ ನೀನು ಹೇಳಿದ ಉತ್ತರ ನನಗಿನ್ನೂ ನೆನಪಿದೆ. ನಿನ್ನ ಗುರಿ ನಿನಗೆ ತಿಳಿದಿತ್ತು. ನನ್ನೀ ನಿರ್ಧಾರಕ್ಕೆ ನೀನೇ ನನಗೆ ಉದಾಹರಣೆ. ಎಂದಾದರೂ ಮೊದಲ ಬಾರಿಗೆ ಯಾವುದನ್ನೇ ಬದಲಿಸಬೇಕಾದರೆ ಅದನ್ನು ಇತಿಹಾಸದ ದೃಷ್ಟಿಯಿಂದ ಕ್ರಾಂತಿ ಎನ್ನುತ್ತಾರೆ. ಯಾವುದೇ ಕ್ರಾಂತಿಗೆ ವಿರೋಧವಿದೆ. ಓಡುತ್ತಿರುವ ಮನುಷ್ಯ ಕೂಡಲೇ ಹೊರಳಲಾರ. ಅದನ್ನು ನೀವು ಭೌತಶಾಸ್ತ್ರದಿಂದ ಸಮರ್ಥಿಸುತ್ತೀರಿ. ಹಾಗೆಯೇ

ನಾನೀಗ ಇಲ್ಲಿಂದ ಹೊರಟರೆ ಅದಕ್ಕೆ ಪ್ರತಿಕ್ರಿಯೆ ಇರುವುದು ಸ್ವಾಭಾವಿಕ. ಮಾನವನು ಬದುಕುವುದು ಅವನ ಶ್ರದ್ಧೆಯ ಮೂಲಕ. ಅವನ ದಾರಿಯಲ್ಲಿ ಎಷ್ಟೇ ಕಲ್ಲು ಮುಳ್ಳುಗಳಿದ್ದರೂ ಅವನು ಅದೇ ದಾರಿಯಿಂದ ಸಾಗಬೇಕೆ ಹೊರತು ನೂರಾರು ಜನರು ಓಡಾಡಿ ಮಾಡಿದ ನುಣುಪು ಮಾರ್ಗದಿಂದಲ್ಲ. ಅದುವೆ ನನಗೆ ಸ್ಫೂರ್ತಿ".

"ಶ್ರೀ, ನಾನು ಇಷ್ಟಾಗಿ ಮಾಡುತ್ತಿರುವುದಾದರೂ ಏನು? ನಿನ್ನ ಅತಿಥಿಗಳನ್ನು ಸ್ವಾಗತಿಸಿ ನಿನ್ನ ಸಂದರ್ಶನವನ್ನು ಡೈರಿಯಲ್ಲಿ ಬರೆದು ಮನೆಯನ್ನು ಓರಣವಾಗಿರಿಸಿ ನಿನ್ನ ಸಾಮಾಜಿಕ ಸಮಾರಂಭಗಳಲ್ಲಿ ಒಡವೆಯಂತೆ ಶೋಭಿಸುವದಲ್ಲದೇ ಮತ್ತೇನು? ಇಂಥ ನೀರಸವಾದ ನಿಷ್ಕ್ರಿಯ ಜೀವನಕ್ಕಿಂತ ಇನ್ನು ಮುಂದೆ ನಾನೇ ನಾನಾಗಿ ಬಾಳಲು ಪ್ರಯತ್ನಿಸುವೆ. ಶ್ರೀ, ನನಗೆ ವಿವಾಹ ವಿಚ್ಛೇದನ ಬೇಕಿಲ್ಲ. ಏಕೆಂದರೆ ಅದು ನನ್ನ ದೃಷ್ಟಿಯಿಂದ ಕಾನೂನಿನ ಪ್ರಕಾರವಾಗಿ ಬೇರೆ ಮದುವೆ ಮಾಡಿಕೊಳ್ಳಲು ಕೊಡುವ ಅನುಮತಿ ಪತ್ರವೇ ಹೊರತು ಬೇರೆ ಯಾವ ಮಹತ್ವದ್ದೂ ಅಲ್ಲ. ನೀನು ಈ ಜೀವನ ಕ್ರಮವನ್ನು ಬದಲಿಸಲಾರೆ. ಈ ಕೆಲಸ ನಿನಗೆ ಪ್ರಾಣವಾಯುವಿನಂತೆ. ಅದಿಲ್ಲದೇ ನೀನು ಜೀವಿಸಲಾರೆ. ನಿನ್ನೀ ಜೀವನಕ್ಕೆ ಹೊಂದಿಕೊಳ್ಳಲು ನಾನು ಅಸಫಲಳಾಗಿದ್ದೇನೆ. ಶ್ರೀ, ನಾನು ಇಲ್ಲಿಂದ ಹೊರಟು ಹೋಗುವುದೆಂದು ನಿರ್ಧರಿಸಿದ್ದೇನೆ. ನೀನು ಮೊನ್ನೆ ನನಗೆ ತಿಳಿದ ಹಾಗೆ ಇರು ಎಂದಿದ್ದೆಯಲ್ಲಾ! ಇದೇ ನನಗೆ ತಿಳಿದ ದಾರಿ.

"ಶ್ರೀ, ನಾನು ಎಲ್ಲವನ್ನೂ ಶಾಂತರೀತಿಯಿಂದಲೇ ವಿಚಾರಿಸಿದ್ದೇನೆ. ಪ್ರತಿ ವ್ಯಕ್ತಿಗೂ ತನ್ನದೇ ಆದ ಜೀವನವಿದೆ, ನಾನಿಲ್ಲದೇ ನೀನು ಇರಬಲ್ಲೆ, ನನ್ನ ದಾರಿಯೇ ಬೇರೆ, ನಾನು ಮಾಡುತ್ತಿದ್ದ ಕೆಲಸಕ್ಕೆ ನಿನಗೆ ಉತ್ತಮ ಕರಣಿಕಳು ಸಿಗಬಹುದು. ನಾನು ಈಗ ಹೋಗುವುದು ಕೇವಲ ನನ್ನ ದೃಷ್ಟಿಯಿಂದ ಯಾವುದು ಉಚಿತ ಎಂದು ಎನಿಸಿದೆಯೋ ಅದಕ್ಕಾಗಿ. ಶ್ರೀ, ನಿನಗೆ ನನ್ನ ನಿಜವಾದ ಸಹಾಯ ಬೇಕಾದಾಗ ನೀನು ಕರೆ. ನಾನು ಎಲ್ಲಿಯೇ ಇದ್ದರೂ ಖಂಡಿತ ಬಂದು ಹೋಗುವೆ. ನಾವಿಬ್ಬರೂ ಪ್ರೀತಿಸಿ ಮದುವೆಯಾಗಿ ನಿನ್ನನ್ನು ಈಗ ಬಿಟ್ಟು ಹೋಗುವುದು ನನಗೆ ಮಾನಸಿಕವಾಗಿ ಕಠಿಣವಾದರೂ ಅದು ಅನಿವಾರ್ಯವೆನಿಸಿದೆ. ಶ್ರೀ, ನಾನು ನಿನ್ನ ಜೊತೆ ಜಗಳವಾಡಿ ಹೋಗುತ್ತಿಲ್ಲ. ಸಿಟ್ಟಿನ ಭರದಲ್ಲಿ ನೀನು ಹೇಳಿದ ಮಾತಿಗೆ ಕಟ್ಟುಬಿದ್ದು ಹೋಗುತ್ತಿಲ್ಲ. ಬೇರೆ ಯಾವುದೇ ಪ್ರಲೋಭನಕ್ಕೆ ಒಳಗಾಗಿಯೂ ಅಲ್ಲ. ಕೇವಲ ನಿನ್ನ ತರಹದ ವ್ಯಕ್ತಿತ್ವವು ನನ್ನದಾಗಲಿ ಎನ್ನುವ ಆಸೆಯಿಂದ ಮಾತ್ರ. ಶ್ರೀ, ನೀನು ಉಳಿದವರ ಗಂಡನಂತೆ ಅಲ್ಲ..."

ಶ್ರೀಮತಿಗೆ ಇಷ್ಟು ಹೇಳುತ್ತಿರುವಾಗಲೇ ದುಃಖ ಉಕ್ಕಿ ಬಂದು ಕಣ್ಣುಗಳು ತುಂಬಿ ಬಂದವು. ಕಂಠವು ಗದ್ಗದವಾಯಿತು. ಎಷ್ಟೋ ದಿನ ನಿರ್ಣಯಿಸಿ, ವಿಚಾರಮಾಡಿ, ಚರ್ವಿತಚರ್ವಣ ಮಾಡಿ, ಈ ನಿರ್ಧಾರಕ್ಕೆ ಬಂದರೂ ಅದು ನಿಜವಾಗಿ ಘಟಿಸುತ್ತಿರುವಾಗ ಆಗುವ ವೇದನೆ ತಡೆಯುವ ಬಲ ಅವಳ ಕ್ರಿಯಾಶಕ್ತಿಗೆ ಆಗುತ್ತಿಲ್ಲ. ಇನ್ನು ಬಹಳ ವೇಳೆ ನಿಂತರೆ ಎಲ್ಲಿ ಅವಳ ಇಚ್ಛಾಶಕ್ತಿಯು ಕರಗಿ ನಿರ್ಣಯವು ಬೇರೆಯಾಗುವದೋ ಎನ್ನುವ ಭಯವೆಂಬಂತೆ ಶ್ರೀಕಾಂತನ ಹತ್ತಿರ ಬಂದು ಅವಳು "ಶ್ರೀ, ನಾನೀಗ ಹೊರಡುವೆ ನೋಡು. ನಿನಗೆ ಬೇಸರವಾದಾಗ ನನ್ನ ಮನೆಯ ದ್ವಾರ ಯಾವಾಗಲೂ ತೆರೆದಿದೆ. ನೀನು ಅಮೇರಿಕಕ್ಕೆ ಬಂದಾಗ ನನ್ನನ್ನು ನೋಡದೇ ಹೋಗಬೇಡ. ನಿನಗೆ ಆತಂಕವೆನಿಸಿದಾಗ ತಿಳಿಸದೇ ಇರಬೇಡ. ನನ್ನನ್ನು ಬೀಳ್ಕೊಡಲು ನಿನ್ನನ್ನು ನಾನು ಕರೆಯುವುದಿಲ್ಲ. ಅದು ನಮ್ಮಿಬ್ಬರಿಗೂ ಮಾನಸಿಕವಾಗಿ ತೊಂದರೆಯಾಗಬಹುದು. ಆದರಿಂದ ಈಗಲೇ ಇಲ್ಲಿಂದಲೇ ವಿದಾಯ ಹೇಳುವೆ. ಶ್ರೀ, ನೀನಲ್ಲದೆ ನನಗೆ ಮತ್ತೆ ಯಾರೂ ಉತ್ತಮ ಸ್ನೇಹಿತರಿಲ್ಲ". ಎಂದು ಮೃದುವಾಗಿ ಅವನ ಹಣೆಯನ್ನು ಚುಂಬಿಸಿ ಇನ್ನೊಮ್ಮೆ ನೋಡದೇ ಶ್ರೀಮತಿ ತನ್ನ ಪುಟ್ಟ ಬ್ಯಾಗಿನೊಡನೆ ಹೊರಟು ಹೋದಳು. ಅದರೊಂದಿಗೆ ಶ್ರೀಕಾಂತನ ಚೈತನ್ಯವೂ ಹೋಯಿತೋ ಎನ್ನುವಂತೆ ದಿಗ್ಭ್ರಾಂತನಾಗಿ ಅವನು ಅವಳನ್ನೇ ನೋಡುತ್ತಿದ್ದ.

★

ಶ್ರೀಮತಿ ಹೊರಟು ಹೋದದ್ದು ಬಾಗಿಲಿನಿಂದ ಬಂದ ಸದ್ದಿನಿಂದ ತಿಳಿದರೂ ಶ್ರೀಕಾಂತನಿಗೆ ಆದ ಮಾನಸಿಕ ಆಘಾತದಿಂದಾಗಿ ಎದ್ದು ಹೊರಗೆ ಬಾರದಷ್ಟು ಕಠಿಣವೆನಿಸಿತು. ಈವರೆಗೆ ಅವನು ಶ್ರೀಮತಿಯನ್ನು ತಿಳಿದದ್ದಕ್ಕಿಂತ ಇಂದು ಆಕೆ ಬೇರೆಯೇ ಕಂಡಳು. ಅವಳಿಗೆ ಅವನಂತೆ ಇಚ್ಛಾಶಕ್ತಿ,

ಸಮಾಜದಿಂದ ಬರುವ ಅಪವಾದದ ಹೊರೆಯನ್ನು ತಡೆಯುವ ಶಕ್ತಿ ಇಲ್ಲವೆಂದೇ ತಿಳಿದಿದ್ದನಾತ. ಸೂಕ್ಷ್ಮಬುದ್ಧಿಯವಳಾದ ಅವಳು ಇಂತಹ ನಿರ್ಧಾರವನ್ನು ತೆಗೆದುಕೊಂಡಳು ಎನ್ನುವುದು ಅವನ ಊಹೆಗೂ ನಿಲುಕಲಾರದ ವಿಷಯವಾಗಿತ್ತು. ಶ್ರೀಮತಿ ಹೀಗೇಕೆ ಮಾಡಿದಳು? ಶಾಲಾದಿನಗಳಿಂದ ಅವನು ಅವಳನ್ನು ಬಲ್ಲ. ಅವಳೆಂದೂ ಸುಳ್ಳು ಹೇಳುವವಳಲ್ಲ. ಅವಳು ಉಳಿದ ಸಾಮಾನ್ಯ ಸ್ತ್ರೀಯರಿಗಿಂತ ಭಿನ್ನವೆನ್ನುವದು ಅವನಿಗೆ ತಿಳಿದಿದ್ದರಿಂದ ಅವಳ ಯೋಚನೆಯನ್ನು ಅಷ್ಟಾಗಿ ಅವನು ಮಾಡುತ್ತಿರಲಿಲ್ಲ. ಅವಳ ಅಸ್ತಿತ್ವವನ್ನೇ ತಾನು ಮರೆತನೆ. ಶ್ರೀಕಾಂತ ತನ್ನನ್ನೇ ತಾನು ಪ್ರಶ್ನಿಸಿಕೊಂಡ. ಯಾವ ಪತ್ನಿ ಪತಿಯ ಕರ್ತವ್ಯದಲ್ಲಿ ಭಾಗವಹಿಸುವುದಿಲ್ಲವೋ ಅಂಥವರ ಬಗ್ಗೆ ಅವನಿಗೆ ತಿರಸ್ಕಾರವಿತ್ತು. ಅದಕ್ಕೆ ಹರೀಶ ಒಂದು ಸಾರಿ ಹೇಳಿದ ಮಾತು ನೆನಪೂ ಆಯಿತು. "ಶ್ರೀಕಾಂತ. ಎಲ್ಲರಂತೆ ನೀನು ಅಲ್ಲ. ನಿನ್ನ ಪತ್ನಿಯೂ ಅಲ್ಲ. ಅದ್ದರಿಂದ ಕೌಟುಂಬಿಕ ಸಮಸ್ಯೆಗಳ ಅರಿವು ನಿನಗಿಲ್ಲ. ನೀನು ಅದೃಷ್ಟವಂತ". ಅದರ ಅರ್ಥ ಈಗ ಅವನಿಗೆ ಆಗುತ್ತಿದೆ. ಮೊನ್ನೆ ಶ್ರೀಕಾಂತ ಕಂಪನಿಯ ಪರವಾಗಿ ಮಾಡಿದ ಭಾಷಣವನ್ನು ಕೇಳಿ ಕಂಪನಿಯ ಚೇರಮನ್ನರು ಅವನನ್ನು ವೈಯಕ್ತಿಕವಾಗಿ ಅಭಿನಂದಿಸಿದಾಗ ತನ್ನ ವಿಜಯದ ಬಗ್ಗೆ ಹೆಮ್ಮೆಯೂ ಗರ್ವವೂ ಸೇರಿತ್ತು. ಆದರೆ ತನ್ನ ಯಶಸ್ಸು ಕೇವಲ ತನ್ನ ಸಾಧನೆಯ ಫಲವೆಂದೇ ತಿಳಿದಿದ್ದ ಅವನಿಗೆ ಇಂದು ಶ್ರೀಮತಿಯ ನೆನಪಾಯಿತು. ಇದರಲ್ಲಿ ಅವಳ ಪಾಲೇನೂ ಇಲ್ಲವೇ? ತೆರೆಯ ಹಿಂದೆ ಇರುವ ತನ್ನ ವಿರಹವನ್ನು ಮೌನವಾಗಿ ಸಹಿಸುವ. ಸದಾ ತನ್ನ ಉತ್ಕರ್ಷವನ್ನೇ ಬಯಸುತ್ತಿದ್ದ ಶ್ರೀಮತಿಯ ಸಿಂಹಪಾಲು ಅದರಲ್ಲಿ ಸೇರಿತ್ತಲ್ಲ.

ಇಂದಿನವರೆಗೆ ಅವನಿಗೆ ಅದರ ಸುಳಿವೇ ಇರಲಿಲ್ಲ. ಶ್ರೀಮತಿ ಅವನ ವೈಭವ ಅಧಿಕಾರವನ್ನು ತಿರಸ್ಕರಿಸಿ ಅವನ ಅಭಿಮಾನಕ್ಕೆ ಬಲವಾದ ಪೆಟ್ಟು ಕೊಟ್ಟು ಹೊರಟುಹೋಗಿದ್ದಾಳೆ. "ನನಗೆ ಇಲ್ಲಿ ಉಸಿರುಗಟ್ಟುತ್ತಿದೆ. ಸ್ವಚ್ಛ ಹವೆ ಬೇಕು" ಎಂದಳಲ್ಲ "ಈ ಸುಳ್ಳು ಮೌಲ್ಯದ ಜಗತ್ತಿನಲ್ಲಿ ನಾನಿರಲಾರೆ" ಎಂದಳಲ್ಲ. ಶ್ರೀಮತಿಯ ಈ ನಿರ್ಗಮನದಿಂದಾಗಿ ಅವನ ಕಣ್ಣಿಗೆ ಕತ್ತಲು ಕವಿದಂತಾಯಿತು.

ಪುರುಷಪ್ರಧಾನವಾದ ನಮ್ಮ ಸಮಾಜದಲ್ಲಿ ಅವಳ ಈ ಕೃತ್ಯವನ್ನು ಯಾರೂ ಮೆಚ್ಚಲಾರರು. ಯಾರಾದರೂ ಮೆಚ್ಚಲಿ ಬಿಡಲಿ ಶ್ರೀಮತಿ ತನಗೆ ಸರಿಕಂಡದ್ದನ್ನು, ತನ್ನ ಶ್ರದ್ಧೆಯಿಂದ ಅರಿತುಕೊಂಡ ದ್ದನ್ನು ನೆಚ್ಚಿ ಈಗ ಹೊರಟು ಹೋಗಿದ್ದಾಳೆ. ನೋವಿನಲ್ಲಿಯೂ ಮಂದಹಾಸ ತೋರಿಸುತ್ತಿದ್ದ ಆಕೆ ಒಮ್ಮೆಲೆ ಇಲ್ಲವಾದಾಗ "ಶ್ರೀಮತಿ. ಇಲ್ಲಿ ನೀನಿಲ್ಲದಿದ್ದರೆ ನಾನಿರಲಾರೆ. ನೀನೇ ನನ್ನ ಸ್ಫೂರ್ತಿ. ನಿನ್ನ ವ್ಯಕ್ತಿತ್ವದ ಪ್ರಭಾವ ನನ್ನ ಇಡೀ ಕಾರ್ಯರಂಗದ ಮೇಲೆ ಬಿದ್ದೇ ಇದೆ. ನೀನೇ ನನ್ನ ಕ್ರಿಯಾ ಶಕ್ತಿಯ ಮೂಲ. ನೀನಿರದಿದ್ದರೆ ನಾನು ಹೀಗಿರುತ್ತಿರಲಿಲ್ಲ. ನೀನು ಹೊರಜಗತ್ತಿನ ನಿನ್ನ ಯೋಗ್ಯತೆಯ ಅರಿವಿದ್ದ ಸ್ತ್ರೀ" ಎಂದು ಹೇಳಬೇಕೆನಿಸಿದರೂ ಅದೇನೋ ಹೇಳಲಾಗುತ್ತಿಲ್ಲ. ಶ್ರೀಮತಿಯೇ ಅಲ್ಲಿ ಇಲ್ಲವಲ್ಲ. ಶ್ರೀಕಾಂತನಿಗೆ ಕಳೆದುಹೋದ ಘಟನೆಗಳೆಲ್ಲ ಇಂದು ಚಿತ್ರದಂತೆ ಕಾಣುತ್ತಿದೆ. ಅವಳು ಅವನಿಗಾಗಿ ಮಾಡಿದ ತ್ಯಾಗ. ಕಷ್ಟ. ನೌಕರಿ ಎಲ್ಲವೂ ಅವನು ಮರೆತುಬಿಟ್ಟಿದ್ದನೆ. ಇಲ್ಲ ನೆನಪಿನಾಳದಿಂದ ಇಂದು ಎಲ್ಲವೂ ತೀರ ಸ್ಪಷ್ಟವಾಗಿ ಕಾಣುತ್ತಿದೆ. ಅವನ ಕಡಿಮೆ ಸಂಬಳದಲ್ಲಿ ಅವಳು ಯಾವಾಗಲೂ ಹಣ ಉಳಿಸಿ ಅವನಿಗೆ ಪುಸ್ತಕ ಕೊಳ್ಳಲು ಅನುಕೂಲ ಮಾಡಿಕೊಡು ತ್ತಿದ್ದಳು. ಅವನು ರಾತ್ರಿ ಓದುತ್ತ ಕುಳಿತಾಗ ಅವನ ಏಕಾಗ್ರತೆಗೆ ತೊಂದರೆಯಾಗಬಾರದೆಂದು ಊಟದ ತಟ್ಟೆಯನ್ನು ನೀರಿನ ತಂಬಿಗೆಯನ್ನು ಟೇಬಲ್ ಮೇಲೆ ಇಟ್ಟು ತಾನು ಅಡಿಗೆಯ ಮನೆಯಲ್ಲಿಯೇ ಓದುತ್ತ ಕೂಡುತ್ತಿದ್ದಳು. ಅವಳಿಗೆ ನನ್ನಿಂದ ಅವಳ ಈ ಶ್ರದ್ಧೆಗೆ ಪ್ರತಿಯಾಗಿ ಏನು ಸಿಕ್ಕಿತು? ನಮ್ಮ ಮನೆಯಿಂದ ಏನು ಬಿರುದು ಬಂದಿತು?. "ವರದಕ್ಷಿಣೆ ಇಲ್ಲದೆನೆ ಛಲೋ ಹುಡುಗನ್ನ ಹಿಡಿದ್ಲು" ಎನ್ನುವುದೇ? ಶ್ರೀಮತಿ. ಆ ಮಾತನ್ನು ನೀಲಕಂಠನಂತೆ ನುಂಗಿ ತನ್ನ ಕರ್ತವ್ಯವನ್ನು ಕೊನೆಯವರೆಗೂ ಬಿಡದೇ "ಅಕ್ಕಾ" ಎಂದೇ ನಾದಿನಿ ರಮಾನನ್ನು ಕರೆದು 'ಅವ್ವಾ" ಎಂದು ಗಂಗಕ್ಕನಿಗೆ ಮರ್ಯಾದೆ ತೋರಿಸುತ್ತಿದ್ದಳು. ಶ್ರೀಮತಿಯ ಈ ನಿರ್ಗಮನಕ್ಕೆ ನನ್ನ ಮನೆಯವರ ಅನಾದರಣೆಯೂ ಕಾರಣ ವಾಗಿರಬಹುದೇ?"

ತಮಗೆ ಮಕ್ಕಳಾಗಿದ್ದರೆ ಈ ಪ್ರಸಂಗವು ಬರುತ್ತಿರಲಿಲ್ಲವೇನೋ? ಪತಿ-ಪತ್ನಿಯನ್ನು ಜೋಡಿಸುವ ಕೊಂಡಿಯಂತಿರುವ ಮಕ್ಕಳು ಸಹ ಅವಳ ಪಾಲಿಗೆ ಇಲ್ಲವಾದವಲ್ಲ! ಮಕ್ಕಳ ಬಗ್ಗೆ ಅವನು ಅತೀವ ಇಚ್ಛೆಯನ್ನೂ ತೋರಿಸಲಿಲ್ಲ. ಅದೂ ಈ ಘಟನೆಗೆ ಕಾರಣವಾಯಿತೆ?.

ಮನಃಪೂರ್ವಕವಾಗಿ ಮಾಡುವ ಪ್ರೇಮವನ್ನೇ ಅವನು ಕಳೆದುಕೊಂಡಿದ್ದಾನೆ. ಪ್ರೇಮವೆನ್ನುವುದು ಯಾರಿಂದಲಾದರೂ ಕಲಿತು ಅಥವಾ ಹೇಳಿದರೆ ಬರುವಂಥದ್ದಲ್ಲ. ಅವಳು ಇಲ್ಲಿಯೇ ಇದ್ದು ಪಿ.ಎಚ್.ಡಿ. ಯಾಕೆ ಮಾಡಬಾರದು ಎಂದು ಅನಿಸಿದರೆ ಅದು ಸಾಧ್ಯವಿಲ್ಲದಂತೆ ತೋರಿತು. ಅವಳು ಇಲ್ಲಿ ಇದ್ದರೆ ಅವಳ ಮನಸ್ಸಿನ ವಿರುದ್ಧವಾಗಿ ತನ್ನ 'ಸಾಮಾಜಿಕ ಸಮಾರಂಭದ ಒಡವೆ'ಯ ಪಾತ್ರವನ್ನು ವಹಿಸಬೇಕು. ಅವನೂ ಅದನ್ನೇ ಅಪೇಕ್ಷಿಸುತ್ತಾನೆ. ಆದ್ದರಿಂದ ಅವಳು ಚೆನ್ನಾಗಿ ಯೋಚಿಸಿಯೇ ದೂರವಾಗಿ ಹೊರಟುಹೋಗಿದ್ದಾಳೆ. ಇಂಥ ವಾತಾವರಣ ಬೇಡವೇ ಬೇಡವೆಂದು ತಿರಸ್ಕರಿಸಿದ್ದಾಳೆ. ಶ್ರೀಕಾಂತನಿಗೆ ಈ ಎಲ್ಲ ವಿಚಾರ ಪದರುಪದರಾಗಿ ಕಾಣುತ್ತಿದೆ. ಅವನಿಗೆ ತನ್ನ ಮೇಲೆಯೇ ಕೋಪ ಬಂದರೂ ಏನೂ ಮಾಡದಷ್ಟು ನಿಷ್ಕ್ರಿಯನಾಗಿದ್ದಾನೆ. ಈ ಅಧಿಕಾರ, ಈ ಮಹತ್ವಾಕಾಂಕ್ಷೆ, ಯಶ, ಹಣದ ಹಿಂದೆ ಆಗುವ ಭೀಕರ ಪರಿಣಾಮದ ಬಲಿಪಶು ಅವನಾಗಿದ್ದಾನೆ. ಈ ಭಯಂಕರ ದುರಂತಕ್ಕೆ ಸಾಕ್ಷಿಯಾಗಿ ನಿರ್ಜೀವವಾದ ಸಮುದ್ರವು ಕೇವಲ ಗರ್ಜಿಸುತ್ತಿದೆ. ಶ್ರೀಕಾಂತನಿಗೆ ರವಿಯ ಪತ್ರದ ನೆನಪೂ ಆಗುತ್ತಿದೆ. ಶ್ರೀಮತಿಯ ಬುದ್ಧಿ ಎಷ್ಟು ಶುದ್ಧ, ನಿಖರ, ಸ್ಪಷ್ಟ! ಶ್ರೀಕಾಂತ ನೀನು ಭಾಗ್ಯಶಾಲಿ, ಅಂಥ ಭಾಗ್ಯವನ್ನು ಅರಿಯದೇ ಇಂದು ಕಳೆದುಕೊಂಡಾಗ ಇದ್ದಾಗಿನ ಅರಿವಿನ ಪ್ರಜ್ಞೆ ಈಗ ಮರುಕಳಿಸುತ್ತಿದೆ. ಮತ್ತೆ ಅವನಿಗೆ ಹಿಂದೆ ಎಂದೋ ಮೊದಲ ಸ್ಥಾನವನ್ನು ಕಳೆದುಕೊಂಡಾಗ ಆದಾಗಿನ ಆಘಾತ, ನಿರಾಶೆ, ತಳಮಳವು ಆಗುತ್ತಿದೆ. ಆಗ ಕೇವಲ ಅರ್ಥವಿಹೀನವಾದ ರ್‍ಯಾಂಕ್ ಕಳೆದುಕೊಂಡಿದ್ದರೆ ಇಂದು ಅವನು ಅರ್ಥಪೂರ್ಣವಾಗಿದ್ದ ತನ್ನ ಶ್ರೀಮತಿಯನ್ನು ಕಳೆದುಕೊಂಡಿದ್ದ.

ಟ್ರಿನ್ ಟ್ರಿನ್ ಎಂದು ಟೆಲಿಫೋನು ಧ್ವನಿಯಾದಾಗಲೇ ಶ್ರೀಕಾಂತನಿಗೆ ವಾಸ್ತವಿಕತೆಯ ಅರಿವಾಯಿತು. ಹೊರಗೆ ಸುರಿಯುವ ಜಡಿಮಳೆ ಮೇಲೆ ಭೋರ್ಗರೆಯುವ ಸಮುದ್ರದಿಂದ ವಿಚಲಿತನಾದರೂ ಹರೀಶನ ಧ್ವನಿಯಿಂದ ಅದೊಂದು ಮಹತ್ವದ ಸುದ್ದಿ ಇರಲೇಬೇಕೆಂದು ಭಾವಿಸಿದ.

"ಶ್ರೀಕಾಂತ, ಹಾರ್ದಿಕ ಅಭಿನಂದನೆಗಳು. ಈಗ ತಾನೇ ಟೆಲೆಕ್ಸ್ ಬಂದಿದೆ. ಫ್ರಾನ್ಸಿನಿಂದ ನಿಮ್ಮ ಆಕಾಂಕ್ಷೆಯಂತೆ ಯೋಜನೆ ಸಿಕ್ಕಿದೆ. ಅದು ಕೇವಲ ನಿನ್ನ ಮಾತಿನ ದೃಢತೆಯ ಆಶ್ವಾಸನದ ಮೇಲಿಂದ. ಶ್ರೀಕಾಂತ ಇಂದು Intershoppeನಲ್ಲಿ ಅದನ್ನು ಸೆಲಬ್ರೇಟ್ ಮಾಡಲು ಪಾರ್ಟಿ ಇದೆ. ನೀನು ಮತ್ತು ಶ್ರೀಮತಿ ಆರು ಗಂಟೆಯ ಹೊತ್ತಿಗೆ ಅಲ್ಲಿರುವಿರಾ? ಯಾಕೆ ಶ್ರೀಕಾಂತ ಮಾತಾಡುತ್ತಿಲ್ಲ? ನಾನು ಹೇಳಿದ್ದು ಕೇಳಿಸಲಿಲ್ಲವೇ?"

ಶ್ರೀಕಾಂತ ಮೌನವನ್ನ ಒಡೆದು "ಇಲ್ಲ ಕೇಳಿಸಿತು ಆದರೆ......."

ಶ್ರೀಕಾಂತನ ಮಾತು ಮುಂದುವರೆಯುವ ಮುನ್ನವೇ ಬಾಂದ್ರಾದ ಮೇಲೆ ವಿಮಾನ ಹಾರಿದ ಸದ್ದಿನಿಂದ ಅವನಿಗೆ ಎಚ್ಚರವಾಯಿತು. ಕೈಯಲ್ಲಿಯ ಟೆಲಿಫೋನು ಮರೆತು ಶ್ರೀಕಾಂತ ಮೇಲೆ ನೋಡಿದ. ದೂರ ಆಗಸದಲ್ಲಿ ರಾತ್ರಿಯಲ್ಲಿ ವಿಮಾನದ ಹಿಂಭಾಗದ ಕೆಂಪು ದೀಪ ಮಾತ್ರ ಕಂಡಿತು.

ಹೀಗೆಯೇ ಶ್ರಾವಣದ ಮಳೆಯಲ್ಲಿ ಜೊತೆಯಾಗಿ ನಡೆದು ಬಂದ ಶ್ರೀಮತಿ, ಹತ್ತು ವರ್ಷ ನಂತರ ಮತ್ತೆ ಅದೇ ಶ್ರಾವಣದ ಮಳೆಯಲ್ಲಿ ನಿರಾಶೆಯನ್ನು ಹೃದಯದ ತುಂಬ ಹೊತ್ತುಕೊಂಡು ಒಬ್ಬಳೇ ಹೊರಟು ಹೋಗಿದ್ದಾಳೆ. ●

Printed and published by **M.H.BELGAUMKAR** on behalf of Lokashikshana Trust at " SAMYUKTA KARNATAKA PRESS ", No.2, Residency Road, Bangalore-560 025. Managing Editor **K.SHAMA RAO.** Rep: Bombay: V. Satyamurthi. Phone: 5510502, Madras, S.K.Murti Phone: 414870. New Delhi: V.K.Chopra Phone:7114785.

Registered with the Registrar of Newspapers for India under No.35/3957.

KASTURI PRICE: Rs. 3.00 Reg. no. KRNG 43
Licence No. L2120/wpp No. 33

